ಭಾನುವಾರ, ಏಪ್ರಿಲ್ 28, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 118 | ಪುಟ 16

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಸರ್ಕಾರಗಳಲ್ಲಿ ನಡೆಯುವ ಹಗರಣ ಕೇಳಿರಬಹುದು. ಆದರೆ ಹಳ್ಳಿಗಳಲ್ಲಿ ನಡೆಯುವ 'ಹಗರಣ' ಕೇಳಿದ್ದೀರಾ? ಇಲ್ಲಿದೆ ನೋಡಿ ಭಿನ್ನ ಭಿನ್ನ ಹಗರಣ!

ಜ್ಯೋತಿಗೆ ಹ್ಯಾಟ್ರಿಕ್ ಚಿನ್ನದ ಪದಕ 14

ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ

'ಮೋದಿ ಸುಳ್ಳಿನ ಕಾರ್ಖಾನೆ ಯಶಸ್ವಿಯಾಗಲ್ಲ' 9

'ಸುಳ್ಳು ಜಾಹೀರಾತು, ಬಿಜೆಪಿ ವಿರುದ್ಧ ದೂರು' 7

ಮಣಿದ ಕೇಂದ್ರ: ಬಂತು ಪರಿಹಾರ

ಬರ ನಿರ್ವಹಣೆಗೆ ಅನುದಾನಕ್ಕಾಗಿ ಅಕ್ಟೋಬರ್‌ನಿಂದಲೇ ಹೋರಾಟ ● 'ಸುಪ್ರೀಂ' ಕದ ತಟ್ಟಿದ್ದ ರಾಜ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಬರ ಪರಿಹಾರ ಬಿಡುಗಡೆಗಾಗಿ ಕರ್ನಾಟಕದ ಕಾಂಗ್ರೆಸ್ ಸರ್ಕಾರ ನಡೆಸಿದ ನಿರಂತರ ಸಂಘರ್ಷ ಹಾಗೂ ಕಾನೂನು ಹೋರಾಟಕ್ಕೆ ಮಣಿದಿರುವ ಕೇಂದ್ರ ಸರ್ಕಾರವು ₹3,454 ಕೋಟಿ ಬಿಡುಗಡೆ ಮಾಡಿದೆ.

ಗೃಹ ಸಚಿವ ಅಮಿತ್ ಶಾ ನೇತೃತ್ವದ ಉನ್ನತಾಧಿಕಾರ ಸಮಿತಿಯು ಕರ್ನಾಟಕ ಹಾಗೂ ತಮಿಳುನಾಡಿಗೆ ಬರ ಪರಿಹಾರ ಬಿಡುಗಡೆಗೆ ಅನುಮೋದನೆ ನೀಡಿದೆ ಎಂದು ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ. ಪರಿಹಾರ ಘೋಷಣೆಯಾದ ಬೆನ್ನಲ್ಲೇ, ಕರ್ನಾಟಕದ ಬಿಜೆಪಿ ನಾಯಕರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಭಿನಂದನೆ ತಿಳಿಸಿದ್ದಾರೆ.

ಅಕ್ಟೋಬರ್‌ನಿಂದ ಹೋರಾಟ: 'ಬರ ಪರಿಹಾರ ನೀಡಬೇಕು' ಎಂದು ಕೋರಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ 2023ರ ಅಕ್ಟೋಬರ್‌ನಲ್ಲಿ ಮನವಿ ಸಲ್ಲಿಸಿದ್ದರು. ಈ ನಡುವೆ, ಕೇಂದ್ರದ ತಜ್ಞರ ತಂಡವು ಬರಪೀಡಿತ ಪ್ರದೇಶಗಳಲ್ಲಿ ಅಧ್ಯಯನ ನಡೆಸಿ ವಿಸ್ತೃತ ವರದಿ ಸಲ್ಲಿಸಿತ್ತು.

ಸಿದ್ದರಾಮಯ್ಯ ಅವರು ಡಿಸೆಂಬರ್ 19ರಂದು ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ರಾಜ್ಯದಲ್ಲಿನ ಭೀಕರ ಬರ ಪರಿಸ್ಥಿತಿ ಹಾಗೂ ರೈತರ ಸಂಕಷ್ಟದ ಕುರಿತು ಗಮನಕ್ಕೆ ತಂದಿದ್ದರು. ಡಿಸೆಂಬರ್ 20ರಂದು ಅಮಿತ್ ಶಾ ಅವರನ್ನು ಭೇಟಿ ಮನವಿ ಸಲ್ಲಿಸಿದ್ದರು. ಡಿಸೆಂಬರ್ 23ರಂದು ಉನ್ನತ ಮಟ್ಟದ ಸಮಿತಿ ಸಭೆ ಕರೆದು ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದು ಶಾ ವಾಗ್ದಾನ ನೀಡಿದ್ದರು. ಆದರೆ, 23ರಂದು ಸಭೆ ನಡೆದಿರಲಿಲ್ಲ.

'ಪರಿಹಾರ ಬಿಡುಗಡೆಗೆ ಬಿಜೆಪಿ ಸರ್ಕಾರ ತಾರತಮ್ಯ ಮಾಡುತ್ತಿದ್ದು, ರಾಜ್ಯಕ್ಕೆ ದ್ರೋಹ ಎಸಗಿದೆ. ಬಿಜೆಪಿ ಸಂಸದರು ಧ್ವನಿ ಎತ್ತುತ್ತಿಲ್ಲ' ಎಂದು ಆರೋಪಿಸಿ ಕಾಂಗ್ರೆಸ್ ಸರ್ಕಾರವು ದೆಹಲಿಯಲ್ಲಿ ಸತ್ಯಾಗ್ರಹ ನಡೆಸಿತ್ತು. 'ರಾಜ್ಯ ಸರ್ಕಾರವು ವಿಳಂಬವಾಗಿ ಮನವಿ ಸಲ್ಲಿಸಿತ್ತು. ಹೀಗಾಗಿ, ಪರಿಹಾರ ಬಿಡುಗಡೆ ಆಗಿಲ್ಲ' ಎಂದು ಕೇಂದ್ರ ಸರ್ಕಾರ ಸಮಜಾಯಿಷಿ ನೀಡಿತ್ತು. ಚುನಾವಣಾ ನೀತಿಸಂಹಿತೆ ಜಾರಿಯಾದ ಕಾರಣ ಪರಿಹಾರ ಬಿಡುಗಡೆ ಮಾಡಲು ಸಾಧ್ಯವಾಗಿಲ್ಲ ಎಂದು ಕೇಂದ್ರದ ಸಚಿವರು ಈಚೆಗೆ ಪ್ರತಿಕ್ರಿಯಿಸಿದ್ದರು.

'ಸುಪ್ರೀಂ' ಕದ ತಟ್ಟಿದ್ದ ರಾಜ್ಯ: ಲೋಕಸಭಾ ಚುನಾವಣೆ ವೇಳಾಪಟ್ಟಿ ಘೋಷಣೆಯಾದ ಬೆನ್ನಲ್ಲೇ, ರಾಜ್ಯ ಸರ್ಕಾರವು ಬರ ಪರಿಹಾರಕ್ಕಾಗಿ ಸುಪ್ರೀಂ ಕೋರ್ಟ್‌ನ ಕದ ತಟ್ಟಿತ್ತು. ಅರ್ಜಿಯ ವಿಚಾರಣೆಯನ್ನು ಏಪ್ರಿಲ್ 8ರಂದು ನಡೆಸಿದ್ದ ಬಿ.ಆರ್.ಗವಾಯಿ ಹಾಗೂ ಸಂದೀಪ್ ಮೆಹ್ತಾ ಅವರಿದ್ದ ಪೀಠ, 'ಅನುದಾನ ಬಿಡುಗಡೆ ಸೇರಿದಂತೆ ಯಾವುದೇ ವಿಷಯದಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸಂಘರ್ಷ ಸಲ್ಲದು' ಎಂದು ಕಿವಿಮಾತು ಹೇಳಿತ್ತು. ಕಳೆದ ಸೋಮವಾರದ ವಿಚಾರಣೆ ವೇಳೆ ಕೇಂದ್ರ ಸರ್ಕಾರದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ, 'ಪರಿಹಾರ ನೀಡಲು ಚುನಾವಣಾ ಆಯೋಗ ಅನುಮತಿ ನೀಡಿದೆ. ತ್ವರಿತವಾಗಿ ಕ್ರಮ ಕೈಗೊಳ್ಳಲಾಗುವುದು' ಎಂದು ವಾಗ್ದಾನ ಮಾಡಿದ್ದರು. ವಿಚಾರಣೆಯನ್ನು ಮುಂದಿನ ಸೋಮವಾರಕ್ಕೆ ಮುಂದೂಡುವಂತೆ ಕೋರಿದ್ದರು. ಇದೀಗ, ಪರಿಹಾರ ಬಿಡುಗಡೆಯಾಗಿದೆ.



'ರಾಜ್ಯದ 223 ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದೆ. ₹35 ಸಾವಿರ ಕೋಟಿ ಮೌಲ್ಯದ ಬೆಳೆ ನಷ್ಟವಾಗಿದ್ದು, 48 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ಹಾನಿಯಾಗಿದೆ. ಹೀಗಾಗಿ, ಕೂಡಲೇ ಬರ ಪರಿಹಾರ ನೀಡಬೇಕು' ಎಂಬುದು ರಾಜ್ಯ ಸರ್ಕಾರದ ಮನವಿಯಾಗಿತ್ತು

ಬರ ಪರಿಹಾರಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ , ಸಚಿವ ಕೃಷ್ಣ ಬೈರೇಗೌಡ ಡಿ.19ರಂದು ಪ್ರಧಾನಿಗೆ ಮನವಿ ಸಲ್ಲಿಸಿದ್ದ ಸಂದರ್ಭ

ಕಾಂಗ್ರೆಸ್ ಪ್ರತಿಭಟನೆ ಇಂದು

ಬೆಂಗಳೂರು/ ಬಾಗಲಕೋಟೆ: ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ನಿಯಮಾವಳಿಗಳ ಪ್ರಕಾರ ಕೇಂದ್ರ ಸರ್ಕಾರ ರಾಜ್ಯಕ್ಕೆ ₹18,171 ಕೋಟಿ ನೀಡಬೇಕಾಗಿದ್ದು, ಕೇವಲ ₹ 3,454 ಕೋಟಿ ಬಿಡುಗಡೆ ಮಾಡಿದೆ. ಬಾಕಿ ಪರಿಹಾರ ಮೊತ್ತವನ್ನೂ ಬಿಡುಗಡೆ ಮಾಡುವಂತೆ ಆಗ್ರಹಿಸಿ ವಿಧಾನಸೌಧದ ಗಾಂಧಿ ಪ್ರತಿಮೆ ಮುಂದೆ ಭಾನುವಾರ (ಏಪ್ರಿಲ್ 28) ಪ್ರತಿಭಟನೆ ನಡೆಸಲು ಕಾಂಗ್ರೆಸ್ ಮುಂದಾಗಿದೆ.

ಬಾಗಲಕೋಟೆಯಲ್ಲಿ ಶನಿವಾರ ಈ ವಿಷಯ ತಿಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಪ್ರತಿಭಟನೆಯಲ್ಲಿ ನಾನು, ಉಪ ಮುಖ್ಯಮಂತ್ರಿ, ಸಚಿವರು ಸೇರಿದಂತೆ ಹಲವರು ಭಾಗವಹಿಸಲಿದ್ದೇವೆ' ಎಂದರು. 'ನ್ಯಾಯಾಲಯದ ಮೊರೆಹೋದ ಮೇಲೆ ಕೇಂದ್ರ ಸರ್ಕಾರ ಅಲ್ಪ ಮೊತ್ತವನ್ನು ಬಿಡುಗಡೆ ಮಾಡಿದೆ. ಪೂರ್ಣ ಬಿಡುಗಡೆ ಮಾಡುವವರೆಗೂ ನ್ಯಾಯಾಲಯದಲ್ಲಿಯೂ ನಮ್ಮ ಹೋರಾಟ ಮುಂದುವರೆಯಲಿದೆ' ಎಂದರು.

7ನೇ ಪುಟ ನೋಡಿ

'ಎಚ್‌ಡಿಕೆ ನಾಡದ್ರೋಹಿ'

ಬೆಂಗಳೂರು: 'ರಾಜ್ಯಕ್ಕೆ ಪರಿಹಾರ ಮೊತ್ತ ಸಾಕು ಎಂದಿರುವ ಎಚ್.ಡಿ. ಕುಮಾರಸ್ವಾಮಿ ನಾಡ ದ್ರೋಹಿ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೇಂದ್ರ ಸರ್ಕಾರದ ಹಣ ರಾಜ್ಯಕ್ಕೆ ಇನ್ನೂ ಬಂದಿಲ್ಲ. ಆದರೂ ಬಿಜೆಪಿ ನಾಯಕರು ಸಂಭ್ರಮಾಚರಣೆ ಮಾಡುತ್ತಿದ್ದಾರೆ. ಕುಮಾರಸ್ವಾಮಿ ಈ ಮೊತ್ತ ಸಾಕು ಎಂದಿದ್ದಾರೆ. ಇದು ರಾಜ್ಯಕ್ಕೆ ಬರಬೇಕಾದ ಪರಿಹಾರ ಮೊತ್ತವೇ ಹೊರತು, ಇಷ್ಟು ಸಾಕು ಎನ್ನಲು ಅವರ ಮನೆ ಆಸ್ತಿಯಲ್ಲ' ಎಂದರು.

'ರಾಜ್ಯ ಸರ್ಕಾರದ ಪಾತ್ರವಿಲ್ಲ'

ಬೆಂಗಳೂರು: 'ಬರಪೀಡಿತ ಪ್ರದೇಶಗಳ ಜನರ ನೆರವಿಗಾಗಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ರಾಜ್ಯಕ್ಕೆ ₹ 3,454 ಕೋಟಿ ಪರಿಹಾರ ಬಿಡುಗಡೆ ಮಾಡಿದೆ. ಇದರಲ್ಲಿ ರಾಜ್ಯ ಸರ್ಕಾರದ ಪಾತ್ರವೇನೂ ಇಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯ ಸರ್ಕಾರ ಕೇಂದ್ರಕ್ಕೆ ಸಕಾಲಕ್ಕೆ ಮಾಹಿತಿ ಒದಗಿಸದೇ ಇರುವುದರಿಂದ ಪರಿಹಾರ ಬಿಡುಗಡೆ ವಿಳಂಬವಾಗಿತ್ತು. ಸುಪ್ರೀಂ ಕೋರ್ಟ್ ಆದೇಶದ ಕಾರಣಕ್ಕೆ ಪರಿಹಾರ ಬಿಡುಗಡೆ ಮಾಡಲಾಗಿದೆ ಎಂಬುದು ಸರಿಯಲ್ಲ. ಹಾಗಿದ್ದರೆ ಕರ್ನಾಟಕಕ್ಕೆ ಮಾತ್ರ ಪರಿಹಾರ ಬಿಡುಗಡೆ ಆಗಬೇಕಿತ್ತು. ಉಳಿದ ರಾಜ್ಯಗಳಿಗೂ ಪರಿಹಾರ ನೀಡಿಲ್ಲವೆ' ಎಂದು ಪ್ರಶ್ನಿಸಿದರು.

ಕಂದಾಯ ಇಲಾಖೆ: ಖದೀಮರಿಗೆ ಕಾಯ್ದೆಯೇ ಲೆಕ್ಕಕ್ಕಿಲ್ಲ

ಸರ್ಕಾರಿ ಜಾಗ ಭೂಗಳ್ಳರಿಗೆ

ಒಳನೋಟ

● ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: '2019ರ ವೇಳೆಗಾಗಲೇ ಅಕ್ರಮವಾಗಿ ಸಾಗುವಳಿ ಚೀಟಿ ಮುದ್ರಿಸಿಕೊಡುವ ವ್ಯೂಹವೊಂದು ತಲೆಯೆತ್ತಿತ್ತು. ₹2 ಲಕ್ಷ ಹಣ ಕೊಟ್ಟು ಮೂಡಿಗೆರೆ ತಾಲ್ಲೂಕು ಕಚೇರಿಗೆ ಅಲೆದಾಡಿ ಸುಸ್ತಾಗಿದ್ದ ರೈತ, ನನ್ನ ಬಳಿ ಬಂದು ಕಷ್ಟ ಹೇಳಿಕೊಂಡಿದ್ದರು. ಆ ಒಬ್ಬ ರೈತನಿಗೆ ನ್ಯಾಯ ಕೊಡಿಸಲು ಹೊರಟಾಗ ಸಾವಿರಾರು ಎಕರೆ ಅಕ್ರಮ ಭೂಮಂಜೂರಾತಿ ಪತ್ತೆಯಾಯಿತು!'

ಹೀಗೆಂದು ಹೇಳಿದ್ದು, ರಾಜ್ಯದಲ್ಲೇ ಅತೀ ದೊಡ್ಡ ಅಕ್ರಮ ಭೂಮಂಜೂರಾತಿ ಪ್ರಕರಣ ಬಯಲಿಗೆ ಬರಲು ಕಾರಣರಾದ ಕಂದಾಯ ಇಲಾಖೆಯ ಬೆನ್ನು ಹತ್ತಿದ ರೈತ ಮುಖಂಡ ಎಂ.ಮಂಜುನಾಥ. 'ಭೂಮಿಯನ್ನು ಅಕ್ರಮವಾಗಿ ಮಂಜೂರು ಮಾಡಿಸಿಕೊಡುವ ಏಜೆಂಟರು ಅಷ್ಟೊತ್ತಿಗಾಗಲೇ ಹುಟ್ಟಿಕೊಂಡಿದ್ದರು. ಹಣ ಕೊಟ್ಟರೆ ಸರ್ಕಾರಿ ಭೂಮಿ ಬರೆದುಕೊಡುವ ಕೆಲಸವನ್ನು ಅಧಿಕಾರಿಗಳ ತಂಡ ಮಾಡುತ್ತಿದೆ ಎಂಬ ಮಾತುಗಳು ಕಿವಿಗೆ ಬಿದ್ದಿದ್ದವು. ಹಂತೂರು ಗ್ರಾಮದಲ್ಲಿ ಸರ್ಕಾರಿ ಜಾಗ ಉಳುಮೆ ಮಾಡುತ್ತಿದ್ದ ರೈತ ಸಾಗುವಳಿ ಚೀಟಿ ಪಡೆಯಲು ಕಚೇರಿಗೆ ಎಡತಾಕಿದ್ದರು. ಹಣ ಕೊಟ್ಟರೂ ಹಕ್ಕು ಪತ್ರ ಸಿಗದೆ ಅವರು ನನ್ನ ಸಂಪರ್ಕ ಮಾಡಿದರು'.'ತಾಲ್ಲೂಕು ಕಚೇರಿಯಲ್ಲಿ ಹಣ ಪಡೆದಿದ್ದ ಸಿಬ್ಬಂದಿಯ ಬಳಿ ಕರೆದೊಯ್ದುರು. ರೈತ ಸಂಘದ ಶಾಲು ನೋಡಿದ್ದರಿಂದ ಕೂಡಲೇ ಹಕ್ಕುಪತ್ರ ನೀಡುವ ಭರವಸೆ ನೀಡಿದರು. ಹಕ್ಕುಪತ್ರ ಪಡೆದ ಬಳಿಕ ಆ ರೈತ ನನ್ನ ಸಂಪರ್ಕಕ್ಕೆ ಬರಲೇ ಇಲ್ಲ. ಹಕ್ಕುಪತ್ರವನ್ನೂ ತೋರಿಸಲಿಲ್ಲ.

6ನೇ ಪುಟ ನೋಡಿ

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಅಕ್ರಮವಾಗಿ ಮಂಜೂರಾಗಿದ್ದ ಜಮೀನನ್ನು ಕಂದಾಯ ಇಲಾಖೆ ವಾಪಸ್ ಪಡೆದಿರುವುದು

ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಪ್ರಕರಣ: ಕಟಾರಿಯ

'ಮೂಡಿಗೆರೆ ಮತ್ತು ಕಡೂರು ತಾಲ್ಲೂಕಿನ ಅಕ್ರಮ ಭೂಮಂಜೂರಾತಿ ಬಗ್ಗೆ ಕ್ರಿಮಿನಲ್ ಪ್ರಕರಣ ದಾಖಲಿಸಿ ಚಾರ್ಜ್‌ಶೀಟ್ ಸಲ್ಲಿಸಲು ಕಂದಾಯ ಆಯುಕ್ತರಿಗೆ ಸೂಚನೆ ನೀಡಲಾಗಿದೆ' ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದರ್‌ಕುಮಾರ್ ಕಟಾರಿಯಾ 'ಪ್ರಜಾವಾಣಿ'ಗೆ ತಿಳಿಸಿದರು. 'ತರೀಕೆರೆಯಲ್ಲಿ ಅಕ್ರಮ ಆಗಿರುವ ಮಾಹಿತಿ ಬಂದ ಕೂಡಲೇ ತನಿಖೆಗೆ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಕೋಲಾರದಲ್ಲಿ ಆಗಿರುವ ಅಕ್ರಮಗಳ ಬಗ್ಗೆ ತನಿಖೆ ನಡೆಸಲಾಗಿದ್ದು, ವರದಿ ಈಗಷ್ಟೇ ಬಂದಿದೆ. ಬೇರೆ ಜಿಲ್ಲೆಗಳಲ್ಲೂ ಅಕ್ರಮ ಆಗಿರುವ ಮಾಹಿತಿ ಬಂದರೆ, ಮಾಧ್ಯಮಗಳಲ್ಲಿ ವರದಿಯಾದರೆ ತನಿಖೆ ನಡೆಸುತ್ತೇವೆ. ಯಾರೇ ತಪ್ಪು ಮಾಡಿದ್ದರೂ ಸಹಿಸುವ ಪ್ರಶ್ನೆ ಇಲ್ಲ' ಎಂದರು.

ಪ್ರಜ್ವಲ್ ಪ್ರಕರಣ: ತನಿಖೆಗೆ ಎಸ್‌ಐಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಾಸನ ಸಂಸದ ಪ್ರಜ್ವಲ್ ರೇವಣ್ಣ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ಆರೋಪ ಕುರಿತು ತನಿಖೆ ನಡೆಸಲು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಪ್ರಜ್ವಲ್ ರೇವಣ್ಣ ನೂರಾರು ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಲೈಂಗಿಕ ದೌರ್ಜನ್ಯ ನಡೆಸಿರುವ ವಿಡಿಯೊ ದೃಶ್ಯಾವಳಿಗಳ ತುಣುಕುಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಈ ಕುರಿತು ಪ್ರಕರಣ ದಾಖಲಿಸಿ ತನಿಖೆ ನಡೆಸಬೇಕು ಎಂಬ ಆಗ್ರಹ ವ್ಯಕ್ತವಾಗಿತ್ತು.

ಪ್ರಜ್ವಲ್ ರೇವಣ್ಣ

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ, ಲೈಂಗಿಕ ದೌರ್ಜನ್ಯ ಆರೋಪದ ಬಗ್ಗೆ ತನಿಖೆ ನಡೆಸಲು ಎಸ್‌ಐಟಿ ರಚಿಸುವಂತೆ ಶಿಫಾರಸು ಮಾಡಿದ್ದರು.

8ನೇ ಪುಟ ನೋಡಿ

ಪಠ್ಯಕ್ಕೆ ಹೊರತಾದ ಪ್ರಶ್ನೆ: ನಾಳೆ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆದಿದ್ದ ಸಿಇಟಿಯಲ್ಲಿ ಪಠ್ಯಕ್ಕೆ ಹೊರತಾದ ಪ್ರಶ್ನೆಗಳು ಸೇರಿದ್ದರಿಂದ ಉಂಟಾಗಿರುವ ಬಿಕ್ಕಟ್ಟಿಗೆ ಉನ್ನತ ಶಿಕ್ಷಣ ಇಲಾಖೆ ಸೋಮವಾರ (ಏ. 29) ಪರಿಹಾರ ಪ್ರಕಟಿಸಲಿದೆ.

ಪಠ್ಯಕ್ಕೆ ಹೊರತಾದ ಪ್ರಶ್ನೆಗಳು ಎಷ್ಟು ಸೇರಿವೆ ಎನ್ನುವ ಮಾಹಿತಿ ನೀಡಲು ಆಯಾ ವಿಷಯವಾರು ತಲಾ ಮೂವರು ತಜ್ಞರನ್ನು ಒಳಗೊಂಡ ನಾಲ್ಕು ಸಮಿತಿಗಳನ್ನು ರಚಿಸಿ ಇದೇ ಏ. 22ರಂದು ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿತ್ತು. ಅತ್ತ ಕರ್ನಾಟಕ ಪರೀಕ್ಷಾ ಪ್ರಾಧಿಕಾರವೂ ಆಕ್ಷೇಪಣೆಗಳನ್ನು ಸಲ್ಲಿಸಲು ಏ. 27ರವರೆಗೆ ವಿದ್ಯಾರ್ಥಿಗಳಿಗೆ ಅವಕಾಶ ನೀಡಿತ್ತು. ಸಮಿತಿ ವರದಿ ಹಾಗೂ ವಿದ್ಯಾರ್ಥಿಗಳ ಆಕ್ಷೇಪಣೆಗಳನ್ನು ಪರಿಗಣಿಸಿ ನಿರ್ಧಾರ ಪ್ರಕಟಿಸಲಾಗುತ್ತಿದೆ.

ಪ್ರತಿ ಪತ್ರಿಕೆಯೂ 60 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಎಷ್ಟು ಪ್ರಶ್ನೆಗಳು ಪಠ್ಯಕ್ಕೆ ಹೊರತಾಗಿವೆಯೋ ಅಷ್ಟು ಕೃಪಾಂಕ ನೀಡಬಹುದು. ಹಾಗೆ ನೀಡಿದರೆ ಪ್ರತಿಭಾವಂತರಿಗೆ ಅನ್ಯಾಯವಾಗುತ್ತದೆ. ಪಿಯು ಅಂಕಗಳನ್ನಷ್ಟೇ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಪರಿಗಣಿಸಿದರೆ ಸಿಇಟಿ ಉದ್ದೇಶ, ಮಾಡಿದ ಖರ್ಚು ವ್ಯರ್ಥವಾಗುತ್ತದೆ.

7ನೇ ಪುಟ ನೋಡಿ

ಇಂಡಿಗನತ್ತ: ನಾಳೆ ಮರು ಮತದಾನ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಶುಕ್ರವಾರ ಮತದಾನದ ವೇಳೆ ಘರ್ಷಣೆ ನಡೆದಿದ್ದ ಹನೂರು ತಾಲ್ಲೂಕಿನ ಇಂಡಿಗನತ್ತ ಗ್ರಾಮದಲ್ಲಿ ಸೋಮವಾರ (ಏ.29) ಮರು ಮತದಾನ ನಡೆಸಲು ಚುನಾವಣಾ ಆಯೋಗ ತೀರ್ಮಾನಿಸಿದೆ.

ಬೆಳಿಗ್ಗೆ 7ರಿಂದ ಸಂಜೆ 6 ಗಂಟೆಯವರೆಗೆ ಮತದಾನ ನಡೆಯಲಿದೆ. ಈ ಮತಗಟ್ಟೆ ವ್ಯಾಪ್ತಿಯಲ್ಲಿ 528 ಮತದಾರರಿದ್ದಾರೆ. ಶುಕ್ರವಾರ ಇಲ್ಲಿ ಒಂಬತ್ತು ಮಂದಿಯಷ್ಟೇ ಮತ ಹಕ್ಕು ಚಲಾಯಿಸಿದ್ದರು. ಘರ್ಷಣೆಯ ವೇಳೆ ಮತಗಟ್ಟೆ ಮೇಲೆ ಕಲ್ಲುತೂರಾಟ ನಡೆದಿದ್ದು, ಇವಿಎಂ ಹಾನಿಗೊಳಗಾಗಿತ್ತು. ಮತದಾನ ಬಹಿಷ್ಕಾರ ಕುರಿತು ಇಂಡಿಗನತ್ತ, ಮೆಂದಾರೆ ಗ್ರಾಮಸ್ಥರು ಹಾಗೂ ಪೊಲೀಸರ ಮಧ್ಯೆ ಘರ್ಷಣೆಯಾಗಿತ್ತು. ಕೆಲವರು ಮತಗಟ್ಟೆಗೆ ನುಗ್ಗಿ ಪರಿಕರಗಳನ್ನು ಎಸೆದಿದ್ದರು. ಇವಿಎಂಗೆ ಬೆಂಕಿ ಹಚ್ಚಲೂ ಯತ್ನಿಸಿದ್ದರು.

ಈ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಚುನಾವಣಾ ಆಯೋಗಕ್ಕೆ ವರದಿ ಸಲ್ಲಿಸಿದ್ದರು.

7ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ವಂಡರ್‌ಲಾ
WONDERLA
PARKS AND RESORTS
Summerla
FIESTA
APRIL 6 - MAY 31
ಚೆಲ್ ಮಾಡಿ
TO BOOK, SCAN THE QR CODE
*T&C APPLY
ಜನ್ಮದಿನದ ಕೊಡುಗೆ
ಬೈ 1 ಗೆಟ್ 1 ಫ್ರೀ*
ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಜನಿಸಿದವರಿಗೆ, ಆಯಾ ತಿಂಗಳಿಗೆ ಮಾತ್ರ
ಹಾಲ್ ಟಿಕೆಟ್ ಕೊಡುಗೆ
35%* OFF
ವಿದ್ಯಾರ್ಥಿಗಳೇ, ನಿಮ್ಮ ಅಸಲಿ ಹಾಲ್ ಟಿಕೆಟ್ ತೋರಿಸಿ ಮತ್ತು 35% ವರೆಗೂ ರಿಯಾಯಿತಿ ಪಡೆಯಿರಿ
ಈ ಕೊಡುಗೆ ಎಸ್ ಎಸ್ ಎಲ್ ಸಿ, 1st ಪಿಯು & 2nd ಪಿಯು ವಿದ್ಯಾರ್ಥಿಗಳಿಗೆ ಮಾತ್ರ
ಕಾಲೇಜು ಐಡಿ ಆಫರ್
20%* OFF
ನಿಮ್ಮ ಅಸಲಿ ವಿದ್ಯಾರ್ಥಿಗಳ ಐಡಿ ತೋರಿಸಿ 20% ವರೆಗೂ ರಿಯಾಯಿತಿ ಪಡೆಯಿರಿ
(between the ages of 16 - 24 yrs.)
ಆನ್‌ಲೈನ್ ಬುಕಿಂಗ್ ಕೊಡುಗೆ
10%* OFF
ಆನ್‌ಲೈನ್‌ನಲ್ಲಿ 3 ದಿನಗಳ ಮೊದಲು ಬುಕ್ ಮಾಡಿ, 10% ರಿಯಾಯಿತಿ ಪಡೆಯಿರಿ
080 37230333 / 99455 57777 www.wonderla.com
FOR GROUP BOOKINGS & OFFERS, CALL: 96331 96332

ಕೈಕೊಟ್ಟ ಮಳೆ • ದಿನದಿಂದ ದಿನಕ್ಕೆ ಹೆಚ್ಚುತ್ತಿದೆ ನಗರದ ತಾಪಮಾನ

ಎಳನೀರು, ಹಣ್ಣಿನ ರಸಗಳಿಗೆ ಬೇಡಿಕೆ

• ಬಾಲಕೃಷ್ಣ ಪಿ.ಎಚ್.

ನಗರದ ಲಗ್ಗೆರೆಯಲ್ಲಿ ಕಬ್ಬಿನ ಹಾಲು ಕುಡಿಯುತ್ತಿರುವ ಜನರು —ಪ್ರಜಾವಾಣಿ ಚಿತ್ರ

ಬೆಂಗಳೂರು: ನಗರದಲ್ಲಿ ಚುನಾವಣೆಯ ಕಾವು ಇಳಿದಿದೆ. ಬಿಸಿಲಿನ ಕಾವು ಏರಿದೆ. ದಾಹ ಕಡಿಮೆ ಮಾಡಿಕೊಳ್ಳಲು ಜನರು ಹಣ್ಣು, ಪಾನೀಯಗಳ ಮೊರೆ ಹೋಗುತ್ತಿದ್ದಾರೆ. ಇದರಿಂದಾಗಿ ಎಳನೀರು, ಕಬ್ಬು ಹಣ್ಣಿನ ರಸಗಳಿಗೆ ಭಾರಿ ಬೇಡಿಕೆ ಬಂದಿದೆ.

ರಾಜ್ಯದ ವಿವಿಧೆಡೆ ಮಳೆ ಬಂದಿದ್ದರೆ, ಬೆಂಗಳೂರಿನಲ್ಲಿ ಹೆಸರಿಗಷ್ಟೇ ನಾಲ್ಕು ಹನಿ ಸುರಿದಿದ್ದು ಬಿಟ್ಟರೆ ಉತ್ತಮ ಮಳೆಯಾಗಿಲ್ಲ. ತಾಪಮಾನವು ಒಂದು ವಾರದಿಂದ 37 ಡಿಗ್ರಿ ಸೆಲ್ಸಿಯಸ್ ಇದ್ದು, ಮುಂದಿನ ಮೂರು ದಿನ 38 ಡಿಗ್ರಿ ಇರಲಿದೆ. ನಗರದ ಜನರು ಸುಡುಬಿಸಿಲಿಗೆ ತತ್ತರಿಸಿ ಹೋಗಿದ್ದಾರೆ.

ಕಾರ್ಯನಿಮಿತ್ತ ಮನೆ, ಕಚೇರಿಗಳಿಂದ ಹೊರ ಬರುವ ಜನರು ರಸ್ತೆ ಬದಿ, ಬಸ್ ನಿಲ್ದಾಣ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಎಳನೀರು, ಮಜ್ಜಿಗೆ, ಜ್ಯೂಸ್, ಕಬ್ಬಿನ ಹಾಲು ಸೇವಿಸಿ ಬಾಯಾರಿಕೆ ನೀಗಿಸಿಕೊಂಡು, ದೇಹ ತಂಪು ಮಾಡಿಕೊಳ್ಳುತ್ತಿದ್ದಾರೆ. ಕಲ್ಲಂಗಡಿ, ಕರ್ಬೂಜ ಸೇರಿದಂತೆ ವಿವಿಧ ಹಣ್ಣುಗಳನ್ನು ಸೇವಿಸುವವರ ಸಂಖ್ಯೆಯೂ ಜಾಸ್ತಿಯಾಗಿದೆ. ₹ 30 ನೀಡಿ ನಿಂಬೆ ಶರಬತ್ತು ಕುಡಿಯುತ್ತಿದ್ದಾರೆ.

ಬಿಸಿಲಿನ ಧಗೆ ಹೆಚ್ಚಿದ್ದರೂ ಆರೋಗ್ಯದ ಕಾಳಜಿ ಇರುವ ಜನರು 'ಐಸ್‌ಲೆಸ್' ಜ್ಯೂಸ್‌ಗೇ ಆದ್ಯತೆ ನೀಡುತ್ತಿದ್ದಾರೆ. ಮಕ್ಕಳು, ಮಹಿಳೆಯರು ಐಸ್‌ಕ್ರೀಂ ಹೆಚ್ಚು ಖರೀದಿಸುತ್ತಿದ್ದಾರೆ.

'ಜನವರಿ, ಫೆಬ್ರುವರಿಯಲ್ಲಿ ದಿನಕ್ಕೆ ಒಂದು ಹೊರೆ (ಒಂದು ಕಟ್ಟು) ಕಬ್ಬು ಸಾಕಾಗುತ್ತಿತ್ತು. ಬಿಸಿಲು ಜಾಸ್ತಿಯಾಗುತ್ತಿದ್ದಂತೆ ಕಬ್ಬಿನ ಹಾಲು ಕುಡಿಯುವವರ ಸಂಖ್ಯೆ ಹೆಚ್ಚಿದ್ದರಿಂದ ಮಾರ್ಚ್ ತಿಂಗಳಿಂದ ದಿನಕ್ಕೆ ಮೂರು ಹೊರೆ ಕಬ್ಬು ವ್ಯಾಪಾರವಾಗುತ್ತಿದೆ. ವಾರದ ಕೊನೆ ದಿನಗಳಾದ ಶನಿವಾರ, ಭಾನುವಾರ ಐದು ಹೊರೆ ಕಬ್ಬು ಬೇಕಾಗುತ್ತದೆ. ಐಸ್‌ಲೆಸ್ ಕೇಳುವವರೇ ಹೆಚ್ಚಾಗಿದ್ದಾರೆ' ಎಂದು ಲಗ್ಗೆರೆಯ ಕಬ್ಬಿನ ಹಾಲಿನ ವ್ಯಾಪಾರಿ ಮಂಜುಳಾ ತಿಳಿಸಿದರು.

ಎಳನೀರು ದರ ಏರಿಕೆ: ಮೂರು ತಿಂಗಳ ಹಿಂದೆ ಎಳನೀರಿಗೆ ₹ 40 ಇತ್ತು. ಬೇಸಿಗೆ ಜಾಸ್ತಿಯಾಗುತ್ತಿದ್ದಂತೆ ಎಳನೀರು ಇಳುವರಿ ಇಳಿಮುಖವಾಗಿರುವುದರಿಂದ ಪೂರೈಕೆ ಕಡಿಮೆಯಾಗಿದೆ. ಎಳನೀರಿನ ಬೆಲೆ ಮಾರ್ಚ್‌ನಲ್ಲಿ ₹ 45ಕ್ಕೆ ಏರಿತ್ತು. ಈಗ ₹ 50ಕ್ಕೆ ತಲುಪಿದೆ. ಆದರೂ ಎಳನೀರು ಪೂರೈಕೆದಾರರೊಂದಿಗೆ ಉತ್ತಮ ಸಂಪರ್ಕ ಹೊಂದಿದ ವ್ಯಾಪಾರಿಗಳನ್ನು ಹೊರತುಪಡಿಸಿ ಉಳಿದ ವ್ಯಾಪಾರಿಗಳಿಗೆ ಸಿಗುತ್ತಿಲ್ಲ.

'ಈಗ ಬಿಸಿಲು ಹೆಚ್ಚಿರುವುದರಿಂದ ಎಳನೀರು ಬರುತ್ತಿಲ್ಲ, ಪರಿಚಯದವರು ಪೂರೈಸುತ್ತಿದ್ದಾರೆ. ಎಳನೀರಿಗೆ ಮಧ್ಯಾಹ್ನದವರೆಗೆ ಭಾರಿ ಬೇಡಿಕೆ ಇರುತ್ತದೆ. ಮಧ್ಯಾಹ್ನದ ಬಳಿಕ ಗ್ರಾಹಕರ ಸಂಖ್ಯೆ ಕಡಿಮೆಯಾಗುತ್ತದೆ' ಎಂದು ಮರಿಯಪ್ಪನ ಪಾಳ್ಯದ ಎಳನೀರು ವ್ಯಾಪಾರಿ ಕೃಷ್ಣಪ್ಪ ತಿಳಿಸಿದರು.

ತಾಳೆಹಣ್ಣಿಗೂ ಬೇಡಿಕೆ: ದೇಹವನ್ನು ತಂಪಾಗಿಸುವ ಜೊತೆಗೆ ಆರೋಗ್ಯಕ್ಕೂ ಒಳ್ಳೆಯದಾಗಿರುವ ತಾಳೆಹಣ್ಣಿಗೂ ನಗರದಲ್ಲಿ ಬೇಡಿಕೆ ಇದೆ. ಮೂರು ಕಣ್ಣಿನ ಒಂದು ತಾಳೆಹಣ್ಣು ₹ 50ಕ್ಕೆ ಮಾರಾಟವಾಗುತ್ತಿದೆ.

ದೇಹ ನಿರ್ಜಲೀಕರಣಗೊಂಡು ಅಸ್ವಸ್ಥರಾಗುವವರಿಗೆ ಸಹಕಾರಿಯಾಗಿರುವ ಈ ಹಣ್ಣನ್ನು ನಗರದ ಜನಸಂದಣಿ ಇರುವ ರಸ್ತೆಗಳ ಬದಿಯಲ್ಲಿ ಮಾರಾಟ ಮಾಡಲಾಗುತ್ತಿದೆ.

ಜನ ಏನಂತಾರೆ?

ತುಂಬಾ ಬಿಸಿಲು ಇರುವುದರಿಂದ ಊಟ ತಿಂಡಿ ಹೆಚ್ಚು ತಿನ್ನಲು ಆಗುತ್ತಿಲ್ಲ. ಕರ್ಬೂಜ ಮತ್ತು ಕಲ್ಲಂಗಡಿ ಹಣ್ಣು ಜಾಸ್ತಿ ಬಳಕೆ ಮಾಡುತ್ತಿದ್ದೇವೆ. ಹೊರಗೆ ಹೋದರೆ ಕಬ್ಬಿನ ಜ್ಯೂಸ್, ಎಳನೀರು ಕುಡಿಯುತ್ತಿದ್ದೇವೆ. ಇದರಿಂದ ದೇಹ ನಿರ್ಜಲೀಕರಣ ಆಗುವುದು ತಪ್ಪುತ್ತದೆ.
ಶುಭಾ ಬಿ.ಎಸ್ ನಾಯಂಡಹಳ್ಳಿ, ಇನ್ಫೋಸಿಸ್ ಉದ್ಯೋಗಿ



ಸೆಕೆ ತಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ನಿತ್ಯ ಮನೆಯಲ್ಲಿ ಮತ್ತು ಕಚೇರಿಯಲ್ಲಿ ಐದು ಲೀಟರ್ ನೀರು ಕುಡಿಯುತ್ತೇನೆ, ಆದರೂ ಸಾಕಾಗುತ್ತಿಲ್ಲ. ಹೊರಗೆ ಹೋದರೆ ಕಲ್ಲಂಗಡಿ ಹಣ್ಣಿನ ಜ್ಯೂಸು, ಎಳನೀರು, ಕಬ್ಬಿನ ಹಾಲು ಕುಡಿಯುತ್ತೇನೆ. ಮನೆಯಲ್ಲಿ ಬಾರ್ಲಿ ನೀರು, ಮಜ್ಜಿಗೆ ಸೇವಿಸುತ್ತೇನೆ. ಬಿಸಿಲು ಹೀಗೇ ಮುಂದುವರಿದರೆ ಬಹಳ ಕಷ್ಟವಾಗಲಿದೆ.
ಪುರುಷೋತ್ತಮ ಸಿ.ಡಿ., ಡೆಂಟಲ್ ಕ್ಲಿನಿಕ್ ಆರೋಗ್ಯ ಸಿಬ್ಬಂದಿ, ಜಯನಗರ

ಡಿಜಿಟಲ್ ಫೆಲೋಶಿಪ್ ಯೋಜನೆ ಪ್ರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬುಕ್‌ಬ್ರಹ್ಮ' ಸಹಯೋಗದಲ್ಲಿ ವಿನಾಯಕ ಗೋಕಾಕ ವಾಙ್ಮಯ ಟ್ರಸ್ಟ್ ವಿನಾಯಕ ಕೃಷ್ಣ ಗೋಕಾಕರ ಪುಣ್ಯ ಸ್ಮರಣೆಯನ್ನು ಸಮನ್ವಯ ದಿನವನ್ನಾಗಿ ಆಚರಿಸುತ್ತಿದ್ದು, ಇದೇ ಭಾನುವಾರ ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ ಗೋಕಾಕರ ಬಗ್ಗೆ ಉಪನ್ಯಾಸ ಸೇರಿ ವಿವಿಧ ಕಾರ್ಯಕ್ರಮ ಹಮ್ಮಿಕೊಂಡಿದೆ.

ಬುಕ್‌ಬ್ರಹ್ಮ ಜಾಲತಾಣದಲ್ಲಿ ಕಾರ್ಯಕ್ರಮಗಳು ಪ್ರಸಾರವಾಗಲಿವೆ. ಈ ಬಾರಿ 'ಡಿಜಿಟಲ್ ಫೆಲೋಶಿಪ್' ಎಂಬ ಯೋಜನೆ ಆರಂಭಿಸಲಾಗುತ್ತಿದೆ. ಈಗ ಜ್ಞಾನವು ಬೆರಳ ತುದಿಯಲ್ಲಿಯೇ ಸಿಗುತ್ತಿದೆ. ಪ್ರಪಂಚ ಹತ್ತಿರವಾಗುತ್ತಿದೆ. ಆಧುನಿಕ ತಂತ್ರಜ್ಞಾನವು ಹಲವು ಹೊಸ ಅವಕಾಶ ತೆರೆದಿಟ್ಟಿವೆ. ಯುವ ಸಮುದಾಯ ಈ ತಂತ್ರಜ್ಞಾನವನ್ನು ಬಳಸಿಕೊಂಡರೆ ಅಪೂರ್ವ ಕೆಲಸಗಳನ್ನು ಮಾಡಬಹುದು. ಈ ನಿಟ್ಟಿನಲ್ಲಿ ಗೋಕಾಕರ ಸಾಹಿತ್ಯ ಮತ್ತು ವ್ಯಕ್ತಿತ್ವವನ್ನು ಆಧುನಿಕ ವೇದಿಕೆಯಲ್ಲಿ ಪ್ರಸ್ತುತಪಡಿಸಲು ಡಿಜಿಟಲ್ ಫೆಲೋಶಿಪ್ ನೀಡಲಾಗುತ್ತದೆ ಎಂದು ಟ್ರಸ್ಟ್ ಅಧ್ಯಕ್ಷ ನರಹಳ್ಳಿ ಬಾಲಸುಬ್ರಹ್ಮಣ್ಯ ತಿಳಿಸಿದ್ದಾರೆ.

ಮೊದಲ ಫೆಲೋಶಿಪ್ ಅನ್ನು ಉಜಿರೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಸುಮಂತ ಅವರಿಗೆ ನೀಡಿ, ಗೋಕಾಕರನ್ನು ಕುರಿತು ಸಾಕ್ಷ್ಯಚಿತ್ರ ನಿರ್ಮಿಸಲು ಪ್ರೋತ್ಸಾಹಿಸುತ್ತ ದ್ದೇವೆ. ಇಂಥ ಹಲವು ಯೋಜನೆಗಳಿಂದ ಕನ್ನಡವನ್ನು ಕಟ್ಟುವ ಕೆಲಸದಲ್ಲಿ ಟ್ರಸ್ಟ್ ತೊಡಗಿಸಿಕೊಂಡಿದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕಸಾಪ: 53 ದತ್ತಿ ಪ್ರಶಸ್ತಿಗೆ ಪುಸ್ತಕಗಳ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) 53 ವಿವಿಧ ದತ್ತಿ ಪ್ರಶಸ್ತಿಗಳಿಗೆ ಪುಸ್ತಕಗಳನ್ನು ಆಹ್ವಾನಿಸಿದೆ.

2023ರ ಜನವರಿ 1ರಿಂದ ಡಿಸೆಂಬರ್ 31ರೊಳಗೆ ಪ್ರಕಟಗೊಂಡ ಪುಸ್ತಕಗಳನ್ನು ಲೇಖಕರು ಅಥವಾ ಪ್ರಕಾಶಕರು ಕಳಿಸಿ ಕೊಡಬಹು ದಾಗಿದೆ. ಪ್ರಶಸ್ತಿಗಳು ₹10 ಸಾವಿರದವರೆಗೆ ನಗದು ಬಹುಮಾನ ಹೊಂದಿವೆ. ಬಿಸಲೇರಿ ಜಯಣ್ಣ ಮತ್ತು ಬಿಸಲೇರಿ ಬ್ರದರ್ಸ್ ದತ್ತಿ, ವಿ. ಗೌರಮ್ಮ ಗಂಗಾಧರಯ್ಯ ಮತ್ತು ಮಕ್ಕಳ ಸಾಹಿತ್ಯ ಪ್ರಶಸ್ತಿ, ಭಾರತಿ ಮೋಹನ ಕೋಟಿ ದತ್ತಿ, ಹೊಳಲ್ಕೆರೆ ಪದ್ಮಾವತಮ್ಮ ಶ್ರೀಪಾಲಶೆಟ್ಟಿ ಡಾ. ಮದನಕೇಸರಿ ಜೈನ ದತ್ತಿ ಹಾಗೂ ಪೂಜ್ಯ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ದತ್ತಿ ಪ್ರಶಸ್ತಿ ತಲಾ ₹ 10 ಸಾವಿರ ನಗದು ಒಳಗೊಂಡಿವೆ.

ಪ್ರಶಸ್ತಿಗೆ ಪುಸ್ತಕ ಸಲ್ಲಿಸುವವರು ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯತ್ವವನ್ನು ಕಡ್ಡಾಯವಾಗಿ ಹೊಂದಿರಬೇಕು. ಇಲ್ಲವಾದಲ್ಲಿ ಸದಸ್ಯತ್ವ ಪಡೆದು, ಪುಸ್ತಕಕಳುಹಿಸಬಹುದು. ಪರಿಷತ್ತಿನ ಯಾವುದೇ ಪುಸ್ತಕ ಪ್ರಶಸ್ತಿ ಪುರಸ್ಕೃತರು ತಾವು ಪ್ರಶಸ್ತಿ ಪಡೆದ ವಿಭಾಗಕ್ಕೆ ಮೂರು ವರ್ಷ ಅರ್ಜಿ ಸಲ್ಲಿಸುವಂತಿಲ್ಲ. ಪುಸ್ತಕ ದತ್ತಿ ಪುರಸ್ಕಾರ ಬರಹಗಾರರಿಗೆ ಯಾವುದೇ ಪ್ರಕಾರದಲ್ಲಿ 3 ಸಲ ಪ್ರಶಸ್ತಿ ಬಂದಿದ್ದಲ್ಲಿ ಜೀವಮಾನ ಪೂರ್ತಿ ಕನ್ನಡ ಸಾಹಿತ್ಯ ಪರಿಷತ್ತಿನ ಪುಸ್ತಕ ದತ್ತಿ ಪುರಸ್ಕಾರಕ್ಕೆ ಅವರು ಅರ್ಜಿ ಸಲ್ಲಿಸುವಂತಿಲ್ಲ. ಪ್ರತಿ ವಿಭಾಗಕ್ಕೂ ಪ್ರತ್ಯೇಕ ಮೂರು ಪುಸ್ತಗಳನ್ನು ಸಲ್ಲಿಸಬೇಕು. ಪ್ರಶಸ್ತಿಯ ಪರಿಶೀಲನೆಗೆ ಕಳುಹಿಸಿರುವ ಪುಸ್ತಕಗಳನ್ನು ಹಿಂದಿರುಗಿಸುವುದಿಲ್ಲ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ತಿಳಿಸಿದ್ದಾರೆ. ಪುಸ್ತಕಗಳ ಪ್ರತಿಗಳು ಯಾವ ದತ್ತಿಗೆ ಎನ್ನುವುದನ್ನು ಪುಸ್ತಕದ ಮೊದಲ ಪುಟದಲ್ಲಿ ಸ್ಪಷ್ಟವಾಗಿ ಬರೆದು, ಮೇ 31ರ ಒಳಗೆ ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018 ಈ ವಿಳಾಸಕ್ಕೆ ಕಳುಹಿಸಬೇಕು. ವಿವರಕ್ಕೆ www.kasapa.inಗೆ ಭೇಟಿ ನೀಡಬಹುದು ಎಂದು ಹೇಳಿದ್ದಾರೆ.
ಸಂಪರ್ಕ ಸಂಖ್ಯೆ: 080 26612991 ಅಥವಾ 26623584

'ಮಹಿಳಾ ಸ್ವಾಭಿಮಾನದ ಸಂಕೇತ ಅಕ್ಕಮಹಾದೇವಿ'

ಪ್ರಜಾವಾಣಿ ವಾರ್ತೆ

ಸಮಾರಂಭದಲ್ಲಿ ಮಮತಾ ಸಾಗರ್ ಅವರನ್ನು ಅಭಿನಂದಿಸಲಾಯಿತು. (ಎಡದಿಂದ) ಎಚ್.ಎಲ್.ಪುಷ್ಪ, ಪ್ರೇಮಾ ಸೋಮಸುಂದರ್, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ದಿಬ್ಬೂರು ಎಸ್. ಗಿರೀಶ್, ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಸುಶೀಲಮ್ಮ, ಪ್ರಮೀಳಾ ಗರಡಿ, ಕೆ.ವಿ. ನಾಗರಾಜಮೂರ್ತಿ, ಸಿ. ಸೋಮಶೇಖರ್ ಹಾಗೂ ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: 'ಹನ್ನೆರಡನೆ ಶತಮಾನದ ಶರಣ ಚಳವಳಿಯಲ್ಲಿ ಗುರುತಿಸಿಕೊಂಡ ಅಕ್ಕಮಹಾದೇವಿ ಅವರು ಮಹಿಳಾ ಸ್ವಾಭಿಮಾನದ ಸಂಕೇತವಾಗಿ ಕಾಣುತ್ತಾರೆ' ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ್ ಬಣ್ಣಿಸಿದರು.

ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಹಾಗೂ ಕದಳಿ ಮಹಿಳಾ ವೇದಿಕೆ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡ ಅಕ್ಕಮಹಾದೇವಿ ಜಯಂತಿ, ವಚನ ಸಂಭ್ರಮ ಸಮಾರಂಭ ಉದ್ಘಾಟಿಸಿ, ಇತ್ತೀಚೆಗೆ 'ಜಾಗತಿಕ ಸಾಹಿತ್ಯ ಪ್ರಶಸ್ತಿ' ಪಡೆದ ಕವಯತ್ರಿ ಮಮತಾ ಸಾಗರ್ ಅವರನ್ನು ಅಭಿನಂದಿಸಿದರು.

ಈ ವೇಳೆ ಮಾತನಾಡಿದ ಅವರು, 'ಹನ್ನೆರಡನೆ ಶತಮಾನದ ಕಾಲಘಟ್ಟವು ಸವಾಲು, ಸಂಕಷ್ಟದಿಂದ ಕೂಡಿತ್ತು. ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆ, ಮೂಢನಂಬಿಕೆ ತಾಂಡವವಾಡುತ್ತಿತ್ತು. ಇಂತಹ ಸಂದರ್ಭದಲ್ಲಿ ಬಸವಾದಿ ಶರಣರು ಅನುಭವ ಮಂಟಪದ ಮೂಲಕ ವಿಶಿಷ್ಟ ಕ್ರಾಂತಿ ಮಾಡಿದರು. ಇಡೀ ಮಹಿಳಾ ಸಮಾಜದ ಸಂವೇದನೆಯ ಸಂಕೇತವಾಗಿ ಅಕ್ಕಮಹಾದೇವಿ ಕಾಣಿಸಿಕೊಂಡರು. ಅವರ ವಚನಗಳಲ್ಲಿ ಕಾವ್ಯ ರಮಣಿಯತೆಯನ್ನು ಕಾಣಬಹುದಾಗಿದೆ' ಎಂದು ಹೇಳಿದರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ, 'ಯಾರಲ್ಲಿ ಒಳ್ಳೆಯ ಕವಿತೆ, ಕಾವ್ಯದ ಗುಣ ಇರುತ್ತದೆಯೋ ಅವರು ಮಾತ್ರ ಉಳಿಯುತ್ತಾರೆ. ಹಾಗೆ ಉಳಿದವರಲ್ಲಿ ಅಕ್ಕಮಹಾದೇವಿ ಪ್ರಮುಖರು. ಅವರು ಸತ್ವಯುತವಾಗಿ ಬರೆದಿದ್ದರಿಂದ ಕಾಲ, ದೇಶವನ್ನು ಮೀರಿದ್ದಾರೆ. ಕಾವ್ಯಮೀಮಾಂಸೆ ಇಲ್ಲದ ಸಂದರ್ಭದಲ್ಲಿ ಬಸವಾದಿ ಶರಣರು ವಚನ ರಚಿಸಿ, ಹಾಡಿದರು. ಇತ್ತೀಚೆಗೆ ಶಿಕ್ಷಣದ ಮಹತ್ವದ ಬಗ್ಗೆ ಮಾತನಾಡುತ್ತೇವೆ. ಆದರೆ, ಹನ್ನೆರಡನೆ ಶತಮಾನದಲ್ಲಿ ಯಾವುದೇ ಕಾವ್ಯ ಗುರುವನ್ನೂ ಹೊಂದದೆ ಉತ್ಕೃಷ್ಟ ಸಾಹಿತ್ಯ ಸೃಷ್ಟಿಸಿದರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, 'ಅಕ್ಕಮಹಾದೇವಿ ಅವರು ಜಗತ್ತಿನ ಪ್ರಥಮ ಪ್ರಗತಿಪರ ಕವಯಿತ್ರಿ. ಪುರುಷ ಕವಿಗಳಿಗಿಂತ ಮಹಿಳಾ ಕವಿಗಳು ಹೆಚ್ಚು ಪ್ರಗತಿಪರರಾಗಿದ್ದಾರೆ. ಕವಯಿತ್ರಿ ಮಮತಾ ಸಾಗರ್ ಅವರು ಕನ್ನಡ ಕಾವ್ಯದ ದೊಡ್ಡ ಆಸ್ತಿ' ಎಂದು ಹೇಳಿದರು.

ಇದೇ ವೇಳೆ ವಚನ ಗಾಯನ, ವಚನ ವಾಚನ ಹಾಗೂ ವಚನ ನೃತ್ಯ ನಡೆಯಿತು.

ಚೆನ್ನೈ–ಮೈಸೂರು ವಂದೇ ಭಾರತ್ 30 ನಿಮಿಷ ತಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೆನ್ನೈ-ಮೈಸೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಮೇ 5ರಂದು 30 ನಿಮಿಷ ತಡವಾಗಿ ಹೊರಡಲಿದೆ.

ವರದಪುರದಲ್ಲಿ ಹೆಚ್ಚುವರಿ ಲೂಪ್‌ಲೈನ್ ಕಾರ್ಯಾರಂಭಕ್ಕಾಗಿ ಈ ಮಾರ್ಗವನ್ನು ಅಂದು ಅರ್ಧ ಗಂಟೆ ಬಂದ್ ಮಾಡಲು ನಿರ್ಧರಿಸಲಾಗಿದೆ. ಅದಕ್ಕಾಗಿ ಎಂಜಿಆರ್ ಚೆನ್ನೈ ಸೆಂಟ್ರಲ್‌ನಿಂದ ಪ್ರತಿದಿನ ಬೆಳಿಗ್ಗೆ 5.50ಕ್ಕೆ ಹೊರಡುತ್ತಿದ್ದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ತಡವಾಗಿ ಹೊರಡಲಿದೆ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಉದಕಮಂಡಲ ರೇಸ್

ಫಾಲ್ಕನ್‌ಬ್ರಿಡ್ಜ್ ಗೆಲ್ಲುವ ನಿರೀಕ್ಷೆ

ನೀಲ್‌ಗಿರೀಸ್ ಕಲೆಕ್ಟರ್ಸ್ ಕಪ್ ಭಾನುವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫಾಲ್ಕನ್‌ಬ್ರಿಡ್ಜ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 11:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅಗ್ಲಿ ಟ್ರೂಥ್ 1, ಅಲೆಟ್ಟ 2, ರಾಂಡ 3
2ನೇ ರೇಸ್: ಎಕ್ಲಿಪ್ಸ್ ಅವಾರ್ಡ್ 7, ಗಜಾಬೊ ಗ್ರ್ಯಾಂಡೆ 8, ಪ್ರೆಸ್ಟೊ ಪವರ್ 4
3ನೇ ರೇಸ್: ಫಾಲ್ಕನ್‌ಬ್ರಿಡ್ಜ್ 2, ಆರಿಣಿ 6, ಸೈಂಟ್ಲಿ ಸ್ಟಾರ್ 4
4ನೇ ರೇಸ್: ನೆಜಿಯಾ 1, ಆಂಜಿಯೊ 2, ಪಿಂಕ್ ಜಾಸ್ಮೈನ್ 3
5ನೇ ರೇಸ್: ರೂಲಿಂಗ್ ಸ್ಟಾರ್ 5, ಸ್ಪೆಕ್ಯುಲೇಷನ್ 2, ರೇಸ್ ಆಫ್ ಸನ್ 1
6ನೇ ರೇಸ್: ಸೈನೊಸರ್ 2, ಸೆನ್ಸಿಬಿಲಿಟಿ 4, ಡಾರ್ಕ್ ಸನ್ 1
7ನೇ ರೇಸ್: ವಿಂಡ್ಸರ್ ವಾಕ್ 1, ಬ್ರಿಲಿಯಂಟ್ ಲೇಡಿ 4, ಸೆನೊರ ಬಿಯಾಂಕ 5

ಉತ್ತಮ ಬೆಟ್: ಸೈನೊಸರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಯುಪಿಎಸ್‌ಸಿ ಪರೀಕ್ಷೆ: ಪ್ರೈಮಸ್ ಅಕಾಡೆಮಿಗೆ ಉತ್ತಮ ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕದ ಬಳಿಯ ಪ್ರೈಮಸ್-ಬಿ ಶಾಲೆಯ ಅಡಿಯಲ್ಲಿ ನಡೆಯುತ್ತಿರುವ ಪ್ರೈಮಸ್ ಸಿವಿಲ್ ಸರ್ವೀಸ್ ಅಕಾಡೆಮಿಯು ಕೇಂದ್ರ ಲೋಕಸೇವಾ ಆಯೋಗವು ಇತ್ತೀಚೆಗೆ ಪ್ರಕಟಿಸಿದ ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ ಪಡೆದಿದೆ.

ಹತ್ತು ದಿನ ಯು ಪಿ ಎ ಸ್ ಸಿ . ವ್ಯಕ್ತಿತ್ವ ಪರೀಕ್ಷೆಗಾಗಿ ಮಾರ್ಗದರ್ಶನ ಕಾರ್ಯಕ್ರಮವನ್ನು ನಡೆಸಲಾಗಿದ್ದು, ತಜ್ಞರು ಮತ್ತು ಅಧಿಕಾರಿಗಳಿಂದ ವಿವಿಧ ವಿಷಯಗಳ ಕುರಿತು ತರಗತಿಗಳನ್ನು ಆಯೋಜಿಸಲಾಗಿತ್ತು. ನಂತರ ಅಣಕು ಸಂದರ್ಶನಗಳು ನಡೆದಿದ್ದವು. ಇದರ ಪ್ರಯೋಜನವನ್ನು ಪಡೆದ ವಿದ್ಯಾರ್ಥಿಗಳಾದ ವಿಜೇತಾ ಹೊಸಮನಿ (100ನೇ ಸ್ಥಾನ), ಬಿ.ಎಸ್. ಚಂದನ್ (73), ತಸ್ಲೀಮ್ (745), ರಶೀದ್ ಅಲಿ (840) ಮತ್ತು ಅಭಿಷೇಕ್ (901) ಉತ್ತಮ ಶ್ರೇಣಿಯ ಕ್ರಮಾಂಕಗಳನ್ನು ಪಡೆದಿದ್ದಾರೆ.

ನಗರದಲ್ಲಿ ಇಂದು

ಆರ್ಗ್ಯಾನಿಕ್ ಸಂತೆ: ಅತಿಥಿಗಳು: ಸುರೇಶ್ ಹೆಬ್ಳೀಕರ್, ಸುಪ್ರಿಯಾ ರಾಮ್, ಆಶಾ ಕುಮಾರ್, ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಬೆಳಿಗ್ಗೆ 8

ಗಾಯನ, ಹಾಸ್ಯ, ರಸಪ್ರಶ್ನೆ ಮತ್ತು ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಅತಿಥಿ: ಆರ್. ಸದಾಶಿವಯ್ಯ ಜರಗನಹಳ್ಳಿ, ಆಯೋಜನೆ: ಸಹಮತ, ಸ್ಥಳ: ನಂ. 323, ಹೇಮ ಸದನ, ಸಹಕಾರನಗರ, ಬೆಳಿಗ್ಗೆ 10

ನಾದಯೋಗಿ ಭೈರವಿ ಕೆಂಪೇಗೌಡ ದತ್ತಿ, 'ಭೈರವಿ ರಾಗದ ಗಾಯನ' ಸ್ಪರ್ಧೆ: ಉದ್ಘಾಟನೆ: ಕೆ. ಮೋಹನ್ ದೇವ್ ಆಳ್ವ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿಎಂಶ್ರೀ ಪ್ರತಿಷ್ಠಾನ, ಎಂ.ವಿ.ಸೀ ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ರವೀಂದ್ರನಾಥ ಟ್ಯಾಗೋರ್-ಸಂವಾದ, ಸಂಗೀತ, ನೃತ್ಯ, ನಾಟಕ ಪ್ರದರ್ಶನ: ಉಮಾ ದಾಸ್ ಗುಪ್ತಾ, ಅಚಲಾ ಮೌಲಿಕ್, ಸಂಗೀತ ಕಛೇರಿ: ಸುನಾದ್ ತಂಡ, ಸ್ಥಳ: ಶೇಷಾದ್ರಿಪುರಂ ಕಾಲೇಜು, ವಿವಿ ಗಿರಿ ಕಾಲೊನಿ, ಶೇಷಾದ್ರಿಪುರ, ಬೆಳಿಗ್ಗೆ 10

ಎಸ್. ರಾಮಲಿಂಗೇಶ್ವರ ಅವರಿಗೆ 50ರ ಅಭಿನಂದನೆ, 'ಕನ್ನಡ ಮಾಣಿಕ್ಯ' ಪುಸ್ತಕ ಬಿಡುಗಡೆ: ಉದ್ಘಾಟನೆ: ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ಎಸ್. ಜಿ. ಸುಶೀಲಮ್ಮ, **ಪುಸ್ತಕ ಬಿಡುಗಡೆ:** ವೂಡೇ ಪಿ. ಕೃಷ್ಣ, ಅಭಿನಂದಿಸುವವರು: ಮಲ್ಲೇಪುರಂ ಜಿ. ವೆಂಕಟೇಶ್, ಅತಿಥಿ: ಮನು ಬಳಿಗಾರ್, ಆಯೋಜನೆ: ಡಾ.ಎಸ್. ರಾಮಲಿಂಗೇಶ್ವರ ಅಭಿನಂದನಾ ಸಮಿತಿ, ಸ್ಥಳ: ಶೇಷಾದ್ರಿಪುರಂ ಕಾಲೇಜಿನ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 10.15

ಹಂ.ಪ. ನಾಗರಾಜಯ್ಯ

ಪ್ರಚಂಡ ಕುಳ್ಳ ದ್ವಾರಕೀಶ್ ನೆನಪುಗಳು–ಕವಿಗೋಷ್ಠಿ, ಗೀತಗಾಯನ, ರಸಪ್ರಶ್ನೆ: ಅಧ್ಯಕ್ಷತೆ: ಎಚ್.ಎ. ಪಾರ್ಶ್ವನಾಥ್, ಅತಿಥಿಗಳು: ಟಿ.ಎನ್. ನಂಜಪ್ಪ, ಸುಧಾಕರ್, ಸುಶಾಂತ್, ಆಯೋಜನೆ: ರವಿಕಿರಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಎಂ.ಕೆ. ಶ್ರೀಧರ್ ಅವರಿಗೆ ಸನ್ಮಾನ: ಅತಿಥಿಗಳು: ತೇಜಸ್ವಿನಿ ಅನಂತಕುಮಾರ್, ಜಿ.ವಿ. ವಿಶ್ವನಾಥ್, ಆಯೋಜನೆ: ವಿಜಯ ಕಾಲೇಜು ನಿವೃತ್ತ ಅಧ್ಯಾಪಕರ ಬಳಗ, ಸ್ಥಳ: ಅನಂತ ಕುಮಾರ್ ಒಳಾಂಗಣ ಸಭಾಂಗಣ, ವಿಜಯ ಪದವಿ ಕಾಲೇಜು, ಬೆಳಿಗ್ಗೆ 10.30

ಉಮಾದೇವಿ ಅವರ 'ಮಲೆನಾಡ ಕತೆಗಳು' ಪುಸ್ತಕ ಬಿಡುಗಡೆ: ಮೂಡ್ನಾಕೂಡು ಚಿನ್ನಸ್ವಾಮಿ, ಪುಸ್ತಕದ ಕುರಿತು: ಜಯಲಕ್ಷ್ಮಿ ಪಾಟೀಲ್, ಅತಿಥಿಗಳು: ರವಿ ಮೋಹಿತೆ, ಚಿಕ್ಕರಸು, ಬಂಗ್ಲೆ ಮಲ್ಲಿಕಾರ್ಜುನ್, ಶ್ರೀಶೈಲ ಎಂ.ಜಿ., ಅಧ್ಯಕ್ಷತೆ: ಬಿ.ಟಿ. ಲಲಿತಾನಾಯಕ್, ಉಪಸ್ಥಿತಿ: ರಾಧಾಕೃಷ್ಣ, ಓಂಪ್ರಕಾಶ್ ನಾಯಕ್, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

'ಮಹಿಳಾ ಸಾಹಿತ್ಯ ಹಿರಿಯ ಚೇತನಗಳು' ಸಂವಾದ, ಗೌರವಾರ್ಪಣೆ: ಎಲ್.ವಿ. ಶಾಂತಕುಮಾರಿ, ಅಧ್ಯಕ್ಷತೆ: ಶೈಲಜಾ ಸುರೇಶ್, ಆಯೋಜನೆ: ಲೇಖಿಕಾ ಸಾಹಿತ್ಯ ವೇದಿಕೆ, ಸ್ಥಳ: 148, 4ನೇ ಕ್ರಾಸ್, ಪೂರ್ಣಪ್ರಜ್ಞ ಲೇಔಟ್, ಬನಶಂಕರಿ 3ನೇ ಹಂತ, ಮಧ್ಯಾಹ್ನ 3

'ಪಾ.ವೆಂ. ಸ್ಮೃತಿ': ಅತಿಥಿಗಳು: ಜಯಂತ ಕಾಯ್ಕಿಣಿ, ಎಚ್. ಶಶಿಕಲಾ, ಆಯೋಜನೆ: ಶಿವರಾಮ ಕಾರಂತ ವೇದಿಕೆ ಆರ್. ಟಿ. ನಗರ, ಸ್ಥಳ: ಡಿಜಿಕ್ಯುಎ ಸ್ಟಾಫ್ ಇನ್‌ಸ್ಟಿಟ್ಯೂಟ್, ಗುಣತಾ ವಿಹಾರ, ಡಿಜಿಕ್ಯುಎ ವಸತಿ ಸಂಕೀರ್ಣ, ಜೆ.ಸಿ. ನಗರ, ಸಂಜೆ 4

ಜಯಂತ ಕಾಯ್ಕಿಣಿ

ರಾಮನವಮಿ ಸಂಗೀತೋತ್ಸವ: ವೀಣೆ: ರಮಣ ಬಾಲಚಂದ್ರನ್, ಮೃದಂಗ: ತುಮಕೂರು ರವಿಶಂಕರ್, ಖಂಜಿರ: ಗುರುಪ್ರಸನ್ನ, 'ಜೈ ಶ್ರೀರಾಮ' ನಾಟಕ ಪ್ರದರ್ಶನ: ಕಲಾ ಗಂಗೋತ್ರಿ, ರಚನೆ: ಕೂರ್ಗಿ ಶಂಕರನಾರಾಯಣ ಉಪಾಧ್ಯಾಯ, ನಿರ್ದೇಶನ: ಬಿ.ವಿ. ರಾಜಾರಾಂ, ಸಂಗೀತ: ಎಚ್.ಎಸ್. ವೇಣುಗೋಪಾಲ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 4.15

ಸಂಗೀತ ಕಛೇರಿ: ಗಾಯನ: ವೆಂಕಟ್ ಆಯಲೂರ್, ಪಿಟೀಲು: ಶ್ರೀಕೃಷ್ಣನ್, ಮೃದಂಗ: ಬಿ.ಎಸ್. ಆನಂದ್, ಮೋರ್ಸಿಂಗ್: ಭಾಗ್ಯಲಕ್ಷ್ಮಿ ಎಂ. ಕೃಷ್ಣ, ಆಯೋಜನೆ: ಬಿ.ಟಿ.ಎಂ. ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀರಮಣ ಮಹರ್ಷಿ ಅಕಾಡೆಮಿ ಫಾರ್ ಬ್ಲೈಂಡ್, 3ನೇ ಹಂತ, ಜೆ.ಪಿ. ನಗರ, ಸಂಜೆ 5.30

ರಾಜ ಪುನೀತೋತ್ಸವ: ಉದ್ಘಾಟನೆ: ಎಸ್.ಎ. ಚನ್ನೇಗೌಡ, ಅಧ್ಯಕ್ಷತೆ: ಡಿ.ಎಂ. ಸಾಲಿ, ಅತಿಥಿಗಳು: ಯುವ ರಾಜ್‌ಕುಮಾರ್, ಬಿ.ಆರ್. ರವಿಕಾಂತೇಗೌಡ, ಲಹರಿ ವೇಲು, ಎನ್. ಆರ್. ರಮೇಶ್, ಭವ್ಯಾ, ಗುರುರಾಜ್, ಶಂಕರ, ಆಯೋಜನೆ: ಸಿಂಫೋನಿ ಸ್ವರ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ರಜತ ಮಹೋತ್ಸವ, ಹನುಮಜಯಂತಿ ಉತ್ಸವ: ಸಂಗೀತ ಕಛೇರಿ: ಗಾಯನ: ಬೆಂಗಳೂರು ಸಹೋದರರು, ಎಸ್. ಅಶೋಕ್, ಎಂ.ಬಿ. ಹರಿಹರನ್ ಮತ್ತು ತಂಡ, ಪಿಟೀಲು: ಅನಂತಪದ್ಮನಾಭ, ಮೃದಂಗ: ಸುನಿಲ್ ಸುಬ್ರಮಣ್ಯ, ಘಟ: ಹರಿಹರಪುರ ಕೆ. ಅಭಿಜಿತ್, ಆಯೋಜನೆ: ಸಮೀರ ಸಮಯ ಸಂಜೀವಿನಿ ಸಂಸತ್ ಪ್ರತಿಷ್ಠಾನ, ಸ್ಥಳ: ಶ್ರೀರಾಮ ಮಂದಿರ, ಈಸ್ಟ್‌ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6ರಿಂದ

ರಾಮನವಮಿ ಸಂಗೀತೋತ್ಸವ-2024: ವಿಶೇಷ ಕರ್ನಾಟಕ ಸಂಗೀತ ಕಛೇರಿ: ರಂಜನಿ ಮತ್ತು ಗಾಯತ್ರಿ, ವಿಠ್ಠಲ್ ರಂಗನ್, ದಿಲ್ಲಿ ಸಾಯಿರಾಂ, ಓಂಕಾರ್, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 6.30

'ಪುಕ್ಕಟೆ ಸಲಹೆ' ನಾಟಕ ಪ್ರದರ್ಶನ: ರಚನೆ: ಎಚ್. ಡುಂಡಿರಾಜ್, ನಿರ್ದೇಶನ: ಅಶೋಕ್ ಬಿ., ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ನಗರದಲ್ಲಿ ಶೇ 53.89 ಮತದಾನ

ಬೆಂಗಳೂರು: ಏಪ್ರಿಲ್ 26ರಂದು ನಡೆದ ಲೋಕಸಭಾ ಚುನಾವಣೆಯ ಮತದಾನದ ವಿವರವನ್ನು ಚುನಾವಣಾ ಆಯೋಗ ಭಾನುವಾರ ಪ್ರಕಟಿಸಿದ್ದು, ಕೇಂದ್ರ, ಉತ್ತರ, ದಕ್ಷಿಣ ಲೋಕಸಭಾ ಕ್ಷೇತ್ರಗಳು ಸೇರಿ ಶೇ 53.89ರಷ್ಟು ಮತದಾನವಾಗಿದೆ. ಕಳೆದ ಬಾರಿ ಶೇ 54.26ರಷ್ಟು ಮತದಾನವಾಗಿತ್ತು. ಉತ್ತರ ಲೋಕಸಭಾ ಕ್ಷೇತ್ರದಲ್ಲಿ ಅತಿಹೆಚ್ಚು ಮತದಾನವಾಗಿದ್ದು, ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಕಡಿಮೆಯಾಗಿದೆ.

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರ 54.45%

17,50,372 (32,14,496)

ಪುರುಷರು 8,82,474 (16,48,978) | ಇತರೆ 112 (604) | ಮಹಿಳೆಯರು 8,67,786 (15,64,914)

ಕ್ಷೇತ್ರ	ಒಟ್ಟು ಮತದಾನ	ಪುರುಷರು	ಮಹಿಳೆಯರು	ಇತರೆ
ಯಶವಂತಪುರ ವಿಧಾನಸಭೆ ಕ್ಷೇತ್ರ ಶೇ 59.56	3,55,805 (5,97,371)	1,78,269 (3,03,001)	1,77,512 (2,94,286)	24 (84)
ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರ ಶೇ 56.93	3,01,265 (5,29,169)	1,52,563 (2,72,483)	1,48,676 (2,56,563)	26 (123)
ಪುಲಕೇಶಿನಗರ ವಿಧಾನಸಭೆ ಕ್ಷೇತ್ರ ಶೇ 56.69	1,46,566 (2,58,522)	72,670 (1,29,265)	73,882 (1,29,205)	14 (52)
ಹೆಬ್ಬಾಳ ವಿಧಾನಸಭೆ ಕ್ಷೇತ್ರ ಶೇ 54.08	1,60,202 (2,96,223)	80,006 (1,50,345)	80,188 (1,45,825)	8 (53)
ಮಲ್ಲೇಶ್ವರ ವಿಧಾನಸಭೆ ಕ್ಷೇತ್ರ ಶೇ 54.00	1,24,368 (2,30,328)	61,810 (1,15,041)	62,558 (1,15,280)	0 (7)
ಮಹಾಲಕ್ಷ್ಮಿ ಲೇಔಟ್ ವಿಧಾನಸಭೆ ಕ್ಷೇತ್ರ ಶೇ 53.37	1,57,237 (2,94,638)	78,438 (1,50,307)	78,785 (1,44,287)	14 (44)
ಕೆ.ಆರ್. ಪುರ ವಿಧಾನಸಭೆ ಕ್ಷೇತ್ರ ಶೇ 51.36	2,78,834 (5,42,924)	1,42,861 (2,81,765)	1,35,955 (2,60,995)	18 (164)
ದಾಸರಹಳ್ಳಿ ವಿಧಾನಸಭೆ ಕ್ಷೇತ್ರ ಶೇ 48.59	2,26,095 (4,65,321)	1,15,857 (2,46,771)	1,10,230 (2,18,473)	8 (77)

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ 53.17%

12,45,168 (23,41,759)

ಪುರುಷರು 6,30,747 (12,07,291) | ಇತರೆ 50 (400) | ಮಹಿಳೆಯರು 6,14,371 (11,34,068)

ಕ್ಷೇತ್ರ	ಒಟ್ಟು ಮತದಾನ	ಪುರುಷರು	ಮಹಿಳೆಯರು	ಇತರೆ
ಜಯನಗರ ವಿಧಾನಸಭೆ ಕ್ಷೇತ್ರ ಶೇ 59.00	1,28,400 (2,17,645)	64,085 (1,09,091)	64,314 (1,08,539)	1 (15)
ಪದ್ಮನಾಭನಗರ ವಿಧಾನಸಭೆ ಕ್ಷೇತ್ರ ಶೇ 58.17	1,67,306 (2,87,607)	83,441 (1,45,596)	83,858 (1,41,986)	7 (25)
ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರ ಶೇ 58.03	1,34,493 (2,31,769)	68,408 (1,17,802)	66,082 (1,13,946)	3 (21)
ಬಸವನಗುಡಿ ವಿಧಾನಸಭೆ ಕ್ಷೇತ್ರ ಶೇ 55.10	1,29,898 (2,35,754)	65,623 (1,19,737)	64,274 (1,16,015)	1 (2)
ಗೋವಿಂದರಾಜನಗರ ವಿಧಾನಸಭೆ ಕ್ಷೇತ್ರ ಶೇ 52.78	1,59,367 (3,01,921)	79,932 (1,55,153)	79,433 (1,46,726)	2 (42)
ವಿಜಯನಗರ ವಿಧಾನಸಭೆ ಕ್ಷೇತ್ರ ಶೇ 51.45	1,61,155 (3,13,217)	81,846 (1,62,153)	79,282 (1,50,887)	27 (177)
ಬಿಟಿಎಂ ಲೇಔಟ್ ವಿಧಾನಸಭೆ ಕ್ಷೇತ್ರ ಶೇ 49.73	1,38,723 (2,78,963)	70,286 (1,44,748)	68,431 (1,34,167)	6 (48)
ಬೊಮ್ಮನಹಳ್ಳಿ ವಿಧಾನಸಭೆ ಕ್ಷೇತ್ರ ಶೇ 47.55	2,25,826 (4,74,883)	1,17,126 (2,53,011)	1,08,697 (2,21,802)	3 (70)

ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ 54.06%

13,15,612 (24,33,751)

ಪುರುಷರು 6,68,839 (12,54,642) | ಇತರೆ 85 (467) | ಮಹಿಳೆಯರು 6,46,688 (11,78,642)

ಕ್ಷೇತ್ರ	ಒಟ್ಟು ಮತದಾನ	ಪುರುಷರು	ಮಹಿಳೆಯರು	ಇತರೆ
ಶಿವಾಜಿನಗರ ವಿಧಾನಸಭೆ ಕ್ಷೇತ್ರ ಶೇ 57.61	1,15,743 (2,00,898)	58,013 (1,00,588)	57,729 (1,00,299)	1 (11)
ಗಾಂಧಿನಗರ ವಿಧಾನಸಭೆ ಕ್ಷೇತ್ರ ಶೇ 55.81	1,30,679 (2,34,149)	67,382 (1,20,339)	63,276 (1,13,776)	21 (34)
ರಾಜಾಜಿನಗರ ವಿಧಾನಸಭೆ ಕ್ಷೇತ್ರ ಶೇ 55.63	1,15,912 (2,08,370)	58,347 (1,05,082)	57,560 (1,03,274)	5 (14)
ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರ ಶೇ 54.82	1,34,081 (2,44,566)	68,101 (1,24,734)	65,969 (1,19,788)	11 (44)
ಸರ್ವಜ್ಞನಗರ ವಿಧಾನಸಭೆ ಕ್ಷೇತ್ರ ಶೇ 54.80	2,11,267 (3,85,497)	1,05,150 (1,93,331)	1,06,105 (1,92,093)	12 (73)
ಮಹದೇವಪುರ ವಿಧಾನಸಭೆ ಕ್ಷೇತ್ರ ಶೇ 53.78	3,54,819 (6,59,733)	1,85,472 (3,53,180)	1,69,345 (3,06,436)	2 (117)
ಶಾಂತಿನಗರ ವಿಧಾನಸಭೆ ಕ್ಷೇತ್ರ ಶೇ 53.36	1,22,895 (2,30,331)	60,660 (1,16,223)	62,225 (1,14,052)	10 (56)
ಸಿ.ವಿ. ರಾಮನ್ ನಗರ ವಿಧಾನಸಭೆ ಕ್ಷೇತ್ರ ಶೇ 48.19	1,30,216 (2,70,207)	65,714 (1,41,165)	64,479 (1,28,924)	23 (118)

ಬೆಂ. ಗ್ರಾಮಾಂತರ ಲೋಕಸಭಾ ಕ್ಷೇತ್ರ 68.30%

19,14,030 (28,02,580)

ಪುರುಷರು 9,63,046 (14,24,685) | ಇತರೆ 63 (325) | ಮಹಿಳೆಯರು 9,50,921 (13,77,570)

ಕ್ಷೇತ್ರ	ಒಟ್ಟು ಮತದಾನ	ಪುರುಷರು	ಮಹಿಳೆಯರು	ಇತರೆ
ಆನೇಕಲ್ ದಕ್ಷಿಣ ವಿಧಾನಸಭೆ ಕ್ಷೇತ್ರ ಶೇ 60.69	2,57,212 (4,23,844)	1,31,530 (2,20,871)	1,25,657 (2,02,886)	25 (87)
ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರ ಶೇ 56.08	4,21,071 (7,50,785)	2,16,617 (3,93,329)	2,04,445 (3,57,352)	9 (104)
ರಾಜರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರ ಶೇ 56.06	2,82,885 (5,04,617)	1,40,601 (2,58,637)	1,42,263 (2,45,900)	21 (80)

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ 77.00%

15,25,718 (19,81,347)

ಪುರುಷರು 7,66,604 (9,83,775) | ಇತರೆ 82 (266) | ಮಹಿಳೆಯರು 7,59,032 (9,97,306)

ಕ್ಷೇತ್ರ	ಒಟ್ಟು ಮತದಾನ	ಪುರುಷರು	ಮಹಿಳೆಯರು	ಇತರೆ
ಯಲಹಂಕ ವಿಧಾನಸಭೆ ಕ್ಷೇತ್ರ ಶೇ 60.96	2,79,590 (4,58,617)	1,40,850 (2,32,343)	1,38,720 (2,26,196)	20 (78)

■ ಒಟ್ಟು ಮತದಾನ *ಆವರಣದಲ್ಲಿರುವುದು ಒಟ್ಟು ಮತದಾರರು

‘ಎಲ್ಲ ಸೌಲಭ್ಯ ಬೇಕೆನ್ನುವ ಹೈಟೆಕ್ ನಾಗರಿಕರು ಎಲ್ಲಿ ಹೋದರು?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ರಾಜಧಾನಿ ಬೆಂಗಳೂರಿನ ಮೂರು ಕ್ಷೇತ್ರಗಳಲ್ಲಿ ಅತಿಕಡಿಮೆ ಮತದಾನ ಆಗಿರುವುದಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ಅತಿಹೆಚ್ಚು ಆಕ್ರೋಶ ವ್ಯಕ್ತವಾಗಿದೆ.

‘ಮತದಾನದಿಂದ ದೂರ ಉಳಿದ ಬೆಂಗಳೂರಿನ ಮತದಾರರು ಬದುಕಿದ್ದೂ ಸತ್ತಂತೆ’ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

‘ನಗರದ ನಾಗರಿಕರಿಗೆ ಎಲ್ಲ ಸೌಲಭ್ಯವೂ ಬೇಕು, ಆದರೆ ಮತದಾನ ಮಾತ್ರ ಅವರಿಗೆ ಬೇಕಾಗಿಲ್ಲ. ಮತದಾನ ಮರೆತು ಮೋಜು ಮಸ್ತಿ ಮಾಡುತ್ತಾರೆ. ಇವರಿಗೆ ಯಾವ ಸೌಲಭ್ಯವನ್ನೂ ನೀಡಬಾರದು’ ಎಂದೆಲ್ಲ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ನಾವೆಲ್ಲ ಹೋಗಿ ಮತದಾನ ಮಾಡಿದ್ದೇವೆ. ನಮ್ಮ ಕರ್ತವ್ಯವನ್ನು ನಾವು ಮಾಡಿದ್ದು, ನಮ್ಮ ಪ್ರದೇಶಗಳು ಅಭಿವೃದ್ಧಿಯಾಗಲೆಂದು ಬಯಸಿದ್ದೇವೆ. ಆದರೆ, ಯಾರು ಮತದಾನ ಮಾಡಿಲ್ಲವೋ ಅವರಿಗೆ ಶಿಕ್ಷೆ ಆಗಲೇಬೇಕು. ಅವರಿಗೆ ಶಿಕ್ಷೆ ನೀಡಲು ಸಾಧ್ಯವಿಲ್ಲದಿದ್ದರೆ, ಮತದಾನ ಮಾಡಿದವರಿಗಾದರೂ ಉತ್ತಮ ಸೌಲಭ್ಯ ಕೊಡಿ. ಮತದಾನ ಮಾಡಿದವರ ಪ್ರದೇಶಗಳಲ್ಲಿ ರಸ್ತೆ, ಉದ್ಯಾನಗಳನ್ನು ಅಭಿವೃದ್ಧಿಪಡಿಸಿ. ಮತದಾನ ಮಾಡಿದವರಿಗೆ ವಿದ್ಯುತ್, ನೀರಿನ ಬಿಲ್‌ನಲ್ಲಿ ರಿಯಾಯಿತಿ ನೀಡಿ’ ಎಂದು ಹೆಬ್ಬಾಳದ ಕಿರಣ್ ಅವರು ಆಗ್ರಹಿಸಿದರು.

‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹಾಗೂ ಜಿಲ್ಲಾಡಳಿತ ನಗರದ ಮತದಾರರು ಹೆಚ್ಚು ಮತದಾನ ಮಾಡಬೇಕು ಎಂದು ಹಲವು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿದ್ದವು. ಇವರು ಅರಿವು ಮೂಡಿಸಿದ ಮೇಲೂ ಮತದಾನ ಹೆಚ್ಚಾಗದಿದ್ದರೆ ಆ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಸ್ಥಗಿತಗೊಳಿಸಬೇಕು’ ಎಂದು ಒತ್ತಾಯಿಸಿದರು.

‘ದೋಸೆ ಹಾಗೂ ವಡಾ ತಿನ್ನಲು ಹೋಟೆಲ್‌ಗಳಲ್ಲಿ ಸಾಲಿನಲ್ಲಿ ನಿಲ್ಲುತ್ತಾರೆ. ರೈಲು, ಮೆಟ್ರೊ ಟಿಕೆಟ್, ಶಾಲೆಯಲ್ಲಿ ಶಿಕ್ಷಕರೊಂದಿಗೆ ಮಾತನಾಡಲು, ಪ್ರವೇಶ ಪಡೆಯಲು ಗಂಟೆಗಟ್ಟಲೆ ಸಾಲಿನಲ್ಲಿ ನಿಲ್ಲುತ್ತಾರೆ. ಆದರೆ, ಐದು ವರ್ಷಕ್ಕೊಮ್ಮೆ ಮತದಾನ ಮಾಡಲು ಒಂದು ಗಂಟೆ ಸಮಯ ನೀಡದ ನಾಗರಿಕರಿಗೆ ನಾಚಿಕೆಯಾಗಬೇಕು’ ಎಂದು ಗೋಪಾಲಕೃಷ್ಣ ಅಭಿಪ್ರಾಯಪಟ್ಟರು.

‘ಮತದಾನ ಮಾಡದ ಬೆಂಗಳೂರಿನ ನಾಗರಿಕರು ನಾಲಾಯಕ್‌ಗಳು. ಅವರಿಗೆ ಏನನ್ನೂ ಕೇಳಲು ಅರ್ಹತೆ ಇಲ್ಲ. ಅವರಿಗೆಲ್ಲ ನನ್ನ ಶ್ರದ್ಧಾಂಜಲಿ’ ಎಂದು ಕಾಮಾಕ್ಷಿಪಾಳ್ಯದ ರವೀಶ್ ಹೇಳಿದರು.

ನಗರದಲ್ಲೇ ಕಡಿಮೆ: ನಗರದ ಕೇಂದ್ರ, ಉತ್ತರ, ದಕ್ಷಿಣ ಲೋಕಸಭಾ ಕ್ಷೇತ್ರಗಳನ್ನು ಹೊರತುಪಡಿಸಿದರೆ ಉಳಿದ 11 ಲೋಕಸಭಾ ಕ್ಷೇತ್ರಗಳಲ್ಲಿ ಹೆಚ್ಚು ಮತದಾನವಾಗಿದೆ. ಈ ಮೂರು ಲೋಕಸಭಾ ಕ್ಷೇತ್ರದ ನಂತರ ಅತಿಹೆಚ್ಚು ಮತದಾನವಾಗಿರುವುದು ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ. ಇಲ್ಲಿ ಶೇ 68.30ರಷ್ಟು ಮತದಾನವಾಗಿದೆ. ಇನ್ನು ಉಳಿದ 10 ಲೋಕಸಭಾ ಕ್ಷೇತಗಳಲ್ಲಿ ಶೇ 70ಕ್ಕಿಂತಲೂ ಹೆಚ್ಚು ಮತದಾನವಾಗಿದ್ದು, ಶೇ 81ರವರೆಗೂ ತಲುಪಿದೆ.

ಬೆಂಗಳೂರು ನಗರದ ಮೂರು ಲೋಕಸಭಾ ಕ್ಷೇತ್ರಗಳಲ್ಲಿನ ಮತದಾನದ ಪ್ರಮಾಣ ಕಡಿಮೆ ಆಗಿರುವುದರಿಂದ ರಾಜ್ಯದ 14 ಕ್ಷೇತ್ರಗಳ ಒಟ್ಟಾರೆ ಪ್ರಮಾಣದಲ್ಲೂ ಕಡಿತವಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶದ ನುಡಿಗಳು...

- ನಮ್ ಮನ್ಸು ನಮ್ಗೆ... ವೋಟ್ ಎಲ್ಲ ಯಾಕೆ... ರೋಡು, ಸೇತುವೆ, ಮೇಲ್ಸೇತುವೆ, ಮೆಟ್ರೊ ಎಲ್ಲ ಅಭಿವೃದ್ಧಿ ಮಾತ್ರ ಬೆಂಗಳೂರಿಗೇ ಇರ್ಲಿ...
- ಬೆಂಗಳೂರಿನಲ್ಲಿ ಅತಿ ಕಡಿಮೆ ಮತದಾನವಾಗಿದೆ. ಬುದ್ಧಿವಂತರೇ, ಐಟಿ ವೃತ್ತಿಪರರೇ ಎಲ್ಲಿ ಹೋದಿರಿ? ವಾರಾಂತ್ಯದ ಮೋಜಿಗಾಗಿ ಪ್ರವಾಸಿ ತಾಣ, ಪಿಕ್‌ನಿಕ್‌ಗೆ ಹೋದಿರಾ? ಮತದಾನ ಮಾಡದ ಜನರು ಬರೀ ಬೊಗಳೆದಾಸರು. ದೇಶದ ನಾಗರಿಕರಾಗಲು ಅನರ್ಹರು.

14 ಲೋಕಸಭಾ ಕ್ಷೇತ್ರಗಳ ವಿವರ

2,88,08,182 ಒಟ್ಟು ಮತದಾರರು

2,00,38,384 ಮತದಾನ ಮಾಡಿದವರು

69.56%

ಬೆಂಗಳೂರು ಕೇಂದ್ರ, ಉತ್ತರ, ದಕ್ಷಿಣ ಲೋಕಸಭಾ ಕ್ಷೇತ್ರ

79,90,006 ಮತದಾರರ ಸಂಖ್ಯೆ

43,11,152 ಮತದಾನ ಮಾಡಿದವರ ಸಂಖ್ಯೆ

53.89%

ಬೆಂಗಳೂರಿನ 3 ಕ್ಷೇತ್ರದ ಹೊರತುಪಡಿಸಿ ಉಳಿದ 11 ಲೋಕಸಭಾ ಕ್ಷೇತ್ರಗಳ ವಿವರ

2,08,18,176 ಮತದಾರರ ಸಂಖ್ಯೆ

1,57,27,232 ಮತದಾನ ಮಾಡಿದವರ ಸಂಖ್ಯೆ

75.54%

ವಿದೇಶಿ ನಿರ್ಮಿತ ಬಂದೂಕುಗಳು, ಮದ್ದುಗುಂಡುಗಳು ಪತ್ತೆ

ಸಂದೇಶ್‌ಖಾಲಿ: ಭಾರಿ ಶಸ್ತ್ರಾಸ್ತ್ರ ವಶ

ನವದೆಹಲಿ/ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯ ಎರಡು ಸ್ಥಳಗಳಲ್ಲಿ ಶುಕ್ರವಾರ ಶೋಧ ನಡೆಸಿದ ಸಿಬಿಐ, ಪೊಲೀಸ್ ಸೇವಾ ರಿವಾಲ್ವರ್, ವಿದೇಶಿ ನಿರ್ಮಿತ ಬಂದೂಕುಗಳು ಸೇರಿದಂತೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಂಡಿದೆ.

ಈ ಶಸ್ತ್ರಾಸ್ತ್ರಗಳನ್ನು ಟಿಎಂಸಿಯಿಂದ ಅಮಾನತುಗೊಂಡಿರುವ ನಾಯಕ ಶಾಜಹಾನ್ ಶೇಖ್ ಅವರ ಸಹಚರನಿಗೆ ಸಂಬಂಧಿಸಿದ ಸ್ಥಳಗಳಿಂದ ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜನವರಿಯಲ್ಲಿ ಇ.ಡಿ ತಂಡದ ಮೇಲೆ ನಡೆದ ದಾಳಿಗೆ ಸಂಬಂಧಿದಂತೆ ಸಿಬಿಐ ಈ ಶೋಧ ಕೈಗೊಂಡಿತ್ತು. ಈ ಪ್ರಕರಣದಲ್ಲಿ ಫೆಬ್ರುವರಿ 29ರಂದು ಶೇಖ್ ಅವರನ್ನು ಪಶ್ಚಿಮ ಬಂಗಾಳದ ಪೊಲೀಸರು ಬಂಧಿಸಿದ್ದರು.

ಶೋಧದ ವೇಳೆ ಸಿಬಿಐ, ಬಾಂಬ್ ಪತ್ತೆ ದಳ, ರಾಷ್ಟ್ರೀಯ ಭದ್ರತಾ ಪಡೆ (ಎನ್‌ಎಸ್‌ಜಿ), ಕೇಂದ್ರ ಅರೆಸೇನಾ ಪಡೆಗಳು, ಪಶ್ಚಿಮ ಬಂಗಾಳ ಪೊಲೀಸರ ತಂಡಗಳು ಪಾಲ್ಗೊಂಡಿದ್ದವು.

ಖಚಿತ ಮಾಹಿತಿ ಮೇರೆಗೆ ದಾಳಿ: ‘ಇ.ಡಿ ತಂಡವು ಕಳೆದುಕೊಂಡಿದ್ದ ಕೆಲ ವಸ್ತುಗಳು ಮತ್ತು ಇತರ ಪ್ರಮುಖ ವಸ್ತುಗಳನ್ನು ಸಂದೇಶ್‌ಖಾಲಿಯಲ್ಲಿ ಶೇಖ್ ಅವರ ಸಹಚರರ ನಿವಾಸದಲ್ಲಿ ಬಚ್ಚಿಡಲಾಗಿದೆ ಎಂಬ ಖಚಿತ ಮಾಹಿತಿ ದೊರೆತಿತ್ತು. ಅದರಂತೆ ಸಿಬಿಐ ತಂಡವು ಕೇಂದ್ರ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಸಿಬ್ಬಂದಿ ಜತೆಗೂಡಿ ಶೋಧ ಕೈಗೊಂಡಿತು’ ಎಂದು ಸಿಬಿಐ ಪ್ರಕಟಣೆ ತಿಳಿಸಿದೆ.

ಈ ವೇಳೆ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳ ಬೃಹತ್ ಸಂಗ್ರಹವನ್ನು ವಶಪಡಿಸಿಕೊಳ್ಳಲಾಯಿತು. ಇವುಗಳಲ್ಲಿ ವಿದೇಶಿ ನಿರ್ಮಿತ ಬಂದೂಕುಗಳೂ ಇದ್ದವು ಎಂದು ಅದು ಹೇಳಿದೆ.

ಶಾಜಹಾನ್‌ಗೆ ಸಂಬಂಧಿಸಿದ ಹಲವು ಮಹತ್ವದ ದಾಖಲೆಗಳೂ ಈ ವೇಳೆ ಪತ್ತೆಯಾಗಿವೆ. ದೇಶಿ ನಿರ್ಮಿತ ಬಾಂಬ್‌ಗಳೆಂದು ಶಂಕಿಸಲಾದ ಕೆಲ ವಸ್ತುಗಳನ್ನೂ ವಶಕ್ಕೆ ಪಡೆಯಲಾಗಿದ್ದು, ಅವುಗಳನ್ನು ಎನ್‌ಎಸ್‌ಜಿ ತಂಡಗಳು ಪರಿಶೀಲಿಸುತ್ತಿವೆ ಎಂದು ಸಿಬಿಐ ಮಾಹಿತಿ ನೀಡಿದೆ. ಮನೆಯ ಮಾಲೀಕನನ್ನು ಅಬು ತಾಲೇಜ್ ಮೊಲ್ಲಾಹ್ ಎಂದು ಗುರುತಿಸಲಾಗಿದೆ. ಅವರು ಶೇಖ್ ಅವರ ಸಂಬಂಧಿ.

ಪಶ್ಚಿಮ ಬಂಗಾಳದ ಟಿಎಂಸಿ ಸರ್ಕಾರವು ಭಯೋತ್ಪಾದಕರು ಮತ್ತು ಅತ್ಯಾಚಾರಿಗಳನ್ನು ರಕ್ಷಿಸುತ್ತಿದ್ದು, ರಾಜ್ಯವು ಅರಾಜಕತೆಯ ಅಂಚಿನಲ್ಲಿದೆ
ಪ್ರೇಮ್ ಶುಕ್ಲಾ, ಬಿಜೆಪಿಯ ರಾಷ್ಟ್ರೀಯ ವಕ್ತಾರ

ರಾಜ್ಯ ಪೊಲೀಸರಿಗೆ ಮಾಹಿತಿ ನೀಡದೆ ಸಿಬಿಐ ನಡೆಸಿರುವ ಶೋಧದಲ್ಲಿ ಶಸ್ತ್ರಾಸ್ತ್ರ ವಶಪಡಿಸಿಕೊಂಡ ಬಗ್ಗೆ ಯಾವುದೇ ಪುರಾವೆಗಳಿಲ್ಲ –
ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ

‘ಬಿಜೆಪಿ ಮುಖಂಡರ ಸ್ನೇಹಿತನ ಮನೆಯಲ್ಲಿ ಬಾಂಬ್ ಸ್ಫೋಟ’

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಬಸೀರ್‌ಹಾಟ್ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಮುಖಂಡರ ಸಂಬಂಧಿಕರೊಬ್ಬರ ಮನೆಯಲ್ಲಿ ಬಾಂಬ್ ಸ್ಫೋಟಗೊಂಡಿದ್ದು, ಹಲವರಿಗೆ ಗಾಯವಾಗಿದೆ ಎಂದು ಟಿಎಂಸಿ ಶನಿವಾರ ಆರೋಪಿಸಿದೆ.

ಹಸ್ನಾಬಾದ್ ಪಂಚಾಯತ್ ಪ್ರದೇಶದಲ್ಲಿರುವ ಬಿಜೆಪಿ ನಾಯಕ ನಿಮಾಯ್ ದಾಸ್ ಅವರ ಸಂಬಂಧಿ ಮನೆಯಲ್ಲಿ ಬಾಂಬ್ ಸ್ಫೋಟಗೊಂಡಿದ್ದು, ಹಲವರಿಗೆ ಗಾಯಗಳಾಗಿವೆ. ದಾಸ್ ಅವರನ್ನು ವಿಚಾರಣೆಗಾಗಿ ತಕ್ಷಣವೇ ವಶಕ್ಕೆ ತೆಗೆದುಕೊಳ್ಳಬೇಕು ಎಂದು ಟಿಎಂಸಿ ನಾಯಕ ಕುನಾಲ್ ಘೋಷ್ ಆಗ್ರಹಿಸಿದ್ದಾರೆ.

ಸಂದೇಶ್‌ಖಾಲಿಯಲ್ಲಿ ನಿರ್ಜನ ಪ್ರದೇಶದಲ್ಲಿದ್ದ ಮನೆಯಿಂದ ಬಂದೂಕುಗಳನ್ನು ವಶಪಡಿಸಿಕೊಳ್ಳುವ ಹೆಸರಿನಲ್ಲಿ ನಡೆದ ನಾಟಕದ ಭಾಗವಾಗಿ ಸಿಬಿಐನೊಂದಿಗೆ ಎನ್‌ಎಸ್‌ಜಿಯನ್ನು ಬಳಸಲಾಗಿದೆ. ಇಂದು ಬಿಜೆಪಿ ಮುಖಂಡನ ಸಂಬಂಧಿಕರ ಮನೆಯಲ್ಲಿ ಬಾಂಬ್ ಸ್ಫೋಟ ಸಂಭವಿಸಿದೆ. ಇದರ ಕುರಿತು ತನಿಖೆಗೆ ಸಿಬಿಐ ಅಥವಾ ಎನ್‌ಎಸ್‌ಜಿ ಏಕೆ ಮುಂದಾಗಬಾರದು ಎಂದು ಪ್ರಶ್ನಿಸಿದ್ದಾರೆ.

ಚುನಾವಣಾ ಆಯೋಗಕ್ಕೆ ದೂರು

ಕೋಲ್ಕತ್ತ (ಪಿಟಿಐ): ರಾಜ್ಯದಲ್ಲಿ ಎರಡನೇ ಹಂತದ ಮತದಾನ ನಡೆಯುತ್ತಿದ್ದ ವೇಳೆ ಸಿಬಿಐ ದುರುದ್ದೇಶಪೂರಿತವಾಗಿ, ಅನೈತಿಕವಾಗಿ ದಾಳಿ ನಡೆಸಿದೆ ಎಂದು ಆರೋಪಿಸಿರುವ ಪಶ್ಚಿಮ ಬಂಗಾಳದ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಪಕ್ಷವು, ರಾಜ್ಯದ ಮುಖ್ಯ ಚುನಾವಣಾಧಿಕಾರಿಗೆ ದೂರು ನಿಡಿದೆ.

ಇ.ಡಿ ನಿರ್ದಯಿ: ಕೇಜ್ರಿವಾಲ್

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಇ.ಡಿ ಅತ್ಯಂತ ನಿರ್ದಯಿಯಂತೆ ವರ್ತಿಸುತ್ತಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಶನಿವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದಾರೆ.

ಪ್ರಕರಣದಲ್ಲಿ ತನ್ನ ಬಂಧನವನ್ನು ಪ್ರಶ್ನಿಸಿ ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದಂತೆ ಇ.ಡಿ ಇತ್ತೀಚೆಗೆ ಸಲ್ಲಿಸಿದ ಪ್ರಮಾಣಪತ್ರಕ್ಕೆ ಪ್ರತ್ಯುತ್ತರ ನೀಡಿರುವ ಅವರು, ತಾನು ತನಿಖೆಗೆ ಸದಾ ಸಹಕರಿಸಿರುವುದಾಗಿ ಹೇಳಿದ್ದಾರೆ.

ಎಎಪಿ ನಾಯಕರಿಗೆ ಒಂಬತ್ತು ಬಾರಿ ಸಮನ್ಸ್ ನೀಡಿದ್ದರೂ ತನಿಖಾಧಿಕಾರಿ ಮುಂದೆ ಹಾಜರಾಗದಿರುವುದು ಬಂಧನಕ್ಕೆ ಪ್ರಮುಖ ಕಾರಣ ಎಂದು ಇ.ಡಿ ಹೇಳಿತ್ತು.

ಇ.ಡಿಯ ಪ್ರತಿ ಸಮನ್ಸ್‌ಗೆ ಸರಿಯಾಗಿ ಪ್ರತಿಕ್ರಿಯೆ ನೀಡಲಾಗಿದೆ. ಬರವಣಿ ಮೂಲಕ ಅಥವಾ ವರ್ಚುವಲ್ ಆಗಿ ಪ್ರತಿಕ್ರಿಯಿಸಲು ಅಥವಾ ಹಾಜರಾಗಲು ಅವಕಾಶಗಳು ಇರುವಾಗ ಭೌತಿಕ ಉಪಸ್ಥಿತಿಯನ್ನೇ ಬೇಡುವುದು ಎಷ್ಟು ಸರಿ ಎಂದು ಕೇಜ್ರಿವಾಲ್ ಪ್ರಶ್ನಿಸಿದ್ದಾರೆ. ಹೀಗಾಗಿ ತಮ್ಮ ಮನವಿ ಪರಿಗಣನೆಗೆ ಅರ್ಹವಾಗಿದ್ದು, ತಕ್ಷಣವೇ ಬಿಡುಗಡೆ ಮಾಡುವಂತೆ ಅವರು ಕೋರಿದ್ದಾರೆ.

‘ಅಬಕಾರಿ ನೀತಿ ಹಗರಣದಲ್ಲಿ ಕೇಜ್ರಿವಾಲ್ ಸಂಚುಕೋರರಾಗಿದ್ದು, ದೊಡ್ಡ ಪ್ರಮಾಣದಲ್ಲಿ ಪಿತೂರಿ ಮಾಡಿದ್ದಾರೆ’ ಎಂಬ ಅಂಶವನ್ನು ಇ.ಡಿ ಪ್ರಮಾಣಪತ್ರದಲ್ಲಿ ಉಲ್ಲೇಖಿಸಿತ್ತು.

ದೆಹಲಿ ಮುಖ್ಯಮಂತ್ರಿ ತಮ್ಮ ಸಚಿವರು ಮತ್ತು ಎಎಪಿ ನಾಯಕರ ಜತೆಗೆ ಶಾಮೀಲಾಗಿ ಈ ಕೆಲಸ ಮಾಡಿದ್ದಾರೆ. ಅಬಕಾರಿ ನೀತಿಯಲ್ಲಿ ಅನುಕೂಲ ಮಾಡಿಕೊಟ್ಟಿದ್ದಕ್ಕೆ ಪ್ರತಿಯಾಗಿ ಮದ್ಯೋದ್ಯಮಿಗಳಿಂದ ಕಿಕ್‌ಬ್ಯಾಕ್ ಪಡೆಯುವಲ್ಲಿಯೂ ತೊಡಗಿಸಿಕೊಂಡಿದ್ದಾರೆ ಎಂದು ಅದು ಆರೋಪಿಸಿತ್ತು.

ಕೇಜ್ರಿವಾಲ್ ಪ್ರತಿಪಾದನೆ

- ನನ್ನ ಬಂಧನವೇ ಅಕ್ರಮ. ಇದು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ, ಒಕ್ಕೂಟ ವ್ಯವಸ್ಥೆ ಹಾಗೂ ಪ್ರಜಾಪ್ರಭುತ್ವ ತತ್ವಗಳ ಮೇಲೆ ನಡೆಸಿದ ದಾಳಿ.
- ನೀತಿ ಸಂಹಿತೆ ಜಾರಿಗೆ ಬಂದ ಬಳಿಕ ನನ್ನ ಬಂಧಿಸಲಾಯಿತು. ಈ ವೇಳೆ ಅನುಸರಿಸಿದ ವಿಧಾನ ಏಜೆನ್ಸಿಯ ನಿರಂಕುಶತೆಯನ್ನು ತೋರಿಸುತ್ತದೆ.
- ಚುನಾವಣೆ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ತನ್ನ ಅತಿ ದೊಡ್ಡ ರಾಜಕೀಯ ಎದುರಾಳಿಯಾದ ಎಎಪಿ ಮತ್ತು ಅದರ ನಾಯಕರನ್ನು ಹತ್ತಿಕ್ಕಲು ಇ.ಡಿ, ಪಿಎಂಎಲ್‌ಎ ಕಾನೂನು ಬಳಸುತ್ತಿದೆ.
- ಮುಕ್ತ ಮತ್ತು ನ್ಯಾಯ ಸಮ್ಮತ ಚುನಾವಣೆಗೆ ಸಮಾನ ಅವಕಾಶ ಒದಗಿಸುವಲ್ಲಿ ವಿಫಲವಾಗಿದೆ.

ಮೊದಲ ಮತದ ಸಂಭ್ರಮ

ಜಯಶ್ರೀ ಪರಸಪ್ಪ ಗೋಕಾಕ, ಬೆಳಗಾವಿ
ಪ್ರಜಾಪ್ರಭುತ್ವ, ಸಂವಿಧಾನ, ಚುನಾವಣೆಗಳ ಬಗ್ಗೆ ಓದಿದ್ದೆ. ಶಾಲೆ ಕಾಲೇಜಿನಲ್ಲಿ ಅಣಕು ಪ್ರದರ್ಶನ ಮಾಡಿದ್ದೆ. ಆದರೆ, ಈಗ ನಿಜವಾಗಿಯೂ ನಾನು ಮತದಾರಳು. ಈ ವಿಷಯ ನನ್ನಲ್ಲಿ ಹೆಮ್ಮೆ ಮೂಡಿಸಿದೆ. ಖಂಡಿತವಾಗಿ ನಾನು ನನ್ನ ಹಕ್ಕು ಚಲಾಯಿಸುತ್ತೇನೆ. ಶಿಕ್ಷಣದಲ್ಲಿ, ಉದ್ಯೋಗದಲ್ಲಿ ಹಿಂದುಳಿದಿದ್ದೇವೆ ಎಂದು ಹೇಳಿಕೊಳ್ಳುತ್ತ ಕೂಡುವ ಕಾಲ ಇದಲ್ಲ. ನಾವು ಸರಿಯಾದ ವ್ಯಕ್ತಿಗೆ ಮತ ಹಾಕಿ, ಸರಿಯಾದ ಸರ್ಕಾರ ಆಯ್ಕೆ ಮಾಡಿದರೆ ನಮ್ಮ ಸಮಸ್ಯೆಗಳು ನೀಗುತ್ತವೆ. ಈಗ ಆ ಹಕ್ಕು ನನಗೆ ಸಿಕ್ಕಿದೆ.

ಕ್ರಿಜಲ್ ಮೇಥಾ ಕಾರವಾರ, ವಿದ್ಯಾರ್ಥಿ, ಉತ್ತರ ಕನ್ನಡ ಜಿಲ್ಲೆ
ಇದೇ ಮೊದಲ ಬಾರಿಗೆ ನಾನು ಮತ ಚಲಾಯಿಸುವೆ. ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಬಲಗೊಳಿಸಲು ಮತದಾನ ಮುಖ್ಯ ಎಂಬುದನ್ನು ಅರಿತಿದ್ದೇನೆ. ಉತ್ತಮ ಜನಪ್ರತಿನಿಧಿ ಆಯ್ಕೆಗೆ ಆದ್ಯತೆ ನೀಡುವೆ. ಮತದಾನ ಪ್ರಮಾಣ ಹೆಚ್ಚಾದಷ್ಟೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾನ್ಯತೆ ಸಿಗುತ್ತದೆ. ನಾನು ತಪ್ಪದೇ ಮತ ಚಲಾಯಿಸುವೆ. ಸ್ನೇಹಿತರಿಗೂ ಪ್ರೇರೇಪಿಸುವೆ.

ಮತ ಆಮಿಷ: ಆಯೋಗದ ವಶ

₹93.93 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹ 81.19 ಕೋಟಿ
ಮದ್ಯ	₹ 178.28 ಕೋಟಿ (1.47 ಕೋಟಿ ಲೀ)
ಮಾದಕವಸ್ತು	₹ 11.36 ಕೋಟಿ (548.17 ಕೆ.ಜಿ.)
ಚಿನ್ನ	₹ 76.75 ಕೋಟಿ (137.25 ಕೆ.ಜಿ.)
ಬೆಳ್ಳಿ	₹ 1.18 ಕೋಟಿ (302.37 ಕೆ.ಜಿ.)

ಎಂಥಾ ಮಾತು!

ಮಂಗಳಸೂತ್ರ ಕಸಿಯುವ ಕೆಲಸವನ್ನು ಕಾಂಗ್ರೆಸ್ ಎಂದಿಗೂ ಮಾಡುವುದಿಲ್ಲ. ಪುಲ್ವಾಮದಲ್ಲಿ ಸೈನಿಕರು ಸತ್ತಾಗ ಅವರ ಪತ್ನಿಯರ ಮಂಗಳಸೂತ್ರ ಕಿತ್ತುಕೊಂಡವರು ಯಾರು? ಪ್ರಧಾನಿ ಮೋದಿ ಪತ್ನಿಯ ಮಂಗಳಸೂತ್ರ 'ಕಿತ್ತವರು' ಯಾರು?
ಬಿ.ಕೆ. ಹರಿಪ್ರಸಾದ್, ವಿಧಾನಪರಿಷತ್‌ನ ಕಾಂಗ್ರೆಸ್ ಸದಸ್ಯ

ಮೋದಿ ಅವರು ಮೂರನೇ ಸಲ ಪ್ರಧಾನಿಯಾದರೆ, ತಮ್ಮ ಕೈಗೆ ಚೊಂಬೇ ಗತಿ ಎಂಬ ಭಯ ಕಾಂಗ್ರೆಸ್‌ನವರಿಗೆ ಕಾಡುತ್ತಿದೆ. ಅವರಿಗೆ ರಾತ್ರಿ ಗಾಢ ನಿದ್ರೆಯಲ್ಲೂ ಚೊಂಬಿನ ಕನಸು ಬೀಳುತ್ತಿದೆ. ಅದಕ್ಕೆ ಚೊಂಬು ಹಿಡಿದೇ ಪತ್ರಿಕಾಗೋಷ್ಠಿ ಮಾಡುತ್ತಾರೆ. ಚುನಾವಣೆ ಬಳಿಕ ಕಾಂಗ್ರೆಸ್‌ನವರು ಚೊಂಬು ಹಿಡಿದು ಹೊರಗೆ ಹೋಗಲಾಗದು. ಮೋದಿ ಅವರು ಎಲ್ಲಾ ಕಡೆ ಶೌಚಾಲಯ ಕಟ್ಟಿದ್ದಾರೆ.
ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಶಾಸಕ

ಹಲವು ಬಾರಿ ಮಂತ್ರಿಯಾಗಿದ್ದ ಜಗದೀಶ ಶೆಟ್ಟರ್. ಮುಖ್ಯಮಂತ್ರಿಯೂ ಆಗಿದ್ದರು. ಇಷ್ಟು ದೊಡ್ಡ ಅನುಭವಿ ರಾಜಕಾರಣಿ 'ಮೋದಿ ನೋಡಿ ಮತ ನೀಡಿ' ಎಂದು ಕೇಳುತ್ತಿದ್ದಾರೆ. ಇದು ಜನರಿಗೆ ಮಾಡುತ್ತಿರುವ ದ್ರೋಹ. 20 ವರ್ಷಗಳ ಅಧಿಕಾರದಲ್ಲಿ ಹೇಳಿಕೊಳ್ಳುವಂಥದ್ದು ಏನೂ ಮಾಡಿಲ್ಲವೇ? ನಿಮ್ಮ ಸಾಧನೆ ಹೇಳಿ ಮತ ಕೇಳಿ ನೋಡೋಣ.
ಮೃಣಾಲ್ ಹೆಬ್ಬಾಳಕರ, ಬೆಳಗಾವಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ

'ಸಂಸತ್ತಿನಲ್ಲಿ ಯುವ ಧ್ವನಿ ಅಗತ್ಯ'

ಪ್ರಜಾವಾಣಿ ಸಂದರ್ಶನ

ಸಚಿವ ಸತೀಶ ಜಾರಕಿಹೊಳಿ ಪುತ್ರಿ, ಚಿಕ್ಕೋಡಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾಂಕಾ ಜಾರಕಿಹೊಳಿ ಅವರು 'ಪ್ರಜಾವಾಣಿ'ಗೆ ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

• ಇಮಾಮ್‌ಹುಸೇನ್ ಗೂಡುನವರ

• ಘಟಾನುಘಟಿ ರಾಜಕಾರಣಿಗಳು ಪ್ರತಿನಿಧಿಸಿದ ಕ್ಷೇತ್ರವಿದು. ಚಿಕ್ಕ ವಯಸ್ಸಿನಲ್ಲೇ ರಾಜಕೀಯ ಬೇಕಿತ್ತೇ?

–ದೇಶದಲ್ಲಿ ಶೇ 50ರಷ್ಟು ಯುವಜನರಿದ್ದಾರೆ. ಅವರ ಪರ ಧ್ವನಿ ಎತ್ತಲು ಸಂಸತ್ತಿನಲ್ಲೂ ಯುವಜನ ಬೇಕು. ಕಾಂಗ್ರೆಸ್ ಯುವಜನರಿಗೆ ಆದ್ಯತೆ ಕೊಟ್ಟಿದೆ. ಹಿರಿಯ ನಾಯಕರ ಆಶೀರ್ವಾದವಿದೆ.

• ಕ್ಷೇತ್ರದ ಸಮಸ್ಯೆಗಳ ಬಗ್ಗೆ ನಿಮಗೆಷ್ಟು ಅರಿವಿದೆ?

–ನೆರೆ ಇಲ್ಲವೇ ಬರ ಈ ಭಾಗದಲ್ಲಿ ಸಾಮಾನ್ಯ. ನೀರಾವರಿ ಸೌಲಭ್ಯ ಕಲ್ಪಿಸಬೇಕಿದೆ. ಗಡಿ ಭಾಗದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಿದೆ. ಮಹಿಳೆಯರ ದುಡಿಯುವ ಕೈಗಳಿಗೆ ಕೆಲಸ ನೀಡಬೇಕಿದೆ.

• ಕುಟುಂಬ ರಾಜಕಾರಣ ಹೇಗೆ ಸಮರ್ಥಿಸಿಕೊಳ್ಳುತ್ತೀರಿ?

–ನನಗೆ ಟಿಕೆಟ್ ಕೊಟ್ಟಿರುವ ವಿಚಾರದಲ್ಲಿ ಕುಟುಂಬ ರಾಜಕಾರಣವಿಲ್ಲ. ಶಾಸಕರು, ಮಾಜಿ ಶಾಸಕರು, ಮುಖಂಡರ ಅಭಿಪ್ರಾಯ ಸಂಗ್ರಹಿಸಿ ಕೊಟ್ಟಿದ್ದಾರೆ.

• ಎಂಬಿಎ ಪದವೀಧರೆಯಾದರೂ ರಾಜಕೀಯದ ಬಗೆಗೆ ಒಲವು ಏಕೆ?

–ಹಲವು ವರ್ಷಗಳಿಂದ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ನನಗೆ ಸಹಜವಾಗಿಯೇ ರಾಜಕೀಯದ ಸೆಳೆತವಿತ್ತು. ಆದರೆ, ಸೂಕ್ತ ವೇದಿಕೆ ಸಿಕ್ಕಿರಲಿಲ್ಲ. ಈ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವಿದೆ ಎಂದು ತಂದೆ ಹೇಳಿದರು. ಆದರೆ, ಸ್ಪರ್ಧಿಸಲು ಒತ್ತಡ ಹೇರಲಿಲ್ಲ. ಸ್ವಯಂಪ್ರೇರಣೆಯಿಂದ ನಾನೇ ಒಪ್ಪಿಕೊಂಡೆ.

• ನಿಮ್ಮ ಕುಟುಂಬ ಮತ್ತು ನಿಮ್ಮ ವ್ಯಕ್ತಿತ್ವದ ಪ್ರಭಾವ ಮತದಾರರ ಮೇಲೆ ಎಷ್ಟು ಪರಿಣಾಮ ಬೀರಬಹುದು?

–ತಂದೆ ಸತೀಶ ಜಾರಕಿಹೊಳಿ ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕೈಗೊಂಡಿದ್ದಾರೆ. ಎಲ್ಲ ಸಮುದಾಯಗಳ ಒಡನಾಟ ಹೊಂದಿದ್ದಾರೆ. ನಮ್ಮ ಕುಟುಂಬದ ಜೊತೆ ಕಾರ್ಯಕರ್ತರ ಪಡೆ ಇದೆ. ತಂದೆಯವರು ಹಾಕಿಕೊಟ್ಟ ಮಾರ್ಗದಲ್ಲೇ ನಾನು ಸಾಗುವೆ. ಇವೆಲ್ಲ ಸಂಗತಿಗಳೂ ಫಲಿತಾಂಶದ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತವೆ.

• ಮತದಾರರು ನಿಮಗೆ ಏಕೆ ಮತ ಹಾಕಬೇಕು?

–ಕಷ್ಟ ಕಾಲದಲ್ಲೂ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿದ ಪಂಚ ಗ್ಯಾರಂಟಿ ಯೋಜನೆಗಳ ಲಾಭ ಶೇ 95ರಷ್ಟು ಜನರಿಗೆ ಸಿಕ್ಕಿದೆ. ಅಭಿವೃದ್ಧಿ ವಿಷಯದಲ್ಲಿ ತಂದೆಗೆ ಒಳ್ಳೆಯ ಹೆಸರಿದೆ. ಚುನಾವಣೆ ಪ್ರಣಾಳಿಕೆಯಲ್ಲಿ ಜನಪರ ಯೋಜನೆಗಳನ್ನು ಪ್ರಕಟಿಸಿದ್ದೇವೆ. ನನಗೆ ಮತ ಹಾಕಲು ಇವೆಲ್ಲವೂ ಸಕಾರಣವಾಗಲಿವೆ.

• ನಿಮ್ಮ ಎದುರು ಹಿರಿಯ ರಾಜಕಾರಣಿ ಸ್ಪರ್ಧಿಸಿದ್ದಾರಲ್ಲ?

–ಜನಪ್ರತಿನಿಧಿಯಾಗಿ ಸೇವೆ ಮಾಡಲು ಮನಸ್ಸು ಮತ್ತು ಜನಪರ ತುಡಿತ ಮುಖ್ಯವೇ ಹೊರತು ವಯಸ್ಸು ಅಲ್ಲ. ಆ ಮನಸ್ಸು ನನಗಿದೆ. ನಾನು ಚುನಾವಣೆಗೆ ಸ್ಪರ್ಧಿಸುತ್ತಿರುವುದು ಮೊದಲ ಸಲ ಇರಬಹುದು. ಆದರೆ, ಹಲವು ಚುನಾವಣೆ ಕಂಡಿದ್ದೇನೆ. ತಂದೆ ಸ್ಪರ್ಧಿಸಿದಾಗ, ಗ್ರಾಮಗಳಲ್ಲಿ ಪ್ರಚಾರ ಮಾಡಿದ್ದೇನೆ.

• ಎದುರಿಸುತ್ತಿರುವ ಸವಾಲು, ಸಮಸ್ಯೆಗಳೇನು?

–ಈಗಿರುವ ಸಂಸದರು ನಿರೀಕ್ಷೆಯಂತೆ ಕೆಲಸ ಮಾಡಿಲ್ಲ ಎಂಬ ಭಾವನೆ ಜನರಲ್ಲಿದೆ. ಪಂಚ ಗ್ಯಾರಂಟಿ ಯೋಜನೆಗಳಿಗೆ ಆಕರ್ಷಿತರಾದ ಜನ, ನಮ್ಮನ್ನು ಪ್ರೀತಿಯಿಂದ ಬರಮಾಡಿಕೊಳ್ಳುತ್ತಿದ್ದಾರೆ. ಯುವ ಮತದಾರರಿಂದ ಉತ್ತಮ ಸ್ಪಂದನೆಯಿದೆ.

• ಪಕ್ಷೇತರ ಅಭ್ಯರ್ಥಿ ಶಂಭು ಕಲ್ಲೋಳಕರ ಸ್ಪರ್ಧೆಯಿಂದ ಒಳೇಟು ಬೀಳುತ್ತದೆಯಲ್ಲವೇ?

–ಖಂಡಿತ ಇಲ್ಲ. ಅವರು 2023ರ ವಿಧಾನಸಭೆ ಚುನಾವಣೆಯಲ್ಲಿ ರಾಯಬಾಗ ಮತಕ್ಷೇತ್ರದಿಂದ ಸ್ಪರ್ಧಿಸಿದ್ದರು. ಆದರೆ, ಇದು ಎಂಟು ಮತಕ್ಷೇತ್ರ ಒಳಗೊಂಡ ಚಿಕ್ಕೋಡಿ ಲೋಕಸಭೆ ಕ್ಷೇತ್ರದ ಚುನಾವಣೆ. ಅವರ ಸ್ಪರ್ಧೆಯಿಂದ ನಮಗೇನೂ ಹಿನ್ನಡೆಯಾಗದು. ಕಾಂಗ್ರೆಸ್‌ನ ಮತಗಳು ನಮಗೇ ಬರಲಿವೆ. ❖

'ಮಾದರಿ ಕ್ಷೇತ್ರವಾಗಿಸುವ ಕನಸು'

• ಕ್ಷೇತ್ರದ ಅಭಿವೃದ್ಧಿ ಬಗ್ಗೆ ಇಟ್ಟುಕೊಂಡ ಕನಸು, ನಿರೀಕ್ಷೆಗಳೇನು?

–ಗ್ರಾಮಗಳಲ್ಲಿ ಜನರು ಎದುರಿಸುತ್ತಿರುವ ಕುಂದು ಕೊರತೆಗಳನ್ನು ಬಗೆಹರಿಸಬೇಕಿದೆ. ಅದಕ್ಕೆ ಒತ್ತು ನೀಡುವೆ. ನೀರಾವರಿ ಕಲ್ಪಿಸಬೇಕು ಎಂಬುದು ಬಹುದಿನಗಳ ಕನಸು. ಉದ್ಯೋಗ ಸೃಷ್ಟಿಗೆ ಆದ್ಯತೆ ಕೊಡುವೆ. ಚಿಕ್ಕೋಡಿ ಕ್ಷೇತ್ರವನ್ನು ಮಾದರಿಯಾಗಿಸುವ ಸಂಕಲ್ಪ ಮಾಡಿದ್ದೇನೆ. ಯುವಜನರ ಮತ್ತು ಮಹಿಳಾ ಸಬಲೀಕರಣದ ಕನಸಿದೆ.

ತೀವ್ರ ನಿಗಾದಲ್ಲಿ ಭದ್ರತಾ ಕೊಠಡಿ– ಅಧಿಕಾರಿಗಳ ಕಣ್ಗಾವಲು

ಇವಿಎಂಗಳಿಗೆ 3 ಹಂತದ ಭದ್ರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊದಲ ಹಂತದಲ್ಲಿ ಮತದಾನ ಪೂರ್ಣಗೊಂಡಿರುವ 14 ಲೋಕಸಭಾ ಕ್ಷೇತ್ರಗಳ ವಿದ್ಯುನ್ಮಾನ ಮತ ಯಂತ್ರಗಳನ್ನು (ಇವಿಎಂ) ಇರಿಸಿರುವ ಭದ್ರತಾ ಕೊಠಡಿಗಳಿಗೆ ಮೂರು ಹಂತದ ಭದ್ರತೆ ಕಲ್ಪಿಸಲಾಗಿದೆ.

ಶುಕ್ರವಾರ ಸಂಜೆ ಮತದಾನದ ಪ್ರಕ್ರಿಯೆ ಪೂರ್ಣಗೊಳಿಸಿದ ಬಳಿಕ ವಿದ್ಯುನ್ಮಾನ ಮತ ಯಂತ್ರಗಳನ್ನು ಮೊಹರು ಮಾಡಿ, ಭದ್ರತಾ ಕೊಠಡಿಗಳಿಗೆ ಸ್ಥಳಾಂತರಿಸಲಾಗಿದೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ 'ಪ್ರಜಾವಾಣಿ'ಗೆ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯ ಮೂರು ಕ್ಷೇತ್ರಗಳ ಇವಿಎಂಗಳನ್ನು ಬೆಂಗಳೂರು ನಗರದಲ್ಲಿ ಇರಿಸಲಾಗಿದೆ. ಉಳಿದ 11 ಕ್ಷೇತ್ರಗಳ ಇವಿಎಂಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಇರಿಸಲಾಗಿದೆ. ಭದ್ರತಾ ಕೊಠಡಿಗಳ ಹೊರ ವಲಯದಲ್ಲಿ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ಸಿಬ್ಬಂದಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳೊಂದಿಗೆ ಪಹರೆ ಕಾಯುತ್ತಿದ್ದಾರೆ ಎಂದು ವಿವರಿಸಿದರು.

ಎರಡನೇ ಹಂತದಲ್ಲಿ ರಾಜ್ಯ ಸಶಸ್ತ್ರ ಮೀಸಲು ಪೊಲೀಸ್ ಪಡೆಯ ಸಿಬ್ಬಂದಿ ಭದ್ರತೆ ಒದಗಿಸುತ್ತಿದ್ದಾರೆ. ಇವಿಎಂಗಳನ್ನು ಇರಿಸಿರುವ ಕೊಠಡಿಗಳ ಬಾಗಿಲುಗಳ ಸಮೀಪದಲ್ಲಿ ಮೂರನೇ ಹಂತದ ಭದ್ರತೆಗೆ ಸಿವಿಲ್ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದರು.

ದಿನದ 24 ಗಂಟೆಯೂ ಮೂರು ಹಂತದ ಭದ್ರತಾ ವ್ಯವಸ್ಥೆ ಇರುತ್ತದೆ. ಭದ್ರತಾ ಪಡೆಗಳು ಮತ್ತು ಪೊಲೀಸ್ ಸಿಬ್ಬಂದಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ ಎಂದು ತಿಳಿಸಿದರು.

ನಿತ್ಯವೂ ಪರಿಶೀಲನೆ: ಜಿಲ್ಲಾ ಚುನಾವಣಾಧಿಕಾರಿ, ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಚುನಾವಣಾ ವೀಕ್ಷಕರು ಪ್ರತಿನಿತ್ಯ ಭದ್ರತಾ ಕೊಠಡಿಗಳಿಗೆ ಭೇಟಿನೀಡಿ ಪರಿಶೀಲನೆ ನಡೆಸುತ್ತಾರೆ. ದೈನಂದಿನ ಭೇಟಿಯ ಕುರಿತು ವರದಿಯನ್ನೂ ದಾಖಲಿಸಿಕೊಳ್ಳುತ್ತಾರೆ ಎಂದು ಮೀನಾ ಹೇಳಿದರು.

ಭದ್ರತಾ ಕೊಠಡಿಗಳ ಒಳಾಂಗಣ ಮತ್ತು ಹೊರಾಂಗಣಗಳಿಗೆ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಕ್ಯಾಮೆರಾದಲ್ಲಿ ಸೆರೆಯಾಗುವ ದೃಶ್ಯಾವಳಿಗಳನ್ನು ಟಿ.ವಿ ಮೂಲಕ ನೇರಪ್ರಸಾರದ ವ್ಯವಸ್ಥೆ ಮಾಡಲಾಗಿದೆ ಎಂದರು.

ಮೈಸೂರಿನ ಮಹಾರಾಣಿ ವಾಣಿಜ್ಯ ಕಾಲೇಜಿನಲ್ಲಿ ಸಂಗ್ರಹಿಸಿರುವ ಇವಿಎಂಗಳನ್ನು ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಮಹೇಶ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಶನಿವಾರ ವೀಕ್ಷಿಸಿದರು

14 ಕ್ಷೇತ್ರ: ಶೇ 69.56ರಷ್ಟು ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ ಮತದಾನ ಪೂರ್ಣಗೊಂಡಿರುವ 14 ಲೋಕಸಭಾ ಕ್ಷೇತ್ರಗಳಲ್ಲಿ ಅಂತಿಮವಾಗಿ ಶೇಕಡ 69.56ರಷ್ಟು ಮತದಾರರು ಹಕ್ಕು ಚಲಾಯಿಸಿದ್ದಾರೆ.

ಶುಕ್ರವಾರ ಮತದಾನ ಪೂರ್ಣಗೊಂಡ ಬಳಿಕ ತಾತ್ಕಾಲಿಕ ಅಂಕಿಅಂಶ ಹಂಚಿಕೊಂಡಿದ್ದ ಕೇಂದ್ರ ಚುನಾವಣಾ ಆಯೋಗ, ಶೇ 69.23ರಷ್ಟು ಮತದಾನ ನಡೆದಿದೆ ಎಂದು ಹೇಳಿತ್ತು. ಶನಿವಾರ ಅಂತಿಮ ಪಟ್ಟಿ ಪ್ರಕಟಿಸಿದ್ದು, ಶೇ 69.56ರಷ್ಟು ಮತದಾನ ನಡೆದಿದೆ ಎಂದು ತಿಳಿಸಿದೆ.

14 ಕ್ಷೇತ್ರಗಳಲ್ಲಿ ಒಟ್ಟು 2.88 ಕೋಟಿ ಮತದಾರರು ಮತದಾನಕ್ಕೆ ಅರ್ಹತೆ ಹೊಂದಿದ್ದರು. ಅವರಲ್ಲಿ 2 ಕೋಟಿ ಮತದಾರರು ಮಾತ್ರ ಹಕ್ಕು ಚಲಾಯಿಸಿದ್ದಾರೆ. ಚುನಾವಣಾ ಆಯೋಗ ನೀಡಿರುವ ಅಂಕಿಅಂಶಗಳ ಪ್ರಕಾರ, 87,69,748 ಮತದಾರರು ಮತದಾನದಿಂದ ದೂರ ಉಳಿದಿದ್ದಾರೆ.

1,44,17,530 ಪುರುಷ ಮತದಾರರ ಪೈಕಿ 1,00,16,921 ಮಂದಿ ಮತ ಚಲಾಯಿಸಿದ್ದಾರೆ. 1,43,87,585 ಮಹಿಳೆಯರ ಪೈಕಿ 1,00,20,796 ಮಂದಿ ಮತ ಚಲಾಯಿಸಿದ್ದಾರೆ. 3,067 ಲಿಂಗತ್ವ ಅಲ್ಪಸಂಖ್ಯಾತ ಮತದಾರರಲ್ಲಿ ಮತದಾನ ಮಾಡಿದವರು 667 ಮಂದಿ ಮಾತ್ರ.

2019ರ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಶೇ 3.32ರಷ್ಟು ಹೆಚ್ಚಿನ ಮತದಾನ ನಡೆದಿದೆ. ಬಿಬಿಎಂಪಿ ವ್ಯಾಪ್ತಿಯ ಮೂರೂ ಕ್ಷೇತ್ರಗಳಲ್ಲಿ ಮತದಾನ ಪ್ರಮಾಣ ಕುಸಿದಿದೆ. ಬೆಂಗಳೂರು ಉತ್ತರದಲ್ಲಿ ಶೇ 0.31ರಷ್ಟು, ಬೆಂಗಳೂರು ಕೇಂದ್ರದಲ್ಲಿ ಶೇ 0.26ರಷ್ಟು ಮತ್ತು ಬೆಂಗಳೂರು ದಕ್ಷಿಣದಲ್ಲಿ ಶೇ 0.53ರಷ್ಟು ಕಡಿಮೆ ಮತದಾನವಾಗಿದೆ.

ಶೇಕಡಾವಾರು ಮತದಾನದ ವಿವರ

ಮಂಡ್ಯ	81.67
ಕೋಲಾರ	78.27
ತುಮಕೂರು	78.05
ಹಾಸನ	77.68
ದಕ್ಷಿಣ ಕನ್ನಡ	77.56
ಉಡುಪಿ–ಚಿಕ್ಕಮಗಳೂರು	77.15
ಚಿಕ್ಕಬಳ್ಳಾಪುರ	77.00
ಚಾಮರಾಜನಗರ	76.81
ಚಿತ್ರದುರ್ಗ	73.30
ಮೈಸೂರು	70.62
ಬೆಂಗಳೂರು ಗ್ರಾಮಾಂತರ	68.30
ಬೆಂಗಳೂರು ಉತ್ತರ	54.45
ಬೆಂಗಳೂರು ಕೇಂದ್ರ	54.06
ಬೆಂಗಳೂರು ದಕ್ಷಿಣ	53.17

ಕ್ಷೇತ್ರ ಸಮೀಕ್ಷೆ

ಖರ್ಗೆ–ಮೋದಿ ಯಾರ ವರ್ಚಸ್ಸಿಗೆ ಫಲ?

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ **61.18%**

11,60,716 ಪುರುಷರು
11,44,256 ಮಹಿಳೆಯರು
23,05,304 ಒಟ್ಟು ಮತದಾರರ ಸಂಖ್ಯೆ
332 ಲಿಂಗತ್ವ ಅಲ್ಪಸಂಖ್ಯಾತರು

ಕ್ಷೇತ್ರವನ್ನು ಕಾಡುವ ವಿಷಯಗಳು
- ಜಿಲ್ಲೆಯಲ್ಲಿ ವಿಫಲಗೊಂಡ ನೀರಾವರಿ ಯೋಜನೆಗಳು
- ಟೇಕಾಫ್ ಆಗದ ಟೆಕ್ಸ್‌ಟೈಲ್ ಪಾರ್ಕ್
- ಕೈಗಾರಿಕೆಗಳಿಗೆ ಸಿಗದ ಉತ್ತೇಜನ
- ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ನಿರ್ಲಕ್ಷ್ಯ
- ಜೆಜೆಎಂ ಕಾಮಗಾರಿ ಅನುಷ್ಠಾನದಲ್ಲಿ ಉದಾಸೀನ
- ಜಿಲ್ಲೆಯಾದ್ಯಂತ ಹೆಚ್ಚುತ್ತಿರುವ ವಲಸೆ



ಶಾಸಕರ ಬಲಾಬಲ
ಕಾಂಗ್ರೆಸ್ 6
ಬಿಜೆಪಿ 1
ಜೆಡಿಎಸ್ 1

1. ಕಲಬುರಗಿ ದಕ್ಷಿಣ
2. ಕಲಬುರಗಿ ಗ್ರಾಮೀಣ
3. ಕಲಬುರಗಿ ಉತ್ತರ
4. ಸೇಡಂ
5. ಚಿತ್ತಾಪುರ
6. ಗುರುಮಠಕಲ್
7. ಜೇವರ್ಗಿ
8. ಅಫಜಲಪುರ



ಡಾ. ಉಮೇಶ ಜಾಧವ (ಬಿಜೆಪಿ)

ಮೋದಿ ಅವರು ಜಿಲ್ಲೆಗೆ ಮೆಗಾ ಟೆಕ್ಸ್ ಟೈಲ್ ಪಾರ್ಕ್ ಮಂಜೂರು ಮಾಡಿದ್ದು, ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾಗಲಿವೆ. ಆಯ್ಕೆಯಾದರೆ ಇನ್ನಷ್ಟು ಕೆಲಸ ಮಾಡುವೆ

- 👍 ಎರಡು ಬಾರಿ ಶಾಸಕರಾಗಿ, ಒಂದು ಬಾರಿ ಸಂಸದರಾಗಿ ಕರ್ತವ್ಯ ನಿರ್ವಹಣೆ
- 👍 ಬಿಜೆಪಿ ಕಾರ್ಯಕರ್ತರ ಜಾಲ, ಜಿಲ್ಲೆಯಲ್ಲಿರುವ ಅಧಿಕ ಸಂಖ್ಯೆಯ ಬಂಜಾರ ಸಮುದಾಯ
- 👎 ಕಲಬುರಗಿಯಲ್ಲಿ ಆರಂಭವಾಗದ ರೈಲ್ವೆ ವಿಭಾಗ
- 👎 ನಿರೀಕ್ಷಿತ ಪ್ರಮಾಣದಲ್ಲಿ ಅಭಿವೃದ್ಧಿ ಕಾಣದಿರುವುದು



ರಾಧಾಕೃಷ್ಣ ದೊಡ್ಡಮನಿ (ಕಾಂಗ್ರೆಸ್)

ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯಸಭೆಯನ್ನು ಪ್ರತಿನಿಧಿಸುತ್ತಿದ್ದು, ನಾನು ಸಂಸದನಾದರೆ ಇಬ್ಬರೂ ಸೇರಿ ಕೇಂದ್ರದಿಂದ ಹಲವು ಅಭಿವೃದ್ಧಿ ಯೋಜನೆಗಳನ್ನು ತರುತ್ತೇವೆ

- 👍 ಎಐಸಿಸಿ ಅಧ್ಯಕ್ಷರ ಅಳಿಯ, ಸಜ್ಜನಿಕೆಯ ವ್ಯಕ್ತಿತ್ವ, ಕ್ಷೇತ್ರದಲ್ಲಿ ಅನೇಕ ಚುನಾವಣೆಗಳನ್ನು ನಡೆಸಿದ ಅನುಭವ
- 👍 ಕಾಂಗ್ರೆಸ್ ಶಾಸಕರ ಬಲ, ಗ್ಯಾರಂಟಿಗಳು ತರುವ ಮತ
- 👎 ರಾಜಕೀಯ ಅನುಭವದ ಕೊರತೆ
- 👎 ಖರ್ಗೆ ಅಳಿಯ, ಪ್ರಿಯಾಂಕ್ ಬಾವ ಎಂಬ ಕುಟುಂಬ ರಾಜಕಾರಣದ ನಂಟು

• ಮನೋಜಕುಮಾರ್ ಗುದ್ದಿ

ಕಲಬುರಗಿ

ಕಲಬುರಗಿ: ಕಲ್ಯಾಣ ಕರ್ನಾಟಕದ ಹೆಬ್ಬಾಗಿಲು, ತೊಗರಿ ಕಣಜ ಎಂದೇ ಹೆಸರಾದ ಕಲಬುರಗಿ ಜಿಲ್ಲೆಯು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ತವರು ಜಿಲ್ಲೆಯೂ ಹೌದು. ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಖರ್ಗೆ ಅವರ ಅಳಿಯ ರಾಧಾಕೃಷ್ಣ ದೊಡ್ಡಮನಿ ಹಾಗೂ ಬಿಜೆಪಿ ಅಭ್ಯರ್ಥಿಯಾಗಿ ಹಾಲಿ ಸಂಸದ ಡಾ.ಉಮೇಶ ಜಾಧವ ಸ್ಪರ್ಧಿಸಿದ್ದು, ಕದನ ಕಣದಲ್ಲಿ ತುರುಸಿನ ಸ್ಪರ್ಧೆ ಏರ್ಪಟ್ಟಿದೆ.

2019ರಲ್ಲಿ ತಮ್ಮ ರಾಜಕೀಯ ಜೀವನದ ಮೊದಲ ಸೋಲು ಕಂಡಿದ್ದ ಮಲ್ಲಿಕಾರ್ಜುನ ಖರ್ಗೆ ಅವರು ಈಗ ಎಐಸಿಸಿ ಅಧ್ಯಕ್ಷರು. ಸೋಲಿನ ಸೇಡು ತೀರಿಸಿಕೊಳ್ಳಲು ಕಾಯುತ್ತಿರುವ ಖರ್ಗೆ ಅವರು ರಾಧಾಕೃಷ್ಣ ಅವರನ್ನು ಕಣಕ್ಕಿಳಿಸುವ ಮೂಲಕ ರಾಜಕೀಯ ಚದುರಂಗದಾಟವನ್ನು ಭರ್ಜರಿಯಾಗಿಯೇ ಆರಂಭಿಸಿದ್ದಾರೆ.

ಬಿಜೆಪಿ ಅಭ್ಯರ್ಥಿ ಡಾ.ಉಮೇಶ ಜಾಧವ ಅವರು 'ಮೋದಿ ಅಲೆ'ಯನ್ನೇ ಪ್ರಮುಖವಾಗಿ ನೆಚ್ಚಿಕೊಂಡಿದ್ದಾರೆ. ಜೊತೆಗೆ ತಮ್ಮ ಅವಧಿಯಲ್ಲಿ ಹೆದ್ದಾರಿಗಳ ಅಭಿವೃದ್ಧಿ, ವಂದೇ ಭಾರತ್ ರೈಲನ್ನು ತಂದಿರುವುದು, ಕೋವಿಡ್ ಸಂದರ್ಭದಲ್ಲಿ ಮಾಡಿದ ಸೇವೆಯನ್ನು ನೆನಪಿಸುತ್ತಾ ಮತಯಾಚನೆ ಮಾಡುತ್ತಿದ್ದಾರೆ.

ಖರ್ಗೆ ಅವರು ಎರಡು ಬಾರಿ ಪ್ರಚಾರ ಸಭೆಯಲ್ಲಿ ಭಾಗವಹಿಸುವ ಮೂಲಕ ಈ ಚುನಾವಣೆ ತಮಗೆ ಎಷ್ಟು ಮಹತ್ವದ್ದು ಎಂಬುದನ್ನು ಮನದಟ್ಟು ಮಾಡಿದ್ದಾರೆ. ಜೊತೆಗೆ, 'ಕರ್ನಾಟಕ ಮತ್ತು ಕಲಬುರಗಿಗೆ ನಾನು ಏನಾದರೂ ಒಳ್ಳೆಯ ಕೆಲಸ ಮಾಡಿದ್ದು ನಿಮ್ಮ ನೆನಪಿನಲ್ಲಿದ್ದರೆ ವೋಟು ಹಾಕಲು ಬನ್ನಿ; ಇಲ್ಲವೇ ಸತ್ತ ಮೇಲೆ ನನ್ನ ಮಣ್ಣಿಗಾದರೂ ಬನ್ನಿ' ಎಂದು ಹೇಳುವ ಮೂಲಕ ಮತದಾರರನ್ನು ಭಾವನಾತ್ಮಕವಾಗಿ ಸೆಳೆಯಲು ಮುಂದಾಗಿದ್ದಾರೆ.

ಮಾಜಿ ಸಚಿವರಾದ ಮಾಲೀಕಯ್ಯ ಗುತ್ತೇದಾರ, ಬಾಬುರಾವ ಚಿಂಚನಸೂರ 2019ರಲ್ಲಿ ಬಿಜೆಪಿಯಲ್ಲಿದ್ದರು. ಇಬ್ಬರೂ ನಾಯಕರು ಮರಳಿ ಕಾಂಗ್ರೆಸ್ ಸೇರಿದ್ದಾರೆ. ಬಿಜೆಪಿ ಸೇರಿದ್ದರೂ ಕಾಂಗ್ರೆಸ್ ಶಾಸಕ ಎಂ.ವೈ. ಪಾಟೀಲ ಸೇರಿದಂತೆ ಹಲವು ಮುಖಂಡರೊಂದಿಗೆ ಉತ್ತಮ ಒಡನಾಟ ಹೊಂದಿದ್ದ ಮಾಲೀಕಯ್ಯ ಅವರ ಸೇರ್ಪಡೆಯಿಂದಾಗಿ ಈಡಿಗ ಸಮುದಾಯದ ಮತಗಳು ಕಾಂಗ್ರೆಸ್ ಕಡೆಗೆ ವಾಲಬಹುದು ಎಂಬ ನಿರೀಕ್ಷೆಯನ್ನು ಕಾಂಗ್ರೆಸ್ ಮುಖಂಡರು ಇಟ್ಟುಕೊಂಡಿದ್ದಾರೆ. ಬಾಬುರಾವ ಚಿಂಚನಸೂರ ಅವರು ಹೋದಲ್ಲೆಲ್ಲ 'ಡಾ. ಜಾಧವ ಕೋಲಿ ಸಮಾಜವನ್ನು ಎಸ್ಟಿಗೆ ಸೇರಿಸುವುದಾಗಿ ನಂಬಿಸಿ ಮೋಸ ಮಾಡಿದರು' ಎಂದು ಹೇಳುತ್ತಿದ್ದಾರೆ.

ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಕೋಲಿ ಸಮಾಜದವರನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಬೇಕು ಎಂಬುದು ಚುನಾವಣಾ ವಿಷಯವಾಗಿದೆ. 10 ವರ್ಷಗಳಿಂದ ಕೇಂದ್ರದಲ್ಲಿ ಅಧಿಕಾರದಲ್ಲಿದ್ದರೂ ಈ ಕುರಿತು ತೀರ್ಮಾನ ಕೈಗೊಂಡಿಲ್ಲ ಎಂದು ಕಾಂಗ್ರೆಸ್ ಪಕ್ಷವು ಬಿಜೆಪಿಯನ್ನು ಟೀಕಿಸುತ್ತಿದೆ. ಕಲಬುರಗಿಯಲ್ಲಿ ಪ್ರಚಾರ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೋಲಿ, ಗೊಂಡ ಸಮುದಾಯದವರಿಗೆ ಎಸ್ಟಿ ಮೀಸಲಾತಿ ನೀಡದ ಕೇಂದ್ರವನ್ನು ಟೀಕಿಸುವ ಮೂಲಕ ಮೀಸಲಾತಿ ಅಸ್ತ್ರ ಪ್ರಯೋಗಿಸಿದ್ದಾರೆ.

'ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಲಿಂಗಾಯತ ಸಮುದಾಯದವರನ್ನು ಕಡೆಗಣಿಸುತ್ತಿದ್ದಾರೆ' ಎಂದು ಅವರ ಪಕ್ಷದವರೇ ಅಸಮಾಧಾನಗೊಂಡಿದ್ದಾರೆ.

ಕೇಂದ್ರ ಸರ್ಕಾರ ಘೋಷಿಸಿದ್ದ ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಇನ್ನೂ ಕಾರ್ಯಾರಂಭವಾಗಿಲ್ಲ. ಖರ್ಗೆ ಅವರು ರೈಲ್ವೆ ಸಚಿವರಾಗಿದ್ದ ಸಂದರ್ಭದಲ್ಲಿ ಘೋಷಿಸಿದ್ದ ಕಲಬುರಗಿಗೆ ವಿಭಾಗೀಯ ರೈಲ್ವೆ ಕಚೇರಿಯನ್ನು ಬಿಜೆಪಿ ಸರ್ಕಾರ ಕಾರ್ಯರೂಪಕ್ಕೆ ತರಲಿಲ್ಲ. ಈ ಕುರಿತು ಮತದಾರರ ಅಸಮಾಧಾನವನ್ನು ಬಿಜೆಪಿ ಹೇಗೆ ತಣಿಸಲಿದೆ ಎಂಬುದರ ಮೇಲೆ ಚುನಾವಣೆಯ ಫಲಿತಾಂಶ ನಿಂತಿದೆ. ❖

'ಅನಂತ' ಕೋಟೆ ಕಾಗೇರಿಗೊ, ಅಂಜಲಿಗೊ?

• ಗಣಪತಿ ಹೆಗಡೆ

ಉತ್ತರ ಕನ್ನಡ

ಕಾರವಾರ: ಬಿಜೆಪಿಯ ಭದ್ರಕೋಟೆ ಎನಿಸಿರುವ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ ಬಿಜೆಪಿ, ಕಾಂಗ್ರೆಸ್ ನಡುವೆ ಜಿದ್ದಾಜಿದ್ದಿನ ಹಣಾಹಣಿ ಏರ್ಪಟ್ಟಿದೆ.

ಎರಡೂ ಪಕ್ಷಗಳ ಅಭ್ಯರ್ಥಿಗಳಿಗಿಂತ 'ನರೇಂದ್ರ ಮೋದಿ ವರ್ಸಸ್ ಗ್ಯಾರಂಟಿ ಯೋಜನೆ' ನಡುವಿನ ಸ್ಪರ್ಧೆ ಎಂಬಂತೆ ಬಿಂಬಿತಗೊಂಡಿದೆ. 28 ವರ್ಷಗಳ ಬಳಿಕ ಬಿಜೆಪಿ ತನ್ನ ಅಭ್ಯರ್ಥಿ ಬದಲಿಸಿದ್ದು, ಆರು ಬಾರಿ ಶಾಸಕರಾಗಿದ್ದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಕಣಕ್ಕಿಳಿಸಿದೆ. ಕಾಂಗ್ರೆಸ್‌ನಿಂದ ಖಾನಾಪುರದ ಮಾಜಿ ಶಾಸಕಿ ಡಾ.ಅಂಜಲಿ ನಿಂಬಾಳ್ಕರ್ ಇಲ್ಲಿಂದ ಮೊದಲ ಬಾರಿಗೆ ಸ್ಪರ್ಧಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಆರು ಮತ್ತು ಬೆಳಗಾವಿ ಜಿಲ್ಲೆಯ ಕಿತ್ತೂರು ಮತ್ತು ಖಾನಾಪುರ ವಿಧಾನಸಭೆ ಕ್ಷೇತ್ರಗಳನ್ನು ಉತ್ತರ ಕನ್ನಡ ಲೋಕಸಭೆ ಕ್ಷೇತ್ರ ಒಳಗೊಂಡಿದೆ. ಖಾನಾಪುರ ತಾಲ್ಲೂಕಿನ ಅಭ್ಯರ್ಥಿಗೆ ಮೊದಲ ಬಾರಿ ಸ್ಪರ್ಧೆಗೆ ಅವಕಾಶ ಸಿಕ್ಕಂತಾಗಿದೆ.

1952 ರಿಂದ ಕ್ಷೇತ್ರವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿದ್ದ ಕಾಂಗ್ರೆಸ್ 1996ರಲ್ಲಿ ಸೋಲೊಪ್ಪಿತ್ತು. 1999ರಲ್ಲಿ ಪುನಃ ಗೆಲುವು ಸಾಧಿಸಿದರೂ 2004ರಿಂದ ಕ್ಷೇತ್ರವು ಬಿಜೆಪಿಯ ವಶದಲ್ಲಿತ್ತು.

ಲೋಕಸಭಾ ಚುನಾವಣೆಯಲ್ಲಿ ಹಿಂದುತ್ವದ ಟ್ರಂಪ್ ಕಾರ್ಡ್ ಬಳಸಿ, ಗೆಲ್ಲುತ್ತಿದ್ದ ಬಿಜೆಪಿಯ ರಣತಂತ್ರವನ್ನು ಈ ಬಾರಿ ಕಾಂಗ್ರೆಸ್ ಹೈಜಾಕ್ ಮಾಡಿದೆ. ಪಕ್ಷದ ಅಭ್ಯರ್ಥಿ ಡಾ.ಅಂಜಲಿ ಪ್ರಚಾರ ಸಭೆಗಳಲ್ಲಿ ಕ್ಷೇತ್ರದ ಅಭಿವೃದ್ಧಿ ಜೊತೆಗೆ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆ ಮುಂದಿಟ್ಟುಕೊಂಡು ಮತ ಕೇಳುತ್ತಿದ್ದಾರೆ.

ಹಿಂದುತ್ವ ಪ್ರತಿಪಾದನೆಯ 'ಐಕಾನ್' ಅನಂತಕುಮಾರ ಹೆಗಡೆ ಅವರಿಗೆ ಟಿಕೆಟ್ ಕೈತಪ್ಪಿದ್ದು, ಅವರ ಬೆಂಬಲಿಗರ ಮುನಿಸಿಗೆ ಕಾರಣವಾಗಿದೆ. ಯಲ್ಲಾಪುರ ಶಾಸಕ ಶಿವರಾಮ ಹೆಬ್ಬಾರ ಬಿಜೆಪಿಯಿಂದ ಅಂತರ ಕಾಯ್ದುಕೊಂಡಿದ್ದಾರೆ. ಹೀಗಾಗಿ ಬಿಜೆಪಿಯಲ್ಲಿ ಇಬ್ಬಣಗಳು ಸೃಷ್ಟಿಯಾಗಿವೆ. ಈ ಬಾರಿ ಪ್ರಚಾರ ಕಣದಲ್ಲಿ ಹಿಂದುತ್ವದ ವಿಚಾರಗಳನ್ನು ಬಿಜೆಪಿ ಅಭ್ಯರ್ಥಿ ಕಾಗೇರಿ ಅಷ್ಟಾಗಿ ಪ್ರಸ್ತಾಪಿಸುತ್ತಿಲ್ಲ. ಅದರ ಬದಲು ಮೋದಿ ನಾಮಬಲ ಬಳಕೆಗೆ ಆದ್ಯತೆ ನೀಡಿದ್ದಾರೆ. ಬಿಜೆಪಿ ಅಭ್ಯರ್ಥಿಯನ್ನು ಶತಾಯಗತಾಯ ಗೆಲ್ಲಿಸಿಕೊಳ್ಳಲೇಬೇಕು ಎಂಬ ಹಠಕ್ಕೆ ಬಿದ್ದಿರುವ ಪ್ರಧಾನಿ ಮೋದಿ ಸ್ವತಃ ಕಾಗೇರಿ ಪರ ಪ್ರಚಾರಕ್ಕೆ (ಏ.28ಕ್ಕೆ) ಶಿರಸಿಗೆ ಬರಲಿದ್ದಾರೆ. ಮೋದಿ ಮೂಲಕ ಮತದಾರರ ಮನ ಗೆಲ್ಲಬಹುದು ಎಂಬುದು ಬಿಜೆಪಿಯ ಲೆಕ್ಕಾಚಾರ. ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎರಡು ಬಾರಿ ಕ್ಷೇತ್ರಕ್ಕೆ ಬರುವವರಿದ್ದಾರೆ. ಮೇ 3 ಮತ್ತು 4 ರಂದು ಅವರ ಪ್ರವಾಸ ನಿಗದಿಯಾಗಿದೆ. ಮುಖ್ಯಮಂತ್ರಿ ಭೇಟಿಯಿಂದ ಮತಬ್ಯಾಂಕ್ ಗಟ್ಟಿ ಮಾಡಿಕೊಳ್ಳಬಹುದು ಎಂಬ ಲೆಕ್ಕವನ್ನು ಕಾಂಗ್ರೆಸ್ ಹಾಕಿಕೊಂಡಿದೆ.

ಚುನಾವಣೆ ಸಮೀಪಿಸಿದಂತೆ ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳ ನಡುವೆ ಆರೋಪ, ಪ್ರತ್ಯಾರೋಪವೂ ಬಿರುಸಾಗಿ ಸಾಗಿದೆ. ಕಾಂಗ್ರೆಸ್ ಪ್ರಣಾಳಿಕೆಯಲ್ಲಿನ ಸಂಪತ್ತಿನ ಸಮಾನ ಹಂಚಿಕೆ ವಿಚಾರ ಮುಂದಿಟ್ಟು ಬಿಜೆಪಿ ವಾಗ್ದಾಳಿ ನಡೆಸುತ್ತಿದ್ದರೆ, ಹಿಂದುತ್ವದ ಹೆಸರಿನಲ್ಲಿ ಬಿಜೆಪಿ ಜನರ ದಿಕ್ಕು ತಪ್ಪಿಸುತ್ತಿದೆ ಎಂಬುದಾಗಿ ಕಾಂಗ್ರೆಸ್ ಪ್ರತಿ ದಾಳಿಯಲ್ಲಿ ತೊಡಗಿಕೊಂಡಿದೆ.

ಇವೆಲ್ಲ ಏನೇ ಇದ್ದರೂ, ಅಭ್ಯರ್ಥಿಗಿಂತ ಮತದಾರರು ಮೋದಿ ಹೆಸರಿನಲ್ಲಿ ಮತ ನೀಡುತ್ತಾರೆ ಎಂಬ ವಿಶ್ವಾಸ ಬಿಜೆಪಿಯದ್ದು. ರಾಜ್ಯದ ಗ್ಯಾರಂಟಿ ಯೋಜನೆಯ ಮಹತ್ವ ಜನರಿಗೆ ಮನವರಿಕೆಯಾಗಿದೆ ಎಂಬ ನಂಬಿಕೆ ಕಾಂಗ್ರೆಸ್‌ನವರದ್ದು.

ಪ್ರಚಾರದಲ್ಲಿ ಎರಡೂ ಪಕ್ಷಗಳು ಸಮಬಲ ಕಾಯ್ದುಕೊಂಡಿದ್ದು, ಮತದಾರರು ಯಾರಿಗೆ ಒಲವು ತೋರುವರು ಎಂಬುದೇ ಕುತೂಹಲ. ❖

ಕ್ಷೇತ್ರ ಸಮೀಕ್ಷೆ

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ **74.16%**

8,23,604 ಪುರುಷರು
8,17,536 ಮಹಿಳೆಯರು
16,41,156 ಒಟ್ಟು ಮತದಾರರ ಸಂಖ್ಯೆ
16 ಲಿಂಗತ್ವ ಅಲ್ಪಸಂಖ್ಯಾತರು

ಕ್ಷೇತ್ರವನ್ನು ಕಾಡುವ ವಿಷಯಗಳು
- ಅರಣ್ಯ ಅತಿಕ್ರಮಣದಾರರಿಗೆ ಈವರೆಗೂ ಭೂಮಿ ಹಕ್ಕು ದೊರೆಯದಿರುವುದು
- ಗುಣಮಟ್ಟದ ಆಸ್ಪತ್ರೆ ಇಲ್ಲ ಎಂಬ ಕೊರಗು
- ವಿದ್ಯಾವಂತರಿದ್ದರೂ ಸ್ಥಳೀಯ ಉದ್ಯೋಗ ಸಿಗದೇ ಮಹಾನಗರಗಳತ್ತ ವಲಸೆ
- ನೌಕಾನೆಲೆ, ಅಣುವಿದ್ಯುತ್ ಸ್ಥಾವರದಂತಹ ಯೋಜನೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ಸಿಗದಿರುವುದು
- ಉತ್ತರ ಕರ್ನಾಟಕವನ್ನು ಕರಾವಳಿಯೊಂದಿಗೆ ಬೆಸೆಯುವ ಹುಬ್ಬಳ್ಳಿ–ಅಂಕೋಲಾ ರೈಲ್ವೆ ಯೋಜನೆ ನನೆಗುದಿಗೆ ಬಿದ್ದಿರುವುದು



ಶಾಸಕರ ಬಲಾಬಲ
ಕಾಂಗ್ರೆಸ್ 5
ಬಿಜೆಪಿ 3

1. ಖಾನಾಪುರ
2. ಕಿತ್ತೂರು
3. ಹಳಿಯಾಳ
4. ಯಲ್ಲಾಪುರ
5. ಶಿರಸಿ
6. ಭಟ್ಕಳ
7. ಕುಮಟಾ
8. ಕಾರವಾರ



ವಿಶ್ವೇಶ್ವರ ಹೆಗಡೆ ಕಾಗೇರಿ (ಬಿಜೆಪಿ)

ಬಿಜೆಪಿ ಸಂಘಟನೆ ಬಲವಾಗಿದೆ. ಮೋದಿ ಮತ್ತೊಮ್ಮೆ ಪ್ರಧಾನಿಯಾಗಿಸಲು ಮತದಾರರು ಸಂಕಲ್ಪ ತೊಟ್ಟಿರುವುದು ಗೆಲುವಿಗೆ ಪೂರಕ

- 👍 30 ವರ್ಷ ಶಾಸಕ, ಸಚಿವ, ವಿಧಾನಸಭೆ ಅಧ್ಯಕ್ಷರಾಗಿ ಆಡಳಿತ ನಡೆಸಿದ ಅನುಭವ
- 👍 ಸದೃಢವಾದ ಬಿಜೆಪಿ ಸಂಘಟನೆ, ಮೋದಿ ಅಲೆಯ ಬಲ
- 👎 ಪಕ್ಷದಲ್ಲಿ ಭಿನ್ನಮತ ಹೆಚ್ಚಿರುವುದು
- 👎 ಸಂಸದ ಅನಂತಕುಮಾರ ಹೆಗಡೆಗೆ ಟಿಕೆಟ್ ಕೊಡದಿರುವುದು, ಶಿವರಾಮ್ ಹೆಬ್ಬಾರ ಅಸಹಕಾರ

ಡಾ.ಅಂಜಲಿ ಹೇಮಂತ ನಿಂಬಾಳ್ಕರ್ (ಕಾಂಗ್ರೆಸ್)

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಕ್ಷೇತ್ರದ ಜನರ ಮನಗೆದ್ದಿವೆ. ಪಕ್ಷದ ಸಂಘಟನೆ ಬಲಿಷ್ಠವಾಗಿರುವ ಕಾರಣ ಗೆಲ್ಲುವ ವಿಶ್ವಾಸವಿದೆ

- 👍 ಸಚಿವ, ಐವರು ಕಾಂಗ್ರೆಸ್ ಶಾಸಕರ ಬಲ. ಹೆಚ್ಚಿನ ಸಂಖ್ಯೆಯಲ್ಲಿರುವ ಮರಾಠ ಸಮುದಾಯದವರ ಬೆಂಬಲ
- 👍 ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಪ್ರತಿಫಲ
- 👎 ಉತ್ತರ ಕನ್ನಡ ಜಿಲ್ಲೆಯವರಲ್ಲ, ಹೊರಗಿನವರು ಎಂಬ ಭಾವನೆ
- 👎 ಕ್ಷೇತ್ರಕ್ಕೆ ಹೊಸಬರಾಗಿರುವುದರಿಂದ ಮುಖಂಡರು–ಕಾರ್ಯಕರ್ತರ ನಡುವೆ ಸಂವಹನದ ಕೊರತೆ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

NCIPS
NEW CAMBRIDGE INTERNATIONAL PUBLIC SCHOOL
CA Site No. 6 (P), WDC Road, II Stage, Mahalakshmipuramk Bangalore-450086
Email ID : info@ncips.in
Contact: 8660136247/ 9845087439
Required Female P.E Teacher (B.PEd/M.PEd) With Minimum 5 years Experience
- ★ Social teacher with B.Ed to teach CBSE Min 5 year Exp. handling High School
- ★ Admission Counselor with any Degree & fluent in English
- ★ Shadow teacher for Nursery
- ★ Day Care Teacher

WANTED FOR Management and Science College in Kanakapura Road. Principal 5- 8 years experience with PhD Faculties –Commerce, Computers. Accountant- 5 years, PE teachers 5 years, Civil Engineer 5- 10 Years with experience in Building large Layouts. Contact: 9845900062 or email: rmsinstitution@gmail.com

REQUIRED EXPERIENCED Female Academic Supervisor having 5 years experience as a Teacher. Also Primary Teacher for Social Science & Computer Science. Contact Max Muller Public School, Mahalakshmi Layout, B'lore-96. Ph: 23376049/23376050. E-mail: maxmullerpublicschool.mlayout@gmail.com

MOUNT CARMEL PU COLLEGE, #58, Palace Road, Bengaluru-52. mails@mcpuc.edu.in requires LIBRARIAN, Ladies only, MLISc LECTURERS for all SUBJECTS of SCIENCE, COMMERCE, HUMANITIES, all LANGUAGES and FRENCH and PHYSICAL EDUCATION B.P.Ed and M.P.Ed. Apply before 10/05/2024

BEST OF BEST Science, Maths, Hindi, Social Science TEACHERS for High School also experienced PRINCIPAL for CBSE school. 9449835744, 9535601743. Walk-in interview with originals

V.E.T.GROUP OF INSTITUTIONS
14th Main, 2nd Phase, J.P.Nagar, Bangalore - 560 078.
Ph : 080-2658 6808 / 2658 4760

WANTED TEACHING FACULTY & NON-TEACHING STAFF

SCHOOL	
Co-Ordinator	M.A,NTT, 10 Years Experience
Science Teachers	B.Sc,M.Sc, B.Ed., 3 Yrs. Exp.
English Teachers	M.A, B.Ed., 3 Years Experience
Social Teachers	M.A, B.Ed., 3 to 5 Yrs. Experience
Maths Teachers	B.Sc,M.Sc, B.Ed., 3 Years Exp.
Physical Education	B.P.Ed, (Preferably Female)
Computer Teachers	B.Sc-Computers / M.Sc-Computers
Art & Craft Teacher	Dip.in Art & Craft
Teacher (Primary)	Any Degree with D.Ed / B.Ed

POLYTECHNIC	
Lecturer (Comp.Science)	B.E (CS / IS)
Instructor	Dip. in Comp.Science
FIRST GRADE COLLEGE	
Lecturer (BVA)	B.Arch / M.Arch / Dip. in Graphic Designing
Lecturer (Psychology)	M.Sc-Psychology
ADMIN & LIBRARY	
Librarian	B.Lib / B.LiSc / M.Lib / M.LiSc
Clerk / Admin	Any Degree with Computer Knowledge & Good Communication Skill

WALK-IN-INTERVIEW on 30-04-2024, 02-05-2024, 03-05-2024, 04-05-2024 at 10.00 am
E-mail : vetinst@rediffmail.com / parvathi3838@gmail.com

SREE SARASWATHI VIDYA MANDIRA
No.9, Vani Vilas Road, VV Puram, Bangalore-04
Ph:080 41277700/ 41324223
Website: www.ssvm.ac.in
Walk-in Interview on 3rd May 2024 (Fri) betn 9.30 am & 2 pm
REQUIRE qualified, trained & experienced TEACHERS for
CBSE
1. ALL SUBJECTS & P.E. TEACHERS for High School
STATE
1. ALL SUBJECTS & P.E. TEACHERS for High School
For SOMANAHALLI(State Board) Maths, Physics, Chemistry Biology, Computer Science, Hindi, P.E. Teacher & Office Clerk

ST LAWRENCE High School, Avalahalli, Mysore Road (Near Sattelight busstop/ Gririnagar), Bangalore26. Wanted High School SCIENCE and MATHS. Salary 27-35K PHYSICAL EDUCATION Primary Lady Salary 20- 25K Walk-in 29.04.2024 between 10.30- 3 contact 97401-54959/ 80738-57671

REQUIRED TRAINED & Exp Lady Teachers For Nursery,Primary & High School for all Subjects (P.E. Male) Hebbal, Kempapura. Contact: 9008981637 svsres21@gmail.com

E.C.I.I. REQUIRES Qualified, Experienced English TEACHERS for Primary, Middle School. Email Bio Data immediately: eciibangalore2003@gmail.com

"WANTED PREP & Primary Teachers for a School near K.R.Puram & Whitefield. Call or WhatsApp Resume: 70222 55677"

WANTED HEADMISTRESS with Maths/Science Qualifications, Teachers for all Subjects. PT/Yoga. 3rd Phase,J.P.Nagar. 9845042249/ 26590773.

WANTED EXPERIENCED Teachers for Nursery, Primary and High School (Science). Vijayanagar, Bangalore. Contact: 8431812577/ 080-23306496.

REQUIRED EXPERIENCED B.Ed Teachers for Social/ Hindi/ NTT & Principal/ Vice Principal minimum 5 years Experience. Walk-in Interviews on 03/05/2024, 9:00 to 3:00. ESI+PF Available. Abhay School, Bannerghatta Road. Contact: 9448344014/ 8088837317.

WANTED LADY Teachers for Primary & High School Apply Immediately Little Flower High School No.47, 2nd Cross, Saibaba Nagar, Sriramapuram, Bangalore-21 Contact: 8867010188/ 080- 23126330

HOLY Angel's High School, Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2024-2025 for Nursery, Primary, High-School, Music Teacher & P.E.Teacher. STATE & ICSE. Qualification: B.A./B.Sc.,B.Ed. M.A/M.Sc.,M.Ed, N.T.T, CP.Ed. Only English medium candidates need to apply.

WANTED ENGLISH Medium Trained Graduates for High School to teach English/ Social and lady graduates for Primary to teach Maths/ Science/ Hindi. Age limit- not above 40 years. Salary with P.F. and E.S.I facilities. Contact in person- Secretary, Deccan Educational Society(R), No. 95, 3rd cross, Srirampuram, Bengaluru-21 (Near Sampige Theatre, Malleswaram)

Hospital & Medical Jobs

"REQUIRED QUALIFIED PHARMACYSIST" for Shekar Hospital, Basavanagudi. Contact: 080-22421144/ 22429366, E-mail: uvmedicals@gmail.com

Engg/ Production Technical

PEENYA BASED MSME Manufacturing ELECTRICAL CONTROL PANELS requires ELECTRICAL ENGINEERS, ELECTRICIANS, FITTERS and HELPERS. Contact: 8548054584/ nirmalams153@gmail.com

WANTED EXPERIENCED CIVIL, MECHANICAL ENGINEERS and Marketing for Fabrication & Construction Company at Peenya Bangalore-58 Contact: 9900240449 canara projects@rediffmail.com

Part-Time Jobs

PART TIME/FULL Time job Opportunity for Retired/Housewives from Reputed MNC in Bangalore. Call: 9206187228, 9916485500

TOP CENTRAL Govt Licensed Required Retd/ Vrs, Home Makers Age 35 To 70 Yrs Part Time Job Earn 35k To 50k: 9886641282/ 7019215243

Receptionist/ Secretary

WANTED GRADUATE with sound English, computer knowledge as SECRETARY to director, Call 9880228272/ 8867159335

Accounts & Finance

REQUIRED B.COM Graduate, 5 years experience with IT, GST filing and English drafting knowledge. mail: pgiriraju@yahoo.com. Mobile:9448083424

REQUIRED B.COM/ CA inter Graduates with IT and GST Knowledge for Auditors office at Jayanagar. Preferable 1- 2 years' experience. Contact: 8050131627

Architects

WANTED HOTEL architect for highway hotel near Hassan (220 kms from Bengaluru) Mixed development (22 well designed rooms/ semi commercial/ restaurant/ Green architecture, sustainability, quick construction. Only with prior experience. Apply- rasik_ranjan@hotmail.com; contact@hppindia.com 9742170962 OR. 9886972374

Security & Detectives

REPUTED SECURITY Agency Requires Security Guards/ Supervisors, Field Officers, Area Managers, Operations/ Marketing Team for Bangalore. Contact: 8073668816.

General

OPENING FOR TEACHING & NON TEACHING POSITIONS- UG & PG PROGRAMS: Require qualified and experienced candidates for the post of Professor/ Associate Prof with PhD in Management/ Commerce, Asst. Professors (Part time/ full time) with UGC-NET/ MPhil/ MBA/ MCom/ MFA/ MSc/ MCA/ MTech/ with specialization in Finance, Accounts, Audit & Taxation, POM, Marketing, Business Analytics, Computer science, Statistics, Life Sciences, MA in Kannada, English, Hindi & experienced Placement Officer, Digital and Marketing Manager, Web developer, HR, Music & Dance instructors, Admin Executives, Clerks, Male & Female Hostel Wardens, Receptionist, Electrician for a reputed Degree & PG College in Yelahanka, Bengaluru. Email resume and Certificate copies along with latest photograph within 7 days to: hrdept.aims@gmail.com/ aimsrdirector@gmail.com.

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:- 9845334751.

SECURITY AGENCY Require Experienced Field Officer, Marketing Manager/Operations, Tally Clerk, Personnel Driver. Bangalore Ph:080-23437474 23437797 Mob:8892073262

BHARATH EDUCATION SOCIETY ®
B.E.S. DEGREE COLLEGE
27, 16th Main Road, Jayanagar 4th Block, Bengaluru-560011
Recognised by UGC. Affiliated to Bengaluru City University.
NAAC B++
080 - 2663 7295 / 94488 48416
Email: besddcol@yahoo.co.in
Website: www.besinstitutions.edu.in
www.besdegreecollege.in

Sri S.T. Somashekhar
Hon. President, Bharath Education Society
MLA, Yashwantpur Constituency,
Former Minister, Govt of Karnataka

SHAPE YOUR CAREER WITH INTEGRATED SKILL ENHANCEMENT PROGRAMMES

Sri B.L. Lakkegowda
Founder
B.E.S Institutions

PROGRAMMES OFFERED FOR : 2024-25
B.Com | B.B.A. | B.C.A.
B.A. HEP | HES | HEK
Languages Offered: English, Kannada, Hindi & Sanskrit as per Bengaluru City University Syllabus

Hearty Congratulations to all our Toppers Students

ATHIYA SHIREEN
Bachelor of Humanities
4718 / 5200 (90.73)
8th RANK

BACHELOR OF COMMERCE

ANIL KUMAR K 92%

SWATHI M 90%

MAHESH BABU N 90%

DIVYASHREE S 90%

BACHELOR OF ARTS

SUCHITHRA S 91.75%

MAMATHA R 91.5%

VARALAKSHMI S 91.25%

THARUN KUMAR N 90.5%

KARTHIK 90%

BACHELOR OF COMPUTER APPLICATIONS

DEEKSHITHA K 93.87

BHAVANI BAI THORANTH N 92.8%

NIRMITHA M V 86.40%

JYOTHI PANDEY 81%

ABUBAKARA NADAFA 80%

B.E.S. EVENING DEGREE COLLEGE
080-26638415 / 94800 69705 E-mail: besedceve@gmail.com
Reaccredited B by NAAC.
PROGRAMMES OFFERED FOR : 2024-25
B.Com | B.A. HEP | HES | HEK

Sri..Nirmal Kumar K.R.	Prof N.S. Vijaya	Sri M. Krishna Das	Prof N. Ashok Kumar	Dr. K.S. Gopalakrishna
President	Vice President	Secretary	Principal	Principal
Bharath Education Society	Bharath Education Society	Bharath Education Society	BES Degree College	BES Evening Degree College

HOSTEL FACILITY AVAILABLE FOR GIRLS
BES-24514

REAL ESTATE SELLING

Sites

Intl Airport Road

30x40 Converted Plots @ 2,00,000/-
166/- per sq.ft, 90 minutes Journey from Yelahanka
Clear Documents | Ready for Registration
9343510635 | 9010559539

Banashankari

BSK 6TH Stage, 11th Block, BDA 20X30 North face allottee Site, excellent Vastu for Sale. Price 75 lakhs. 9986075122, 8618922501

BANASHANKARI 6TH Stage, 4th 'H' Block, BDA Site for SALE, W/F. 30x40 Tar Road. Near Metro 2 k.m. Rs. 1.04 Crore. 9845286583

Hosur Road

KHB SURYANAGAR, Phase 3, HIG-1, Block 8, 40x60, South Facing, Near Adigondanahalli. Call: 9845027986.

Jayanagar

AVAILABLE 2400 sqft Prime Property For Sale-park view, South Facing. Immediate Possession. Call: 77601-10114

"COMMERCIAL SITES 60x80 East ₹19 Crore, 40x60 North ₹8.40 Crore. Call: "Sri.Ganesh Estate"- 9845286505"

Kempegowda Layout

***NADAPRABHU* KEMPEGOWDA** LAYOUT 1st Block 30x40 N/F,3rd Block 50x80 N/F,7th Block 30x40 W/F.Contact:9686469799

Mysore Road

KETHOHALLI BIGBANYAN Tree 30x50 4 Sites, East, 2200/-Sqft. 5 KM- Challaghatta Metro. 9945724472, 7829830333.

Nelamangala

"NELAMANGALA RASHI DEVELOPERS 30x50 SOUTH FACING SITE FOR SALE CLOSE TO 'D'MART TUMKUR HIGHWAY. 9845268611"

R T Nagar

50X80 MAGNIFICENT Commercial Site on 80 Feet Road R.T.Nagar, Serious Buyers Call 9900001973 Brokers Excused

Vishweshwariah Layout

DIRECT OWNER 40x60 North, BDA Aloted Site Sale Vishveswaraiah Layout Block-2, Prime Location, ₹.9000/-. Contact: 7411994069

"30X40 WEST facing BDA site for sale 7th Block, Vishveshwaraiah Layout, Good location. 9845500019/ 7019314962"

AVAILABLE 40X60 North Facing BDA Site 1st Block Vishveshwariah Layout 40ft Road Good Location: 9481703468

DIRECT OWNER 40x60 East BDA Site Vishveswaraiah Layout BLOCK-1, 60 feet-Road. ₹.11000/-. Contact:8217341837

DC CONVERTED SITE FOR SALE 50X80 EAST FACING BBMP A KATHA NEAR ULLAL RTO: 6366232222/ 6366242222

"VISHVESHWARAIAH LAYOUT 6th Block Opp.KLE Law College 50x80 North 80'feet Road,100% Vastu Site. 9448432633"

Vidyaranyapura

"VIDHYARANYAPURA SALE Site #1230, 40x61 East facing,BEL Layout. Good location, Genuine buyers Contact: 7259675150"

Chennapatna

BMICAPA APPROVED Residential DC Converted, 3 Acre Land for Sale, Channapatna Town, Nagarasabhe Limits. 250 Mtrs from NH-275. Price 7.5Cr per Acre. Genuine buyers only (Brokers Excuse) Call- 9845188137

Koramangala

50X82 NORTH Residential Plot Koramangala 1st Block, Serious Buyers Please Contact Ramesh HK On: 9844104958

Commercial Building

Bangalore North

COMMERCIAL LAND 1200 sqft + Old Building @ Jeevan Bhima Nagar Main Road, Bangalore. For Sale Phone:09840920505

Out-Station

FINANCE AGAINST Land & Building Properties Industries Schools Hospitals Projects & NRI Funds. @ 9445672935

House

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms with attached bathroom, built with teak wood, Italian Marble Tiles, at BEML Layout, Basaveshwaranagar, Bangalore. Clear Titles & 'A' Katha. Rs.5.50 Crores. Party going out of station, Immediate Registration, Contact: 9845765559/ 9845043282

Kanakapura Road

40X60 SITE, 2 BHK HOUSE West, Kendriyanagara, 1.5 KM. From Talaghattapura Metro. 2.40Cr. 9945724472, 7829830333.

Industrial & Factory

Tumkur Road

RENT, WAREHOUSE, Nelamangala, Makali, T.Begur, 60000, 90000 100000 sqft with power, water. NAIK 9141326819, 9972636255

Flat

Kanakapura Road

FLATS FOR Sale/Rent near JP Nagar Metro Station. Sarakki Homes, 9663676464

Malleshwaram

1 BHK APARTMENT FOR SALE 18TH CROSS MALLESWARAM ALL FACILITIES CLOSEBY OPEN GREEN SURROUNDINGS 9900648717

Mysore Road

MYSORE ROAD AVAILABLE LEASE THREE BHK FLAT RUPEES THIRTY LAKHS MAINTENANCE CHARGES BY OWNER: 9738223432

Uttarahalli

POORNAPRAGNA LAYOUT Sale 3BHK Deluxe Flats 2250sft 2Carpark & 1850sft 1,Carpark. Lift.& Generator Back-up, All Amenities. Call: 9620249988.

Annapoorneshwari Nagar

ANNAPOORNESHWARI NAGAR 2 BHK flat with car parking. Ready. 'A' khata. 38 lakhs. 8197263750

Agricultural Land

Out-Station

4 ACRES Farmland with Fully Fenced, Gate, 300 Coconut Trees, 180 Teakwood Trees, 2 Borewels, 1TC on 40 Feet Tar Road, Just 12kms from Yediyur Highway towards Leftside, Rate 60 Lakhs Per Acre. 9844603127

Commercial Land

Banashankari

"40X60 COMMERCIAL property for sale Hosakerehalli 100 feet Ring Road Banashankari 3rd Stage. 9845500019/ 7019314962"

MORE Classifieds Ads on Subsequent Pages

Commerical

Vishweshwariah Layout

COMMERCIAL PLOT sale 50*80 EF 100 ft road Rs 15500/- slightly negotiable, Vishweshwaraiah Layout. 9916826976

RENTAL PROPERTIES

Accommodation Available

Commercial

AVAILABLE FOR Rent Basement 2000 Sq.Feet Shop, Below ICICI Bank in Kumaraswamy Layout 50Feet Main Road. Call 9880022644.

FOR RENT Yalahanka New Town 4000 sqft Suitable for Service Station, Warehouse, Centralised Kitchen. Contact: 9008910999.

House

2 BHK House for Rent Vegetarians only 1st Floor, With Carparking. No.1, 16th Cross, 6th Main, Malleshwaram, Bangalore. Broker Excuse. Call: 9945567752.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS

www.dhclassifieds.com BOOK NOW
*Conditions apply
Book your ad with us now! For more details contact:
+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164

ಶೇಷಾದ್ರಿಪುರ ಠಾಣೆ ಪೊಲೀಸರ ತನಿಖೆ • ಪಂಚತಾರಾ ಹೋಟೆಲ್ ಮಾಲೀಕ, ಏಜೆಂಟ್ ವಿರುದ್ಧ ಎಫ್‌ಐಆರ್

ವಿದೇಶಿ ಮಹಿಳೆ ಹತ್ಯೆ: ವೇಶ್ಯಾವಾಟಿಕೆ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪಂಚತಾರಾ ಹೋಟೆಲ್‌ವೊಂದರ ಕೊಠಡಿಯಲ್ಲಿ ನಡೆದಿದ್ದ ವಿದೇಶಿ ಮಹಿಳೆಯೊಬ್ಬರ ಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಶೇಷಾದ್ರಿಪುರ ಠಾಣೆ ಪೊಲೀಸರು, ಅಂತರರಾಷ್ಟ್ರೀಯ ಮಟ್ಟದ ವೇಶ್ಯಾವಾಟಿಕೆ ಜಾಲವನ್ನು ಪತ್ತೆ ಮಾಡಿದ್ದಾರೆ.

'ಶೇಷಾದ್ರಿಪುರ ಠಾಣೆ ವ್ಯಾಪ್ತಿಯಲ್ಲಿರುವ ಹೋಟೆಲ್‌ನ ಕೊಠಡಿಯಲ್ಲಿ ಮಾರ್ಚ್ 13ರಂದು ತಡರಾತ್ರಿ ವಿದೇಶಿ ಮಹಿಳೆಯನ್ನು ಹತ್ಯೆ ಮಾಡಲಾಗಿತ್ತು. ಕೃತ್ಯ ಎಸಗಿದ್ದ ಹೋಟೆಲ್ ಸಿಬ್ಬಂದಿಯಾದ ಅಸ್ಸಾಂ ರಾಜ್ಯದ ಚರೈಡಿಯೊ ಜಿಲ್ಲೆಯ ರಾಬರ್ಟ್ ಹಾಗೂ ಅಮ್ರಿತ್ ಎಂಬುವವರನ್ನು ಬಂಧಿಸಲಾಗಿತ್ತು. ಜೊತೆಗೆ, ಮಹಿಳೆಯ ಹಿನ್ನೆಲೆ ಬಗ್ಗೆ ಮಾಹಿತಿ ಕಲೆಹಾಕಿದಾಗ ವೇಶ್ಯಾವಾಟಿಕೆ ಮಾಹಿತಿ ಲಭ್ಯವಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಉಜ್ಬೇಕಿಸ್ತಾನ್ ಪ್ರಜೆಯಾದ ಮಹಿಳೆಯನ್ನು ಬೆಂಗಳೂರಿನ ಏಜೆಂಟ್ ರಾಹುಲ್ ಎಂಬಾತ ವೇಶ್ಯಾವಾಟಿಕೆಗೆಂದು ಕರೆಸಿದ್ದ. ತಾನೇ ಕೊಠಡಿ ಮಾಡಿಕೊಟ್ಟಿದ್ದ. ಅದೇ ಕೊಠಡಿಗೆ ಗ್ರಾಹಕರನ್ನು ಕಳುಹಿಸಿ ಹಣ ಸಂಪಾದಿಸುತ್ತಿದ್ದ' ಎಂದು ತಿಳಿಸಿವೆ.

'ಕೊಲೆ ಪ್ರಕರಣದ ತನಿಖೆ ನಡೆಸಿದಾಗ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸಕ್ರಿಯವಾಗಿರುವ ವೇಶ್ಯಾವಾಟಿಕೆ ಜಾಲದ ಮಾಹಿತಿ ಲಭ್ಯವಾಗಿದೆ. ಹೀಗಾಗಿ, ರಾಹುಲ್ ಹಾಗೂ ಕೃತ್ಯಕ್ಕೆ ಸ್ಥಳ ಒದಗಿಸಿದ್ದ ಹೋಟೆಲ್ ಮಾಲೀಕನ ವಿರುದ್ಧ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

20ಕ್ಕೂ ಹೆಚ್ಚು ಬಾರಿ ಭೇಟಿ: 'ವಿದೇಶಿ ಮಹಿಳೆ 20ಕ್ಕೂ ಹೆಚ್ಚು ಬಾರಿ ನಗರಕ್ಕೆ ಬಂದಿದ್ದರು. ಆರೋಪಿ ರಾಹುಲ್, ವಿಮಾನದ ಟಿಕೆಟ್ ವ್ಯವಸ್ಥೆ ಮಾಡುತ್ತಿದ್ದ. ತನ್ನದೇ ಗುರುತಿನ ಚೀಟಿಗಳನ್ನು ಬಳಸಿ ಕೊಠಡಿ ಕಾಯ್ದಿರಿಸುತ್ತಿದ್ದ. ಅದೇ ಕೊಠಡಿಯಲ್ಲಿ ಮಹಿಳೆ ಉಳಿದುಕೊಳ್ಳುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗ್ರಾಹಕ ನೀಡಿದ್ದ ಮಾಹಿತಿ: 'ಹಣ ದೋಚುವ ಉದ್ದೇಶದಿಂದ ಆರೋಪಿಗಳಾದ ರಾಬರ್ಟ್ ಹಾಗೂ ಅಮ್ರಿತ್, ವಿದೇಶಿ ಮಹಿಳೆಯನ್ನು ಕೊಂದು ಪರಾರಿಯಾಗಿದ್ದರು. ಮೃತದೇಹ ನೋಡಿದ್ದ ಹೋಟೆಲ್‌ನ ವ್ಯವಸ್ಥಾಪಕರು ಠಾಣೆಗೆ ಮಾಹಿತಿ ನೀಡಿದ್ದರು. ಆದರೆ, ಹೋಟೆಲ್ ಸಿಬ್ಬಂದಿಯೇ ಕೊಲೆ ಮಾಡಿರುವುದು ಆರಂಭದಲ್ಲಿ ಗೊತ್ತಾಗಿರಲಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿದೇಶಿ ಮಹಿಳೆ ಮೊಬೈಲ್ ಪರಿಶೀಲನೆ ನಡೆಸಿದಾಗ, ವಾಟ್ಸ್‌ಆ್ಯಪ್ ಕರೆಗಳು ಬಂದಿದ್ದು ಗೊತ್ತಾಗಿತ್ತು. ಅದೇ ಸುಳಿವು ಆಧರಿಸಿ ವ್ಯಕ್ತಿಯೊಬ್ಬನನ್ನು ವಶಕ್ಕೆ ಪಡೆದಾಗ, ಆತ ಗ್ರಾಹಕನೆಂಬುದು ಗೊತ್ತಾಗಿತ್ತು. ಏಜೆಂಟ್ ರಾಹುಲ್‌ಗೆ ₹ 7 ಸಾವಿರ ಹಣ ನೀಡಿದ್ದ ಆತ, ಹೋಟೆಲ್‌ನಲ್ಲಿ ಜರೀನಾ ಅವರನ್ನು ಭೇಟಿಯಾಗಿದ್ದ. ಆತನ ಹೇಳಿಕೆ ಆಧರಿಸಿ ರಾಹುಲ್‌ನನ್ನು ಪತ್ತೆ ಮಾಡಲಾಯಿತು. ನಂತರ, ಸಿಬ್ಬಂದಿ ಮೇಲೆ ಅನುಮಾನ ಬಂದಿತ್ತು. ಹೆಚ್ಚಿನ ತನಿಖೆ ನಡೆಸಿದಾಗ ಸಿಬ್ಬಂದಿ ರಾಬರ್ಟ್ ಹಾಗೂ ಅಮ್ರಿತ್ ಸಿಕ್ಕಿಬಿದ್ದರು. ಕೊಲೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡರು' ಎಂದು ತಿಳಿಸಿವೆ.

ಅಪರಾಧ ಸುದ್ದಿ

ಮುಖ್ಯಾಂಶಗಳು
- ಏಜೆಂಟ್ ರಾಹುಲ್ ಮೊಬೈಲ್ ಜಪ್ತಿ
- ಉಜ್ಬೇಕಿಸ್ತಾನದಿಂದ ಬಂದಿದ್ದ ಮಹಿಳೆ
- ಮತ್ತಷ್ಟು ಮಂದಿ ಭಾಗಿ ಶಂಕೆ

'ಹಲವು ವರ್ಷಗಳಿಂದ ದಂಧೆ'

'ಆರೋಪಿ ರಾಹುಲ್, ಹಲವು ವರ್ಷಗಳಿಂದ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ಬಗ್ಗೆ ಮಾಹಿತಿ ಇದೆ. ಪಂಚತಾರಾ ಹೋಟೆಲ್‌ಗಳಲ್ಲಿಯೇ ಈತ ಹೆಚ್ಚಾಗಿ ಕೊಠಡಿ ಕಾಯ್ದಿರಿಸುತ್ತಿದ್ದ. ವಿದೇಶಗಳಿಂದ ಮಹಿಳೆಯರನ್ನು ಕರೆಸಿಕೊಂಡು ವೇಶ್ಯಾವಾಟಿಕೆ ನಡೆಸುತ್ತಿದ್ದ. ಒಬ್ಬ ಗ್ರಾಹಕರಿಂದ ₹ 7 ಸಾವಿರದಿಂದ ₹ 8 ಸಾವಿರ ಪಡೆಯುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಐಪಿಸಿ 34 (ಅಪರಾಧ ಸಂಚು), ಮಾನವ ಕಳ್ಳ ಸಾಗಣೆ (ಐಪಿಸಿ 370) ಆರೋಪ ಹಾಗೂ ಅನೈತಿಕ ಸಂಚಾರ ತಡೆಗಟ್ಟುವಿಕೆ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ರಾಹುಲ್ ಜೊತೆ ಕೃತ್ಯದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿದ್ದು, ಪತ್ತೆ ಮಾಡಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಇನ್‌ಸ್ಟಾಗ್ರಾಂನಲ್ಲಿ ಅಶ್ಲೀಲ ವಿಡಿಯೊ ಯುವತಿಗೆ ಬ್ಲ್ಯಾಕ್‌ಮೇಲ್

ಬೆಂಗಳೂರು: ಯುವತಿಯೊಬ್ಬರ ಫೋಟೊ ಹಾಗೂ ವಿಡಿಯೊವನ್ನು ಅಶ್ಲೀಲವಾಗಿ ಮಾರ್ಫಡಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟು ಬ್ಲ್ಯಾಕ್‌ಮೇಲ್ ಮಾಡಲಾಗಿದ್ದು, ಈ ಬಗ್ಗೆ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ನಗರದ ಕಾಲೇಜೊಂದರಲ್ಲಿ ಓದುತ್ತಿರುವ 23 ವರ್ಷ ವಯಸ್ಸಿನ ಯುವತಿಯೊಬ್ಬರು ದೂರು ನೀಡಿದ್ದಾರೆ. ಬ್ಲ್ಯಾಕ್‌ಮೇಲ್ ಮಾಡುತ್ತಿರುವ ಅಪರಿಚಿತ ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಇನ್‌ಸ್ಟಾಗ್ರಾಂನಲ್ಲಿ ನಕಲಿ ಖಾತೆ ತೆರೆದಿರುವ ಆರೋಪಿ, ದೂರುದಾರರ ಭಾವಚಿತ್ರ ಹಾಗೂ ವಿಡಿಯೊವನ್ನು ಅಶ್ಲೀಲವಾಗಿ ಮಾರ್ಫಡಿಸಿದ್ದೇನೆ. ಅದೇ ವಿಡಿಯೊವನ್ನು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾನೆ. ಯುವತಿಗೆ ವಿಡಿಯೊ ಲಿಂಕ್ ಕಳುಹಿಸಿರುವ ಆರೋಪಿ, ₹ 5,000 ನೀಡುವಂತೆ ಬ್ಲ್ಯಾಕ್‌ಮೇಲ್ ಮಾಡಿದ್ದ. ಆದರೆ, ಯುವತಿ ಹಣ ನೀಡಿಲ್ಲ' ಎಂದು ಮೂಲಗಳು ತಿಳಿಸಿವೆ.

'ವಿಡಿಯೊ ಪೋಸ್ಟ್ ಅಳಿಸದಿದ್ದರೆ ಪೊಲೀಸರಿಗೆ ದೂರು ನೀಡುವುದಾಗಿ ಯುವತಿ ಹೇಳಿದ್ದರು. ಆರೋಪಿ, 'ಪೊಲೀಸರು ನನ್ನ ಮನೆಗೆ ದಿನವೂ ಬಂದು ಹೋಗುತ್ತಾರೆ. ನನಗೆ ಯಾರೂ ಏನು ಮಾಡುವುದಿಲ್ಲ' ಎಂದು ಸಂದೇಶ ಕಳುಹಿಸಿದ್ದ. ಬ್ಲ್ಯಾಕ್‌ಮೇಲ್ ವಿಷಯವನ್ನು ಪೋಷಕರಿಗೆ ತಿಳಿಸಿದ್ದ ಯುವತಿ, ಠಾಣೆಗೆ ದೂರು ನೀಡಿದ್ದಾರೆ ಎಂದು ಹೇಳಿವೆ.

ಖೋಟಾ ನೋಟು: ರೆಸ್ಟೋರೆಂಟ್ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೃಪತುಂಗ ರಸ್ತೆಯಲ್ಲಿರುವ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಪ್ರಾದೇಶಿಕ ಕಚೇರಿಯ ಕರೆನ್ಸಿ ವಿಭಾಗಕ್ಕೆ ಜಮೆ ಮಾಡಲು ತಂದಿದ್ದ ನೋಟುಗಳಲ್ಲಿ ₹ 500 ಮುಖಬೆಲೆಯ 10 ಖೋಟಾ ನೋಟುಗಳು ಪತ್ತೆಯಾಗಿದ್ದು, ಈ ಸಂಬಂಧ ಹಲಸೂರು ಗೇಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಇಂಡಸ್ ಇಂಡ್ ಬ್ಯಾಂಕ್ ಕರೆನ್ಸಿ ವಿಭಾಗದ (ಚೆಸ್ಟ್) ಉಪ ವ್ಯವಸ್ಥಾಪಕ ಎಸ್. ಮಂಜುನಾಥ್ ಅವರು ಖೋಟಾ ನೋಟುಗಳ ಬಗ್ಗೆ ದೂರು ನೀಡಿದ್ದಾರೆ. ಖೋಟಾ ನೋಟುಗಳನ್ನು ಬ್ಯಾಂಕ್‌ಗೆ ಜಮೆ ಮಾಡಿದ್ದ ಯಶವಂತಪುರದಲ್ಲಿರುವ 'ನಮ್ಮ ಅನ್ನಪೂರ್ಣ ರೆಸ್ಟೋರೆಂಟ್' ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಇಂಡಸ್ ಇಂಡ್ ಬ್ಯಾಂಕ್‌ನ ಯಶವಂತಪುರ ಶಾಖೆಯಲ್ಲಿ ಸಂಗ್ರಹವಾಗಿದ್ದ ನೋಟುಗಳನ್ನು ಆರ್‌ಬಿಐ ಪ್ರಾದೇಶಿಕ ಕಚೇರಿ ಕರೆನ್ಸಿ ವಿಭಾಗಕ್ಕೆ ಏ. 24ರಂದು ಜಮೆ ಮಾಡಲಾಗಿತ್ತು. ಮರುದಿನ ನೋಟುಗಳ ಪರಿಶೀಲನೆ ನಡೆಸಲಾಗಿತ್ತು. ಇದೇ ಸಂದರ್ಭದಲ್ಲಿಯೇ, ₹ 500 ಮುಖಬೆಲೆಯ 10 ಖೋಟಾ ನೋಟು ಪತ್ತೆಯಾಗಿವೆ' ಎಂದು ಮೂಲಗಳು ತಿಳಿಸಿವೆ.

'ಖೋಟಾ ನೋಟುಗಳ ಬಗ್ಗೆ ಬ್ಯಾಂಕ್ ಅಧಿಕಾರಿಗಳು ಹೆಚ್ಚಿನ ಮಾಹಿತಿ ಕಲೆಹಾಕಿದ್ದರು. ಇಂಡಸ್ ಇಂಡ್ ಬ್ಯಾಂಕ್‌ನ ಯಶವಂತಪುರ ಶಾಖೆಯಲ್ಲಿರುವ 'ನಮ್ಮ ಅನ್ನಪೂರ್ಣ ರೆಸ್ಟೋರೆಂಟ್' ಖಾತೆಗೆ ಖೋಟಾ ನೋಟುಗಳು ಜಮೆ ಆಗಿರುವುದು ಗೊತ್ತಾಗಿದೆ. ಹೀಗಾಗಿ, ರೆಸ್ಟೋರೆಂಟ್ ವಿರುದ್ಧ ದೂರು ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಗ್ರಾಹಕರು ನೀಡಿರುವ ಶಂಕೆ: 'ರೆಸ್ಟೋರೆಂಟ್‌ಗೆ ಬಂದಿದ್ದ ಗ್ರಾಹಕರು, ಖೋಟಾ ನೋಟುಗಳನ್ನು ನೀಡಿರುವ ಮಾಹಿತಿ ಇದೆ. ಅದೇ ನೋಟುಗಳನ್ನು ರೆಸ್ಟೋರೆಂಟ್ ಸಿಬ್ಬಂದಿ ಬ್ಯಾಂಕ್‌ಗೆ ತುಂಬಿದ್ದಾರೆ. ಖೋಟಾ ನೋಟುಗಳನ್ನು ಕೊಟ್ಟ ಗ್ರಾಹಕ ಯಾರು ? ಎಲ್ಲಿ ಮುದ್ರಿಸಲಾಗಿತ್ತು? ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸರಣಿ ಅಪಘಾತ: ಗರ್ಭಿಣಿ ಸೇರಿ ಇಬ್ಬರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ಹೊಸಗುಡ್ಡದಹಳ್ಳಿ ಬಳಿ ಸರಣಿ ಅಪಘಾತ ಸಂಭವಿಸಿದ್ದು, ಗರ್ಭಿಣಿ ಸೇರಿ ಇಬ್ಬರು ಗಾಯಗೊಂಡಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಬ್ಯಾಟರಾಯನಪುರ ಸಂಚಾರ ಠಾಣೆ ಪೊಲೀಸರು, ನಿರ್ಲಕ್ಷ್ಯ ಹಾಗೂ ಅತೀ ವೇಗದ ಚಾಲನೆ ಆರೋಪದಡಿ ಆಂಬುಲೆನ್ಸ್ ಚಾಲಕ ಸುಮಂತ್ (23) ಅವರನ್ನು ವಶಕ್ಕೆ ಪಡೆದಿದ್ದಾರೆ.

'ಬಾಗಲಗುಂಟೆಯ ಸುಮಂತ್, ಆಸ್ಪತ್ರೆಯೊಂದರ ಆಂಬುಲೆನ್ಸ್ ಚಾಲಕ. ಶುಕ್ರವಾರ ರಾತ್ರಿ 10.45 ಗಂಟೆ ಸುಮಾರಿಗೆ ಕೆ.ಆರ್. ಮಾರುಕಟ್ಟೆಯಿಂದ ಹೊಸಗುಡ್ಡದಹಳ್ಳಿ ಕಡೆಗೆ ಹೊರಟಿದ್ದ. ಆಂಬುಲೆನ್ಸ್‌ನಲ್ಲಿ ಒಬ್ಬನೇ ಇದ್ದ. ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಆಂಬುಲೆನ್ಸ್ ಚಲಾಯಿಸಿದ್ದ. ನಿಯಂತ್ರಣ ತಪ್ಪಿದ್ದ ಆಂಬುಲೆನ್ಸ್, ಸಿಗ್ನಲ್‌ನಲ್ಲಿ ನಿಂತಿದ್ದ ಕಾರಿಗೆ ಡಿಕ್ಕಿ ಹೊಡೆದಿತ್ತು. ನಂತರ, ಅಕ್ಕ-ಪಕ್ಕದಲ್ಲಿದ್ದ ಮತ್ತೊಂದು ಕಾರು ಹಾಗೂ ಎರಡು ದ್ವಿಚಕ್ರ ವಾಹನಕ್ಕೂ ಆಂಬುಲೆನ್ಸ್ ಗುದ್ದಿತ್ತು' ಎಂದು ಪೊಲೀಸರು ಹೇಳಿದರು.

'ಈ ಸರಣಿ ಅಪಘಾತದಿಂದಾಗಿ 3 ಕಾರುಗಳು ಹಾಗೂ ಎರಡು ದ್ವಿಚಕ್ರ ವಾಹನಗಳು ಭಾಗಶಃ ಜಖಂಗೊಂಡಿವೆ. ಕಾರಿನಲ್ಲಿದ್ದ ನಾಲ್ಕು ತಿಂಗಳ ಗರ್ಭಿಣಿಯ ಹೊಟ್ಟೆಗೆ ಪೆಟ್ಟಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ದ್ವಿಚಕ್ರ ವಾಹನ ಸವಾರರೊಬ್ಬರ ಕಾಲಿಗೆ ಗಾಯವಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ತಿಳಿಸಿದರು.

'ಅಪಘಾತ ಮಾಹಿತಿ ಪಡೆದು ಸ್ಥಳಕ್ಕೆ ಹೋದ ಸಿಬ್ಬಂದಿ, ಚಾಲಕ ಸುಮಂತ್‌ನನ್ನು ವಶಕ್ಕೆ ಪಡೆದಿದ್ದಾರೆ. ಮದ್ಯ ಕುಡಿದಿರುವ ಅನುಮಾನದ ಮೇರೆಗೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ಆಂಬುಲೆನ್ಸ್ ಜಪ್ತಿ ಮಾಡಲಾಗಿದೆ' ಎಂದರು.

ಸಂಸದ ಶ್ರೀನಿವಾಸ್ ಪ್ರಸಾದ್ ಆರೋಗ್ಯ ಗಂಭೀರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಾರೋಗ್ಯದ ಕಾರಣ ಇಲ್ಲಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದ ಬಿಜೆಪಿ ಸಂಸದ ವಿ. ಶ್ರೀನಿವಾಸ್ ಪ್ರಸಾದ್ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ನೀಡಲಾಗುತ್ತಿದೆ.

ಬಹುಅಂಗಾಂಗ ವೈಫಲ್ಯದಿಂದ ಬಳಲುತ್ತಿರುವ ಅವರು, ಏ.22ರಂದು ಆಸ್ಪತ್ರೆಗೆ ದಾಖಲಾಗಿದ್ದರು. ವೈದ್ಯಕೀಯ ತಜ್ಞರ ತಂಡವು ಅವರ ಆರೋಗ್ಯದ ಮೇಲ್ವಿಚಾರಣೆ ನಡೆಸುತ್ತಿದೆ. ವೈದ್ಯಕೀಯ ಆಮ್ಲಜನಕದ ಸಂಪರ್ಕದೊಂದಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಐಸಿಯು ಘಟಕದಲ್ಲಿ ಅವರ ಆರೋಗ್ಯದ ಮೇಲೆ ನಿಗಾ ಇಡಲಾಗಿದೆ ಎಂದು ಆಸ್ಪತ್ರೆ ತಿಳಿಸಿದೆ.

ಸಂಗೀತೋತ್ಸವ ನಗರದ ಚಾಮರಾಜಪೇಟೆಯ ಕೋಟೆ ಹೈಸ್ಕೂಲ್ ಆವರಣದಲ್ಲಿ ಶ್ರೀರಾಮ ಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಆಯೋಜಿಸಿರುವ ರಾಮನವಮಿ ಸಂಗೀತೋತ್ಸವದಲ್ಲಿ ಶನಿವಾರ ಮ್ಯಾಂಡೋಲಿನ್ ವಾದಕ ಯು. ರಾಜೇಶ್ ಮತ್ತು ಮೈಸೂರು ನಾಗರಾಜ್ ಅವರು ಸಂಗೀತ ಕಛೇರಿ ಪ್ರಸ್ತುತಪಡಿಸಿದರು -ಪ್ರಜಾವಾಣಿ ಚಿತ್ರ/ರಂಜು ಪಿ

₹ 30 ಲಕ್ಷ ಮೌಲ್ಯದ ಚಿನ್ನ ದೋಚಿದ ತಂದೆ-ಮಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಲುದಾರಿಕೆಯಲ್ಲಿ ವ್ಯವಹಾರ ಮಾಡುವುದಾಗಿ ಹೇಳಿದ್ದ ತಂದೆ-ಮಗ, ₹ 30 ಲಕ್ಷ ಮೌಲ್ಯದ ಚಿನ್ನ ದೋಚಿ ಪರಾರಿಯಾಗಿರುವ ಬಗ್ಗೆ ಹಲಸೂರು ಗೇಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಚಿನ್ನಾಭರಣ ವ್ಯಾಪಾರಿ ರಾಜೇಂದ್ರಕುಮಾರ್ ಅವರು ಕೃತ್ಯದ ಬಗ್ಗೆ ದೂರು ನೀಡಿದ್ದಾರೆ. ಸ್ನೇಹಿತ ಪ್ರವೀಣ್ ಅಲಿಯಾಸ್ ಪ್ರಿನ್ಸ್ ಹಾಗೂ ಆತನ ತಂದೆ ಶಾಜಿಯಾ ಯಾದವ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅವರಿಬ್ಬರು ಸದ್ಯ ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ರಾಜೇಂದ್ರಕುಮಾರ್ ಅವರು ಸಿ.ಟಿ. ಸ್ಟ್ರೀಟ್‌ನಲ್ಲಿ ಚಿನ್ನಾಭರಣ ಮಾರಾಟ ಮಳಿಗೆ ಇಟ್ಟುಕೊಂಡಿದ್ದಾರೆ. ಆರೋಪಿ ಪ್ರವೀಣ್ ಸಹ ಚಿನ್ನಾಭರಣ ವ್ಯಾಪಾರಿ. 4 ವರ್ಷಗಳ ಹಿಂದೆಯಷ್ಟೇ ರಾಜೇಂದ್ರ ಅವರನ್ನು ಪರಿಚಯ ಮಾಡಿಕೊಂಡಿದ್ದ.'

'ರಾಜೇಂದ್ರ ಅವರ ಮಳಿಗೆ ದೊಡ್ಡದಿದೆ. ಅರ್ಧ ಭಾಗವನ್ನು ಬೇರೆಯವರಿಗೆ ಬಾಡಿಗೆ ನೀಡಲು ತೀರ್ಮಾನಿಸಿದ್ದರು. ಇದನ್ನು ತಿಳಿದಿದ್ದ ಪ್ರವೀಣ್, ತನಗೆ ಬಾಡಿಗೆ ನೀಡುವಂತೆ ಕೋರಿದ್ದ. 'ಚಿನ್ನಾಭರಣ ವ್ಯಾಪಾರವನ್ನು ಪಾಲುದಾರಿಕೆಯಲ್ಲಿ ಮಾಡೋಣವೆಂದು ಆರೋಪಿ ಹೇಳಿದ್ದ. ಅದನ್ನು ನಂಬಿದ್ದ ರಾಜೇಂದ್ರ, ಗ್ರಾಹಕರೊಬ್ಬರಿಗೆ ಮಾರಾಟ ಮಾಡಲೆಂದು ತಮ್ಮ ಬಳಿಯ 4 ಕೆ.ಜಿ 644 ಗ್ರಾಂ ತೂಕದ ಚಿನ್ನದ ಗಟ್ಟಿಗಳನ್ನು ನೀಡಿದ್ದರು. ಇದಾದ ನಂತರ ಆರೋಪಿ ಅಂಗಡಿಗೂ ಬಾರದೇ ತಂದೆ ಜೊತೆ ನಾಪತ್ತೆಯಾಗಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕರಗ ಮಹೋತ್ಸವ: ₹ 4.50 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಬೆಂಗಳೂರು: ತಿಗಳರಪೇಟೆಯಲ್ಲಿರುವ ಧರ್ಮರಾಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಜರುಗಿದ್ದ ಕರಗ ಮಹೋತ್ಸವದ ಮೆರವಣಿಗೆ ವೀಕ್ಷಿಸಲು ಹೋಗಿದ್ದ ಮಹಿಳೆಯೊಬ್ಬರ ಚಿನ್ನಾಭರಣ ಕಳುವಾಗಿದ್ದು, ಈ ಸಂಬಂಧ ಹಲಸೂರು ಗೇಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಸಂತ್ರಸ್ತ ಮಹಿಳೆಯ ಪತಿ ಕಳ್ಳತನದ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಚಿಕ್ಕಪೇಟೆಯ ದಂಪತಿ, ಏಪ್ರಿಲ್ 23ರಂದು ರಾತ್ರಿ ಕರಗ ಮಹೋತ್ಸವದ ಮೆರವಣಿಗೆ ನೋಡಲು ಹೋಗಿದ್ದರು. ದೇವಸ್ಥಾನದ ಆವರಣದಲ್ಲಿ ಉಂಟಾಗಿದ್ದ ನೂಕುನುಗ್ಗಲಿನಲ್ಲಿ ಸಿಲುಕಿದ್ದರು. ಇದೇ ಸಂದರ್ಭದಲ್ಲಿಯೇ ಚಿನ್ನಾಭರಣ ಕಳ್ಳತನವಾಗಿರುವುದಾಗಿ ದೂರು ದಾರರು ಹೇಳುತ್ತಿದ್ದಾರೆ' ಎಂದು ತಿಳಿಸಿದರು.

'₹ 4.50 ಲಕ್ಷ ಮೌಲ್ಯದ ಎರಡು ಚಿನ್ನದ ಸರಗಳು ಕಳ್ಳತನ ಆಗಿರುವುದಾಗಿ ದೂರಿನಲ್ಲಿ ತಿಳಿಸಲಾಗಿದೆ' ಎಂದರು.

ಎದೆ ಮೇಲೆ ತುಳಿದು ಮಗು ಕೊಲೆ

ಅಥಣಿ (ಬೆಳಗಾವಿ ಜಿಲ್ಲೆ): ಮೂರು ವರ್ಷದ ಮಗುವಿನ ಎದೆ ಮೇಲೆ ತುಳಿದು ಕೊಲೆ ಮಾಡಿದ ಘಟನೆ ತಾಲ್ಲೂಕಿನ ಬುರ್ಲಟ್ಟಿಯಲ್ಲಿ ಶನಿವಾರ ನಡೆದಿದೆ.

ಶ್ರೀನಿಧಿ ಕಾಡಪ್ಪ ಕಾಳಾಪಾಟೀಲ ಕೊಲೆಯಾದ ಮಗು. ಆರೋಪಿ ಜ್ಯೋತಿಬಾ ತುಕಾರಾಮನನ್ನು ಪೊಲೀಸರು ಬಂಧಿಸಿದ್ದಾರೆ.

ಕುದುರೆ ರೇಸ್ ಬೆಟ್ಟಿಂಗ್: ಇಬ್ಬರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುದುರೆ ರೇಸ್‌ಗಳ ಮೇಲೆ ಅಕ್ರಮವಾಗಿ ಬೆಟ್ಟಿಂಗ್ ನಡೆಸುತ್ತಿದ್ದ ಇಬ್ಬರು ಆರೋಪಿಗಳನ್ನು ಶೇಷಾದ್ರಿಪುರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಕುದುರೆ ರೇಸ್ ಬೆಟ್ಟಿಂಗ್ ಬಗ್ಗೆ ಮಾಹಿತಿ ಬಂದಿತ್ತು. ರಾಜೀವ್ ಗಾಂಧಿ ವೃತ್ತ ಬಳಿ ಹೋಟೆಲ್‌ವೊಂದರ ಮೇಲೆ ದಾಳಿ ಮಾಡಿ ಆರೋಪಿಗಳಾದ ಕೆ. ಸುರೇಶ್ ಹಾಗೂ ಎನ್. ಆನಂದ್ ಎಂಬುವವರನ್ನು ವಶಕ್ಕೆ ಪಡೆಯಲಾಗಿದೆ. ಇವರಿಂದ ₹ 8,100 ನಗದು, ಎರಡು ಮೊಬೈಲ್ ಹಾಗೂ ಬೆಟ್ಟಿಂಗ್‌ಗೆ ಸಂಬಂಧಪಟ್ಟ ಸಾಮಗ್ರಿ ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

'ದೇಶದ ವಿವಿಧೆಡೆ ನಡೆಯುವ ಕುದುರೆ ರೇಸ್‌ಗಳ ಬಗ್ಗೆ ಜಾಲತಾಣದ ಮೂಲಕ ಆರೋಪಿಗಳು ಮಾಹಿತಿ ಪಡೆದುಕೊಳ್ಳುತ್ತಿದ್ದರು. ನಂತರ, ಜನರಿಂದ ಹಣ ಕಟ್ಟಿಸಿಕೊಳ್ಳುತ್ತಿದ್ದರು. ಆರೋಪಿಗಳು ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದರು' ಎಂದು ತಿಳಿಸಿವೆ.

ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಕಿವಿಮಾತು

'ನವ ಉದ್ಯಮದ ಸವಾಲುಗಳನ್ನು ಎದುರಿಸಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಎಂಜಿನಿಯರಿಂಗ್‌ನಲ್ಲಿ ನಾವೀನ್ಯದ ಮಹತ್ವವನ್ನು ತಿಳಿದುಕೊಂಡು ಉತ್ತಮವಾದುದನ್ನು ಸಾಧಿಸಬೇಕು' ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಹೇಳಿದರು.

ಕೆ.ಆರ್.ಪುರ ಸಮೀಪದ ವೈಟ್‌ಫೀಲ್ಡ್‌ನ ಎಂವಿಜೆ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಪ್ರಾಜೆಕ್ಟ್ ಎಕ್ಸ್‌ಪೊ' 2024' ಅನ್ನು ಉದ್ಘಾಟಿಸಿದ ಅವರು ಮಾತನಾಡಿದರು.

ಸಮಸ್ಯೆ ಪರಿಹರಿಸುವ ಕೌಶಲಗಳು, ಉದ್ಯಮದ ಸವಾಲು ಅರ್ಥಮಾಡಿಕೊಳ್ಳುವುದು ಮತ್ತು ಸಹಯೋಗದ ಪ್ರಾಮುಖ್ಯವನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕು. ಅನಿಶ್ಚಿತತೆಯ ಸಮಯದಲ್ಲಿ ಅಭಿವೃದ್ಧಿ ಹೊಂದಲು ತಾಂತ್ರಿಕ ವಿಷಯ ಮುಖ್ಯವಾಗಿವೆ. ಅನನ್ಯತೆ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸಿ ಕೊಳ್ಳಲು 'ಪ್ರಾಜೆಕ್ಟ್ ಎಕ್ಸ್‌ಪೊ' ಮಹತ್ವದ್ದಾಗಿದೆ ಎಂದರು.

ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಅವರು 'ಪ್ರಾಜೆಕ್ಟ್ ಎಕ್ಸ್‌ಪೊ' 2024' ವೀಕ್ಷಿಸಿದರು

ಭಾರತೀಯ ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಡಾ.ಬಿ.ಎನ್.ಸುರೇಶ್ ಮಾತನಾಡಿ, 'ಸಾಮಾಜಿಕ ಸಮಸ್ಯೆಗಳಿಗೆ ಎಂಜಿನಿಯರಿಂಗ್ ಪರಿಹಾರಗಳನ್ನು ಗುರುತಿಸುತ್ತದೆ. ಆಳವಾದ ಸಾಮಾಜಿಕ ಬದಲಾವಣೆಗಳನ್ನು ಪ್ರಚೋದಿಸುತ್ತದೆ. ಸಮಕಾಲೀನ ನಾವೀನ್ಯತೆ ಮತ್ತು ಆವಿಷ್ಕಾರಗಳನ್ನು ನಿರ್ಲಕ್ಷಿಸುವ ರಾಷ್ಟ್ರಗಳು ಅಸ್ತಿತ್ವವಾದದ ಸವಾಲುಗಳನ್ನು ಎದುರಿಸಬಹುದು' ಎಂದು ಎಚ್ಚರಿಸಿದರು.

ಪ್ರಾಜೆಕ್ಟ್ ಎಕ್ಸ್‌ಪೋದಲ್ಲಿ 123 ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಲಾಯಿತು. ಕರ್ನಾಟಕ ಮತ್ತು ನೆರೆಯ ರಾಜ್ಯಗಳ ಎಂಜಿನಿಯರಿಂಗ್ ಉತ್ಸಾಹಿಗಳು 'ಪ್ರಾಜೆಕ್ಟ್ ಎಕ್ಸ್‌ಪೊ' ವೀಕ್ಷಿಸಿದರು. ಏರೋನಾಟಿಕಲ್, ವೈದ್ಯಕೀಯ, ಎಐ ಮತ್ತು ಇತರ ಎಂಜಿನಿಯರಿಂಗ್ ಕ್ಷೇತ್ರದ ಎಲ್ಲ ಪ್ರಾಜೆಕ್ಟ್ ನವೀನ ಯೋಜನೆಗಳನ್ನು ಪ್ರದರ್ಶಿಸಲಾಯಿತು.

450 ವಿದ್ಯಾರ್ಥಿಗಳಿಗೆ, ಉದಯೋನ್ಮುಖ ನವೋದ್ಯಮಿಗಳಿಗೆ ಎಕ್ಸ್‌ಪೊ ವೇದಿಕೆಯಾಯಿತು. ಕಾರ್ಯಕ್ರಮದಲ್ಲಿ 'ಬಿಯಾಂಡ್ ಬೌಂಡರೀಸ್' ಶೀರ್ಷಿಕೆಯ ಪುಸ್ತಕ ಮತ್ತು ವಿನೂತನ ವಿಚಾರಗಳ ಸಂಗ್ರಹಗಳ ಪುಸ್ತಕ ಬಿಡುಗಡೆ ಮಾಡಲಾಯಿತು.

ದೆಹಲಿ ಐಐಟಿ ಪ್ರಾಧ್ಯಾಪಕ ರಾಮಕೃಷ್ಣ ಸೋಂಡೆ, ಎಸ್. ರಾಜಗೋಪಾಲ್, ಆಕ್ಸೆಂಚರ್ ವ್ಯವಸ್ಥಾಪಕ ನಿರ್ದೇಶಕ ರಾಘವೇಂದ್ರ, 'ಪ್ರಾಜೆಕ್ಟ್ ಎಕ್ಸ್‌ಪೊ' ಸಂಚಾಲಕ ಶ್ರೀನಿವಾಸ್ ಗೊಂಬಿ ಉಪಸ್ಥಿತರಿದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

General

General

GOOD PROPERTIES Wanted for Good Buyers. Lands/ Sites. Lokapriya.Call -9845162933

Sites

Banashankari

WANTED 40X60 Site (or odd dimensions upto 2700sft) in BSK 6th-Stage, 3rd Block for-immediate Settlement. Corner Site/ Site in Farmer Street/ Site in Freedom-Street Preferred. Call:8105032403

Kanakapura Road

WANTED/ BUYING SITE 30x40, 40x60 Anjanapura BDA Banashankari 6th Stage BDA, Doddakallasandra, Vajarahalli, Gubblala Konanakunte Cross Agents Excuse 9008259222

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUSINESS

Business to Business

Consultants

WE NEED retired Bank Executives as consultants with goodcontacts and experience in Closures, Compromise, Settlement of NPA Loans. Arun 9945699789.

PUBLIC NOTICE

SADASHIVANAGAR CLUB
No.21, 15th Cross, Sadashivanagar, Bangalore-560080. Mob: 9148975091
TENDER NOTIFICATION
Tenders are invited from reputed fabricators for supply, erection & completion of Peripheral Chain link fencing for Tennis Court on the 3rd Floor of New Annex Building of the Club.
Documents / Specifications can be had from the office from 29th April '2024 to 2nd May' 2024.
Tender documents duly completed to be submitted in sealed envelopes on or before 2nd May' 2024 before 5:00 PM.
Hon.Secretary, Sadashivanagar Club,
Date : 28/04/2024
Place : Bangalore

EDUCATIONAL

Coaching Classes

"SET UP IIT/JEE & NEET Coaching Center. Low Investment/ High returns. Call/ WhatsApp: 9740577844"

School

"ATTN SCHOOL-OWNERS". Improve ADMISSIONS. Set up IIT/JEE & NEET Coaching from Grade-6. Low Investment. Call/WhatsAPP: 7022255677

MATRIMONIAL

Bharath Matrimonial

ಒಕ್ಕಲಿಗ ಜಾತಿಯ ವಧು ವರರ ಅನ್ವೇಷಣಾ ಕೇಂದ್ರ
ಕರ್ನಾಟಕದ ಎಲ್ಲಾ ವಯಸ್ಸಿನ ಮತ್ತು ಎಲ್ಲಾ ವಿದ್ಯಾವಂತ ವಧು-ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ :
7019812036

Grooms Wanted

Telugu

GROOM WANTED
Bride Groom for a girl of 45 yrs. Graduate working for Australian MNC, Bengaluru Telugu Hindus preferred for immediate marriage with details of groom and their parents Caste No bar. Contact: Sunder
8861766862

Muslim

MUSLIM BEAUTIFUL girl 2000 Born 5'4' Rich Family is looking for a suitable match (080-69103158)

Brides Wanted

Muslim

MUSLIM BOY 1996 Born 5'9' MBBS (Pursuing MD) (UK) from a Affluent family is looking for match (080-69103158)

MUSLIM BOY 35 Years 5'10' MS in Engineering Working in USA Resident of Bangalore is looking for a match (080-69072053)

MUSLIM BOY 30 Years 5'8' M.Tech Senior Software Eng 70LPA Posted in Bangalore is looking for a match (080-69072053)

OTHERS

For Sale

FOR SALE: 15 Nos. Bunk Beds Sparingly used with Mattress. Contact: 9844116281.

WEEKEND CORNER

ಜಾಗ ಬೇಕಾಗಿದೆ
ಉತ್ಪಾದನೆ ಮತ್ತು ಎಸ್ಟೇಟ್ ಹಿಡುವಳಿಗಳನ್ನು ವಿಸ್ತರಿಸಲು ನೋಡುತ್ತಿರುವ ಪ್ರಖ್ಯಾತ ಪಬ್ಲಿಕ್ ಲಿಮಿಟೆಡ್ ಕೋ. ನೇರ ಸಂಪರ್ಕ ಹೊಂದಿರುವ ಮಾಲೀಕರು ಮತ್ತು ಏಜೆಂಟ್‌ಗಳು ಪೀಣ್ಯದಲ್ಲಿ ಸುಮಾರು ೫೦೦೦ ರಿಂದ ೨೦೦೦೦ ಚದರ ಅಡಿಗಳಷ್ಟು ಕೈಗಾರಿಕಾ ಆಸ್ತಿಯನ್ನು (ಪ್ರಿಫ್ಯಾಬ್ ಶೆಡ್ ಮತ್ತು ಸಾಕಷ್ಟು ವಿದ್ಯುತ್ ಹೊಂದಿರುವ/ರಹಿತ ಘಟಕಗಳು) ಸಂಪೂರ್ಣ ಆಧಾರದ ಮೇಲೆ ಅಥವಾ ದೀರ್ಘ ಗುತ್ತಿಗೆ ಅಥವಾ ದೀರ್ಘ ಬಾಡಿಗೆಗೆ ನೀಡಲು ಆಹ್ವಾನಿಸಲಾಗಿದೆ.
reidcoh@gmail.com ಗೆ ಬರೆಯಿರಿ ಅಥವಾ 9148211400 ಗೆ ಕರೆ ಮಾಡಿ

Re-drilling or deepening 6½" borewells by Robo Rig
VIJAYALAKSHMI BOREWELLS-BANGALORE
94481-71416

Medical

RUNNING NEW Modern NABH Ready 50 Bed Hospital South Bangalore, Longterm Rental Partnership WhatsApp: 00447868727506

PERSONAL

Change of Name

CHANGE OF NAME
I, KEERTHANA. V.A D/o B. Viswanath R/o #1180, 2nd Block, BDA Layout, Anjanapura Township Lal Bahadur Shastri Nagar, Bengaluru-560062 declare that KEERTHANA. V.A. and KEERTHANA VISWANATH both Name belongs to me, i.e. myself only. And have changed my Name to KEERTHANA VISWANATH ANNAPURNA vide affidavit dated 5.4.2024 sworn before Notary Puttaramaiah, Bengaluru

I, ARAVIND ALBERTS S/o CJM Alberts R/a#113/114, Golden Green Enclave Thurahalli, Subramanyapura Post, Bangalore South Bangalore- 560061 have changed my Name from ARAVIND ASHWAGHOSHA to ARAVIND ALBERTS vide affidavit dated:24.4.2024 sworn before Notary L.Puttaraju Bengaluru

CHANGE OF NAME
I, PRATHIBHA Residing at No. 603, LILAC Tower, Golden Blossom Apartment, Kadugodi, Bangalore-560067 have changed my name to PRATIBA BIDADIKAR vide affidavit dated 27.04.2024 before notary Ratna. N, Bangalore. Henceforth he shall be known as PRATIBA BIDADIKAR only.

CHANGE OF NAME
I, THOMAS M T alias THOMAS MANAKUZHIYIL, Residing at No.238/3, 5th Cross, Sharadamba Nagar, MES Road, Jalahalli, Bengaluru-13, in all my academic certificates My name is mentioned as Thomas MT and all my address proofs are THOMAS MANAKUZHIYIL, with my house name. Both names are mine. vide affidavit dt. 23-04-2024, before Notary Kundan Babu, Bengaluru.

WE, PRAVEEN V S/o Venkateshwara and Sangeetha Praveen W/o.Praveen V R/a#48 Sapthagiri Nilaya Gangamma Garden, Malgala Main Road, Nagarabhavi 2nd Stage Bangalore-560091 have changed our minor Daughter's Name from AAHANA A.P. to P. AHANA SHREE (10.11.2017) vide affidavit dated:15.2.2024 sworn before Notary HR.Karunakara Bengaluru

ಸರ್ಕಾರಿ ಜಾಗ ಭೂಗಳ್ಳರಿಗೆ

ಒಂದನೇ ಪುಟದಿಂದ..

ಎದುರಿಗೆ ಸಿಕ್ಕಿದಾಗ ಕೇಳಿದರೆ ಒಂದಿಲ್ಲೊಂದು ಸುಳ್ಳು ಹೇಳಿ ಹೋಗುತ್ತಿದ್ದರು. ಏನೋ ಅಕ್ರಮ ನಡೆದಿದೆ ಎಂದು ಎನಿಸಿತು. ಕಚೇರಿಯಲ್ಲೇ ಹೋಗಿ ಸಾಗುವಳಿ ಚೀಟಿಯ ಪ್ರತಿ ನೀಡಲು ಕೇಳಿದೆ. ಅವರು ಕೊಡಲಿಲ್ಲ. ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದರೂ ಸಿಗಲಿಲ್ಲ. ಜಿಲ್ಲಾಧಿಕಾರಿಗೆ ದೂರು ಕೊಟ್ಟರೆ ಪ್ರಯೋಜನ ಆಗಲಿಲ್ಲ, ಪ್ರಾದೇಶಿಕ ಆಯುಕ್ತರನ್ನು ನೇರವಾಗಿ ಸಂಪರ್ಕ ಮಾಡಿ ವಿವರಿಸಿದೆ. ಅವರು ಜಿಲ್ಲಾಧಿಕಾರಿಯಿಂದ ವರದಿ ಕೇಳಿದರು. ಅಲ್ಲಿಂದ ಪ್ರಾಥಮಿಕ ತನಿಖೆ ಆರಂಭವಾಯಿತು. ಆಗ ಎಲ್ಲವೂ ಹೊರಗೆ ಬಂತು' ಎಂದು ಮಂಜುನಾಥ್ ವಿವರಿಸಿದರು.

ಈ ಪ್ರಕರಣದ ಬೆನ್ನು ಹತ್ತಿ ನಡೆದಿರುವ ತನಿಖೆಯಲ್ಲಿ ಹಲವು ರೀತಿಯ ಅಕ್ರಮಗಳು ಬಯಲಿಗೆ ಬಂದಿವೆ. ಸರ್ಕಾರಿ ಭೂಮಿ ಎಂಬುದು ಭೂಗಳ್ಳರು ಮತ್ತು ಕಂದಾಯ ಇಲಾಖೆಯ ಕೆಲ ಸಿಬ್ಬಂದಿ ಪಾಲಿಗೆ ಹಣ ಮಾಡಿಕೊಳ್ಳುವ ತೆರೆದ ಖಜಾನೆಯಂತಾಗಿದೆ. ಅರಣ್ಯ ಮತ್ತು ಕಂದಾಯ ಕಾಯ್ದೆಗಳು ಎಷ್ಟೇ ಬಲಿಷ್ಠವಾಗಿದ್ದರೂ ಸರಾಗವಾಗಿ ವಂಚಿಸಬಲ್ಲ ನುಸುಳಕೋರರು ಕಂದಾಯ ಇಲಾಖೆಯಲ್ಲೇ ಇದ್ದಾರೆ ಎಂಬುದು ಪತ್ತೆಯಾಗಿದೆ. ಕಂದಾಯ ಭೂಮಿ ಮಾತ್ರವಲ್ಲ, ಹುಲಿ ಕಾಡು, ಅರಣ್ಯ, ಪರಿಭಾವಿತ ಅರಣ್ಯ ಪ್ರದೇಶಗಳ ಭೂಮಿ ಭೂಗಳ್ಳರ ಪಾಲಾಗಿವೆ.

ತಾವಿರುವ ಗುಡಿಸಲಿನ ನಿವೇಶನವೂ ತಮ್ಮ ಹೆಸರಿನಲ್ಲಿ ಇಲ್ಲದ ಲಕ್ಷಾಂತರ ಕುಟುಂಬಗಳು ರಾಜ್ಯದಲ್ಲಿವೆ. ನಮೂನೆ(ಫಾರಂ) 50, 53, 57ರ ಅಡಿಯಲ್ಲಿ ಸಲ್ಲಿಕೆಯಾಗಿರುವ 10.49 ಲಕ್ಷ ಅರ್ಜಿಗಳು ಸರ್ಕಾರದ ಮುಂದಿವೆ. ಹಲವು ವರ್ಷಗಳಿಂದ ಭೂಮಿ ಹಕ್ಕಿಗಾಗಿ ಭೂರಹಿತರು ಹಲುಬುತ್ತಿದ್ದಾರೆ. ಶಾಲೆ, ಆಸ್ಪತ್ರೆ, ಸ್ಮಶಾನಕ್ಕೆ ಜಾಗವಿಲ್ಲದ ಸ್ಥಿತಿ ಹಳ್ಳಿಗಳಲ್ಲಿದೆ. ಇನ್ನೊಂದೆಡೆ ಸಾವಿರಾರು ಎಕರೆ ಸರ್ಕಾರಿ ಜಮೀನು ಉಳ್ಳವರ ಪಾಲಾಗುತ್ತಿದೆ.

ಕಂದಾಯ ಕಾಯ್ದೆ ಪ್ರಕಾರ, ನಮೂನೆ 50, 53 ಮತ್ತು 57ರಲ್ಲಿ ಭೂಮಂಜೂರಾತಿ ಕೋರಿರುವವರು ಕಾಲಮಿತಿಯೊಳಗೆ ಅರ್ಜಿ ಸಲ್ಲಿಸಿರಬೇಕು. ಅಷ್ಟರಲ್ಲಿ ಅರ್ಜಿದಾರನಿಗೆ 18 ವರ್ಷ ಪೂರ್ಣಗೊಂಡಿರಬೇಕು, ಅರ್ಜಿದಾರನೇ ಸಾಗುವಳಿ ಮಾಡುತ್ತಿರಬೇಕು. ಒಂದು ಕುಟುಂಬಕ್ಕೆ 4 ಎಕರೆ 38 ಗುಂಟೆಗೂ ಹೆಚ್ಚು ಆಸ್ತಿ ಮಂಜೂರು ಮಾಡುವಂತಿಲ್ಲ. ಸಾಗುವಳಿ ಮಾಡುತ್ತಿರುವ ಬಗ್ಗೆ ಗ್ರಾಮ ಲೆಕ್ಕಾಧಿಕಾರಿ, ಕಂದಾಯ ಅಧಿಕಾರಿಯ ವರದಿ ಪಡೆಯಬೇಕು, ನಕ್ಷೆ ಸಿದ್ಧಪಡಿಸಬೇಕು, ಶಾಸಕರ ಅಧ್ಯಕ್ಷತೆಯ ಬಗರ್ ಹುಕುಂ ಸಮಿತಿ ಮುಂದೆ ದಾಖಲೆ ಮಂಡಿಸಬೇಕು.

ಸಮಿತಿ ಸಭೆಯ ಬಯೋಮೆಟ್ರಿಕ್ ಹಾಜರಾತಿ, ಸಭೆಯ ಫೋಟೊ, ಸಾಗುವಳಿ ಜಾಗದ ಚಿತ್ರಗಳನ್ನು ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಬೇಕು. ನಂತರ ಸ್ಥಳ ಪರಿಶೀಲನೆ ನಡೆಸಿ ಜಾಗ ಮಂಜೂರಾತಿ ಮಾಡಬೇಕು. ಕಂದಾಯ ಜಾಗವೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು, ಅರಣ್ಯ ಜಾಗವಾಗಿದ್ದರೆ ಯಾವುದೇ ಕಾರಣಕ್ಕೂ ಮಂಜೂರು ಮಾಡುವಂತಿಲ್ಲ ಎಂಬ ನಿಯಮ ಇವೆ. ಆದರೆ, ಈ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಮನಸೋಇಚ್ಛೆ ಭೂ ಮಂಜೂರು ಮಾಡಿಕೊಡಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ನಡೆದಿರುವ ಅಕ್ರಮ ಭೂಮಂಜೂರಾತಿ ಪ್ರಕರಣವೇ ಇದಕ್ಕೆ ಉದಾಹರಣೆ. ಇದೇ ಜಿಲ್ಲೆಯ ಕಡೂರು ತಾಲ್ಲೂಕಿನಲ್ಲೂ ಇದೇ ರೀತಿಯ ದೂರೊಂದನ್ನು ಆಧರಿಸಿ ತನಿಖೆ ಆರಂಭಿಸಲಾಯಿತು. ಎರಡೂ ತಾಲ್ಲೂಕಿನ ಅಕ್ರಮಗಳ ತನಿಖೆಗೆ 15 ತಹಶೀಲ್ದಾರ್‌ಗಳ ವಿಶೇಷ ತಂಡವನ್ನು ಸರ್ಕಾರ ಮಾಡಿತ್ತು. ಕೋಟ್ಯಂತರ ರೂಪಾಯಿ ಬೆಲೆ ಬಾಳುವ 6500 ಎಕರೆಯಷ್ಟು ಸರ್ಕಾರಿ ಭೂಮಿಯನ್ನು ಯಾವುದೇ ಪ್ರಕ್ರಿಯೆಗಳನ್ನು ಪಾಲಿಸದೆ ಮಂಜೂರು ಮಾಡಿಕೊಟ್ಟಿರುವುದು ಪ್ರಾಥಮಿಕ ತನಿಖೆಯಿಂದ ಪತ್ತೆಯಾಗಿದೆ.

ಒಂದೇ ಕುಟುಂಬದಲ್ಲಿ ಹಲವರ ಹೆಸರಿಗೆ ತಲಾ 4 ಎಕರೆ 38 ಗುಂಟೆಯಂತೆ ನೂರಾರು ಎಕರೆ ಭೂಮಿಯನ್ನು ಮಂಜೂರು ಮಾಡಲಾಗಿದೆ. ಅನುಸರಿಸಿದ ಪ್ರಕ್ರಿಯೆಗಳ ಬಗ್ಗೆ ಕಡತ ಕೆದಕಿದ ತನಿಖಾ ಅಧಿಕಾರಿಗಳೇ ಅಚ್ಚರಿಗೊಂಡಿದ್ದಾರೆ. ಕಂದಾಯ ಅಧಿಕಾರಿ ವರದಿ ಇಲ್ಲ, ನಕ್ಷೆ ಇಲ್ಲ, ಬಗರ್ ಹುಕುಂ ಸಮಿತಿ ಮುಂದೆ ಮಂಡನೆಯೇ ಆಗಿಲ್ಲ. ಪ್ರಿಂಟಿಂಗ್ ಪ್ರೆಸ್‌ಗಳಲ್ಲಿ ಸಾಗುವಳಿ ಚೀಟಿ ಮುದ್ರಿಸಿ ಮನಸೋಇಚ್ಛೆ ಹಂಚಲಾಗಿದೆ. ರಾಜ್ಯದವರೇ ಅಲ್ಲದವರಿಗೆ, ವಿದೇಶಗಳಲ್ಲಿ ವಾಸ ಮಾಡುತ್ತಿರುವವರ ಹೆಸರಿಗೂ ಸರ್ಕಾರಿ ಭೂಮಿ ಅಕ್ರಮವಾಗಿ ಮಂಜೂರು ಮಾಡಿರುವುದು ಪತ್ತೆಯಾಗಿದೆ. ಇಷ್ಟೆಲ್ಲಾ ಅಕ್ರಮ ಗುರುತಿಸಿ 2023ರ ಸೆಪ್ಟೆಂಬರ್‌ನಲ್ಲಿ ಒಂದು ತಿಂಗಳ ಕಾಲ ತನಿಖೆ ನಡೆಸಿ ಸಲ್ಲಿಕೆಯಾಗಿರುವ 2 ಸಾವಿರ ಪುಟಗಳ ವರದಿ ಸರ್ಕಾರದ ಮುಂದೆ ಧೂಳು ಹಿಡಿಯುತ್ತಿದೆ.

ಇನ್ನೊಂದೆಡೆ ಮೂಡಿಗೆರೆ ತಾಲ್ಲೂಕೊಂದರಲ್ಲೇ ಕೇವಲ ಎರಡು ವರ್ಷಗಳ ಅವಧಿಯಲ್ಲಿ (2019–2021) ಮಂಜೂರಾಗಿದ್ದ 472 ಪ್ರಕರಣಗಳನ್ನು ಈ ಹಿಂದಿನ ಉಪವಿಭಾಗಾಧಿಕಾರಿ ಎಚ್.ಡಿ.ರಾಜೇಶ್ ಪ್ರತ್ಯೇಕವಾಗಿ ವಿಚಾರಣೆ ನಡೆಸಿದ್ದರು. ಶೇ 99ರಷ್ಟು ಪ್ರಕರಣಗಳಲ್ಲಿ ಅಕ್ರಮ ಮಂಜೂರಾತಿ ಎಂಬುದು ಪತ್ತೆಯಾಯಿತು. ಒಂದು ಸಾವಿರ ಎಕರೆಯಷ್ಟು ಮಂಜೂರಾತಿ ರದ್ದುಗೊಳಿಸಿದರು. ಸರ್ಕಾರಿ ಭೂಮಿಯನ್ನು ತಮ್ಮ ಸ್ವಂತ ಭೂಮಿ ಎಂಬಂತೆ ಕಂದಾಯ ಇಲಾಖೆ ಸಿಬ್ಬಂದಿ ಸಾಗುವಳಿ ಚೀಟಿ ಮುದ್ರಿಸಿಕೊಟ್ಟು ಅಕ್ಷರಶಃ ಮಾರಾಟ ಮಾಡಿದ್ದಾರೆ ಎಂಬುದನ್ನು ಪತ್ತೆ ಹಚ್ಚಿದ್ದರು.

ಸಿಬ್ಬಂದಿಯ ವಿರುದ್ಧ ಪ್ರಕರಣ ದಾಖಲಾಯಿತು. ಕಡೂರಿನಲ್ಲಿ ಈ ಹಿಂದೆ ಇದ್ದ ತಹಶೀಲ್ದಾರ್ ಬಂಧನವೂ ಆಯಿತು. ಅವರೆಲ್ಲರೂ ಜಾಮೀನು ಪಡೆದಿದ್ದಾರೆ. ಇನ್ನೂ 230 ಪ್ರಕರಣಗಳು ವಿಚಾರಣೆಗೆ ಬಾಕಿ ಇರುವಾಗಲೇ ರಾಜೇಶ್ ಅವರ ಎತ್ತಂಗಡಿಯಾಯಿತು. ಉಪವಿಭಾಗಾಧಿಕಾರಿಯನ್ನೇ ವರ್ಗಾವಣೆ ಮಾಡಿಸುವಷ್ಟು ರಾಜಕೀಯ ಪ್ರಭಾವವನ್ನು ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ಕಂದಾಯ ಅಧಿಕಾರಿಗಳು ಹೊಂದಿದ್ದಾರೆ ಎಂಬುದನ್ನು ಹಿರಿಯ ಅಧಿಕಾರಿಗಳೇ ಹೇಳುತ್ತಾರೆ.

ಅವರು ವರ್ಗಾವಣೆಯಾದ ಬಳಿಕ ಮಂಜೂರಾತಿ ರದ್ದು ಪ್ರಶ್ನಿಸಿ ಹೈಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತರುತ್ತಿದ್ದಾರೆ. ಪ್ರತಿ ಪ್ರಕರಣದ ವಿಚಾರಣೆಗೆ ಸರ್ಕಾರದ ಪರ ವಕೀಲರು ಹಾಜರಾಗಿ ಸರಿಯಾದ ಮಾಹಿತಿ ನೀಡದಿದ್ದರೆ ಮಂಜೂರಾದ ಭೂಮಿ ಮತ್ತೆ ಭೂಗಳ್ಳರ ಪಾಲಾಗುವ ಆತಂಕ ಇದೆ ಎಂದು ತನಿಖೆ ನಡೆಸಿದ ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಗಳು ಬೇಸರ ವ್ಯಕ್ತಪಡಿಸುತ್ತಾರೆ.

ಕಂದಾಯ ಕಾಯ್ದೆಯ ನಡುವೆ ನುಸುಳುವ ಹಲವು ದಾರಿಯನ್ನು ಸಿಬ್ಬಂದಿ ಕರಗತ ಮಾಡಿಕೊಂಡಿದ್ದಾರೆ. ಮತ್ತೊಂದು ದಾರಿ ಎಂದರೆ ಆನ್‌ಲೈನ್ ಪಹಣಿ ಹೆಸರಿನಲ್ಲಿ ಅಕ್ರಮ ಮಾಡುವುದು. 2000ನೇ ಇಸವಿಯಿಂದ ಆನ್‌ಲೈನ್ ಪಹಣಿ ವ್ಯವಸ್ಥೆ ಇದೆ. ಬಹುತೇಕ ಆಸ್ತಿಗಳ ಪಹಣಿ ಆನ್‌ಲೈನ್‌ನಲ್ಲಿ ದೊರಕುತ್ತಿದೆ. ಕೆಲವೇ ಕೆಲವು ಜಮೀನಿಗೆ ಸಂಬಂಧಿಸಿದ ಪಹಣಿ ಅಪ್‌ಡೇಟ್ ಆಗಿಲ್ಲ. ಅಂತವರು ಅರ್ಜಿ ಸಲ್ಲಿಸಿದರೆ ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲಿಸಿ ಆನ್‌ಲೈನ್ ಪಹಣಿ ಮಾಡಿಕೊಡಲಾಗುತ್ತಿದೆ.

ಈ ಅವಕಾಶವನ್ನು ಬಳಸಿ ಸರ್ಕಾರಿ ಜಾಗ ಲಪಟಾಯಿಸಿರುವ ಪ್ರಕರಣಗಳು ತರೀಕೆರೆಯಲ್ಲಿ ಈಗ ಬೆಳಕಿಗೆ ಬಂದಿವೆ. ಸರ್ಕಾರಿ ಜಮೀನು ಖಾಲಿ ಇರುವುದನ್ನು ಗುರುತಿಸಿ, ಇದು 1982ರಲ್ಲೇ ಮಂಜೂರಾಗಿದೆ ಎಂಬಂತೆ ದಾಖಲೆಗಳನ್ನು ಸೃಷ್ಟಿಸಿಕೊಡುವ ಕೆಲಸವನ್ನು ಕಂದಾಯ ಇಲಾಖೆ ಸಿಬ್ಬಂದಿಯೇ ಮಾಡಿದ್ದಾರೆ. 42 ವರ್ಷಗಳ ಹಿಂದಿನ ದಿನಾಂಕ ನಮೂದಿಸಿ ಸಾಗುವಳಿ ಚೀಟಿ, ನಕ್ಷೆ, ಕೈ ಬರಹದ ಪಹಣಿ ಎಲ್ಲವನ್ನೂ ಸೃಷ್ಟಿಸಿದ್ದಾರೆ. ಮೂಲ ದಾಖಲೆ ಪರಿಶೀಲಿಸದೆ ಉಪವಿಭಾಗಾಧಿಕಾರಿ ಪಹಣಿ ಇಂಡೀಕರಿಸಿದ್ದಾರೆ. ಬಳಿಕ ಇಂತಹದ್ದೇ ಅರ್ಜಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಲ್ಲಿಕೆಯಾದಾಗ ಅನುಮಾನಗೊಂಡು ಚಿಕ್ಕಮಗಳೂರು ಜಿಲ್ಲಾಧಿಕಾರಿಗೆ ಮಾಹಿತಿ ನೀಡಿದ್ದಾರೆ. ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಅವರು ಆರು ಜನರ ಪ್ರತ್ಯೇಕ ತಂಡ ರಚನೆ ಮಾಡಿ ತನಿಖೆಗೆ ಆದೇಶಿಸಿದ್ದಾರೆ.

ಒಂದೊಂದು ಜಿಲ್ಲೆಯಲ್ಲೂ ಒಂದೊಂದು ರೀತಿಯ ಅಕ್ರಮ ಭೂಮಂಜೂರಾತಿ ಇದೆ. ಹಾಸನ ಜಿಲ್ಲೆಯಲ್ಲಿ ಹೇಮಾವತಿ ಮುಳುಗಡೆ ಸಂತ್ರಸ್ತರಿಗೆ ಮೀಸಲಿಟ್ಟ ಜಮೀನನ್ನು ಬಗರ್‌ಹುಕುಂ ಸಮಿತಿಯಿಂದ ಅಕ್ರಮವಾಗಿ ಭೂ ಮಂಜೂರಾತಿ ಮಾಡಿರುವ ದೂರುಗಳಿವೆ. ಹೇಮಾವತಿ ಮುಳುಗಡೆ ಸಂತ್ರಸ್ತರಿಗೆ ಮೀಸಲಿಟ್ಟ ಜಮೀನಿನ ಪೈಕಿ 2015 ರಿಂದ 2019 ರವರೆಗಿನ ಎಲ್ಲ 977 ಪ್ರಕರಣಗಳ ಮಂಜೂರಾತಿ ರದ್ದು ಮಾಡಲಾಗಿದೆ. ಇದರಲ್ಲಿ ಈಗಾಗಲೇ 135 ಪ್ರಕರಣಗಳ ಎಂಆರ್(ಮಂಜೂರಾತಿ ಪತ್ರ) ರದ್ದು ಮಾಡಲಾಗಿದೆ. 2005 ರಿಂದ 2015 ರ ವರೆಗಿನ 288 ಪ್ರಕರಣಗಳಲ್ಲಿ ನೋಟಿಸ್ ಜಾರಿ ಮಾಡಲಾಗಿದೆ. ಈ ಪ್ರಕರಣದಲ್ಲಿ ಯಾರ ಮೇಲೂ ಕ್ರಮ ಆಗಿಲ್ಲ. ಇನ್ನು ಬೇಲೂರು ತಾಲ್ಲೂಕಿನ ಬಗರ್ ಹುಕುಂ ಸಮಿತಿಯಿಂದ 2,750 ಎಕರೆ ಭೂ ಮಂಜೂರಾತಿ ಮಾಡಲಾಗಿದೆ ಎನ್ನುವ ಆರೋಪ ಸ್ಥಳೀಯವಾಗಿ ಕೇಳಿ ಬರುತ್ತಿದ್ದು, ಜನಪ್ರತಿನಿಧಿಗಳ ನ್ಯಾಯಾಲಯದ ಸೂಚನೆ ಮೇರೆಗೆ ತನಿಖೆ ನಡೆಯುತ್ತಿದೆ.

ಹಾಸನ ಜಿಲ್ಲೆಯಲ್ಲಿ ಒಟ್ಟು 1,077 ಪ್ರಕರಣಗಳಲ್ಲಿ 4,308 ಎಕರೆ ಅಕ್ರಮವಾಗಿ ಮಂಜೂರಾತಿ ಆಗಿದ್ದು, 596 ಪ್ರಕರಣಗಳಲ್ಲಿ 2343.19 ಎಕರೆ ಅರಣ್ಯ ಪ್ರದೇಶಗಳಲ್ಲಿ ಅಕ್ರಮ ಮಂಜೂರು ಮಾಡಿರುವುದು ಪತ್ತೆಯಾಗಿದೆ.

ಹುಲಿ ಕಾಡಿಗೂ ಕನ್ನ: ರಕ್ಷಿತಾರಣ್ಯ, ಮೀಸಲು ಅರಣ್ಯ, ಹುಲಿ ಸಂರಕ್ಷಿತ ಪ್ರದೇಶದಲ್ಲೂ ಅಕ್ರಮವಾಗಿ ಭೂಮಂಜೂರಾತಿ ಮಾಡಿರುವ ಉದಾಹರಣೆಗಳಿವೆ. ಪರಿಭಾವಿತ ಅರಣ್ಯ ಪ್ರದೇಶವನ್ನು ಸಂರಕ್ಷಿತ ಅರಣ್ಯ ಪ್ರದೇಶ ಎಂದು ಘೋಷಿಸಲು ಅರಣ್ಯ ಇಲಾಖೆ ಸೆಕ್ಷನ್ 4ರಿಂದ ಸೆಕ್ಷನ್ 17ರ ತನಕ ಪ್ರಕ್ರಿಯೆಗಳನ್ನು ನಡೆಸುತ್ತದೆ. 30–40 ವರ್ಷಗಳಿಂದ ಈ ಪ್ರಕ್ರಿಯೆ ಬಾಕಿ ಉಳಿದುಕೊಂಡಿವೆ.

ಸೆಕ್ಷನ್ 4 ಜಾರಿಯಾಗಿದ್ದರೆ ಆ ಭೂಮಿಯನ್ನು ಕಂದಾಯ ಇಲಾಖೆ ಸಾಗುವಳಿದಾರರಿಗೆ ಮಂಜೂರು ಮಾಡಲು ಅರಣ್ಯ ಕಾಯ್ದೆಯಲ್ಲಿ ಅವಕಾಶ ಇಲ್ಲ. ಅದರೆ, ಹಲವೆಡೆ ಅರಣ್ಯ ಜಾಗವನ್ನೇ ಮಂಜೂರು ಮಾಡಿಕೊಡಲಾಗಿದೆ.

ಕಂದಾಯ ಭೂಮಿ ಎಂದು ನಕ್ಷೆ ಸಿದ್ಧಪಡಿಸಿ, ಕಂದಾಯ ಅಧಿಕಾರಿಗಳ ವರದಿ ಪಡೆದು ತಹಶೀಲ್ದಾರ್‌ಗಳು ಮಂಜೂರು ಮಾಡಿಕೊಟ್ಟಿರುವ ಪ್ರಕರಣಗಳಿವೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಹುಲಿ ಸಂರಕ್ಷಿತ ಪ್ರದೇಶದಲ್ಲೂ ಅಕ್ರಮವಾಗಿ ಮಂಜೂರು ಮಾಡಿಕೊಟ್ಟಿರುವ ಉದಾಹರಣೆಗಳಿವೆ. ಈ ಪ್ರಕರಣದಲ್ಲಿ ಕಡೂರಿನ ಹಿಂದಿನ ತಹಶೀಲ್ದಾರ್ ಒಬ್ಬರ ಬಂಧನ ಕೂಡ ಆಯಿತು.

ಕಂದಾಯ ಭೂಮಿ ಎಂಬ ನೆಪದಲ್ಲಿ ಅರಣ್ಯದ ಒಳಗಿನ ಜಾಗವನ್ನು ಅಕ್ರಮವಾಗಿ ಮಂಜೂರು ಮಾಡಿರುವ ಪ್ರಕರಣಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಹೆಚ್ಚಾಗಿಯೇ ಇವೆ. ಬೆಳ್ತಂಗಡಿ ತಾಲ್ಲೂಕೊಂದರಲ್ಲೇ ಈ ಅಕ್ರಮ ಅವ್ಯಾಹತವಾಗಿ ನಡೆದಿದೆ.

ಭೂ ರಹಿತರು ಎಂದು ಹೇಳಿಕೊಂಡು ಅನೇಕರಿಗೆ ಜಾಗವನ್ನು ಮಂಜೂರು ಮಾಡಲಾಗಿದೆ. ಆದರೆ, ಈ ಪೈಕಿ ಯಾರೂ 'ಅರ್ಹತೆ' ಹೊಂದಿದವರು ಇಲ್ಲ. ಕೆಳಭಾಗದಲ್ಲಿ ಎಕರೆಗಟ್ಟಲೆ ಅಡಿಕೆ ತೋಟ ಇದ್ದವರು ಮೇಲ್ಭಾಗದ ಕಾನನದಲ್ಲಿ ಭೂಮಿ ಪಡೆದುಕೊಂಡು ಅರಣ್ಯ ನಾಶಕ್ಕೆ ಮುಂದಾಗಿದ್ದಾರೆ ಎಂದು ಹೇಳುತ್ತಾರೆ ಪರಿಸರ ಹೋರಾಟಗಾರರು. ಕಂದಾಯ ಮತ್ತು ಅರಣ್ಯ ಭೂಮಿಯಯ ಅಕ್ರಮ ಮಂಜೂರಾತಿ ಪ್ರಕರಣಗಳಲ್ಲಿ ತನಿಖೆ ಚುರುಕುಗೊಳಿಸಬೇಕು. ಅಕ್ರಮಗಳಲ್ಲಿ ಭಾಗಿಯಾದ ಅಧಿಕಾರಿಗಳು ಹಾಗೂ ವ್ಯಕ್ತಿಗಳಿಗೆ ಶಿಕ್ಷೆ ಆಗದಿದ್ದರೆ ಕಂದಾಯ ಇಲಾಖೆ ಈಗಿರುವ ಅಪಖ್ಯಾತಿಯ ಜೊತೆಗೆ ಮತ್ತಷ್ಟು ಕುಖ್ಯಾತಿಗೆ ಗುರಿಯಾಗುತ್ತದೆ.

ಪೂರಕ ಮಾಹಿತಿ: ಚಿದಂಬರ ಪ್ರಸಾದ, ವಿಕ್ರಂ ಕಾಂತಿಕೆರೆ, ಮನೋಜಕುಮಾರ್ ಗುದ್ದಿ, ಸೂರ್ಯನಾರಾಯಣ ವಿ.,

ಕಂದಾಯ, ಅರಣ್ಯ ಭೂಮಿ ಗೊಂದಲಕ್ಕಿಲ್ಲ ಪರಿಹಾರ

ದಶಕಗಳ ಹಿಂದೆ ಸಾಗುವಳಿ ಉದ್ದೇಶಕ್ಕೆ ನಿರ್ದಿಷ್ಟ ಸಮುದಾಯಗಳು, ರೈತರಿಗೆ ಹಂಚಿಕೆ ಮಾಡಿರುವ ಅರಣ್ಯ ಭೂಮಿಯ ಮಾಲೀಕತ್ವದ ಗೊಂದಲ ರಾಜ್ಯದಾದ್ಯಂತ ಇದೆ. ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ ನಡುವಿನ ಸಮನ್ವಯ ಕೊರತೆಯಿಂದ ಈ ಸಮಸ್ಯೆ ಬಗೆಹರಿಯುತ್ತಿಲ್ಲ.

ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿ ಅರಣ್ಯ ಒತ್ತುವರಿಯಾಗಿರುವುದನ್ನು ಜಂಟಿ ಸರ್ವೆ ನಡೆಸಿ ಗುರುತಿಸಿ ಎರಡು ವರ್ಷಗಳಾಗುತ್ತಾ ಬಂದರೂ ಯಾವುದೇ ಕ್ರಮವಾಗಿಲ್ಲ. 2021ರ ಆಗಸ್ಟ್‌ನಲ್ಲಿ ಜಿಲ್ಲಾಡಳಿತವು ಅರಣ್ಯ ಹಾಗೂ ಕಂದಾಯ ಇಲಾಖೆಯ ಮೂಲಕ ಜಂಟಿ ಸರ್ವೆ ನಡೆಸಿತ್ತು. ಬಿಳಿಗಿರಿರಂಗನಬೆಟ್ಟದ ಸರ್ವೆ ನಂಬರ್ 1, 2, 3 ಮತ್ತು 4ರಲ್ಲಿ ಒಟ್ಟು 605.26 ಎಕರೆ ಪ್ರದೇಶದ ಸರ್ವೆ ನಡೆಸಲಾಗಿತ್ತು. ಸರ್ವೆ ನಂಬರ್ 4ರಲ್ಲೇ 147.28 ಎಕರೆ ಜಮೀನು ಒತ್ತುವರಿಯಾಗಿರುವುದನ್ನು ಸರ್ವೆ ಪತ್ತೆ ಹಚ್ಚಿತ್ತು. ಜಂಟಿ ಸರ್ವೆ ವರದಿ ಬಂದರೂ ಇನ್ನೂ ಒತ್ತುವರಿ ತೆರವು ನಡೆದಿಲ್ಲ. ಒತ್ತುವರಿ ಮಾಡಿಕೊಂಡವರಲ್ಲಿ ಪ್ರಭಾವಿಗಳಿದ್ದಾರೆ. ಸೋಲಿಗರ ಅಭಿವೃದ್ಧಿಯಲ್ಲಿ ತೊಡಗಿದ್ದವರ ಹೆಸರೂ ಇದೆ. ಈ ಮಧ್ಯೆ, ಪ್ರಭಾವಿಗಳನ್ನು ಬಿಟ್ಟು, ತಮ್ಮನ್ನು ಒಕ್ಕಲೆಬ್ಬಿಸಲಾಗುತ್ತಿದೆ ಎಂದು ಸೋಲಿಗರು ಹೋರಾಟ ಆರಂಭಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಇದೀಗ ಜಂಟಿ ಸರ್ವೆ ಕಾರ್ಯ ಆರಂಭವಾಗಿದೆ. ಸದ್ಯಕ್ಕೆ ಪೂರ್ಣಗೊಳ್ಳುವ ಲಕ್ಷಣ ಕಾಣಿಸುತ್ತಿಲ್ಲ. ಅರಣ್ಯ ಮತ್ತು ಕಂದಾಯ ಇಲಾಖೆ ನಡುವಿನ ಗೊಂದಲ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಇತ್ಯರ್ಥ ಆಗಲಿಲ್ಲ.

ಚಿತ್ರ: ಭಾವು ಪತ್ತಾರ್

ವರದಿ ಈಗ ಧೂಳು ಹಿಡಿಯುತ್ತಿದೆ

ಎನ್.ಮಂಜುನಾಥ್

'ನಾನು ಕೊಟ್ಟ ದೂರು ಆಧರಿಸಿ ನಡೆದಿರುವ ತನಿಖಾ ವರದಿ ಈಗ ಸರ್ಕಾರದ ಮುಂದೆ ಧೂಳು ಹಿಡಿಯುತ್ತಿದೆ' ಎಂದು ರೈತ ಮುಖಂಡ ಎನ್.ಮಂಜುನಾಥ್ ಹೇಳಿದರು.

'ಕಂದಾಯ ಸಚಿವ ಕೃಷ್ಣ ಬೈರೇಗೌಡ ಮತ್ತು ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದರ್‌ಕುಮಾರ್ ಕಟಾರಿಯಾ ಆರಂಭದಲ್ಲಿ ಶೂರತ್ವ ತೋರಿಸಿದ್ದರು. ಮೂಡಿಗೆರೆ ಮತ್ತು ಕಡೂರು ತಾಲ್ಲೂಕಿನ ಅಕ್ರಮಗಳ ಬಗ್ಗೆ ತಹಶೀಲ್ದಾರ್‌ಗಳ ತಂಡ ಕಳುಹಿಸಿ ತನಿಖೆ ಮಾಡಿಸಿದರು' ಎಂದರು. 'ಅಕ್ರಮ ಮಂಜೂರಾತಿ ಮಾಡಿಸಿಕೊಂಡವರಲ್ಲಿ ಪ್ರಭಾವಿಗಳೇ ಹೆಚ್ಚಿದ್ದಾರೆ. ಆದ್ದರಿಂದ ಮುಚ್ಚಿಹಾಕುವ ಪ್ರಯತ್ನ ಈಗ ನಡೆದಿದೆ. ಪ್ರಮಾಣಿಕವಾಗಿ ವಿಚಾರಣೆ ನಡೆಸುತ್ತಿದ್ದ ಉಪವಿಭಾಗಾಧಿಕಾರಿ ರಾಜೇಶ್ ಅವರನ್ನೂ ಪ್ರಭಾವಿಗಳು ವರ್ಗಾವಣೆ ಮಾಡಿಸಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸೆಕ್ಷನ್ 17 ಎಂದರೇನು?

ಅರಣ್ಯ ಕಾಯ್ದೆ ಸೆಕ್ಷನ್ 4ನಲ್ಲಿರುವ ಅಧಿಕಾರ ಬಳಸಿ ಕಂದಾಯ ಭೂಮಿಯನ್ನು ಅರಣ್ಯ ವ್ಯಾಪ್ತಿಗೆ ಪಡೆದುಕೊಳ್ಳುವ ಪ್ರಾಥಮಿಕ ಅಧಿಸೂಚನೆಯನ್ನು ಅರಣ್ಯ ಇಲಾಖೆ ಪ್ರಕಟಿಸುತ್ತದೆ. ಒಮ್ಮೆ ಸೆಕ್ಷನ್ 4 ಜಾರಿಯಾದರೆ ಆ ಜಾಗವನ್ನು ಕಂದಾಯ ಇಲಾಖೆ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗೆ ಮಂಜೂರು ಮಾಡುವಂತಿಲ್ಲ.

ಬಳಿಕ ಸೆಕ್ಷನ್ 5ರ ಪ್ರಕಾರ ಆಕ್ಷೇಪಣೆಗಳನ್ನು ಅರಣ್ಯ ವ್ಯವಸ್ಥಾಪನ ಅಧಿಕಾರಿ(ಎಫ್‌ಎಸ್‌ಒ) ಕೋರುತ್ತಾರೆ. ಆಕ್ಷೇಪಣೆಗಳಿದ್ದರೆ ದಾಖಲೆಗಳನ್ನು ತರೆಸಿ ವಿಚಾರಣೆ ನಡೆಸುತ್ತಾರೆ. ಹಂತ –ಹಂತವಾಗಿ ವಿಚಾರಣೆ ನಡೆಸಿ ಅಂತಿಮವಾಗಿ ಯಾವೆಲ್ಲಾ ಕಾರಣಗಳಿಂದ ಕಂದಾಯ ಭೂಮಿಯನ್ನು ಅರಣ್ಯ ವ್ಯಾಪ್ತಿಗೆ ಪಡೆದುಕೊಳ್ಳಲಾಗುತ್ತಿದೆ ಎಂಬುದುನ್ನು ವಿವರಿಸಿ ಸೆಕ್ಷನ್ 17 ಜಾರಿಗೊಳಿಸುತ್ತಾರೆ. ಒಮ್ಮೆ ಸೆಕ್ಷನ್ 17ರ ಪ್ರಕಾರ ಅಧಿಸೂಚನೆ ಹೊರಡಿಸಿರೆ ಅದು ಸಂಪೂರ್ಣವಾಗಿ ಅರಣ್ಯ ವ್ಯಾಪ್ತಿಗೆ ಸೇರ್ಪಡೆಯಾದಂತೆ.

ಅರಣ್ಯ ಒತ್ತುವರಿ: ರಾಜ್ಯಕ್ಕೆ ಎರಡನೇ ಸ್ಥಾನದ ಅಪಖ್ಯಾತಿ

ಕರ್ನಾಟಕದಲ್ಲಿ 76,196 ಹೆಕ್ಟೇರ್ ಅರಣ್ಯ ಒತ್ತುವರಿಯಾಗಿದೆ ಎಂಬ ಮಾಹಿತಿಯನ್ನು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ತಿಳಿಸಿತ್ತು.

ಇತ್ತೀಚೆಗೆ ಲೋಕಸಭೆಗೆ ಲಿಖಿತ ಉತ್ತರ ನೀಡುವಾಗ ಅಸ್ಸಾಂ ಬಿಟ್ಟರೆ ಹೆಚ್ಚು ಅರಣ್ಯ ಒತ್ತುವರಿಯಾಗಿರುವುದು ಕರ್ನಾಟಕದಲ್ಲೇ ಎಂದು ವಿವರಿಸಿತ್ತು. ಕರ್ನಾಟಕದಲ್ಲಿ ಅರಣ್ಯ ಅತಿಕ್ರಮಣ ಪ್ರಕರಣಗಳು ಹೆಚ್ಚುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠವು ರಾಜ್ಯ ಸರ್ಕಾರಕ್ಕೆ ಚಾಟಿ ಬೀಸಿತ್ತು. 'ಸರ್ವೆ ಕಾರ್ಯ ಕೈಗೊಂಡ ಬಳಿಕ ನಿರ್ದಾಕ್ಷಿಣ್ಯವಾಗಿ ಒತ್ತುವರಿ ತೆರವುಗೊಳಿಸಬೇಕು. ಅತಿಕ್ರಮಣದಿಂದ ಅರಣ್ಯಕ್ಕೆ ಹಾನಿಯಾಗಿದ್ದರೆ ಯಾವುದೇ ವಿಳಂಬವಿಲ್ಲದೆ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ತಿಳಿಸಿತ್ತು.

ಈಗ ತನಿಖೆ ನಡೆದಿರುವ ಕಡೆ ಮಾತ್ರವಲ್ಲ, ಎಲ್ಲಾ ಕಡೆಯೂ ಅಕ್ರಮ ಮಂಜೂರಾತಿ ನಡೆದಿವೆ. ಹಿಂದಿನ ಹತ್ತು ವರ್ಷಗಳ ಅವಧಿಯ ಮಂಜೂರಾತಿ ಬಗ್ಗೆ ಕಂದಾಯ ಇಲಾಖೆ ಉನ್ನತ ಮಟ್ಟದ ತನಿಖೆ ನಡೆಸಬೇಕು. ಆಗ ಎಲ್ಲವೂ ಬಹಿರಂಗವಾಗಲಿದೆ.

ಗುರುಶಾಂತಪ್ಪ
ರೈತ ಸಂಘದ ಚಿಕ್ಕಮಗಳೂರು ಜಿಲ್ಲಾ ಘಟಕದ ಅಧ್ಯಕ್ಷ

ಉತ್ತರಾಖಂಡ: ಕಾಳ್ಗಿಚ್ಚು ನಂದಿಸಲು ವಾಯುಪಡೆ ಹೆಲಿಕಾಪ್ಟರ್ ನೆರವು

ಉತ್ತರಾಖಂಡದ ನೈನಿತಾಲ್ ಜಿಲ್ಲೆಯ ಅರಣ್ಯದಲ್ಲಿ ವ್ಯಾಪಿಸಿರುವ ಕಾಳ್ಗಿಚ್ಚು ನಂದಿಸಲು ವಾಯುಪಡೆ ಹೆಲಿಕಾಪ್ಟರ್ ನೆರವು ಪಡೆಯಲಾಯಿತು –ಪಿಟಿಐ ಚಿತ್ರ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದ ನೈನಿತಾಲ್ ಜಿಲ್ಲೆಯ ಅರಣ್ಯ ಪ್ರದೇಶವನ್ನು ವ್ಯಾಪಿಸಿರುವ ಕಾಳ್ಗಿಚ್ಚು ನಂದಿಸಲು ರಾಜ್ಯ ಸರ್ಕಾರ ವಾಯುಪಡೆಯ ಹೆಲಿಕಾಪ್ಟರ್ ನೆರವು ಪಡೆದಿದೆ.

ಬೆಂಕಿಯು ಪೈನ್ಸ್ ವಲಯದ ಹೈಕೋರ್ಟ್ ಕಾಲೊನಿ ಪ್ರದೇಶವನ್ನೂ ವ್ಯಾಪಿಸಿದ್ದು, ಪರಿಸ್ಥಿತಿಯು ಗಂಭೀರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಂಐ–17 ಹೆಲಿಕಾಪ್ಟರ್ ನೆರವಿನಿಂದ ಭೀಮ್‌ತಾಲ್ ಕೆರೆಯಿಂದ ನೀರು ಸಂಗ್ರಹಿಸಿ ಬೆಂಕಿ ವ್ಯಾಪಿಸಿರುವ ಪೈನ್ಸ್, ಭೂಮಿಯಾಧರ್, ನಾರಾಯಣ ನಗರ, ಭವಾಲಿ, ರಾಮಗಢ ಪ್ರದೇಶಗಳಲ್ಲಿ ಸಿಂಪಡಿಸಲಾಗುತ್ತಿದೆ.

ಕಾಳ್ಗಿಚ್ಚು ನಂದಿಸಲು ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಆದಷ್ಟು ಶೀಘ್ರದಲ್ಲಿಯೇ ಬೆಂಕಿ ನಿಯಂತ್ರಣಕ್ಕೆ ಬರುವ ವಿಶ್ವಾಸವಿದೆ ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ತಿಳಿಸಿದ್ದಾರೆ.

'ಈಗಾಗಲೇ ವಾಯುಪಡೆ ಹೆಲಿಕಾಪ್ಟರ್‌ನ ಸೇವೆ ಪಡೆಯಲಾಗಿದೆ. ಬೆಂಕಿ ಹೊತ್ತಿಸಲು ಯತ್ನಿಸಿದ್ದ ಆರೋಪದಡಿ ಮೂವರನ್ನು ಬಂಧಿಸಲಾಗಿದೆ. ಪರಿಸ್ಥಿತಿಯನ್ನು ಅವಲೋಕಿಸಲು ಶೀಘ್ರದಲ್ಲಿಯೇ ಅರಣ್ಯಾಧಿಕಾರಿಗಳ ಸಭೆಯನ್ನು ಕರೆಯಲಿದ್ದೇನೆ' ಎಂದು ಅವರು ತಿಳಿಸಿದರು.

'2ಜಿ ತರಂಗಾಂತರ ಹಂಚಿಕೆ: ಮೋದಿ ಸರ್ಕಾರದ್ದು ಬೂಟಾಟಿಕೆ'

ನವದೆಹಲಿ (ಪಿಟಿಐ): 2ಜಿ ತರಂಗಾಂತರ ಹಂಚಿಕೆ ಪ್ರಕರಣದ ತೀರ್ಪಿನ ಪರಿಷ್ಕರಣೆ ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿರುವ ಮೋದಿ ಸರ್ಕಾರದ ನಡೆಯ ಕುರಿತು ಕಾಂಗ್ರೆಸ್ ಪಕ್ಷ ಟೀಕಿಸಿದೆ.



ಜೈರಾಮ್ ರಮೇಶ್

'ಮೋದಿ ಸರ್ಕಾರ ಮತ್ತು ಬಿಜೆಪಿಯ ಬೂಟಾಟಿಕೆಗೆ ಎಲ್ಲೆಯೇ ಇಲ್ಲ. ಮನಮೋಹನ್ ಸಿಂಗ್ ಸರ್ಕಾರವಿದ್ದಾಗ, ಆಡಳಿತಾತ್ಮಕ ಹಂಚಿಕೆಯನ್ನೇ ಹಗರಣ ಎಂದಿದ್ದರು. ಈಗ ಅದರ ವಿರುದ್ಧವಾಗಿ ಮಾತನಾಡುತ್ತಿದ್ದಾರೆ. ಹರಾಜು ಇಲ್ಲದೆಯೇ ತರಂಗಾಂತರ ಹಂಚಿಕೆಗೆ ಅನುಮತಿ ನೀಡುವಂತೆ ಈಗ ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿದ್ದಾರೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಪ್ರತಿಕ್ರಿಯಿಸಿದ್ದಾರೆ.

ಪ್ರಾಕೃತಿಕ ಸಂಪನ್ಮೂಲಗಳ ವರ್ಗಾವಣೆ ವೇಳೆ ರಾಜ್ಯಗಳು ಹರಾಜು ಮಾಡುವ ಮಾರ್ಗ ಅನುಸರಿಸಬೇಕು ಎಂದು ಸುಪ್ರೀಂ ಕೋರ್ಟ್, '2ಜಿ ತರಂಗಾಂತರ ಹಂಚಿಕೆ' ಪ್ರಕರಣದಲ್ಲಿ ತೀರ್ಪು ನೀಡಿತ್ತು. ಈ ತೀರ್ಪಿನ ಪರಿಷ್ಕರಣೆ ಕೋರಿ ಕೇಂದ್ರ ಸರ್ಕಾರ ಸೋಮವಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ಗುಂಡಣ್ಣ

25 ವರ್ಷಗಳ ಹಿಂದೆ

ಬುಧವಾರ, 28-4-1999

● ಲೋಕಸಭೆ ಜತೆಯಲ್ಲೇ ವಿಧಾನಸಭಾ ಚುನಾವಣೆ

ನವದೆಹಲಿ, ಏ. 27– ಕರ್ನಾಟಕ ವಿಧಾನಸಭೆಯ ಅವಧಿ ನವೆಂಬರ್‌ವರೆಗೂ ಇದೆಯಾದರೂ ಲೋಕಸಭೆ ಚುನಾವಣೆ ಜೊತೆಗೇ ರಾಜ್ಯ ವಿಧಾನಸಭೆ ಚುನಾವಣೆ ನಡೆಯುವ ಸಾಧ್ಯತೆಯೇ ಹೆಚ್ಚಾಗಿದೆ.

ಇನ್ನು 6 ತಿಂಗಳೊಳಗೆ ಯಾವುದೇ ರಾಜ್ಯದ ವಿಧಾನಸಭೆ ಅವಧಿ ಮುಕ್ತಾಯವಾಗುವುದಿದ್ದರೆ ಆಯಾ ರಾಜ್ಯಗಳಲ್ಲಿ ಲೋಕಸಭೆ ಚುನಾವಣೆ ಜೊತೆಗೇ ರಾಜ್ಯ ವಿಧಾನಸಭೆ ಚುನಾವಣೆ ನಡೆಸುವ ಅಧಿಕಾರ ಚುನಾವಣಾ ಆಯೋಗಕ್ಕೆ ಇರುವುದರಿಂದ ದೇಶದ ಕೆಲವು ರಾಜ್ಯಗಳಲ್ಲಿ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆ ಒಟ್ಟಿಗೇ ನಡೆಯುವ ಸಂಭವ ಇದೆ.

50 ವರ್ಷಗಳ ಹಿಂದೆ

ಭಾನುವಾರ, 28-4-1974

● ಸಚಿವ ರಂಗನಾಥ್ ಕಾರಿನ ಮೇಲೆ ಹಲ್ಲೆ: ಅಧಿಕಾರಿಗಳಿಗೆ ಪೆಟ್ಟು

ಬೆಂಗಳೂರು, ಏ. 27– ಇಂದು ಇಲ್ಲಿಗೆ 22 ಮೈಲಿ ದೂರದ ಕಲ್ಲಡ್ಕದಲ್ಲಿ ಆಹಾರ ಧಾನ್ಯ ಸಾಗಣೆ ನಿರ್ಬಂಧದ ವಿರುದ್ಧ ಪ್ರದರ್ಶನ ನಡೆಸಿದ ಜನಸಂಘ ಸ್ವಯಂಸೇವಕರು ಹಿಂಸಾಕೃತ್ಯಗಳಲ್ಲಿ ತೊಡಗಿ ಪುತ್ತೂರಿನಿಂದ ಬರುತ್ತಿದ್ದ ಸಾರಿಗೆ ಸಚಿವ ಕೆ.ಎಚ್. ರಂಗನಾಥ್ ಅವರ ಕಾರಿನ ಮೇಲೆ ಕಲ್ಲು ತೂರಿ ಹಲ್ಲೆ ನಡೆಸಿದರು.

ಕಲ್ಲುತೂರಾಟದಿಂದ ಕಾರಿನ ಗಾಜು ನುಚ್ಚು ನೂರಾಗಿದ್ದು, ಸಚಿವ ರಂಗನಾಥ್ ಆಶ್ಚರ್ಯಕರ ರೀತಿಯಲ್ಲಿ ಅಪಾಯದಿಂದ ಪಾರಾದರು. ಸಚಿವರ ಆಪ್ತ ಸಹಾಯಕ ದೊರೆಸ್ವಾಮಿ ಅವರ ಕಣ್ಣಿಗೆ ಪೆಟ್ಟಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಏಪ್ರಿಲ್ 28, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಚತುರ್ಥಿ ಗಂ. 8-22 **ನಕ್ಷತ್ರ:** ಮೂಲ ಗಂ. 28-49 **ಯೋಗ:** ಶಿವ ಗಂ. 26-06 **ಕರಣ:** ಬಾಲವ ಗಂ. 8-22, ಮೇಷ ಮಾಸದ 16 ನೇ ದಿನ, **ಮಳೆನಕ್ಷತ್ರ:** ಭರಣಿ 1.
ರಾಹುಕಾಲ : ಸಾಯಂಕಾಲ 04-30 - 06-00
ಸೂರ್ಯೋದಯ : 06-14 **ಸೂರ್ಯಾಸ್ತ :** 06-42
ಮುಸ್ಲಿಂ ದಿನಾಂಕ : 18 ಶವ್ವಾಲ್
ಅದೃಷ್ಟ ಸಂಖ್ಯೆ : 3, 6

ಮೇಷ: ಸಣ್ಣ ವಿಷಯಗಳಿಗೆ ಕೋಪಿಸಿಕೊಳ್ಳುವ ನಿಮ್ಮ ಪ್ರವೃತ್ತಿಯಿಂದಾಗಿ ನೀವು ಹಿರಿಯರ ಕೋಪಕ್ಕೆ ಗುರಿಯಾಗುವ ಸಾಧ್ಯತೆಗಳಿವೆ. ಅರ್ಥಶಾಸ್ತ್ರಜ್ಞರಿಗೆ ನಿಮ್ಮ ಹಿಂದಿನ ಸಾಧನೆಗಳನ್ನು ಗುರುತಿಸಿ ಸರ್ಕಾರದಿಂದ ಕರೆ ಬರಲಿದೆ.

ವೃಷಭ: ಮಾರ್ಗಮಧ್ಯದಲ್ಲಿ ಎದುರಾದ ಸಮಸ್ಯೆಯನ್ನು ಪರಿಹರಿಸಲು ಬಾಲ್ಯದ ಸ್ನೇಹಿತನ ಸಹಾಯ ಕೇಳಿದರೆ ಪರಿಹಾರವಾಗುವುದು. ಯಾವ ಯೋಚನೆ ಮಾಡದೆ ಶ್ರೀ ವಿಷ್ಣುಸಹಸ್ರನಾಮ ಪಠಣ ಮಾಡಿ, ಶುಭವಾಗುವುದು.

ಮಿಥುನ: ತಂತ್ರಜ್ಞಾನದ ಈ ಕಾಲದಲ್ಲಿ ನಿಮ್ಮ ಅಳಿವಿನಂಚಿನಲ್ಲಿರುವ ವಿದ್ಯೆಗೆ ಬೆಲೆ ಇಲ್ಲವೆಂದು ನೀವು ತಿಳಿದಿದ್ದಲ್ಲಿ ನಿಮ್ಮ ನಂಬಿಕೆ ಹುಸಿಯಾಗುವ ಹಾಗೆ ನಿಮ್ಮನ್ನರಸಿ ಅವಕಾಶಗಳು ಬರಲಿವೆ. ನಿಮ್ಮ ಗಮನವನ್ನು ಒಂದೇ ಕಡೆಗೆ ಕೇಂದ್ರೀಕರಿಸಿ.

ಕರ್ಕಾಟಕ: ಕೋಟಿಗಟ್ಟಲೆ ವ್ಯವಹಾರ ನಡೆಸುವವರು ಮನೆಯ ಕಾರ್ಯಕ್ರಮದಲ್ಲಿ ಕೃಪಣತೆ ತೋರಿಸುವುದು ಬೇಡ. ದೃಷ್ಟಿ ದೋಷಕ್ಕೆ ಸೂಕ್ತ ವೈದ್ಯರನ್ನು ಭೇಟಿ ಮಾಡಿ ಪರಿಹರಿಸಿಕೊಳ್ಳಿ. ಮೊಮ್ಮಕ್ಕಳು ಸಂತೋಷಕ್ಕೆ ಕಾರಣವಾಗಲಿದ್ದಾರೆ.

ಸಿಂಹ: ಸಾಂಕ್ರಾಮಿಕ ರೋಗದಿಂದ ಬಳಲುತ್ತಿದ್ದವರ ಆರೋಗ್ಯದಲ್ಲಿ ಚೇತರಿಕೆ ಕಂಡುಬರುತ್ತದೆ. ಇತರರಿಗೆ ಅಸೂಯೆ ಉಂಟಾಗದಂತೆ ಕಾರ್ಯ ಸಾಧಿಸಿಕೊಳ್ಳುವುದು ಉತ್ತಮ. ಮನೆಯ ಹೊರಗಿನ ಆಹಾರ ಸೇವನೆ ಬೇಡ.

ಕನ್ಯಾ: ಅಣ್ಣತಂಗಿಯರ ನಡುವೆ ಸಂಬಂಧಗಳು ಗಟ್ಟಿಯಾಗುವಂಥ ವಿಶೇಷ ವಿಚಾರಗಳು ನಡೆಯುವ ಸಾಧ್ಯತೆಗಳಿವೆ. ಚಲನ ಚಿತ್ರರಂಗದವರಿಗೆ ಅಥವಾ ಅಭಿನಯಿಸುವ ಕಲಾವಿದರುಗಳಿಗೆ ಒಳ್ಳೆಯ ಖ್ಯಾತಿ ದೊರೆಯುವುದು.

ತುಲಾ: ಅತೀಂದ್ರಿಯ ಶಕ್ತಿಯೋ ಎಂಬಂತೆ ಇಂದು ನಿಮಗೆ ಅಪಾಯಗಳಾಗುವ ಸಂಭವವಿದ್ದಲ್ಲಿ ಅವುಗಳ ಮುನ್ಸೂಚನೆ ದೊರೆಯುತ್ತವೆ. ನಿಮ್ಮ ದೀರ್ಘಕಾಲಿಕ ಅನಾರೋಗ್ಯದ ಸಮಸ್ಯೆಗಳಿಗೆ ಮಗಳಿಂದ ಪರಿಹಾರದ ದಾರಿಗಳು ಕಾಣುತ್ತವೆ.

ವೃಶ್ಚಿಕ: ಅತಿಯಾದ ಔದಾರ್ಯತನ ತೋರಬೇಕೆನಿಸಿದಲ್ಲಿ ನಿಮ್ಮ ಹಣಕಾಸಿನ ಸ್ಥಿತಿಯನ್ನು ಒಮ್ಮೆ ಗಮನಿಸಿಕೊಳ್ಳುವುದು ಉತ್ತಮ. ಚಲಾವಣೆಯಲ್ಲಿಲ್ಲದ ರೀತಿ ನೀತಿಗಳನ್ನು ಪಾಲಿಸುತ್ತಿರುವವರನ್ನು ನೋಡಿ ಬೆರಗಾಗುವಿರಿ.

ಧನು: ನೀವು ಮೇಲಧಿಕಾರಿಗಳಿಗೆ ಸಲ್ಲಿಸಿದ ಅರ್ಜಿ ಇನ್ನೂ ಮುಂದುವರಿಯದೆ ಇರುವುದು ನಿಮ್ಮ ಮನಸ್ಸನ್ನು ಘಾಸಿಗೊಳಿಸಬಹುದು. ಬೆಂಕಿಯಿಂದ ಸಂಭವಿಸುವಂಥ ತೊಂದರೆಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸಿ.

ಮಕರ: ಕಚೇರಿಯಲ್ಲಿ ತಪ್ಪು ತಿಳುವಳಿಕೆ ಅಥವಾ ಮಾತಿನ ಚಕಮಕಿಯಿಂದ ತಪ್ಪಿಸಿಕೊಳ್ಳಲು ನಿಮ್ಮ ನಿಲುವನ್ನು ಸ್ಪಷ್ಟವಾಗಿ ತಿಳಿಸಿ. ಷೇರು ಹೂಡಿಕೆದಾರರು ಉತ್ತಮವಾಗಿ ಪರಿಶೀಲಿಸಿದ ನಂತರವಷ್ಟೇ ಹೂಡಿಕೆಯನ್ನು ಮಾಡಿ.

ಕುಂಭ: ಕದಡಿದ ನಿಮ್ಮ ಮನಸ್ಸು ದೇವಸ್ಥಾನಗಳನ್ನು ಭೇಟಿ ಮಾಡುವ ನೆಪದಲ್ಲಿ ತಿಳಿಯಾಗುವುದು. ಸಹೋದರರ ಜೊತೆಗೆ ಮಾಡಿಕೊಂಡ ವ್ಯಾಜ್ಯವನ್ನು ಮೂರನೆ ವ್ಯಕ್ತಿಗಳು ಆಡಿಕೊಳ್ಳುವುದಕ್ಕಿಂತ ಮುಂಚೆ ಪರಿಹರಿಸಿಕೊಳ್ಳಿ.

ಮೀನ: ಆಯ್ಕೆ, ತೀರ್ಮಾನ ಮಾಡುವ ವಿಚಾರದಲ್ಲಿ ಮನಸ್ಸಿನ ಚಂಚಲ ಸ್ವಭಾವದಿಂದ ವಿಫಲರಾಗುವ ಸನ್ನಿವೇಶಗಳಿರುವುದು. ನೀವಾಡುವ ನಾಲ್ಕು ಒಳ್ಳೆಯ ಮಾತುಗಳು ಇಂದು ಒಬ್ಬರಿಗೆ ಸ್ಫೂರ್ತಿದಾಯಕವಾಗುವವು.

ಪದಬಂಧ 5664

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮರ್ಯಾದೆಯಿರುವ ವಸ್ತುಸ್ಥಿತಿ! (4)
3.ಮಧುರವಾಗಿರುವ ತುಟಿ (3)
4.ಬಿಡುವು ಈ ರೀತಿ ಬಂದಿದೆ (4)
6.ಒಗ್ಗಟ್ಟು ಇಲ್ಲಿ ಕಾಣುತ್ತಿದೆ (3)
8.ರಾತ್ರಿ ವೇಳೆ ಸಂಚರಿಸುವ ಕಳ್ಳ ಪಿಶಾಚಿ ಇತ್ಯಾದಿ (4)
9.ಪದ ಮತ್ತು ಅದರ ಅರ್ಥವನ್ನು ವಿವರಿಸುವ ಪುಸ್ತಕ (4)
11.ಗುರುಗುಟ್ಟುತ್ತಿರುವ ಗಂಡು ಕುರಿ (3)
14.ರಾಜಿಯಿದ್ದರೂ ಈತ ಸೋಲಿಸಲ್ಪಟ್ಟವನು (4)
16.ವ್ಯಾಜ್ಯಕ್ಕೊಂದು ಪರ್ಯಾಯ ಪದ (3)
17.ಮರದಲ್ಲಿರುವ ಹೆಬ್ಬಾಗಿಲು (4)

ಮೇಲಿಂದ ಕೆಳಕ್ಕೆ

1.ನೆತ್ತರು ಹರಿಸಿದಾಗಲೇ ವೈರಾಗ್ಯವುಳ್ಳವನು ಕಂಡಾನು! (3)
2.ವ್ಯಸನವೇಕೇ? ಇದು ಹೊಸತು! (2)
3.ಒಪ್ಪವಾಗಿ ಮರ್ಯಾದೆಯೊಡನಿರುವ ಶಂಕೆ (4)
5.ನಾಸಿಕಕ್ಕೇರಿಸಿಕೊಳ್ಳುವ ತಂಬಾಕಿನ ಹುಡಿ (2)
6.ನಯನಾಜೂಕು ಇಲ್ಲದವನು (3)
7.ತಂದೆತಾಯಿ ಇರುವ ಊರು (3)
10.ಮಲಗುವ ಮನೆ (4)
12.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
13.ಕೈ ಕೊನೆಗಿದ್ದರೆ ಕಾಣುವ ಮಿಶ್ರಣ (3)
15.ಕತ್ತಲು ಇಲ್ಲಿ ಆವರಿಸಿದೆ (2)



5663ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸುಖಾಸನ 3.ಹಲುಬೆ 5.ಗಲ್ಲಪ 7.ಉಸಿರು 8.ವಿರಹತಾಪ 11.ನಾರಣಿ 12.ಮಜ್ಜಿಗೆ 15.ಗಹ್ವರ 16.ನಡುವ್ರಾಯ

ಮೇಲಿಂದ ಕೆಳಕ್ಕೆ: 1.ಸುಯೋಗ 2.ನತ್ತು 3.ಹಗರು 4.ಬೆಣ್ಣೆಮಾತು 6.ಪಲ್ಲವಿ 7.ಉದಾಹರಣೆ 9.ಪರಮ 10.ಉಪ್ಪಲಿಗ 11.ನಾವಿರ 13.ಗೆಳೆಯ 14.ಜ್ಞಾನ

ಸುಡೊಕು 6049

2		8		7			6	
			4		2	3		1
	3	1		5			8	
6		4		3			5	
5	7	2	6		9			8
				2			4	
3				1			9	
	2	5	8			6		7
1				6			2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6048 ಸುಡೊಕು

9	5	3	8	6	4	7	1	2
7	4	6	1	3	2	9	5	8
8	1	2	7	5	9	6	3	4
2	8	7	6	1	5	4	9	3
3	6	4	2	9	7	1	8	5
5	9	1	4	8	3	2	7	6
6	7	5	3	4	1	8	2	9
4	2	9	5	7	8	3	6	1
1	3	8	9	2	6	5	4	7

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಗೆ ಮುಸ್ಲಿಮರ ಸೇರ್ಪಡೆ ವಿಷಯ ● ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ

‘ಸುಳ್ಳು ಜಾಹೀರಾತು, ಬಿಜೆಪಿ ವಿರುದ್ಧ ದೂರು’

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಗೆ ಮುಸ್ಲಿಮರ ಸೇರ್ಪಡೆ ವಿಷಯ ಕುರಿತು ಸರ್ಕಾರದ ವಿರುದ್ಧ ಪತ್ರಿಕೆಗಳಲ್ಲಿ ಸುಳ್ಳು ಜಾಹೀರಾತು ನೀಡಿರುವ ಬಿಜೆಪಿ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ನೀಡಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದರು.

‘ಮುಸ್ಲಿಮರ ಸೇರ್ಪಡೆ ವಿಷಯವು ಮಂಡಲ್ ವರದಿ ಆಧರಿಸಿ 30 ವರ್ಷಗಳ ಹಿಂದೆಯೇ ಆಗಿದೆ. ಇದನ್ನು ಸುಪ್ರೀಂಕೋರ್ಟ್‌ನ ಸಂವಿಧಾನ ಪೀಠವೂ ಒಪ್ಪಿದೆ. ಈ ಸತ್ಯ ಮರೆಮಾಚಿ ಬಿಜೆಪಿ ಸುಳ್ಳು ಜಾಹೀರಾತು ನೀಡಿದೆ’ ಎಂದು ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ತರಾಟೆಗೆ ತೆಗೆದುಕೊಂಡರು.

‘ಹಿಂದುಳಿದವರಿಗೆ ಸಿಗಬೇಕಿರುವ ಮೀಸಲಾತಿ ಕಿತ್ತು ನಮ್ಮ ಸರ್ಕಾರವೇ ಮುಸ್ಲಿಮರಿಗೆ ನೀಡಿದೆ ಎಂಬಂತೆ ಜಾಹೀರಾತಿನಲ್ಲಿ ಬಿಜೆಪಿ ಆರೋಪಿಸಿದೆ. ಇದು ಅಪ್ಪಟ ಸುಳ್ಳು. ಮುಸ್ಲಿಮರಿಗೆ ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಿಲ್ಲ. ಆಯೋಗದ ಶಿಫಾರಸಿನಂತೆ ಹಿಂದಿನ ಸರ್ಕಾರಗಳೇ ನೀಡಿವೆ’ ಎಂದು ವಿವರಿಸಿದರು.

‘ಬಸವರಾಜ ಬೊಮ್ಮಾಯಿ ಸಿ.ಎಂ ಆಗಿದ್ದಾಗ ಲಿಂಗಾಯತರು, ಒಕ್ಕಲಿಗರು ಹೆಚ್ಚಿನ ಮೀಸಲಾತಿಗೆ ಒತ್ತಾಯಿಸಿ ಪ್ರತಿಭಟಿಸಿದ್ದರು. ಆಗ ಬೊಮ್ಮಾಯಿ ಅವರು ಒಂದು ಸೂತ್ರ ರೂಪಿಸಿ ಮುಸ್ಲಿಮರ ಮೀಸಲಾತಿಯನ್ನು ಕಿತ್ತುಕೊಂಡು ಇವರಿಗೆ ಹಂಚಿದರು. ಇದನ್ನು ಪ್ರಶ್ನಿಸಿ ಕೆಲವರು ಕೋರ್ಟ್ ಮೆಟ್ಟಿಲೇರಿದರು. ಆಗ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದ್ದ ಬೊಮ್ಮಾಯಿ ಸರ್ಕಾರ ಮುಸ್ಲಿಮರಿಗೆ ಮೀಸಲಾತಿ ಮುಂದುವರಿಸುವುದಾಗಿ ಹೇಳಿತ್ತು. ಈಗ ನಮ್ಮ ಸರ್ಕಾರವನ್ನು ಟೀಕಿಸುವುದು ಎಷ್ಟು ಸರಿ’ ಎಂದು ಸಿದ್ದರಾಮಯ್ಯ ಹರಿಹಾಯ್ದರು.

‘ಹಾದಿ ತಪ್ಪಿಸುವ ಜಾಹೀರಾತು ನೀಡಿರುವ ಬಿಜೆಪಿ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ನೀಡುವಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಸೂಚಿಸಿದ್ದೇನೆ’ ಎಂದು ತಿಳಿಸಿದರು.

ಕೇಳಿದ ಕಾಲುಭಾಗವೂ ಪರಿಹಾರವಿಲ್ಲ: ಕಳೆದ ಡಿಸೆಂಬರ್ 19ರಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಬೆಳೆ ನಷ್ಟದ ಪರಿಹಾರವಾಗಿ ₹ 18,172 ಕೋಟಿ ಬರ ಪರಿಹಾರ ನೀಡುವಂತೆ ಮನವಿ ಮಾಡಿದ್ದೆ. ಆದರೆ, ಕೇವಲ ₹ 3,454 ಕೋಟಿ ಬಿಡುಗಡೆ ಮಾಡಿದ್ದಾರೆ. ಇದು ಯಾವುದಕ್ಕೂ ಸಾಕಾಗದು’ ಎಂದು ಸಿದ್ದರಾಮಯ್ಯ ಅವರು ಬೇಸರ ವ್ಯಕ್ತಪಡಿಸಿದರು.

ಪ್ರಜಾ ಮತ ಜನತಂತ್ರದ ಹಬ್ಬ

ಲೋಕಸಭಾ ಚುನಾವಣೆ - 2024

ರಾಜ್ಯದಲ್ಲಿ ಮೊದಲ ಹಂತದಲ್ಲಿ 14 ಕ್ಷೇತ್ರಗಳ ಪೈಕಿ 10 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಲಿದೆ. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು, ಅಭ್ಯರ್ಥಿಗಳಿಗೆ ಕರೆ ಮಾಡಿ ಮಾಹಿತಿ ಪಡೆದಿದ್ದೇನೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

‘ಮುಸ್ಲಿಮರಿಗೆ ಒಬಿಸಿ ಮೀಸಲಾತಿ ನಿಲ್ಲಿಸಿ’

ಹುಬ್ಬಳ್ಳಿ: ‘ಹಿಂದುಳಿದ ವರ್ಗಗಳ (ಒಬಿಸಿ) ಮೀಸಲಾತಿ ತೆಗೆದು ಮುಸ್ಲಿಮರಿಗೆ ಕೊಡುವುದನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ನಿಲ್ಲಿಸಬೇಕು. ಒಬಿಸಿಯಲ್ಲಿ ಮೀಸಲಾತಿ ನೀಡಲು ರಾಜ್ಯ ಸರ್ಕಾರ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಕೋರಿತ್ತು. ಅದನ್ನು ತಿರಸ್ಕರಿಸಿದ ಆಯೋಗವು ಮುಖ್ಯ ಕಾರ್ಯದರ್ಶಿಗೆ ನೋಟಿಸ್ ನೀಡಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಹೇಳಿದರು.

‘ರಾಜ್ಯದಲ್ಲಿ ಬೊಮ್ಮಾಯಿ ನೇತೃತ್ವದ ಸರ್ಕಾರ ಮೀಸಲಾತಿಯಲ್ಲಿ ಬದಲಾವಣೆ ಮಾಡಿ ಆದೇಶಿಸಿತ್ತು. ಮುಸ್ಲಿಮರಿಗೆ ಇದ್ದ ಶೇ 4ರಷ್ಟು ಮೀಸಲಾತಿಯನ್ನು ತೆಗೆದು ಪ್ರವರ್ಗ 3ಎ, 3ಬಿಗೆ ಹಂಚಿಕೆ ಮಾಡಿತ್ತು. ಅದನ್ನು ನಿಲ್ಲಿಸಿರುವುದು ಖಂಡನೀಯ’ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಸದ್ಯ ಪ್ರವರ್ಗ–1ಕ್ಕೆ ಶೇ 4, ಪ್ರವರ್ಗ–2ಎಗೆ ಶೇ 15, ಪ್ರವರ್ಗ 2ಬಿಗೆ ಶೇ 4, ಪ್ರವರ್ಗ 3ಎಗೆ ಶೇ 4 ಮತ್ತು 3ಬಿಗೆ ಶೇ 5ರಷ್ಟು ಮೀಸಲಾತಿ ಇದೆ. ಇದರಲ್ಲಿ ಒಟ್ಟಾರೆಯಾಗಿ ಇದು ಒಬಿಸಿ ಮೀಸಲಾತಿಯಾಗಿದ್ದರೂ, ಮುಸ್ಲಿಮರು ಇದರ ಗರಿಷ್ಠ ಉಪಯೋಗ ಪಡೆಯುತ್ತಿದ್ದಾರೆ’ ಎಂದರು.

‘ಧರ್ಮ ಆಧಾರಿತ ಮೀಸಲಾತಿ ಸಾಧ್ಯವಿಲ್ಲ’

ಹುಬ್ಬಳ್ಳಿ: ‘ಮುಸ್ಲಿಮರನ್ನು ಹಿಂದುಳಿದ ವರ್ಗಕ್ಕೆ (ಒಬಿಸಿ) ಸೇರಿಸಿ, ಹಿಂದುಳಿದ ವರ್ಗದವರಿಗೆ ಕಾಂಗ್ರೆಸ್ ಅನ್ಯಾಯ ಮಾಡುತ್ತಿದೆ’ ಎಂದು ಕೇಂದ್ರ ಸಚಿವ, ಧಾರವಾಡ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರಲ್ಹಾದ ಜೋಶಿ ಟೀಕಿಸಿದರು.

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ‘ಒಂದೆಡೆ ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯ ಜಾತಿಯಲ್ಲ, ಧರ್ಮ ಎನ್ನುತ್ತಾರೆ. ಇನ್ನೊಂದೆಡೆ ಮೀಸಲಾತಿ ನೀಡುತ್ತಾರೆ’ ಎಂದರು.

‘ಪ್ರವರ್ಗ 1ರಲ್ಲಿ ಮುಸ್ಲಿಂ ಸಮುದಾಯದ 17 ಜಾತಿಗಳು, ಪ್ರವರ್ಗ 2ರಲ್ಲಿ 19 ಜಾತಿಗಳನ್ನು ಸೇರಿಸಲಾಗಿದೆ. ನಿಜವಾದ ಹಿಂದುಳಿದ ಜಾತಿಗಳಾದ ಕುರುಬ, ಮರಾಠ, ಉಪ್ಪಾರ ಸೇರಿ ಉಳಿದವರಿಗೆ ಚಿಪ್ಪು ನೀಡುತ್ತಿದೆ. ಸಂವಿಧಾನದಲ್ಲಿ ಧರ್ಮ ಆಧಾರಿತವಾಗಿ ಮೀಸಲಾತಿ ನೀಡಲು ಸಾಧ್ಯವಿಲ್ಲ’ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತರ ತುಷ್ಟೀಕರಣಕ್ಕೆ ಬೆಲೆ ತೆರಬೇಕಾಗುತ್ತದೆ. ಕಾಂಗ್ರೆಸ್‌ನ ಅಲ್ಪಸಂಖ್ಯಾತರ ಓಲೈಕೆಯಿಂದ ಒಬಿಸಿ ವರ್ಗಕ್ಕೆ ಅನ್ಯಾಯ ಆಗುತ್ತಿದೆ
ಬಿ.ವೈ.ವಿಜಯೇಂದ್ರ
ಅಧ್ಯಕ್ಷ, ರಾಜ್ಯ ಬಿಜೆಪಿ ಘಟಕ

ಕಾರಿನಲ್ಲಿ ಸಾಗಿಸುತ್ತಿದ್ದ ₹ 1.99 ಕೋಟಿ ಜಪ್ತಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಾಂಗ್ರೆಸ್ ಮುಖಂಡ, ಮಾಜಿ ಮೇಯರ್ ಶರಣಕುಮಾರ್ ಮೋದಿ ಅವರ ಕಾರಿನಲ್ಲಿ ಸಾಗಿಸುತ್ತಿದ್ದ, ದಾಖಲೆ ಇಲ್ಲದ ₹ 1.99 ಕೋಟಿ ಹಣವನ್ನು ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಶನಿವಾರ ಬೆಳಿಗ್ಗೆ ಜಪ್ತಿ ಮಾಡಿದ್ದಾರೆ.

ಈ ಹಣವನ್ನು ರೈಲಿನಲ್ಲಿ ತರಲಾಗಿತ್ತು. ರೈಲಿನಿಂದ ಕಾರಿನಲ್ಲಿ ತುಂಬಿ ಸಾಗಿಸುತ್ತಿದ್ದಾಗ ಖಚಿತ ಮಾಹಿತಿ ಪಡೆದ ಅಧಿಕಾರಿಗಳು ಹಣವನ್ನು ಕಾರಿನ ಸಮೇತ ಜಪ್ತಿ ಮಾಡಿದರು.

ನಂತರ ಶರಣಕುಮಾರ ಅವರನ್ನು ವಿಚಾರಣೆಗೆ ಒಳಪಡಿಸಿದರು. ಹಣವನ್ನು ಸೇಡಂ ರಸ್ತೆಯಲ್ಲಿರುವ ಆದಾಯ ತೆರಿಗೆ ಇಲಾಖೆಯ ಕಚೇರಿಗೆ ಕೊಂಡೊಯ್ಯಲಾಯಿತು ಎಂದು ಮೂಲಗಳು ತಿಳಿಸಿವೆ.

ಶರಣಕುಮಾರ್ ಮೋದಿ ಅವರು ಸಚಿವ ಈಶ್ವರ ಖಂಡ್ರೆ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ.

ಈ ಕುರಿತು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ ಜಿಲ್ಲಾ ಚುನಾವಣಾಧಿಕಾರಿ ಫೌಜಿಯಾ ತರನ್ನುಮ್, ‘ವ್ಯಕ್ತಿಯೊಬ್ಬರ ವಾಹನದಲ್ಲಿ ₹ 1,99,92,000 ಹಣ ಜಪ್ತಿಯಾಗಿದೆ ಎಂಬ ಮಾಹಿತಿ ಬಂದಿದೆ. ಐ.ಟಿ ಇಲಾಖೆಯವರು ಇನ್ನೂ ನನಗೆ ಪ್ರಾಥಮಿಕ ವರದಿ ನೀಡಿಲ್ಲ’ ಎಂದರು.

ಕಾಂಗ್ರೆಸ್ ಮುಖಂಡರಿಗೆ ಸೇರಿದ ಹಣ ಜಪ್ತಿ ಕುರಿತ ಪ್ರಶ್ನೆಗೆ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಆಯೋಗ ತನಿಖೆ ನಡೆಸಿ ಕ್ರಮ ಕೈಗೊಳ್ಳಲಿ. ಚಿಕ್ಕಬಳ್ಳಾಪುರದ ಬಿಜೆಪಿ ಅಭ್ಯರ್ಥಿ ಡಾ.ಕೆ.ಸುಧಾಕರ್ ಅವರಿಗೆ ಸೇರಿದ ₹ 4.80 ಕೋಟಿಯನ್ನು ಆಯೋಗ ಜಪ್ತಿ ಮಾಡಿದೆಯಲ್ಲ’ ಎಂದು ಹೇಳಿದರು.

‘ಬಾಕಿ ಹಣ ನೀಡದಿದ್ದರೆ ಮತ್ತೆ ಕೋರ್ಟ್‌ಗೆ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ನಾವು ₹18,172 ಕೋಟಿ ಬರ ಪರಿಹಾರಕ್ಕಾಗಿ ಮನವಿ ಸಲ್ಲಿಸಿದ್ದೆವು. ಆದರೆ ಕೇಂದ್ರ ₹3,454 ಕೋಟಿ ನೀಡಿದೆ. ಇದು ಯಾವುದಕ್ಕೂ ಸಾಲದು. ಉಳಿದಿದ್ದನ್ನು ಶೀಘ್ರವೇ ಬಿಡುಗಡೆ ಮಾಡದಿದ್ದರೆ ಸೋಮವಾರ ಕೋರ್ಟ್ ಮೊರೆ ಹೋಗುತ್ತೇವೆ’ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

ಕೇಂದ್ರದ ಕಟ್ಟುನಿಟ್ಟಿನ ಆಡಳಿತ ಸಹಿಸದ ಕಾಂಗ್ರೆಸ್‌ನವರು ದುರುದ್ದೇಶದಿಂದ ‘ಇಂಡಿಯಾ’ ಒಕ್ಕೂಟದ ಜೊತೆ ಸೇರಿ ನ್ಯಾಯಾಲಯಕ್ಕೆ ಹೋಗಿದ್ದಾರೆ
ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

‘ಪರಿಹಾರ ಬಿಡುಗಡೆ ಮಾಡದಿದ್ದರೆ ಪ್ರಧಾನಿ ಮೋದಿ ಹಾಗೂ ಅಮಿತ್ ಶಾ, ರಾಜ್ಯದ ಜನರ ಬಳಿ ಮತ ಕೇಳುವ ನೈತಿಕ ಹಕ್ಕು ಕಳೆದುಕೊಳ್ಳಲಿದ್ದಾರೆ. ಮೋದಿ ಅವರು ಭಾನುವಾರ ರಾಜ್ಯ ಪ್ರವಾಸ ಕೈಗೊಳ್ಳಲಿದ್ದು, ಕಾಂಗ್ರೆಸ್ ಕಾರ್ಯಕರ್ತರು ಗೋ ಬ್ಯಾಕ್ ಚಳವಳಿ ನಡೆಸಲಿದ್ದಾರೆ’ ಎಂದು ಶನಿವಾರ ತಿಳಿಸಿದರು.

‘ಪರಿಹಾರ ಬಿಡುಗಡೆ ವಿಚಾರದಲ್ಲಿ ದ್ವೇಷದ ನೀತಿ ಅನುಸರಿಸುತ್ತಿರುವ ಪ್ರಧಾನಿ ಮೋದಿ, ರಾಜ್ಯದ ವಿರುದ್ಧ ಹಗೆತನ ಸಾಧಿಸುತ್ತಿದ್ದಾರೆ. ಕಳೆದ ವಿಧಾನಸಭೆ ಚುನಾವಣೆ ಸೋಲಿಗೆ ಈ ರೀತಿ ಸೇಡು ತೀರಿಸಿಕೊಳ್ಳುತ್ತಿದ್ದಾರೆ’ ಎಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

‘ಸ್ವಯಂಪ್ರೇರಿತ ದೂರು ದಾಖಲಿಸಿ, ತನಿಖೆ ನಡೆಸಿ’

ಹಾಸನ ಭಾಗದ ಯುವ ರಾಜಕಾರಣಿಯ ಲೈಂಗಿಕ ಹಗರಣ: ಆಯನೂರು ಮಂಜುನಾಥ್ ಆಗ್ರಹ

ಪ್ರಜಾವಾಣಿ ವಾರ್ತೆ

ಆಯನೂರು ಮಂಜುನಾಥ್

ಶಿವಮೊಗ್ಗ: ‘ಹಾಸನ ಭಾಗದ ಪ್ರತಿಷ್ಠಿತ ರಾಜಕೀಯ ಕುಟುಂಬದ ಯುವ ರಾಜಕಾರಣಿ ನೂರಾರು ಬಡ ಮಹಿಳೆಯರನ್ನು ಲೈಂಗಿಕ ಶೋಷಣೆಗೆ ಗುರಿಪಡಿಸಿದ್ದಾನೆ. ಈ ಬಗ್ಗೆ ಸ್ವಯಂ ಪ್ರೇರಿತ ದೂರು ದಾಖಲಿಸಿ ತನಿಖೆ ನಡೆಸಬೇಕು’ ಎಂದು ಕೆಪಿಸಿಸಿ ವಕ್ತಾರ ಆಯನೂರು ಮಂಜುನಾಥ್ ಅವರು ಸರ್ಕಾರಕ್ಕೆ ಒತ್ತಾಯಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈ ಕುರಿತ ವಿಡಿಯೊಗಳೂ ಹರಿದಾಡುತ್ತಿವೆ. ಇದು ಇಡೀ ನಾಗರಿಕ ಸಮಾಜವೇ ತಲೆತಗ್ಗಿಸುವಂತಹದ್ದು’ ಎಂದು ಹೇಳಿದರು.

‘ಎಲ್ಲೆಡೆಯೂ ಹಾಸನ ಭಾಗದ ಆ ರಾಜಕಾರಣಿಯ ಲೈಂಗಿಕ ಹಗರಣದ ಬಗ್ಗೆಯೇ ಚರ್ಚೆ ನಡೆದಿದೆ. ಆತನ ಬಲೆಗೆ ಬಿದ್ದವರಲ್ಲಿ ಬಡವರು ಇದ್ದಾರೆ. ಮಹಿಳಾ ಪೊಲೀಸ್ ಇದ್ದಾರೆ. ಅನ್ಯಾಯಕ್ಕೊಳಗಾದ ಹೆಣ್ಣುಮಕ್ಕಳು ದೂರು ನೀಡಲು ಭಯ ಪಡುತ್ತಿದ್ದಾರೆ. ಹೀಗಾಗಿ ಸರ್ಕಾರ ಮಧ್ಯ ಪ್ರವೇಶಿಸಬೇಕು’ ಎಂದು ಅವರು ಒತ್ತಾಯಿಸಿದರು.

‘ಭಾರತ ಮಾತೆಯ ರಕ್ಷಕರು ಎಂದು ಹೇಳಿಕೊಳ್ಳುವ ಬಿಜೆಪಿಯವರು ಈ ವಿಚಾರದಲ್ಲಿ ತುಟಿ ಬಿಚ್ಚುತ್ತಿಲ್ಲ. ರಾಜಕೀಯ ಲಾಭಕ್ಕಾಗಿ ಅನ್ಯಾಯಕ್ಕೊಳಗಾದ ಮಹಿಳೆಯರ ಪರ ಮಾತನಾಡದಿರುವುದು ಸರಿಯೇ. ಶಿವಮೊಗ್ಗದ ಹಿಂದೂ ಹುಲಿ ಅನಿಸಿಕೊಂಡಿರುವ ಕೆ.ಎಸ್. ಈಶ್ವರಪ್ಪ ಕೂಡ ಧ್ವನಿ ಎತ್ತದೆ ಸುಮ್ಮನಿದ್ದಾರೆ’ ಎಂದು ಲೇವಡಿ ಮಾಡಿದರು.

‘ಲೈಂಗಿಕ ಹಗರಣದಲ್ಲಿ ಒಂದಷ್ಟು ಒಪ್ಪಿತ, ಇನ್ನೊಂದಷ್ಟು ಬಲವಂತಕ್ಕೆ ಕಟ್ಟುಬಿದ್ದ ಸಂಬಂಧಗಳೇ ಇರಬಹುದು. ಹಾಗಂತ ಖಾಸಗಿ ದೃಶ್ಯಗಳನ್ನು ಚಿತ್ರೀಕರಿಸಿ ಇಟ್ಟುಕೊಳ್ಳಬಹುದೇ. ಇದರಿಂದ ಆಯಾ ಹೆಣ್ಣುಮಕ್ಕಳ ಕುಟುಂಬಗಳು ಸಾಮಾಜಿಕವಾಗಿ ಅಪಮಾನ ಅನುಭವಿಸಬೇಕಿದೆ. ಏನಾದರೂ ಅನಾಹುತ ಘಟಿಸಿದರೆ ಯಾರು ಹೊಣೆ’ ಎಂದು ಪ್ರಶ್ನಿಸಿದರು.

ಎಚ್‌ಡಿಕೆ ಪೆನ್‌ಡ್ರೈವ್‌ನಲ್ಲಿ ಏನಿತ್ತೆಂದು ಗೊತ್ತಾಯಿತು: ಡಿಕೆಶಿ

ಬೆಂಗಳೂರು: ‘ಕುಮಾರಸ್ವಾಮಿ ಅವರು ಮಾಧ್ಯಮಗಳ ಮುಂದೆ ತೋರಿಸಿ, ತಮ್ಮ ಜೇಬಿನಲ್ಲಿ ಇಟ್ಟುಕೊಂಡಿದ್ದ ಪೆನ್ ಡ್ರೈವ್‌ನಲ್ಲಿ ಏನಿತ್ತು ಎಂಬುದು ಈಗ ಗೊತ್ತಾಯಿತು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವ್ಯಂಗ್ಯವಾಗಿ ಹೇಳಿದರು.

‘ಹಾಸನದ ಪ್ರಭಾವಿ ನಾಯಕರೊಬ್ಬರ ಲೈಂಗಿಕ ಹಗರಣ ಆರೋಪ ಹೊರ ಬರುತ್ತಿದ್ದು, ಈ ಪ್ರಕರಣವನ್ನು ಎಸ್‌ಐಟಿಗೆ ವಹಿಸುವಂತೆ ಮುಖ್ಯಮಂತ್ರಿಗೆ ರಾಜ್ಯ ಮಹಿಳಾ ಆಯೋಗ ಪತ್ರ ಬರೆದಿರುವ ಬಗ್ಗೆ’ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಈ ಪೆನ್ ಡ್ರೈವ್ ಬಗ್ಗೆ ಕುಮಾರಣ್ಣನಿಗೆ ಚೆನ್ನಾಗಿ ಗೊತ್ತು. ಉತ್ತರಿಸಲು ಅವರೇ ಸೂಕ್ತ ವ್ಯಕ್ತಿ’ ಎಂದರು.

‘ಮಾಧ್ಯಮಗಳು ಈ ಹಗರಣದ ವಿಚಾರದಲ್ಲಿ ಸುಳ್ಳು ಹೇಳುತ್ತಿವೆ. ಅದು ಕೇವಲ ಹಾಸನದ ನಾಯಕನದಲ್ಲ. ಹಾಸನ ಲೋಕಸಭಾ ಕ್ಷೇತ್ರದ ಎನ್‌ಡಿಎ ಮೈತ್ರಿ ಕೂಟದ ಅಭ್ಯರ್ಥಿಯದ್ದು, ಸಂಸದನದ್ದು. ಹೀಗಾಗಿ ಈ ವಿಚಾರವಾಗಿ ಪ್ರಧಾನಿ, ವಿಜಯೇಂದ್ರ, ಶೋಭಕ್ಕ, ಅಶೋಕ, ಕುಮಾರಣ್ಣ, ಗಂಡಸ್ಥನದ ಬಗ್ಗೆ ಮಾತನಾಡುತ್ತಿದ್ದ ಅಶ್ವತ್ಥನಾರಾಯಣ ಉತ್ತರಿಸಬೇಕು. ತಮ್ಮ ಹೆಸರಿಗೆ ಮಸಿ ಬಳಿಯಲು ಈ ರೀತಿ ಮಾತನಾಡುತ್ತಿದ್ದಾರೆ ಎಂದು ಅವರೇ ದೂರು ಕೊಟ್ಟಿದ್ದಾರೆ. ಇದೆಲ್ಲವನ್ನು ಗಮನಿಸಿ ಮುಖ್ಯಮಂತ್ರಿ ಮತ್ತು ಗೃಹ ಸಚಿವರಿಗೆ ಮಹಿಳಾ ಆಯೋಗದ ಅಧ್ಯಕ್ಷರು ಪತ್ರ ಬರೆದಿದ್ದಾರೆ. ಈ ವಿಚಾರದಲ್ಲಿ ನೀವು (ಮಾಧ್ಯಮದವರು) ಬೆಳಕು ಚೆಲ್ಲಬೇಕು’ ಎಂದರು.

‘ಸಂತ್ರಸ್ತ ಮಹಿಳೆಯರ ಪರವಾಗಿ ಕಾಂಗ್ರೆಸ್ ನಿಲ್ಲಲಿದೆಯೇ’ ಎಂಬ ಪ್ರಶ್ನೆಗೆ, ‘ನಮ್ಮ ಆತ್ಮಸಾಕ್ಷಿಗಾದರೂ ನಾವು ಕೆಲಸ ಮಾಡಬೇಕಲ್ಲವೇ. ಇಬ್ಬರು ಸಂತ್ರಸ್ತೆಯರು ಡಿ.ಜಿ ಅವರಿಗೆ ದೂರು ನೀಡಿರುವ ಮಾಹಿತಿ ನನಗೆ ಇಲ್ಲ’ ಎಂದೂ ಹೇಳಿದರು.

ಕಾಂಗ್ರೆಸ್ ಪ್ರತಿಭಟನೆ ಇಂದು

ಒಂದನೇ ಪುಟದಿಂದ...

ಒಲ್ಲದ ಮನಸ್ಸಿನಿಂದ ಪರಿಹಾರ: ‘ಕರ್ನಾಟಕದ ಮೇಲೆ ಕಾಳಜಿಯಿಂದ ಕೇಂದ್ರ ಸರ್ಕಾರ ಈ ಬರ ಪರಿಹಾರ ನೀಡಿಲ್ಲ. ನಾವು ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತಿ, ನಮ್ಮಲ್ಲಿನ ಬರಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟಿದ್ದೆವು. ಈ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ಗೆ ರಾಜಕೀಯ ದುರುದ್ದೇಶದಿಂದ ಕರ್ನಾಟಕಕ್ಕೆ ಕೇಂದ್ರ ಅನ್ಯಾಯ ಮಾಡುತ್ತಿದೆ ಎಂದು ಮನವರಿಕೆಯಾಗಿದೆ. ನ್ಯಾಯಾಲಯ ವಿಚಾರಣೆ ವೇಳೆ ಚಾಟಿ ಬೀಸಿದ ನಂತರ ವಾರದ ಅವಧಿಯೊಳಗೆ ಬರ ಪರಿಹಾರ ನೀಡಲಾಗುವುದು ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ವಚನ ನೀಡಿತ್ತು. ಅದನ್ನು ಪಾಲಿಸಲು ಒಲ್ಲದ ಮನಸ್ಸಿನಿಂದ ಈ ಪರಿಹಾರ ನೀಡಿದೆ’ ಎಂದೂ ಮುಖ್ಯಮಂತ್ರಿ ಹೇಳಿದ್ದಾರೆ.

‘ಈ ಪರಿಹಾರ ಬಿಡುಗಡೆಯಲ್ಲಿ ಬಿಜೆಪಿ ನಾಯಕರ ಅಥವಾ ಕೇಂದ್ರ ಸರ್ಕಾರದ ಯಾವ ಪಾತ್ರವೂ ಇಲ್ಲ. ಸ್ವಲ್ಪವಾದರೂ ಪರಿಹಾರ ನೀಡದಿದ್ದರೆ ಕರ್ನಾಟಕದ ಜನ ತಮ್ಮನ್ನು ಚುನಾವಣಾ ಪ್ರಚಾರಕ್ಕೆ ರಾಜ್ಯಕ್ಕೆ ಕಾಲಿಡಲು ಬಿಡಲಾರರು ಎಂಬ ಭಯ ಈ ಪರಿಹಾರ ಘೋಷಿಸಲು ಕಾರಣ. ಈ ಅಲ್ಪ ಪರಿಹಾರವನ್ನು ತಮ್ಮ ಸಾಧನೆ ಎಂದು ಬಿಜೆಪಿ ನಾಯಕರು ಬಿಂಬಿಸಲು ಹೊರಟರೆ ತಕ್ಕ ಉತ್ತರ ನೀಡಬೇಕು’ ಎಂದು ರಾಜ್ಯದ ಜನರಿಗೆ ಅವರು ಮನವಿ ಮಾಡಿದ್ದಾರೆ.

ಪತ್ಯಕ್ಕೆ ಹೊರತಾದ ಪ್ರಶ್ನೆ: ನಾಳೆ ಪರಿಹಾರ

ಒಂದನೇ ಪುಟದಿಂದ...

ಹಾಗಾಗಿ, ಮರು ಪರೀಕ್ಷೆ ನಡೆಸುವ ಅಥವಾ ಪತ್ಯಕ್ಕೆ ಹೊರತಾದ ಪ್ರಶ್ನೆಗಳನ್ನು ಕೈಬಿಟ್ಟು ಉಳಿದ ಪ್ರಶ್ನೆಗಳನ್ನಷ್ಟೇ ಮೌಲ್ಯಮಾಪನ ಮಾಡಿ ಶೇ 100ಕ್ಕೆ ಪರಿಗಣಿಸಿ ಫಲಿತಾಂಶ ಪ್ರಕಟಿಸಲು ಕೆಇಎ ಹಾಗೂ ಉನ್ನತ ಶಿಕ್ಷಣ ಇಲಾಖೆ ಅಧಿಕಾರಿಗಳು ಚಿಂತನೆ ನಡೆಸಿದ್ದಾರೆ.

‘ಯಾವ ತೀರ್ಮಾನ ತೆಗೆದುಕೊಂಡರೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ವಿದ್ಯಾರ್ಥಿಗಳು ಇನ್ನೂ ನೀಟ್ ಮತ್ತಿತರ ಪರೀಕ್ಷೆಗಳಿಗೆ ಓದುತ್ತಿರುವ ಕಾರಣ ಮರು ಪರೀಕ್ಷೆ ನಡೆಸಿದರೆ ಸೂಕ್ತ ಎನ್ನುವುದು ಬಹುತೇಕ ತಜ್ಞರ ಅನಿಸಿಕೆ. ಈ ಎಲ್ಲ ವಿಷಯಗಳನ್ನೂ ಪರಿಗಣಿಸಿ ಸೂಕ್ತ ನಿರ್ಧಾರ ಪ್ರಕಟಿಸಲಾಗುವುದು’ ಎಂದು ಉನ್ನತ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಸಿಇಟಿ) ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಇದೇ ಏ. 18 ಮತ್ತು 19ರಂದು ನಡೆಸಿತ್ತು. ಸುಮಾರು 3 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಭೌತ ವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಮತ್ತು ಜೀವ ವಿಜ್ಞಾನ ವಿಷಯಗಳ ಪ್ರಶ್ನೆ ಪತ್ರಿಕೆಗಳಲ್ಲಿ ಪತ್ಯಕ್ಕೆ ಹೊರತಾದ ಶೇ 25ರಷ್ಟು ಪ್ರಶ್ನೆಗಳು ಸೇರಿಕೊಂಡಿವೆ ಎಂದು ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಆಕ್ಷೇಪ ವ್ಯಕ್ತಪಡಿಸಿದ್ದರು. ‘ಕೆಇಎಗೆ ಸಲ್ಲಿಕೆಯಾದ ಆಕ್ಷೇಪಣೆಗಳು ಹಾಗೂ ನಾಲ್ಕು ಸಮಿತಿಗಳ ವರದಿ ಆಧಾರದ ಮೇಲೆ ತಜ್ಞರು, ಅಧಿಕಾರಿಗಳ ಜತೆ ಚರ್ಚೆ ನಡೆಸಿ, ಏ. 29ರಂದು ಪರಿಹಾರ ಪ್ರಕಟಿಸಲಾಗುವುದು’ ಎಂದು ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಶ್ರೀಕರ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಕೇಳಿದಷ್ಟು ಹಣ ಕೊಡಲಾಗದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರ ಮಾರ್ಗಸೂಚಿ ಆಧಾರದಲ್ಲಿ ಹಣ ಬಿಡುಗಡೆ ಮಾಡುತ್ತದೆ. ಕೇಳಿದಷ್ಟು ಹಣ ಕೊಡಲು ಸಾಧ್ಯವಿಲ್ಲ. ಕೊಟ್ಟರೂ ರಾಜ್ಯ ಸರ್ಕಾರವನ್ನು ತೃಪ್ತಿಪಡಿಸಲು ಆಗದು’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಶನಿವಾರ ಟೀಕಿಸಿದರು.

‘ಬರ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ. ನೊಂದಿರುವ ಜನರ ನೆರವಿಗೆ ಏನೂ ಮಾಡದೆ, ತಪ್ಪು ಮುಚ್ಚಿಟ್ಟುಕೊಳ್ಳಲು ಕೇಂದ್ರ ಸರ್ಕಾರದ ವಿರುದ್ಧ ಟೀಕೆ ಮಾಡುತ್ತಿದ್ದಾರೆ. ಬರ ಸೇರಿದಂತೆ ರಾಜ್ಯ ಎದುರಿಸುತ್ತಿರುವ ಪ್ರತಿ ಸಮಸ್ಯೆಗೂ ಕೇಂದ್ರವೇ ಕಾರಣ ಎನ್ನುವಂತಿದೆ ಕಾಂಗ್ರೆಸ್ ಧೋರಣೆ’ ಎಂದು ದೂರಿದರು.

15ನೇ ಹಣಕಾಸು ಆಯೋಗದ ಶಿಫಾರಸಿನ ಆಧಾರದಲ್ಲಿ ಹಣ ಬಿಡುಗಡೆಯಾಗುತ್ತದೆ. ಮೊದಲ ಕಂತಿನಲ್ಲಿ ಕೇಂದ್ರ ಸರ್ಕಾರ ₹3,454 ಕೋಟಿ ಪರಿಹಾರ ನೀಡಿದೆ. ಕಡಿಮೆ ಬಂದರೆ ಮತ್ತೆ ಕೇಳಬೇಕು, ಅದು ಬಿಟ್ಟು ರಾಜಕೀಯ ಮಾಡಿಕೊಂಡಿದ್ದರೆ ಏನು ಉಪಯೋಗ ಎಂದು ಪ್ರಶ್ನಿಸಿದರು.

ರಥೋತ್ಸವ ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಸುಣಧೋಳಿಯ ಜಡಿಸಿದ್ದೇಶ್ವರ ರಥೋತ್ಸವ ಶನಿವಾರ ಮಠಾಧೀಶ ಶಿವಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಅಪಾರ ಭಕ್ತರ ಮಧ್ಯೆ ಸಂಭ್ರಮದಿಂದ ನಡೆಯಿತು

ರಾಹುಲ್ ಪ್ರಚಾರ ನಡೆಸಿದರೆ ಬಿಜೆಪಿಗೆ ಅನುಕೂಲ: ಬಿವೈವಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಅಮೇಠಿ ಜನರ ವಿಶ್ವಾಸ ಕಳೆದುಕೊಂಡು ಕೇರಳದ ವಯನಾಡಿನಲ್ಲಿ ಅಡಗಿದ್ದಾರೆ. ಪ್ರಧಾನಿ ಅಭ್ಯರ್ಥಿ ಎಂದು ಬಿಂಬಿತರಾಗಿರುವ ಅವರಿಗೆ ಇಂತಹ ಪರಿಸ್ಥಿತಿ ಬರಬಾರದಿತ್ತು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಲೇವಡಿ ಮಾಡಿದರು.

‘ರಾಹುಲ್ ಗಾಂಧಿ ಅವರನ್ನು ರಾಜ್ಯಕ್ಕೆ ಹೆಚ್ಚೆಚ್ಚು ಕರೆಸಬೇಕು. ಇದರಿಂದ ಪಕ್ಷಕ್ಕೆ ಅನುಕೂಲ ಆಗಲಿದೆ. ಶಿವಮೊಗ್ಗದಲ್ಲಿ ನಮ್ಮ ಅಭ್ಯರ್ಥಿ ಎರಡೂವರೆ–ಮೂರು ಲಕ್ಷ ಅಂತರದಲ್ಲಿ ಗೆಲ್ಲುವ ನಿರೀಕ್ಷೆ ಇತ್ತು. ರಾಹುಲ್ ಭೇಟಿ ಬಳಿಕ ಮತ್ತೆ 50 ಸಾವಿರ ಲೀಡ್ ಹೆಚ್ಚಲಿದೆ’ ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಮೊದಲ ಹಂತದಲ್ಲಿ ಮತದಾನ ನಡೆದ 14 ಕ್ಷೇತ್ರಗಳಲ್ಲೂ ಬಿಜೆಪಿ ಗೆಲುವು ನಿಶ್ಚಿತ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಲಬುರಗಿ, ರಾಯಚೂರು, ಶಿವಮೊಗ್ಗ ಕ್ಷೇತ್ರಗಳ ಮೈತ್ರಿ ಅಭ್ಯರ್ಥಿಗಳ ಪರ ಪ್ರಚಾರಕ್ಕೆ ಹೋಗುತ್ತಿದ್ದೇನೆ. ಎರಡನೇ ಹಂತದಲ್ಲಿ ಎನ್‌ಡಿಎ 12– 13 ಸ್ಥಾನ ಗೆಲ್ಲುತ್ತದೆ
ಎಚ್.ಡಿ. ಕುಮಾರಸ್ವಾಮಿ,
ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ

ಫಯಾಜ್ ರಕ್ತದ ಮಾದರಿ ಸಂಗ್ರಹ

ಹುಬ್ಬಳ್ಳಿ: ವಿದ್ಯಾರ್ಥಿನಿ ನೇಹಾ ಕೊಲೆ ಪ್ರಕರಣದ ಆರೋಪಿ ಫಯಾಜ್‌ನನ್ನು ಇಲ್ಲಿನ ಒಂದನೇ ಸೆಷನ್ಸ್ ನ್ಯಾಯಾಲಯಕ್ಕೆ ಶನಿವಾರ ಹಾಜರು ಪಡಿಸಿದ ಸಿಐಡಿ ಅಧಿಕಾರಿಗಳು, ನ್ಯಾಯಾಧೀಶರ ಸಮ್ಮುಖದಲ್ಲಿ ಡಿಎನ್‌ಎ ಪರೀಕ್ಷೆಗೆ ರಕ್ತದ ಮಾದರಿಯನ್ನು ಸಂಗ್ರಹಿಸಿದರು.

ಪ್ರಕರಣದ ತನಿಖೆಗೆ ಫಯಾಜ್‌ನ ಡಿಎನ್‌ಎ ಪರೀಕ್ಷೆಗೆ ಅನುಮತಿ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅನುಮತಿ ಸಿಕ್ಕ ಹಿನ್ನೆಲೆಯಲ್ಲಿ ವೈದ್ಯರ ನೆರವಿನಿಂದ ರಕ್ತದ ಮಾದರಿ ಸಂಗ್ರಹಿಸಲಾಯಿತು.

ಕೊಲೆ ನಡೆದ ಸ್ಥಳದಲ್ಲಿ ಮತ್ತು ಆರೋಪಿ ಕೃತ್ಯಕ್ಕೆ ಬಳಸಿದ ಚಾಕುವಿನ ಮೇಲೆ ರಕ್ತದ ಎರಡು ಗುಂಪಿನ ಮಾದರಿ ಪತ್ತೆಯಾದ ಹಿನ್ನೆಲೆಯಲ್ಲಿ ಈ ಪ್ರಕ್ರಿಯೆ ನಡೆಸಲಾಯಿತು.

ಶಿಕ್ಷಕರ ವರ್ಗಾವಣೆ: ಕೆಎಟಿ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಗೆ ಕರ್ನಾಟಕ ಆಡಳಿತ ನ್ಯಾಯಮಂಡಳಿಯ (ಕೆಎಟಿ) ಕಲಬುರಗಿ ಪೀಠ ತಡೆ ನೀಡಿದೆ.

ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ–2020 ಅನ್ವಯ 2024–25ನೇ ಸಾಲಿನ ಶಿಕ್ಷಕರ ಕೋರಿಕೆ ಹಾಗೂ ಕಡ್ಡಾಯ ವರ್ಗಾವಣೆಗೆ ಲೋಕಸಭಾ ಚುನಾವಣೆ ನೀತಿ ಸಂಹಿತೆ ಘೋಷಣೆಗೂ ಮೊದಲೇ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸುತ್ತೋಲೆ ಹೊರಡಿಸಿತ್ತು. ವರ್ಗಾವಣೆಗೆ ಅರ್ಹರಾದ ಶಿಕ್ಷಕರ ಅಂತಿಮ ಪಟ್ಟಿಯನ್ನು ಈಗಾಗಲೇ ಪ್ರಕಟಿಸಿದ್ದು, ಅರ್ಜಿ ಸಲ್ಲಿಕೆಗೆ ಮೇ 15ರವರೆಗೂ ಅವಕಾಶವಿದೆ.

ಶಿಕ್ಷಕರ ವರ್ಗಾವಣೆಯನ್ನು ನಾಲ್ಕು ವಲಯಗಳು ಎಂದು ವಿಂಗಡಿಸಿ ವರ್ಗಾವಣೆ ಮಾಡಲಾಗುತ್ತಿದೆ. ಒಂದೇ ಸ್ಥಳದಲ್ಲಿ, ಒಂದೇ ಹುದ್ದೆಯಲ್ಲಿ (ವೃಂದ) ಕೆಲಸ ಮಾಡಿದ ಶಿಕ್ಷಕರ ಸೇವಾ ವಿವರಗಳನ್ನು ಬಿಇಒಗಳಿಂದ ಪಡೆದು, ಸೇವಾ ಪುಸ್ತಕದ ವಿವರಗಳೊಂದಿಗೆ ಪರಿಶೀಲಿಸಿದ ನಂತರ ಡಿಡಿಪಿಐ ಅವರಿಗೆ ಸಲ್ಲಿಸಲು ಸೂಚಿಸಲಾಗಿತ್ತು.

‘ಒಂದೇ ಸ್ಥಳ, ಒಂದೇ ಹುದ್ದೆಯ ಸೇವೆ ಪರಿಗಣಿಸಿದರೆ ಸೇವಾ ಕೃಪಾಂಕದಲ್ಲಿ (ವೆಯಿಟೇಜ್) ವ್ಯತ್ಯಾಸವಾಗಿ ಬಡ್ತಿ ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಅನ್ಯಾಯವಾಗುತ್ತದೆ. ಹಾಗಾಗಿ, ಎಲ್ಲ ವಲಯಗಳ ಸೇವೆ ಪರಿಗಣಿಸಬೇಕು. ವೃಂದದ ಮಿತಿ ತಗೆದುಹಾಕಬೇಕು’ ಎಂದು ಶಿಕ್ಷಕರಾದ ಶಿವಕುಮಾರ್ ಮತ್ತಿತರರು ಕೆಎಟಿಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಕೆಎಟಿ ವರ್ಗಾವಣೆ ಪ್ರಕ್ರಿಯೆಗೆ ತಡೆ ನೀಡಿದೆ.

ಮಠಗಳಲ್ಲಿ ಜೋಶಿ ರಾಜಕಾರಣ: ಟೀಕೆ

ಪ್ರಜಾವಾಣಿ ವಾರ್ತೆ



ದಿಂಗಾಲೇಶ್ವರ ಸ್ವಾಮೀಜಿ

ಹುಬ್ಬಳ್ಳಿ: ‘ಧಾರವಾಡ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರಲ್ಹಾದ ಜೋಶಿ ಅವರು ಮಠಗಳನ್ನು ರಾಜಕಾರಣಕ್ಕೆ ಬಳಸಿಕೊಂಡು ಒಡಕು ಮೂಡಿಸುತ್ತಿದ್ದಾರೆ’ ಎಂದು ಶಿರಹಟ್ಟಿಯ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

ಶನಿವಾರ ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಗುರುಗಳಾದ ಫಕೀರ ಸಿದ್ಧರಾಮ ಸ್ವಾಮೀಜಿ ಅವರನ್ನು ಪದೇ ಪದೇ ಭೇಟಿಯಾಗಿ, ಎರಡು ಬಗೆಯುವ ಕೆಲಸದಲ್ಲಿ ನಿರತರಾಗಿದ್ದಾರೆ’ ಆರೋಪಿಸಿದರು.

‘ಕೇಂದ್ರ ಸಚಿವರಾದಾಗ ಒಮ್ಮೆಯೂ ಗುರುಗಳನ್ನು ಭೇಟಿಯಾಗಿಲ್ಲ. ಗುರುಗಳು ಹಿಂದೆ ದೂರವಾಣಿ ಕರೆ ಮಾಡಿದ್ದಾಗ ಸ್ವೀಕರಿಸಿರಲಿಲ್ಲ. ಈಗ ಯಾವ ಮುಖ ಇಟ್ಟುಕೊಂಡು ಹೋಗಿದ್ದೀರಿ’ ಎಂದು ಹರಿಹಾಯ್ದರು.

‘ಗುರುಗಳು ಮತ್ತು ನನ್ನ ನಡುವೆ ಮಧ್ಯೆ ಒಡಕು ಮೂಡಿಸುವ ಪಾಪದ ಕೆಲಸಕ್ಕೆ ಸಂಸರು ಕೈ ಹಾಕಿದ್ದು ಸರಿಯಲ್ಲ. ಗುರು–ಶಿಷ್ಯನನ್ನು ಬೇರೆ ಮಾಡಿದರೆ, ಪತಿ ಮತ್ತು ಪತ್ನಿಯನ್ನು ಬೇರೆ ಮಾಡಿದಂತೆ’ ಎಂದರು.

‘ಚುನಾವಣೆ ಬಂದಾಗ ಲಿಂಗಾಯತ ಮಠ, ಸ್ವಾಮೀಜಿಗಳು, ಸಮಾಜ ಬೇಕು. ಗೆದ್ದ ಬಳಿಕ ಯಾವ ಮಠಕ್ಕೂ ಭೇಟಿ ನೀಡಿಲ್ಲ. ಯಾವ ಸ್ವಾಮೀಜಿಯನ್ನೂ ಸನ್ಮಾನಿಸಿಲ್ಲ. 20 ವರ್ಷ ಕ್ಷೇತ್ರದಲ್ಲಿ ಏನು ಕೆಲಸ ಮಾಡಿದ್ದಾರೆ? ಎಷ್ಟು ಅನುದಾನ ತಂದಿದ್ದಾರೆ ಎಂದು ತಿಳಿಸಲಿ’ ಎಂದರು.

‘ನಾನು ಸ್ಪರ್ಧೆಯಿಂದ ಹಿಂದೆ ಸರಿಯುವಂತೆ ಮಾಡಲು ಯಾವ ತಂತ್ರಗಾರಿಕೆ ನಡೆಯಿತು ಎಂದು ಗೊತ್ತಿಲ್ಲ. ಗುರುಗಳ ಮಾತಿಗೆ ಗೌರವ ನೀಡಿ ಹಿಂದೆ ಸರಿದಿದ್ದೇನೆ. ನನಗೆ ರೈತ ಸಂಘ ಸೇರಿ ವಿವಿಧ ಸಂಘ ಸಂಸ್ಥೆಗಳು, ಬಿಜೆಪಿಯ ಅನೇಕರು ನನ್ನ ನಿಲುವು ಬೆಂಬಲಿಸಿದ್ದರು. ಈಗ ಜೋಶಿ ಅವರನ್ನು ಸೋಲಿಸುವ ಮೂಲಕ ನನ್ನ ಮೇಲಿನ ಅಭಿಮಾನವನ್ನು ತೋರ್ಪಡಿಸಬೇಕು’ ಎಂದರು.

ದಾವಣಗೆರೆಗೆ ಇಂದು ಪ್ರಧಾನಿ

ದಾವಣಗೆರೆ: ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ದಾವಣಗೆರೆಗೆ ಭೇಟಿ ನೀಡುತ್ತಿದ್ದು, ಮಧ್ಯಾಹ್ನ 3 ಗಂಟೆಗೆ ಇಲ್ಲಿನ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಿರುವ ‘ವಿಕಸಿತ ಭಾರತ ವಿಜಯ ಸಂಕಲ್ಪ’ ಸಮಾವೇಶದಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುವರು.

ಮೋದಿ ಕಾರ್ಯಕ್ರಮಕ್ಕಾಗಿ ಬೃಹತ್ ಪೆಂಡಾಲ್ ಹಾಕಲಾಗಿದೆ. ವಿಶಾಲವಾದ ವೇದಿಕೆಯನ್ನೂ ನಿರ್ಮಿಸಲಾಗಿದ್ದು, 1 ಲಕ್ಷ ಜನರಿಗೆ ಆಸನದ ವ್ಯವಸ್ಥೆ ಮಾಡಲಾಗಿದೆ.

ದಾವಣಗೆರೆ ಹಾಗೂ ಹಾವೇರಿ ಲೋಕಸಭಾ ಕ್ಷೇತ್ರಗಳ ಅಭ್ಯರ್ಥಿಗಳು ಸೇರಿದಂತೆ 52 ಮಂದಿ ಗಣ್ಯರಿಗೆ ವೇದಿಕೆಯಲ್ಲಿ ಕುಳಿತುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಇಂಡಿಗನತ್ತ: 29ರಂದು ಮರು ಮತದಾನ

ಒಂದನೇ ಪುಟದಿಂದ...

ವರದಿ ಆಧರಿಸಿ ಪ್ರಜಾ ಪ್ರಾತಿನಿಧ್ಯ ಕಾಯ್ದೆಯಡಿ ಮರುಮತದಾನಕ್ಕೆ ತೀರ್ಮಾನಿಸಲಾಗಿದೆ ಎಂದು ಆಯೋಗವು ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ ಅವರಿಗೆ ಪತ್ರ ಬರೆದಿದೆ.

33 ಜನರ ಬಂಧನ: ಶುಕ್ರವಾರದ ಘರ್ಷಣೆಗೆ ಸಂಬಂಧಿಸಿ ಪೊಲೀಸರು 3 ಪ್ರಕರಣ ದಾಖಲಿಸಿದ್ದು, 20 ಮಂದಿ ಮಹಿಳೆಯರು ಸೇರಿ 33 ಜನರನ್ನು ಬಂಧಿಸಿದ್ದಾರೆ. ಗ್ರಾಮದಲ್ಲಿ ಬಿಗಿಭದ್ರತೆ ಕೈಗೊಳ್ಳಲಾಗಿದೆ.

‘ತಹಶೀಲ್ದಾರ್ ಮತ್ತು ಮತಗಟ್ಟೆ ಅಧಿಕಾರಿ ನೀಡಿರುವ ದೂರು ಆಧರಿಸಿ 41 ಮಂದಿ ವಿರುದ್ಧ ಮತ್ತು ಮೆಂದಾರೆ ಗ್ರಾಮದವರ ದೂರು ಆಧರಿಸಿ 32 ಜನರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದೇವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ‘ಪ್ರಜಾವಾಣಿ’ಗೆ ತಿಳಿಸಿದರು.

ಸಂಪೂರ್ಣ ಬರಿದಾಗಿರುವ ನದಿ: ಕಲ್ಲು ಬಂಡೆಗಳ ಮೇಲೆ ನಡೆಯುವ ಸ್ಥಿತಿ

ಬತ್ತಿದ ಕಾವೇರಿ: ದುಬಾರೆ ತಾಣ, ಭಣ ಭಣ

● ಕೆ.ಎಸ್.ಗಿರೀಶ

ಮಡಿಕೇರಿ: ಕೊಡಗು ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣ ದುಬಾರೆಯಲ್ಲಿ ಕಾವೇರಿ ಸಂಪೂರ್ಣ ಬರಿದಾಗಿದ್ದು, ಕಾಲ್ನಡಿಗೆಯಲ್ಲೇ ನದಿ ಮಾರ್ಗವನ್ನು ದಾಟಬಹುದಾಗಿದೆ. ಬಂಡೆಗಳು ಗೋಚರಿಸುತ್ತಿವೆ.

ಮಳೆಗಾಲದಲ್ಲಿ ರ್‍ಯಾಫ್ಟಿಂಗ್‌ಗೆ ಪ್ರಸಿದ್ಧವಾಗಿರುವ ಈ ನದಿ ಈಗ ನಿಶ್ಚಲವಾಗಿದೆ. ಪ್ರವಾಸಿಗರಿಗೆ ಕನಿಷ್ಠ ದೋಣಿವಿಹಾರದ ಖುಷಿಯೂ ಸಿಗದೇ ನಿರಾಶರಾಗಿ ವಾಪಸಾಗುತ್ತಿದ್ದಾರೆ. ಬಿರುಬಿಸಿಲಿನಲ್ಲಿ ಕಾವಲಿಯಂತೆ ಆಗಿರುವ ಬಂಡೆಗಳ ಮೇಲೆ ನಡೆಯುತ್ತಾ, ಸಾಕಾನೆ ಶಿಬಿರ ತಲುಪುವಷ್ಟರಲ್ಲಿ ಬಸವಳಿಯುತ್ತಿದ್ದಾರೆ.

ಪ್ರತಿ ಬೇಸಿಗೆಯಲ್ಲೂ ಇಲ್ಲಿ ನೀರು ಕಡಿಮೆಯಾಗುತ್ತಿತ್ತು. ಹಿಂದೆಂದೂ ಈಗಿನಂತೆ ಬರಿದಾಗಿರಲಿಲ್ಲ ಎಂದು ಸ್ಥಳೀಯರು ಹೇಳುತ್ತಾರೆ. ಮರಳಿನ ಮೂಟೆ ಇರಿಸಿ ನದಿಯ ಆಚೆಗಿನ ದಡಕ್ಕೆ ಸಾಗಲು ಅನುವು ಮಾಡಿ ಕೊಡಲಾಗುತ್ತಿತ್ತು. ಕೆಲವೆಡೆ ದೋಣಿವಿಹಾರ ಇರುತ್ತಿತ್ತು. ಈ ಬಾರಿ ಅಂತಹ ಚಿತ್ರಣವಿಲ್ಲ.

‘ಇಲ್ಲಿ ಆಳವಾದ ಸುಳಿ ಇದೆ’ ಎಂಬ ಫಲಕಗಳು ನದಿಯನ್ನೇ ನಾಚಿಸುತ್ತಿವೆ. ಗುಂಡಿಗಳಲ್ಲಿ ಕೆಲವೆಡೆ ಮಾತ್ರ ನೀರು ನಿಂತು ಪಾಚಿಗಟ್ಟಿದೆ. ಇಂತಹ ಗುಂಡಿಗಳಲ್ಲಿ ಒದ್ದಾಡುತ್ತಿರುವ ಮೀನುಗಳನ್ನು ಹಕ್ಕಿಗಳು ಹಿಡಿದು ತಿನ್ನುತ್ತಿವೆ. ಕೆಲವೆಡೆ ನೀರು, ಆಮ್ಲಜನಕ ಇಲ್ಲದೇ ಮೀನುಗಳು ಸತ್ತು ಕೊಳೆತು ದುರ್ನಾತ ಬೀರುತ್ತಿದೆ.

ಸಾಕಾನೆ ಶಿಬಿರದಲ್ಲಿ ಆನೆಗಳಿಗೂ ಸ್ನಾನ ಮಾಡಿಸಲು ಆಗದ ಸ್ಥಿತಿ ಇದೆ. ಗುಂಡಿಗಳಲ್ಲಿ ನಿಂತಿರುವ ಪಾಚಿಗಟ್ಟಿದ ನೀರೇ ಇವುಗಳಿಗೆ ಆಧಾರವಾಗಿದೆ. ತಂಪಾಗಿರುತ್ತಿದ್ದ ಈ ಸ್ಥಳದಲ್ಲಿ ಈಗಿನ ಬೇಸಿಗೆಯಲ್ಲಿ ಬೆವರಿಳಿಯುವ ಸ್ಥಿತಿ ನಿರ್ಮಿಸಿದೆ. ವ್ಯಾಪಾರಿಗಳ ಸಂಖ್ಯೆಯೂ ಕುಗ್ಗಿದೆ. ಎಲ್ಲರಿಗೂ ಮಳೆ ನಿರೀಕ್ಷೆಯಿದೆ.

ಕೊಳವೆಬಾವಿ ನೀರೇ ಆನೆಗಳಿಗೆ ಆಧಾರ!: ಸಾಕಾನೆಗಳು ಈಗ ಕೊಳವೆಬಾವಿಯ ನೀರಿಗೆ ಮೊರೆ ಹೋಗಿವೆ. ನದಿಯಲ್ಲಿ ನೀರು ಬತ್ತಿರುವುದರಿಂದ ಅರಣ್ಯ ಇಲಾಖೆ ಶಿಬಿರದಲ್ಲಿ ಕೊಳವೆಬಾವಿ ಕೊರೆಸಿದೆ. ಸದ್ಯ, ಈ ನೀರನ್ನೇ ಸಾಕಾನೆಗಳಿಗೆ ಕುಡಿಯುವುದಕ್ಕೆ ಹಾಗೂ ಸ್ನಾನಕ್ಕೆ ಬಳಸಲಾಗುತ್ತಿದೆ.

‘ಹೊಸದಾಗಿ ಕೊರೆಸಿರುವ ಕೊಳವೆಬಾವಿಯಲ್ಲಿ ನೀರಿದ್ದು, ಸದ್ಯಕ್ಕೆ ಸಮಸ್ಯೆ ಉಂಟಾಗಿಲ್ಲ’ ಎಂದು ಕುಶಾಲನಗರ ವಲಯ ಅರಣ್ಯಾಧಿಕಾರಿ ರತನ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಕಾವೇರಿ ನದಿ ಇಷ್ಟು ಬರಿದಾಗಿರುವುದನ್ನು ನಾನು ನೋಡಿದ್ದು ಇದೇ ಮೊದಲು. ಮಳೆ ಇಲ್ಲದೇ ಪ್ರಾಣಿ, ಪಕ್ಷಿಗಳಿಗೆ ತುಂಬಾ ಕಷ್ಟವಾಗಿದೆ
ಕೆ.ರವಿ ಮುತ್ತಪ್ಪ
ಕೊಡಗು ಜಿಲ್ಲೆಯ ಮುಳುಗುತಜ್ಞ

ದುಬಾರೆಯಲ್ಲಿ ಕಾವೇರಿ ನದಿ ನೀರು ಸಂಪೂರ್ಣ ಬತ್ತಿದೆ

‘ಕನಕನ ಬಂಡೆ’ ದರ್ಶನ!

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಕಾವೇರಿ ನದಿಯಲ್ಲಿ ನೀರಿನ ಹರಿವಿನ ಪ್ರಮಾಣ ಕ್ಷೀಣಿಸಿದ್ದು, ತಾಲ್ಲೂಕಿನ ಮಹದೇವಪುರ ಬಳಿ ಕಾವೇರಿ ನದಿಯ ಮಧ್ಯೆ ದಾಸ ಶ್ರೇಷ್ಠ ಕನಕದಾಸರು ಕುಳಿತು ಧ್ಯಾನ ಮಾಡಿದರು ಎನ್ನಲಾದ ಬಂಡೆ ಗೋಚರಿಸುತ್ತಿದೆ.

ಪಿಯುಸಿ: ಸಾನ್ವಿ ರಾಜ್ಯಕ್ಕೆ ಪ್ರಥಮ

ಪ್ರಜಾವಾಣಿ ವಾರ್ತೆ

ಸಾನ್ವಿ ರಾವ್

ಕಾರ್ಕಳ (ಉಡುಪಿ ಜಿಲ್ಲೆ): ದ್ವಿತೀಯ ಪಿಯುಸಿ ಫಲಿತಾಂಶದ ಮರುಮೌಲ್ಯಮಾಪನದಲ್ಲಿ ಇಲ್ಲಿನ ಕ್ರಿಯೇಟಿವ್ ಪದವಿಪೂರ್ವ ಕಾಲೇಜಿನ ವಾಣಿಜ್ಯ ವಿಭಾಗದ ಸಾನ್ವಿ ರಾವ್ ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ ಎಂದು ಕಾಲೇಜಿನವರು ತಿಳಿಸಿದ್ದಾರೆ.

ಸಂಸ್ಕೃತ ಮತ್ತು ಇಬಿಎಸಿಯಲ್ಲಿ ಸಾನ್ವಿ ರಾವ್ ತಲಾ 100, ಇಂಗ್ಲಿಷ್‌ನಲ್ಲಿ 95 ಅಂಕ ಗಳಿಸಿದ್ದರು. ಮರುಮೌಲ್ಯಮಾಪನದಲ್ಲಿ 3 ಅಂಕ ಹೆಚ್ಚುವರಿಯಾಗಿ ಗಳಿಸಿದ್ದು ಒಟ್ಟು ಅಂಕಗಳು 598ಕ್ಕೆ ಏರಿವೆ. ಅವರು ಉತ್ತರ ಕನ್ನಡ ಜಿಲ್ಲೆ ಹೊನ್ನಾವರದ ಜಗದೀಶ್ ರಾವ್ ಬಿ.ಎಸ್ ಮತ್ತು ವಿನುತಾ ಭಟ್ ದಂಪತಿಯ ಪುತ್ರಿ.

ವಿಜ್ಞಾನ ವಿಭಾಗ: ಪ್ರೀತಂ ಪ್ರಥಮ



ಪ್ರೀತಂ ಆರ್.ಪಿ.

ಬೆಂಗಳೂರು: ಇಲ್ಲಿನ ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿ ಪ್ರೀತಂ ಆರ್.ಪಿ. ಅವರು ದ್ವಿತೀಯ ಪಿ.ಯು.ಸಿ. ಮರುಮೌಲ್ಯಮಾಪನದಲ್ಲಿ 4 ಅಂಕ ಅಧಿಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ.

595 (ಶೇ 99.17) ಅಂಕ ಗಳಿಸಿದ್ದ ಪ್ರೀತಂ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದರು. ಮರುಮೌಲ್ಯಮಾಪನದ ವೇಳೆ ಇಂಗ್ಲಿಷ್‌ನಲ್ಲಿ ನಾಲ್ಕು ಅಧಿಕ ಅಂಕ ಗಳಿಸಿದ್ದರಿಂದ 599 (ಶೇ 99.83) ಅಂಕ ಗಳಿಸಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಜಿ.ಕೆ. ಮಂಜುನಾಥ್ ತಿಳಿಸಿದ್ದಾರೆ.

ಬ್ಯಾಡಗಿ ಮೆಣಸಿನಕಾಯಿ ಮಾರಾಟ: ₹19.18 ಕೋಟಿ ಶುಲ್ಕ ಸಂಗ್ರಹ

₹3,187 ಕೋಟಿ ವಹಿವಾಟು

• ಪ್ರಮೀಳಾ ಹುನಗುಂದ

ಬ್ಯಾಡಗಿ (ಹಾವೇರಿ ಜಿಲ್ಲೆ): ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯ ವಹಿವಾಟು ವರ್ಷದಿಂದ ವರ್ಷಕ್ಕೆ ಏರುಗತಿಯಲ್ಲಿ ಸಾಗುತ್ತಿದ್ದು, 2023–24ನೇ ಆರ್ಥಿಕ ವರ್ಷದಲ್ಲಿ ಬ್ಯಾಡಗಿ ಎಪಿಎಂಸಿಯಲ್ಲಿ ₹3,187 ಕೋಟಿ ವಹಿವಾಟು ನಡೆದಿದೆ.

ಎಪಿಎಂಸಿಯು ₹0.60ರಂತೆ ಒಟ್ಟು ₹19.18 ಕೋಟಿ ಮಾರುಕಟ್ಟೆ ಶುಲ್ಕ (ಸೆಸ್) ಸಂಗ್ರಹಿಸಿದೆ. ಅಲ್ಲದೆ, ಬ್ಯಾಡಗಿ ಡಬ್ಬಿ ಮೆಣಸಿನಕಾಯಿ ಕ್ವಿಂಟಲ್‌ಗೆ ಗರಿಷ್ಠ ₹70,109 ಹಾಗೂ ಕಡ್ಡಿ ಮೆಣಸಿನಕಾಯಿ ₹70,080ರಂತೆ ಮಾರಾಟವಾಗಿ ದಾಖಲೆ ಬರೆದಿತ್ತು.

2021–22ರಲ್ಲಿ 15.84 ಲಕ್ಷ ಕ್ವಿಂಟಲ್ ಮೆಣಸಿನಕಾಯಿ ಮಾರಾಟವಾಗಿದ್ದರೆ, 2022–23ರಲ್ಲಿ 9.90 ಲಕ್ಷ ಕ್ವಿಂಟಲ್ ಮಾರಾಟವಾಗಿದೆ. ಬರಗಾಲದ ನಡುವೆಯೂ ಬೆಳೆಗಾರರು ಬಂಪರ್ ಬೆಳೆ ಬೆಳೆದಿದ್ದು, 2023–24ರಲ್ಲಿ 68.3 ಲಕ್ಷ ಚೀಲ (17.09 ಲಕ್ಷ ಕ್ವಿಂಟಲ್) ಮೆಣಸಿನಕಾಯಿಯನ್ನು ಮಾರಾಟ ಮಾಡಿದ್ದಾರೆ.

ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ, ತೆಲಂಗಾಣದಿಂದ ಮೆಣಸಿನಕಾಯಿ ಹೆಚ್ಚು ಆವಕವಾಗಿತ್ತು. ನೀರಾವರಿ ಆಶ್ರಿತ ಬಳ್ಳಾರಿ, ರಾಯಚೂರು, ಸುರಪುರ, ಶಹಾಪುರ, ಬಾಗಲಕೋಟೆ ಹಾಗೂ ಮತ್ತಿತರ ಭಾಗಗಳಲ್ಲಿ ಬೆಳೆದ ಮೆಣಸಿಕಾಯಿಯನ್ನು ಮಾರಾಟ ಮಾಡಲಾಗಿದೆ. ಇದರಿಂದ ವಹಿವಾಟು ಹೆಚ್ಚಿದೆ.

ಒಂದೇ ದಿನದಲ್ಲಿ ಮೂರು ಬಾರಿ ಮೂರು ಲಕ್ಷಕ್ಕೂ ಹೆಚ್ಚು ಚೀಲ ಮೆಣಸಿನಕಾಯಿ ಆವಕವಾಗಿದ್ದರೆ, ಐದು ಬಾರಿ ಎರಡು ಲಕ್ಷಕಿಂತ ಹೆಚ್ಚು ಚೀಲ ಆವಕವಾಗಿದ್ದವು. ಸುಮಾರು 7 ಬಾರಿ ಒಂದು ಲಕ್ಷ ಚೀಲಗಳಷ್ಟು ಮೆಣಸಿನಕಾಯಿ ಆವಕವಾಗಿದ್ದು, ಕೂಡ ದಾಖಲೆಯಾಗಿದೆ.ಈಗ ಲೋಕಸಭಾ ಚುನಾವಣೆ ಪರಿಣಾಮ ಆವಕ ಕಡಿಮೆಯಾಗುತ್ತಿದೆ.

ಬ್ಯಾಡಗಿ ಎಪಿಎಂಸಿಗೆ ಮಾರಾಟಕ್ಕೆ ತಂದಿರುವ ಮೆಣಸಿನಕಾಯಿ ಚೀಲಗಳು



> ಎಪಿಎಂಸಿಯಲ್ಲಿ ಇ-ಟೆಂಡರ್ ಅಳವಡಿಸಲಾಗಿದೆ. ತೂಕದ ಪ್ರಕ್ರಿಯೆ ಬಳಿಕ ರೈತರಿಗೆ ಪಟ್ಟಿ ನೀಡಿ ಹಣ ನೀಡಲಾಗುತ್ತದೆ
> **ಎಚ್.ವೈ. ಸತೀಶ,** ಕಾರ್ಯದರ್ಶಿ, ಎಪಿಎಂಸಿ, ಬ್ಯಾಡಗಿ

> ವಿವಿಧ ತಳಿಯ ಮೆಣಸಿನಕಾಯಿ ಅಭಿವೃದ್ಧಿಪಡಿಸಿರುವ ಪರಿಣಾಮ ಬ್ಯಾಡಗಿ ಮೂಲ ತಳಿ ನೇಪಥ್ಯಕ್ಕೆ ಸರಿದಿದೆ. ಮೂಲ ತಳಿಯನ್ನು ಅಭಿವೃದ್ಧಿಪಡಿಸಬೇಕು
> **ಎಸ್.ಬಿ. ಖಾನಗೌಡ್ರ,** ದಲ್ಲಾಳಿ

> ಒಂದೇ ದಿನದಲ್ಲಿ ನೂರಾರು ಕ್ವಿಂಟಲ್ ಮೆಣಸಿನಕಾಯಿ ಮಾರಾಟಕ್ಕೆ ತರುವುದರಿಂದ ಜಾಗದ ಕೊರತೆಯಾಗುತ್ತಿದೆ. ಇದನ್ನು ನೀಗಿಸಲು ಸರ್ಕಾರ ಕ್ರಮವಹಿಸಬೇಕು
> **ಸುರೇಶಗೌಡ್ರ ಪಾಟೀಲ,** ಅಧ್ಯಕ್ಷ, ವರ್ತಕರ ಸಂಘ, ಬ್ಯಾಡಗಿ

ಹತ್ತಿ ಉತ್ಪನ್ನಗಳ ರಫ್ತು ಹೆಚ್ಚಳ

ಮಾಸಿಕ ಸರಾಸರಿ ರಫ್ತು ಮೌಲ್ಯ ₹8,340 ಕೋಟಿ

ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷದಲ್ಲಿ ದೇಶದ ಹತ್ತಿ ನೂಲು, ಉಡುಪು ಹಾಗೂ ಕೈಮಗ್ಗ ಉತ್ಪನ್ನಗಳ ರಫ್ತು ಪ್ರಮಾಣವು ಶೇ 6.71ರಷ್ಟು ಹೆಚ್ಚಳವಾಗಿದೆ. ಒಟ್ಟು ₹97,578 ಕೋಟಿ ಮೌಲ್ಯದ ಉತ್ಪನ್ನಗಳನ್ನು ರಫ್ತು ಮಾಡಲಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

2022–23ನೇ ಆರ್ಥಿಕ ವರ್ಷದಲ್ಲಿ ₹91 ಸಾವಿರ ಕೋಟಿ ಮೌಲ್ಯದ ಉತ್ಪನ್ನಗಳನ್ನು ರಫ್ತು ಮಾಡಲಾಗಿತ್ತು. ಮಾರ್ಚ್‌ನಲ್ಲಿ ರಫ್ತು ಪ್ರಮಾಣವು ಶೇ 6.78ರಷ್ಟು ಹೆಚ್ಚಳವಾಗಿದ್ದು, ಒಟ್ಟು ₹8,340 ಕೋಟಿ ಮೌಲ್ಯದ ಉತ್ಪನ್ನಗಳನ್ನು ವಿದೇಶಗಳಿಗೆ ರವಾನಿಸಲಾಗಿದೆ ಎಂದು ತಿಳಿಸಿದೆ.

ಭಾರತವು ಪ್ರಮುಖವಾಗಿ ಅಮೆರಿಕ, ಬಾಂಗ್ಲಾದೇಶ, ಚೀನಾ, ಶ್ರೀಲಂಕಾ ಹಾಗೂ ಯುಎಇಗೆ ಹತ್ತಿ ಉತ್ಪನ್ನಗಳನ್ನು ರಫ್ತು ಮಾಡುತ್ತದೆ. ಈ ಪೈಕಿ ಅಮೆರಿಕಕ್ಕೆ ಶೇ 25ರಷ್ಟು ಉತ್ಪನ್ನಗಳು ಪೂರೈಸಲಾಗುತ್ತವೆ.

ಪೂರ್ವ ಕೆರಿಬಿಯನ್ ಪ್ರದೇಶದಲ್ಲಿರುವ ಅಂಗುಯಿಲಾ, ಸರ್ಬಿಯಾ, ಜಾರ್ಜಿಯಾ, ಸ್ವೀಡನ್, ಸೈಪ್ರಸ್, ಅಜೆರ್ಬೈಜಾನ್ ಮತ್ತು ಇರಾನ್‌ಗೂ ರಫ್ತು ಮಾಡಲಾಗಿದೆ.

ಪ್ರತಿ ತಿಂಗಳು ಈ ಉತ್ಪನ್ನಗಳ ಸರಾಸರಿ ರಫ್ತು ಮೌಲ್ಯವು ₹8,340 ಕೋಟಿ ಆಗಿದೆ.

ಭಾರತವು ಇಡೀ ವಿಶ್ವದಲ್ಲಿಯೇ ಅತಿಹೆಚ್ಚಿನ ಪ್ರಮಾಣದಲ್ಲಿ ಹತ್ತಿ ಉತ್ಪಾದಿಸುತ್ತದೆ. ಜಾಗತಿಕಮಟ್ಟದಲ್ಲಿ ಶೇ 23ರಷ್ಟು ಉತ್ಪಾದನಾ ಪಾಲು ಹೊಂದಿದೆ. ಈ ವಲಯವು ಶ್ರಮಿಕ ಪ್ರಧಾನವಾಗಿದೆ.

2030ರ ವೇಳೆಗೆ ಜವಳಿ ರಫ್ತು ವಹಿವಾಟಿನ ಮೌಲ್ಯವನ್ನು ₹8.34 ಲಕ್ಷ ಕೋಟಿಗೆ ಹೆಚ್ಚಿಸಲು ದೇಶದ ರಫ್ತುದಾರರು ಗುರಿ ಹೊಂದಿದ್ದಾರೆ. 2023–24ರಲ್ಲಿ ದೇಶದ ವಾಣಿಜ್ಯ ಸರಕು ರಫ್ತಿನ ಪ್ರಮಾಣವು ಶೇ 3.11ರಷ್ಟು ಕುಸಿತ ಕಂಡಿತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹438

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹175.50
ಆರ್‌ಎಸ್‌ಎಸ್-5	₹169.50
ಗುಡ್ ಲಾಟ್	₹159

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹160-465
ದ್ವಿತಳಿ (ಬಿ.ವಿ)	₹235-563

ನೆರೆಯ ದೇಶಗಳಿಗೆ ಈರುಳ್ಳಿ ರಫ್ತು

ನವದೆಹಲಿ (ಪಿಟಿಐ): ದೇಶೀಯ ಮಾರುಕಟ್ಟೆಯಲ್ಲಿ ಧಾರಣೆ ಕುಸಿದಿರುವ ಬೆನ್ನಲ್ಲೇ ನೆರೆಯ ಆರು ರಾಷ್ಟ್ರಗಳಿಗೆ 99,500 ಟನ್ ಈರುಳ್ಳಿ ರಫ್ತು ಮಾಡಲು ಕೇಂದ್ರ ಸರ್ಕಾರವು ಶನಿವಾರ ಅನುಮತಿ ನೀಡಿದೆ.

ಅಲ್ಲದೆ, ಮಧ್ಯಪ್ರಾಚ್ಯ ಹಾಗೂ ಯುರೋಪ್‌ನ ಕೆಲವು ದೇಶಗಳಿಗೆ ಎರಡು ಸಾವಿರ ಟನ್‌ನಷ್ಟು ಬಿಳಿ ಈರುಳ್ಳಿ ರಫ್ತಿಗೂ ಒಪ್ಪಿಗೆ ಸೂಚಿಸಿದೆ.

2023–24ನೇ ಸಾಲಿನ ಖಾರೀಫ್ ಮತ್ತು ರಾಬಿ ಅವಧಿಯಲ್ಲಿ ಉತ್ಪಾದನೆ ಕುಸಿತ ಹಾಗೂ ದೇಶೀಯ ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಿಸುವ ನಿಟ್ಟಿನಲ್ಲಿ ಕಳೆದ ಡಿಸೆಂಬರ್ 8ರಂದು ಈರುಳ್ಳಿ ರಫ್ತಿಗೆ ನಿರ್ಬಂಧ ಹೇರಿತ್ತು.

‘ಸದ್ಯ ದ್ವಿಪಕ್ಷೀಯ ಒಪ್ಪಂದದ ಅನುಸಾರ ಬಾಂಗ್ಲಾದೇಶ, ಯುಎಇ, ಭೂತಾನ್, ಬಹರೈನ್, ಮಾರಿಷಸ್ ಹಾಗೂ ಶ್ರೀಲಂಕಾಕ್ಕೆ ರಫ್ತು ಮಾಡಲು ಅನುಮತಿ ನೀಡಲಾಗಿದೆ. ಮಹಾರಾಷ್ಟ್ರದಿಂದ ಇಷ್ಟು ಪ್ರಮಾಣದ ಈರುಳ್ಳಿಯನ್ನು ರಫ್ತು ಮಾಡಲಾಗುತ್ತದೆ’ ಎಂದು ಕೇಂದ್ರ ಗ್ರಾಹಕ ಸಚಿವಾಲಯವು ತಿಳಿಸಿದೆ.

‘ಇ-ವೇದಿಕೆಗಳ ಮೂಲಕ ಕಡಿಮೆ ಬೆಲೆಯಲ್ಲಿ ಈ ದೇಶಗಳಿಗೆ ಈರುಳ್ಳಿ ರಫ್ತು ಮಾಡಲು ಕೇಂದ್ರದ ಏಜೆನ್ಸಿಯಾದ ನ್ಯಾಷನಲ್ ಕೋ ಆಪರೇಟಿವ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ (ಎನ್‌ಸಿಇಎಲ್) ಕ್ರಮವಹಿಸಿದೆ’ ಎಂದು ಮೂಲಗಳು ತಿಳಿಸಿವೆ.

ಮಿತ್ರ ರಾಷ್ಟ್ರಗಳಿಗೆ ಈರುಳ್ಳಿ ಪೂರೈಸಲು ಕೇಂದ್ರವು ಸೂಚಿಸಿರುವ ಏಜೆನ್ಸಿಗಳಿಗೆ ಎನ್‌ಸಿಇಎಲ್‌ನಿಂದ ಶೇ 100ರಷ್ಟು ಮುಂಗಡ ಪಾವತಿ ಆಧಾರದ ಮೇಲೆ ಈರುಳ್ಳಿಯನ್ನು ಪೂರೈಸಲಾಗುತ್ತದೆ.

‘ಮಹಾರಾಷ್ಟ್ರದಲ್ಲಿ ದೇಶದಲ್ಲಿಯೇ ಅತಿಹೆಚ್ಚು ಪ್ರಮಾಣದಲ್ಲಿ ಈರುಳ್ಳಿ ಬೆಳೆಯಲಾಗುತ್ತದೆ. ಅಲ್ಲದೆ, ಎನ್‌ಸಿಇಎಲ್‌ನಿಂದ ರಫ್ತು ಮಾಡುವ ಹೆಚ್ಚಿನ ಪ್ರಮಾಣದ ಈರುಳ್ಳಿಯನ್ನು ಇದೇ ರಾಜ್ಯದಿಂದ ಪೂರೈಸಲಾಗುತ್ತದೆ’ ಎಂದು ಸಚಿವಾಲಯವು ತಿಳಿಸಿದೆ.

‘ಬಿಳಿ ಈರುಳ್ಳಿಯ ಬಿತ್ತನೆ ಬೀಜದ ದರ ಹೆಚ್ಚಿದೆ. ಅಲ್ಲದೆ, ಇದನ್ನು ಬೆಳೆಯಲು ಉತ್ತಮ ಕೃಷಿ ವಿಧಾನವನ್ನು ಅನುಸರಿಸಬೇಕಿದೆ. ಹಾಗಾಗಿ, ಉತ್ಪಾದನಾ ವೆಚ್ಚವು ಹೆಚ್ಚಿದೆ’ ಎಂದು ಹೇಳಿದೆ.

ಪ್ರಸಕ್ತ ವರ್ಷದ ರಾಬಿ ಅವಧಿಯಲ್ಲಿ ಬೆಲೆ ಸ್ಥಿರತೆ ನಿಧಿಯಡಿ (ಪಿಎಸ್‌ಎಫ್) 5 ಲಕ್ಷ ಟನ್‌ನಷ್ಟು ಈರುಳ್ಳಿ ಕಾಪು ದಾಸ್ತಾನಿಗೆ ಸಚಿವಾಲಯ ನಿರ್ಧರಿಸಿದೆ.

ಸಚಿವಾಲಯ ಸೇರಿ ಎನ್‌ಸಿಸಿಎಫ್, ನಾಫೆಡ್ ತಂಡವು ಇತ್ತೀಚೆಗೆ ಮಹಾರಾಷ್ಟ್ರದ ನಾಸಿಕ್ ಮತ್ತು ಅಹಮದಾಬಾದ್ ಜಿಲ್ಲೆಗೆ ಭೇಟಿ ನೀಡಿತ್ತು. ಕಾಪು ದಾಸ್ತಾನು ಸಂಬಂಧ ರೈತರ ಉತ್ಪಾದಕ ಸಂಘಗಳು, ರೈತರ ಉತ್ಪಾದಕ ಕಂಪನಿಗಳು ಮತ್ತು ಸಹಕಾರ ಸಂಘಗಳಿಗೆ ಕೋರಿಕೆ ಸಲ್ಲಿಸಿತ್ತು.

> ### ವಿಕಿರಣ ತಂತ್ರಜ್ಞಾನದ ನೆರವು
> ದೀರ್ಘಾವಧಿವರೆಗೆ ಈರುಳ್ಳಿಯನ್ನು ಶೇಖರಣೆ ಮಾಡಿದರೆ ಮೊಳಕೆಯೊಡೆಯುತ್ತದೆ. ಇದರಿಂದ ಉಂಟಾಗುವ ನಷ್ಟ ತಪ್ಪಿಸಲು ಮಹಾರಾಷ್ಟ್ರ ಸರ್ಕಾರವು, ಬಾಬಾ ಪರಮಾಣು ಸಂಶೋಧನಾ ಸಂಸ್ಥೆಯು (ಬಿಎಆರ್‌ಸಿ) ಅಭಿವೃದ್ಧಿಪಡಿಸಿರುವ ವಿಕಿರಣ ತಂತ್ರಜ್ಞಾನದ ನೆರವು ಪಡೆದಿದೆ.
> ಕಳೆದ ವರ್ಷ ಈ ತಂತ್ರಜ್ಞಾನ ಅಳವಡಿಸಿಕೊಂಡಿರುವ ಶೈತ್ಯಾಗಾರಗಳಲ್ಲಿ 1,200 ಟನ್ ಸಂಗ್ರಹಿಸಲಾಗಿತ್ತು. ಈ ಬಾರಿ 5 ಸಾವಿರ ಟನ್ ಸಂಗ್ರಹಿಸಲು ನಿರ್ಧರಿಸಲಾಗಿದೆ.
> ‘ಕಳೆದ ವರ್ಷ ಪ್ರಾಯೋಗಿಕವಾಗಿ ಈ ತಂತ್ರಜ್ಞಾನವನ್ನು ಜಾರಿಗೊಳಿಸಲಾಗಿತ್ತು. ಶೈತ್ಯಾಗಾರ ಸಂಗ್ರಹದಲ್ಲಿನ ನಷ್ಟವು ಶೇ 10ರಷ್ಟಕ್ಕಿಂತ ಕಡಿಮೆ ಇದೆ’ ಎಂದು ಸಚಿವಾಲಯವು ತಿಳಿಸಿದೆ.

54 ವಿಮಾನ ಮರಳಿಸಲು ಗೋ ಫಸ್ಟ್‌ಗೆ ಆದೇಶ

ನವದೆಹಲಿ (ಪಿಟಿಐ): ಗುತ್ತಿಗೆ ಪಡೆದಿದ್ದ 54 ವಿಮಾನಗಳನ್ನು ಗುತ್ತಿಗೆದಾರರಿಗೆ ಮರಳಿಸುವಂತೆ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ಗೋ ಫಸ್ಟ್ ವಿಮಾನಯಾನ ಕಂಪನಿಗೆ, ದೆಹಲಿ ಹೈಕೋರ್ಟ್ ಆದೇಶಿಸಿದೆ.

ವಿಮಾನಗಳನ್ನು ವಾಪಸ್ ಪಡೆಯುವುದಕ್ಕೆ ಸಂಬಂಧಿಸಿದಂತೆ ಗುತ್ತಿಗೆದಾರರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಾಲಯವು, ‘ಈ ಕುರಿತು ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯವು, ವಿಮಾನಗಳ ಸುಸ್ಥಿತಿ ಬಗ್ಗೆ ಪರಿಶೀಲನೆ ನಡೆಸಿ ಗುತ್ತಿಗೆದಾರರಿಗೆ ಸಹಕಾರ ನೀಡಬೇಕು. ಐದು ದಿನಗಳಲ್ಲಿ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಿದೆ. ಬ್ಯುಸಿ ಬೀ ಏರ್‌ವೇಸ್ ಕಂಪನಿ ಮತ್ತು ಸ್ಪೈಸ್‌ಜೆಟ್‌ನ ಮುಖ್ಯಸ್ಥ ಅಜಯ್ ಸಿಂಗ್ ಜಂಟಿಯಾಗಿ ಗೋ ಫಸ್ಟ್‌ಗೆ ಬಿಡ್ ಸಲ್ಲಿಸಿದ್ದಾರೆ. ಟ್ರಾವೆಲ್ ಪೋರ್ಟಲ್ ಈಸ್‌ಮೈಟ್ರಿಪ್ ಸಂಸ್ಥೆಯ ಸಹ ಸಂಸ್ಥಾಪಕ ನಿಶಾಂತ್ ಪಿಟ್ಟಿ ಅವರು, ಬ್ಯುಸಿ ಬೀ ಏರ್‌ವೇಸ್‌ನಲ್ಲಿ ಅತಿಹೆಚ್ಚಿನ ಷೇರುಗಳ ಮೇಲೆ ಒಡೆತನ ಹೊಂದಿದ್ದಾರೆ.

‘ಹೈಕೋರ್ಟ್ ನೀಡಿರುವ ಆದೇಶವನ್ನು ಪರಿಶೀಲಿಸಿದ ಬಳಿಕ ಮುಂದಿನ ಕ್ರಮಕೈಗೊಳ್ಳಲಾಗುವುದು’ ಎಂದು ಪಿಟ್ಟಿ ತಿಳಿಸಿದ್ದಾರೆ.

WEEKEND CORNER

ಪುರಾತನ ಶ್ರೀ ಮುನೇಶ್ವರಸ್ವಾಮಿ
ದೇವಸ್ಥಾನದ 224ನೇ ಜಾತ್ರಾ ಮಹೋತ್ಸವ
ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಆವಲಹಳ್ಳಿ ಗ್ರಾಮ, ಬೆಂಗಳೂರು–49

ಶ್ರೀ ಮುನೇಶ್ವರಸ್ವಾಮಿ ರಥೋತ್ಸವ
ದಿನಾಂಕ: 01.5.2024ನೇ ಬುಧವಾರ
ಮಧ್ಯಾಹ್ನ 02:00 ಗಂಟೆಗೆ
ಜಾತ್ರೆ ದಿನಾಂಕ:
29.4.2024ನೇ ಸೋಮವಾರ ದಿಂದ
02.5.2024ನೇ ಗುರುವಾರ ವರೆಗೆ
ಸರ್ವರಿಗೂ ಆದರದ ಸ್ವಾಗತ

ಐಸಿಐಸಿಐ ಬ್ಯಾಂಕ್‌ಗೆ ಶೇ 18.5ರಷ್ಟು ಲಾಭ

ಮುಂಬೈ (ಪಿಟಿಐ): ಐಸಿಐಸಿಐ ಬ್ಯಾಂಕ್, 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕ ದಲ್ಲಿ ₹11,672 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹9,853 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 18.5ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಐಸಿಐಸಿಐ ಬ್ಯಾಂಕ್, ದೇಶದ ಖಾಸಗಿ ವಲಯದ ಎರಡನೇ ಅತಿದೊಡ್ಡ ಬ್ಯಾಂಕ್ ಆಗಿದೆ. ತೆರಿಗೆ ನಂತರದ ಲಾಭದಲ್ಲಿ ಶೇ 17.4ರಷ್ಟು ಏರಿಕೆಯಾಗಿದೆ. ಒಟ್ಟು ₹10,708 ಕೋಟಿ ಲಾಭ ಗಳಿಸಿದೆ.

ಬಡ್ಡಿ ವರಮಾನದಲ್ಲಿ ಶೇ 8.1ರಷ್ಟು ಹೆಚ್ಚಳವಾಗಿದ್ದು, ₹19,093 ಕೋಟಿ ಆಗಿದೆ. ಬಡ್ಡಿಯೇತರ ವರಮಾನದಲ್ಲಿ ಶೇ 15.7ರಷ್ಟು ಏರಿಕೆಯಾಗಿದ್ದು, ₹5,930 ಕೋಟಿ ಆಗಿದೆ ಎಂದು ಬ್ಯಾಂಕ್ ವಿವರಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

18ನೇ ವರ್ಷದ ಪುಣ್ಯಸ್ಮರಣೆ

ಎಸ್. ಗಂಗಾಧರಂ ರೆಡ್ಡಿ
ಸಂಸ್ಥಾಪಕರು / ಅಧ್ಯಕ್ಷರು
ಪ್ರಕಾಶನಗರ ಕ್ರೆಡಿಟ್ ಕೋ–ಆಫ್ ಸೊಸೈಟಿ ಲಿ., ಪ್ರಕಾಶನಗರ, ಬೆಂಗಳೂರು–21
ನಿರ್ದೇಶಕರು/ಸಿಬ್ಬಂದಿ/ಸದಸ್ಯರು/ಕುಟುಂಬ

ವೈಕುಂಠ ಸಮಾರಾಧನೆ

ಬಿ.ಪಿ ಸೋಮಶೇಖರ್ (SBI)
ಇವರು ದಿನಾಂಕ 17.04.24 ಬುಧವಾರದಂದು ದೈವಾಧೀನರಾಗಿದ್ದು, ತತ್ಸಂಬಂಧವಾದ ಇವರ ಉತ್ತರ ಕ್ರಿಯಾದಿ ಕಾರ್ಯವು ದಿನಾಂಕ 28.04.24 ಭಾನುವಾರ ಬೆಳಗ್ಗೆ 10 ಗಂಟೆಗೆ ಮೃತರ ಸ್ವಗೃಹ ನಂ. 568, 1ನೇ ಡಿ ಮುಖ್ಯರಸ್ತೆ, 9ನೇ ಬ್ಲಾಕ್, ನಾಗರಭಾವಿ 2ನೇ ಹಂತ, ಬೆಂಗಳೂರು - 72 ಇಲ್ಲಿ ನೆರವೇರಲಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ. ಭೋಜನ ಮಧ್ಯಾಹ್ನ 12ರ ನಂತರ
ದುಃಖತಪ್ತರು
ಶಾರದಾ ಸೋಮಶೇಖರ್, ಅರುಣ್‌ಕುಮಾರ್ ಬಿ.ಎಸ್ ಮತ್ತು ಕುಟುಂಬದವರು
ಫೋನ್ : 9480237725, 8095212016

12ನೇ ವರ್ಷದ ಪುಣ್ಯಸ್ಮರಣೆ

ಶತಾಯುಷಿ ಶ್ರೀ ರಂಗಪ್ಪನವರು
ನಿಧನ: 28–04–2012
ರೈಥಾಪಿ ಕುಟುಂಬಸ್ಥರು, ಹನುಮಂತೇಗೌಡನ ಪಾಳ್ಯ, ನೆಲಮಂಗಲ ತಾಲ್ಲೂಕು.
ನೀವು ನಮ್ಮನ್ನು ಅಗಲಿ ಇಂದಿಗೆ 12 ವರ್ಷ ಕಳೆದರೂ, ನಿಮ್ಮ ಸವಿನೆನಪುಗಳು ಅಚ್ಚಳಿಯದೆ ಉಳಿದಿದೆ.
ತಮ್ಮ ಸ್ಮರಣೆಯಲ್ಲಿರುವ:
ಸಂಜೀವಮ್ಮ ಪತ್ನಿ ಮತ್ತು ಮಕ್ಕಳಾದ ನಾಗರಾಜ, ಕೃಷ್ಣಪ್ಪ, ಹೆಚ್.ಹೆಚ್.ಗೌಡ, ರವಿ ಶಂಕರ ಹಾಗೂ ಬಂಧು ಬಾಂಧವರು.

ಬಿಒಎಂಗೆ ₹1,218 ಕೋಟಿ ಲಾಭ

ಮುಂಬೈ (ಪಿಟಿಐ): 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಮಹಾರಾಷ್ಟ್ರದ (ಬಿಒಎಂ) ನಿವ್ವಳ ಲಾಭದಲ್ಲಿ ಶೇ 45ರಷ್ಟು ಏರಿಕೆಯಾಗಿದ್ದು, ಒಟ್ಟು ₹1,218 ಕೋಟಿ ಗಳಿಸಿದೆ.

ವಸೂಲಾಗದ ಸಾಲದ ಪ್ರಮಾಣದಲ್ಲಿ ಇಳಿಕೆಯಾಗಿರುವುದು ಹಾಗೂ ಬಡ್ಡಿ ವರಮಾನದಲ್ಲಿ ಹೆಚ್ಚಳ ಆಗಿರುವುದರಿಂದ ಲಾಭದಲ್ಲಿ ಏರಿಕೆಯಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹840 ಕೋಟಿ ಲಾಭ ಗಳಿಸಿತ್ತು. 2023–24ರ ಪೂರ್ಣ ಆರ್ಥಿಕ ವರ್ಷದಲ್ಲಿ ನಿವ್ವಳ ಲಾಭವು ಶೇ 55ರಷ್ಟು ಏರಿಕೆಯಾಗಿದ್ದು, ಒಟ್ಟು ₹4,055 ಕೋಟಿ ಗಳಿಸಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಬಡ್ಡಿ ವರಮಾನವು ಶೇ 18.17ರಷ್ಟು ಏರಿಕೆಯಾಗಿದ್ದು, ₹2,548 ಕೋಟಿ ಗಳಿಸಿದೆ. ಪೂರ್ಣ ಆರ್ಥಿಕ ವರ್ಷದಲ್ಲಿ ₹5,467 ಕೋಟಿ ಬಡ್ಡಿ ವರಮಾನ ಗಳಿಸಿದೆ. ಬಡ್ಡಿಯೇತರ ವರಮಾನವು ಶೇ 24ರಷ್ಟು ಹೆಚ್ಚಳವಾಗಿದ್ದು, ₹1,022 ಕೋಟಿ ಆಗಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 2.47ರಿಂದ ಶೇ 1.88ಕ್ಕೆ ಇಳಿಕೆಯಾಗಿದೆ. ನಿವ್ವಳ ಎನ್‌ಪಿಎ ಶೇ 0.25ರಿಂದ ಶೇ 0.20ಕ್ಕೆ ಕುಗ್ಗಿದೆ.

ರಸ್ತೆ ಅಪಘಾತ: ಮೂವರು ಭಾರತೀಯ ಮಹಿಳೆಯರ ಸಾವು

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಸೌತ್ ಕ್ಯಾರೊಲಿನಾ ರಾಜ್ಯದಲ್ಲಿ ಶುಕ್ರವಾರ ಮಧ್ಯಾಹ್ನ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಭಾರತ ಮೂಲದ ಮೂವರು ಮಹಿಳೆಯರು ಮೃತಪಟ್ಟಿದ್ದಾರೆ.

ಸ್ಟ್ಯಾಂಟನ್ ಮೇಲ್ಸೇತುವೆ ಮೇಲೆ ತೆರಳುತ್ತಿದ್ದಾಗ ಸಂಭವಿಸಿದ ಈ ಅವಘಡದಿಂದ ಕಾರು 20 ಅಡಿಯಷ್ಟು ಮೇಲಕ್ಕೆ ಜಿಗಿದಿದ್ದು, ಹೆದ್ದಾರಿಯ ವಿಭಜಕಗಳಿಗೆ ಡಿಕ್ಕಿ ಹೊಡೆದಿದೆ. ಆ ಬಳಿಕ ರಸ್ತೆಯ ಪಕ್ಕದಲ್ಲಿರುವ ಕೆಲವು ಮರಗಳಿಗೆ ಡಿಕ್ಕಿಯಾಗಿದೆ. ಇಷ್ಟೆಲ್ಲ ಆದ ನಂತರ ನೆಲಕ್ಕೆ ಅಪ್ಪಳಿಸಿದೆ. ಇದರಿಂದಾಗಿ ಕಾರು ಸಂಪೂರ್ಣ ನುಜ್ಜುಗುಜ್ಜಾಗಿದೆ ಎಂದು ಸೌತ್ ಕ್ಯಾರೊಲಿನಾ ಹೆದ್ದಾರಿಯಲ್ಲಿರುವ ಗಸ್ತು ಸಿಬ್ಬಂದಿ ತಿಳಿಸಿದ್ದಾರೆ.

ಈ ಅಪಘಾತಕ್ಕೆ ಕಾರಣವೇನು ಎಂಬುದರ ಬಗ್ಗೆ ತನಿಖೆ ಕೈಗೊಳ್ಳಲಾಗುವುದು ಎಂದು ಗ್ರೀನ್‌ವಿಲ್ಲೆ ಕೌಂಟಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕಾರಿನ ಚಾಲಕನನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆತನ ಸ್ಥಿತಿ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ.

ಗಾಜಾ ಕದನ ವಿರಾಮಕ್ಕೆ ಇಸ್ರೇಲ್ ಪ್ರಸ್ತಾವ

ಕೈರೋ (ಎಪಿ): ಗಾಜಾದಲ್ಲಿ ಕದನ ವಿರಾಮಕ್ಕಾಗಿ ಇಸ್ರೇಲ್ ಮುಂದಿಟ್ಟಿರುವ ಹೊಸ ಪ್ರಸ್ತಾವವನ್ನು ಪರಿಶೀಲಿಸಲಾಗುತ್ತಿದೆ ಎಂದು ಪ್ಯಾಲೆಸ್ಟೀನ್‌ನ ಬಂಡುಕೋರ ಸಂಘಟನೆ ಹಮಾಸ್ ಶನಿವಾರ ಹೇಳಿದೆ.

ಈಜಿಪ್ಟ್‌ನ ಉನ್ನತ ಮಟ್ಟದ ನಿಯೋಗವು ಇಸ್ರೇಲ್‌ಗೆ ಭೇಟಿ ನೀಡಿದ ಕೆಲವೇ ಗಂಟೆಗಳ ನಂತರ ಹಮಾಸ್‌ನಿಂದ ಈ ಹೇಳಿಕೆ ಹೊರಬಿದ್ದಿದೆ.

ಗಾಜಾದಲ್ಲಿ ಸುದೀರ್ಘ ಕದನ ವಿರಾಮಕ್ಕಾಗಿ ‘ಹೊಸ ನೋಟ’ ಕುರಿತು ಟೆಲ್ ಅವೀವ್‌ನಲ್ಲಿ ಚರ್ಚಿಸಲಾಯಿತು ಎಂದು ಹೆಸರು ಬಹಿರಂಗಪಡಿಸಲು ಬಯಸದ ಈಜಿಪ್ಟ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗಾಜಾ ಪಟ್ಟಿಯಲ್ಲಿ ಹಲವು ತಿಂಗಳಿನಿಂದ ನಡೆಯುತ್ತಿರುವ ಯುದ್ಧ ಕೊನೆಗೊಳಿಸಲು ಮತ್ತು ದಕ್ಷಿಣ ಗಾಜಾ ನಗರ ರಾಫಾದಲ್ಲಿ ಇಸ್ರೇಲ್ ನಡೆಸಲಿರುವ ಸಂಭವನೀಯ ಭೂ ದಾಳಿಯನ್ನು ತಡೆಯುವ ಸಲುವಾಗಿ ಮಧ್ಯಸ್ಥಿಕೆ ವಹಿಸಿರುವ ಈಜಿಪ್ಟ್ ಶಾಂತಿ ಮಾತುಕತೆಯನ್ನು ತೀವ್ರಗೊಳಿಸಿದೆ.

‘ಇಸ್ರೇಲ್ ಇಟ್ಟಿರುವ ಈ ಪ್ರಸ್ತಾವದ ಸಾಧಕ–ಬಾಧಕಗಳ ಮೌಲ್ಯಮಾಪನವನ್ನು ಪ್ಯಾಲೆಸ್ಟೀನ್‌ನ ಬಂಡಕೋರರ ಗುಂಪು ನಡೆಸುತ್ತಿದೆ. ಪ್ರಸ್ತಾವದ ಸಂಪೂರ್ಣ ಅಧ್ಯಯನ ಮಾಡಿದ ನಂತರ ನಿಲುವು ಪ್ರಕಟಿಸಲಾಗುವುದು’ ಎಂದು ಹಮಾಸ್ ಹಿರಿಯ ಅಧಿಕಾರಿ ಖಲೀಲ್ ಅಲ್ ಹಯ್ಯಾ ಹೇಳಿದ್ದಾರೆ.

ಗಾಜಾ ಪಟ್ಟಿಯಲ್ಲಿ ಇಸ್ರೇಲ್ ಮತ್ತು ಪ್ಯಾಲೆಸ್ಟೀನ್‌ನ ಹಮಾಸ್ ಬಂಡುಕೋರರ ನಡುವೆ ಕದನ ಮುಂದುವರಿದಿರುವಾಗ, ಗಡಿಯ ಸಮೀಪದ ದಕ್ಷಿಣ ಲೆಬನಾನಿನ ಗ್ರಾಮ ತೈರ್ ಹರ್ಫಾದಲ್ಲಿ ಇಸ್ರೇಲ್ ಶುಕ್ರವಾರ ನಡೆಸಿದ ವೈಮಾನಿಕ ದಾಳಿಯಿಂದಾಗಿ ಸ್ಥಳದಲ್ಲಿ ದಟ್ಟವಾಗಿ ಹೊಗೆ ಆವರಿಸಿದೆ —ಎಎಫ್‌ಪಿ ಚಿತ್ರ

ಗಾಜಾಕ್ಕೆ ನೆರವು: ಪ್ರತಿಕ್ರಿಯೆಗೆ ಬ್ರಿಟನ್ ನಕಾರ

ಲಂಡನ್ (ಎಪಿ): ಅಮೆರಿಕ ನಿರ್ಮಾಣ ಮಾಡುತ್ತಿರುವ ಹಡಗುತಾಣದ ಮೂಲಕ ಬ್ರಿಟಿಷ್ ಸೇನೆಯು ಗಾಜಾಕ್ಕೆ ನೆರವು ನೀಡಬಹುದು ಎಂದು ಶನಿವಾರ ಬಿಬಿಸಿ ವರದಿ ಮಾಡಿದ್ದು, ಈ ಬಗ್ಗೆ ಪ್ರತಿಕ್ರಿಯಿಸಲು ಬ್ರಿಟನ್ ನಿರಾಕರಿಸಿದೆ.

‘ಬ್ರಿಟಿಷ್ ಸರ್ಕಾರವು ಅಗತ್ಯ ವಸ್ತುಗಳನ್ನು ತುಂಬಿದ ಟ್ರಕ್‌ಗಳ ರವಾನೆಗೆ ಸೇನೆಯನ್ನು ನಿಯೋಜಿಸಲು ಯೋಜನೆ ರೂಪಿಸುತ್ತಿದೆ. ಆದರೆ ಈ ಬಗ್ಗೆ ಪ್ರಧಾನಿ ರಿಷಿ ಸುನಕ್ ಅವರ ಎದುರು ಯಾವುದೇ ಪ್ರಸ್ತಾವಗಳಿಲ್ಲ ಮತ್ತು ಈವರೆಗೆ ಯಾವುದೇ ನಿರ್ಧಾರಗಳನ್ನು ಕೈಗೊಳ್ಳಲಾಗಿಲ್ಲ’ ಎಂದು ಬಿಬಿಸಿ ವರದಿ ಮಾಡಿದೆ.

‘ಮತ್ತೊಂದು ರಾಷ್ಟ್ರವು ಟ್ರಕ್‌ಗಳನ್ನು ತಲುಪಿಸಲು ಸಿಬ್ಬಂದಿಯನ್ನು ಒದಗಿಸುತ್ತದೆ. ಆದರೆ ಅಮೆರಿಕ ಇದರಲ್ಲಿ ಭಾಗಿಯಾಗುವುದಿಲ್ಲ’ ಎಂದು ಅಮೆರಿಕದ ಮಿಲಿಟರಿ ಅಧಿಕಾರಿಯೊಬ್ಬರು ತಿಳಿಸಿದ ಬೆನ್ನಲ್ಲೇ ಈ ವರದಿ ಪ್ರಕಟವಾಗಿದೆ. ಹಡಗುತಾಣವನ್ನು ನಿರ್ಮಿಸಲು ಬ್ರಿಟನ್ ಈಗಾಗಲೇ ಸಹಕಾರ ನೀಡಿದ್ದು, ನೂರಾರು ಸೈನಿಕರು ಮತ್ತು ಕೆಲಸಗಾರರು ಈ ಯೋಜನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಉಕ್ರೇನ್ ಮೇಲೆ ಕ್ಷಿಪಣಿ ದಾಳಿ

ಕೀವ್ (ಎಪಿ): ದಕ್ಷಿಣ ರಷ್ಯಾ ಮೇಲೆ ಉಕ್ರೇನ್ ಡ್ರೋನ್ ದಾಳಿ ನಡೆಸಿದ ಬೆನ್ನಲ್ಲೇ ಪ್ರತೀಕಾರವಾಗಿ ರಷ್ಯಾ, ಉಕ್ರೇನ್‌ನ ಪ್ರಮುಖ ನಗರಗಳ ಮೇಲೆ ಶುಕ್ರವಾರ ರಾತ್ರೋರಾತ್ರಿ ಕ್ಷಿಪಣಿಗಳ ಸುರಿಮಳೆಗರೆದಿದೆ. ದೇಶದ ಇಂಧನ ಮೂಲಸೌಕರ್ಯವನ್ನು ಗುರಿಯಾಗಿಸಿಕೊಂಡು ಈ ದಾಳಿಯನ್ನು ನಡೆಸಿದೆ.

ಇದರ ನಡುವೆ, ದಕ್ಷಿಣ ಕ್ರಸ್ನೋದರ್ ಮೇಲೆ ತೂರಿ ಬಂದ ಉಕ್ರೇನ್‌ನ 66 ಡ್ರೋನ್‌ಗಳನ್ನು ತನ್ನ ವಾಯು ರಕ್ಷಣಾ ವ್ಯವಸ್ಥೆಗಳು ಹೊಡೆದುರುಳಿಸಿವೆ. ಸ್ವಾಧೀನಪಡಿಸಿಕೊಂಡ ಕ್ರಿಮಿಯಾ ದ್ವೀಪವನ್ನು ಗುರಿಯಾಗಿಸಿದ್ದ ಎರಡು ಡ್ರೋನ್‌ಗಳನ್ನು ಧ್ವಂಸ ಮಾಡಲಾಗಿದೆ ಎಂದು ರಷ್ಯಾ ಹೇಳಿದೆ.

ಉಕ್ರೇನ್ ಪಡೆಗಳು ತೈಲ ಸಂಸ್ಕರಣಾಗಾರವನ್ನು ಗುರಿಯಾಗಿಸಿಕೊಂಡಿವೆ. ಆದರೆ, ಯಾವುದೇ ಸಾವುನೋವು ಸಂಭವಿಸಿಲ್ಲ ಎಂದು ಕ್ರಸ್ನೋದರ್ ಪ್ರದೇಶದ ಗವರ್ನರ್ ವೆನಿಯಾಮಿನ್ ಕೊಂಡ್ರಾಟ್ಯೆವ್ ಹೇಳಿದರು.

ಚೀನಾದಲ್ಲಿ ಸುಂಟರಗಾಳಿ ಅಬ್ಬರ

ಬೀಜಿಂಗ್ (ಎಪಿ): ಚೀನಾದ ಗೌಂಗ್‌ಝೋ ನಗರದಲ್ಲಿ ಶನಿವಾರ ತೀವ್ರ ಆಲಿಕಲ್ಲು ಮಳೆಯ ನಡುವೆ ಸುಂಟರಗಾಳಿಯೊಂದು ಬೀಸಿತು ಎಂದು ಚೀನಾ ಮಾಧ್ಯಮಗಳು ವರದಿ ಮಾಡಿವೆ.

‘ಯಾವುದೇ ಹಾನಿ ಮತ್ತು ಗಾಯಗಳಾಗಿರುವ ಬಗ್ಗೆ ವರದಿಯಾಗಿಲ್ಲ’ ಎಂದು ಚೀನಾದ ಹವಾಮಾನ ಇಲಾಖೆ ತಿಳಿಸಿದೆ. ಮಧ್ಯಾಹ್ನದ ವೇಳೆ ಆಕಾಶ ಕತ್ತಲಾಗಿರುವುದು ಮತ್ತು ದೂಳು, ಕಲ್ಲುಗಳು ಗಾಳಿಯೊಂದಿಗೆ ಸುತ್ತುತ್ತಿರುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಪ್ರಜ್ವಲ್ ಪ್ರಕರಣ: ಎಸ್‌ಐಟಿ ರಚನೆ

ಒಂದನೇ ಪುಟದಿಂದ...

ಎಡಿಜಿಪಿ ಬಿ.ಕೆ. ಸಿಂಗ್ ನೇತೃತ್ವದಲ್ಲಿ ಎಸ್‌ಐಟಿ ರಚಿಸಲಾಗಿದೆ. ‘ಹಾಸನ ಜಿಲ್ಲೆಯಲ್ಲಿ ಹರಿದಾಡುತ್ತಿರುವ ವಿಡಿಯೊ ತುಣುಕುಗಳನ್ನು ಗಮನಿಸಿದರೆ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಈ ಕಾರಣದಿಂದ ತನಿಖೆ ನಡೆಸಲು ಎಸ್‌ಐಟಿ ರಚಿಸಲು ಸರ್ಕಾರ ತೀರ್ಮಾನಿಸಿದೆ. ಈ ಮಧ್ಯೆ ಪ್ರಜ್ವಲ್ ರೇವಣ್ಣ ವಿದೇಶಕ್ಕೆ ತೆರಳಿದ್ದಾರೆ ಎಂದು ಪೊಲೀಸರು ನೀಡಿದ್ದಾರೆ’ ಎಂದು ಮುಖ್ಯಮಂತ್ರಿ ಸಚಿವಾಲಯ ತಿಳಿಸಿದೆ.

ಹಡಗಿನಲ್ಲಿ ಸಿಲುಕಿರುವ ಭಾರತೀಯರ ಬಿಡುಗಡೆಗೆ ಇರಾನ್‌ನಿಂದ ಅವಕಾಶ

ದುಬೈ (ಪಿಟಿಐ): ಇರಾನ್ ಸೇನಾಪಡೆಗಳು ವಶಪಡಿಸಿಕೊಂಡಿರುವ ಪೋರ್ಚುಗೀಸ್ ಧ್ವಜ ಹೊತ್ತಿದ್ದ ಇಸ್ರೇಲ್‌ನ ಹಡಗಿನಲ್ಲಿದ್ದ ಸಿಬ್ಬಂದಿಯನ್ನು ಬಿಡುಗಡೆಗೊಳಿಸಲು ಕಾನ್ಸಲರ್ ಸೇವೆಯನ್ನು ಬಳಸಿಕೊಳ್ಳಲು ಅಲ್ಲಿಯ ವಿದೇಶಿ ರಾಯಭಾರ ಕಚೇರಿಗಳಿಗೆ ಅವಕಾಶ ನೀಡಲಾಗಿದೆ ಎಂದು ಇರಾನ್ ತಿಳಿಸಿದೆ.

ಇದರಿಂದಾಗಿ, ಇರಾನ್‌ನಲ್ಲಿ ಸಿಲುಕಿರುವ 17 ಮಂದಿ ಭಾರತೀಯ ಸಿಬ್ಬಂದಿ ಆದಷ್ಟು ಬೇಗ ಬಿಡುಗಡೆಯಾಗಲಿದ್ದಾರೆ ಎಂಬ ಭರವಸೆ ಮೂಡಿದೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಇರಾನ್‌ನ ವಿದೇಶಾಂಗ ವ್ಯವಹಾರಗಳ ಸಚಿವಾಲಯವು, ಪೋರ್ಚುಗಲ್‌ನ ಹೊಸ ವಿದೇಶಾಂಗ ವ್ಯವಹಾರಗಳ ಸಚಿವರು ಇರಾನ್ ವಿದೇಶಾಂಗ ವ್ಯವಹಾರಗಳ ಸಚಿವ ಹೊಸೇನ್ ಅಮಿರಾಬ್ ದೊಲ್ಲಾಹಿಯನ್ ಜೊತೆ ದೂರವಾಣಿ ಸಂಭಾಷಣೆ ನಡೆಸಿ, ಇಸ್ರೇಲ್ ಹಾಗೂ ಇರಾನ್ ನಡುವಣ ಸಂಘರ್ಷದ ಕುರಿತು ತಮ್ಮ ಅಭಿಪ್ರಾಯ ವಿನಿಮಯ ಮಾಡಿಕೊಂಡರು. ಇದೇ ವೇಳೆ, ಇರಾನ್ ವಶಪಡಿಸಿಕೊಂಡಿರುವ ಇಸ್ರೇಲ್ ಸರಕು ಹಡಗಿನ ಕುರಿತೂ ಚರ್ಚಿಸಿದರು.

‘ಹಡಗಿನಲ್ಲಿದ್ದ ಸಿಬ್ಬಂದಿಯನ್ನು ಬಿಡುಗಡೆಗೊಳಿಸುವುದನ್ನು ಮಾನವೀಯ ನೆಲೆಯಲ್ಲಿ ನೋಡಲಾಗುವುದು. ಟೆಹರಾನ್‌ನಲ್ಲಿಯ ರಾಯಭಾರಿಗಳು ತಮ್ಮ ದೇಶದ ಸಿಬ್ಬಂದಿಯನ್ನು ಬಿಡುಗಡೆಗೊಳಿಸಲು ಕಾನ್ಸಲರ್ ಸೇವೆಯನ್ನು ಬಳಸಿಕೊಳ್ಳಬಹುದು’ ಎಂದು ಹೊಸೇನ್ ಈ ವೇಳೆ ಹೇಳಿದರು.

ಇಸ್ರೇಲ್‌ಗೆ ಸೇರಿದ್ದ ಹಡಗನ್ನು ಏಪ್ರಿಲ್ 13ರಂದು ಇರಾನ್ ವಶಪಡಿಸಿಕೊಂಡಿತ್ತು. ಅದರಲ್ಲಿ 25 ಸಿಬ್ಬಂದಿ ಇದ್ದರು. ಅವರಲ್ಲಿ 17 ಮಂದಿ ಭಾರತೀಯರಾಗಿದ್ದಾರೆ.

ಪಿಎಂಎಲ್‌ಎನ್ ಚುಕ್ಕಾಣಿ ಹಿಡಿಯಲು ನವಾಜ್ ಸಿದ್ಧ

ಲಾಹೋರ್ (ಪಿಟಿಐ): ಆಡಳಿತಾರೂಢ ಪಾಕಿಸ್ತಾನ್ ಮುಸ್ಲಿಂ ಲೀಗ್-ನವಾಜ್ (ಪಿಎಂಎಲ್-ಎನ್) ಪಕ್ಷದಲ್ಲಿ ಆಂತರಿಕ ಕಲಹ ನಡೆಯುತ್ತಿರುವ ಮಧ್ಯದಲ್ಲೇ ಪಕ್ಷದ ಚುಕ್ಕಾಣಿಯನ್ನು ಹಿಡಿಯಲು ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ಸನ್ನದ್ಧರಾಗಿದ್ದಾರೆ.

‘ನವಾಜ್ ಅವರನ್ನು ಮತ್ತೆ ಪಕ್ಷದ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕೆಂದು ಶುಕ್ರವಾರ ನಡೆದ ಸಭೆಯಲ್ಲಿ ನಿರ್ಧರಿಸಲಾಗಿದೆ. ಮೇ 11ರಂದು ಪಕ್ಷದ ನಾಯಕತ್ವದ ಸಭೆ ನಡೆಯಲಿದ್ದು, ಅಂದು ನವಾಜ್ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗುವುದು’ ಎಂದು ಪಂಜಾಬ್ ಪ್ರಾಂತ್ಯದ ಪಿಎಂಎಲ್-ಎನ್ ಅಧ್ಯಕ್ಷ ರಾಣಾ ಸನಾ ಉಲ್ಲಾ ಅವರು ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Drivers

ಚಾಲಕರು ಬೇಕಾಗಿದ್ದಾರೆ! ಚಿತ್ರಕೂಟ ಶಾಲೆ ನಾಗರಭಾವಿ, ಕೆಂಗೇರಿಗೆ. 3 ವರ್ಷಗಳ ಅನುಭವ ಮತ್ತು ಭಾರೀ ವಾಹನ DL ಅಗತ್ಯ. ಸಂಬಳ: 20,000 ರಿಂದ 25,000 ಸಾವಿರ. ಸಂಪರ್ಕಿಸಿ: 9980538166, 9964902090

General

WANTED OFFICE ASSISTANTS/ HELPER (Male) Bommanahalli (Bangalore) Ph 9980140661/ 08025631755 Mail:starsilks@gmail.com

Part-Time Jobs

ಮನೆಯಿಂದಲೇ ಕುಳಿತು ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 18,000-20,000/- ವರೆಗೆ,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 8050064327, 8050064328.

ಪ್ರವಾಸ

Travel

★ಶ್ರೀಶ್ರೇಯಸ್ ಟೂರ್ಸ್★ 19.05.2024 12/15/20ದಿನಗಳು ದಿನಗಳು ಈಶಾನ್ಯರಾಜ್ಯಗಳ (ಸೆವೆನ್ ಸಿಸ್ಟರ್ಸ)ನ 6ರಾಜ್ಯಗಳು ಅಸ್ಸಾಂ,ಅರುಣಾಚಲ ಮೇಘಾಲಯ,ನಾಗಲ್ಯಾಂಡ್, ತ್ರಿಪುರ,ಮಿಝೋರಾಂ, 20.05.2024 10ದಿನಗಳು ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ)ಸಹಿತ 4ವಿಮಾನಗಳಲ್ಲಿ (ಕೆಲವೇ ಸೀಟುಗಳು ಲಭ್ಯತೆ), 26.06.2024,15.07.2024 6/12ದಿನಗಳು ಅಮರನಾಥಯಾತ್ರಾ ಸಹಿತ ಲೇ ಲಡಾಕ್,20.07.2024 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯಪ್ರವಾಸ, 09.09.2024,21.09.2024 12ದಿನಗಳು ಚಾರ್‌ದಾಮ್ ಯಾತ್ರಾ ವಿಶೇಷ, 24.07.2024,20.06.2024, 6ದಿನಗಳು ಭೂತಾನ್ ರಾಷ್ಟ್ರ ಪ್ರವಾಸ.9743351212, 9206979202, 8792319181

ರಿಯಲ್ ಎಸ್ಟೇಟ್ ಸೆಲ್ಲಿಂಗ್

Farm House/ Land/ Resorts

Out-Station

COCONUT FARM, House 2 acres of Land in Huliyurdurga Halevoor near Kunigal 1.5 Lakhs per gunta 9448473811, 9738222726

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾ ಮತ 2024

ಜನತಂತ್ರದ ಹಬ್ಬ

ಪ್ರಜಾವಾಣಿ ಭಾನುವಾರ • ಏಪ್ರಿಲ್ 28, 2024

ಅಸ್ಸಾಂನಲ್ಲಿ ರ‍್ಯಾಲಿ • ಪ್ರಧಾನಿಯನ್ನು 'ಸುಳ್ಳುಗಾರರ ಸರದಾರ' ಎಂದು ಟೀಕಿಸಿದ ಎಐಸಿಸಿ ಅಧ್ಯಕ್ಷ

'ಮೋದಿ ಸುಳ್ಳಿನ ಕಾರ್ಖಾನೆ ಯಶಸ್ವಿಯಾಗಲ್ಲ'

ಬಾರ್ಪೇಟಾ/ಗುವಾಹಟಿ (ಅಸ್ಸಾಂ) (ಪಿಟಿಐ): ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆ ಮುಸ್ಲಿಂ ಲೀಗ್‌ನ ಪ್ರತಿರೂಪದಂತಿದೆ ಎನ್ನುವ ಬಿಜೆಪಿ ಆರೋಪವನ್ನು ನಿರಾಕರಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ನರೇಂದ್ರ ಮೋದಿ ಅವರ ಸುಳ್ಳಿನ ಕಾರ್ಖಾನೆ ಸದಾ ಯಶಸ್ವಿಯಾಗಲು ಸಾಧ್ಯವಿಲ್ಲ' ಎಂದು ಹೇಳಿದ್ದಾರೆ.

ಅಸ್ಸಾಂನ ಬಾರ್ಪೇಟಾ ಜಿಲ್ಲೆಯ ಕಾಯಕುಚಿಯ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದ ಅವರು, ದೇಶದಲ್ಲಿ ನಿರುದ್ಯೋಗ ದೊಡ್ಡ ಸಮಸ್ಯೆಯಾಗಿದ್ದು, ಶೇ 65ರಷ್ಟು ಯುವಜನತೆಗೆ ಉದ್ಯೋಗವಿಲ್ಲ ಎಂದು ಹೇಳಿದರು.

ಪ್ರಧಾನಿ ಮೋದಿ ಅವರನ್ನು 'ಸುಳ್ಳುಗಾರರ ಸರದಾರ' ಎಂದು ಕರೆದ ಖರ್ಗೆ, 'ವಾರ್ಷಿಕ ಎರಡು ಕೋಟಿ ಉದ್ಯೋಗ ಸೃಷ್ಟಿಸುವುದು, ಕಪ್ಪು ಹಣ ವಾಪಸ್ ತಂದು ಪ್ರತಿಯೊಬ್ಬರಿಗೂ ₹15 ಲಕ್ಷ ಕೊಡುತ್ತೇನೆ ಎಂದಿದ್ದು, ರೈತರ ಆದಾಯ ದ್ವಿಗುಣಗೊಳಿಸುವುದಾಗಿ ಹೇಳಿದ್ದು ಎಲ್ಲವೂ ಸುಳ್ಳು' ಎಂದು ಟೀಕಿಸಿದರು.

'ಬಿಜೆಪಿಯು ದೇಶದ ಸಂಪತ್ತನ್ನು ಲೂಟಿ ಮಾಡುತ್ತಿದ್ದು, ಅದನ್ನು ಶ್ರೀಮಂತರಿಗೆ ಕೊಡುತ್ತಿದೆ. ಪ್ರಧಾನಿ ಮೋದಿ, ಅವರ ಕೆಲವು ಶ್ರೀಮಂತ ಸ್ನೇಹಿತರ ₹16 ಲಕ್ಷ ಕೋಟಿ ಸಾಲ ಮನ್ನಾ ಮಾಡಿದರು' ಎಂದು ಆರೋಪಿಸಿದರು. ಪಕ್ಷದ ಮುಖಂಡ ರಾಹುಲ್ ಗಾಂಧಿ ಅವರು 'ಭಾರತ್ ಜೋಡೊ ಯಾತ್ರೆ'ಯ ಮೂಲಕ ದೇಶವನ್ನು ಸುತ್ತಿದರೆ, ಮೋದಿ ಅವರು ಭಾರತ್ 'ತೋಡೊ' (ದೇಶ ವಿಭಜನೆ)ಗಾಗಿ ಶ್ರಮಿಸುತ್ತಿದ್ದಾರೆ ಎಂದು ಹೇಳಿದರು.

'ಅಧಿಕಾರ ಕಳೆದುಕೊಳ್ಳುವ ಭಯದಲ್ಲಿರುವ ಮೋದಿ, ಕಾಂಗ್ರೆಸ್ ಮತ್ತು ಗಾಂಧಿ ಕುಟುಂಬದ ವಿರುದ್ಧ ನಿರಂತರ ದಾಳಿ ನಡೆಸುತ್ತಿದ್ದಾರೆ. ಬಡವರ ನೋವಿನ ಅನುಭವ ಇಲ್ಲದವರಿಗೆ ಅಧಿಕಾರದಲ್ಲಿರುವ ಹಕ್ಕಿಲ್ಲ' ಎಂದು ಅಭಿಪ್ರಾಯಪಟ್ಟರು.

ನಂತರ ಗುವಾಹಟಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ, 'ಭ್ರಷ್ಟರನ್ನು ಜೈಲಿನಲ್ಲಿಡಬೇಕು ಎಂದು ಬಿಜೆಪಿ ಹೇಳುತ್ತದೆ. ಭ್ರಷ್ಟಾಚಾರದ ಆರೋಪ ಹೊತ್ತ ನಾಯಕರು ಕೇಸರಿ ಪಕ್ಷವನ್ನು ಸೇರಿದರೆ, ಅವರನ್ನು ತೊಡೆಯ ಮೇಲೆ ಕೂರಿಸಿಕೊಳ್ಳಲಾಗುತ್ತದೆ ಮತ್ತು ರಾಜ್ಯಸಭೆಗೆ ಅಥವಾ ವಿಧಾನಸಭೆಗೆ ಕಳಿಸಲಾಗುತ್ತದೆ' ಎಂದು ಆರೋಪಿಸಿದರು.

ಮಲ್ಲಿಕಾರ್ಜುನ ಖರ್ಗೆ ಹೇಳಿದ್ದು...



- ಮೋದಿ ಅವರ ಮಾತುಗಳು ವಿಶ್ವಾಸಾರ್ಹತೆ ಕಳೆದುಕೊಂಡಿವೆ. ಅವರು ದೇಶವನ್ನು ಧ್ರುವೀಕರಣಗೊಳಿಸಲು ಯತ್ನಿಸುತ್ತಿದ್ದಾರೆ.
- 10 ವರ್ಷ ಪ್ರಧಾನಿ ಆಗಿದ್ದ ಮನಮೋಹನ್‌ಸಿಂಗ್ ಎಂದಾದರೂ ಯಾರದಾದರೂ 'ಮಂಗಳಸೂತ್ರ' ಕಸಿಯುವ ಬಗ್ಗೆ ಮಾತನಾಡಿದ್ದರೇ? ಯಾರ ಬಗ್ಗೆಯಾದರೂ ಕೆಟ್ಟ ಮಾತು ಆಡಿದ್ದರೇ?
- ಕಾಂಗ್ರೆಸ್ ಹರಿಯುವ ನದಿ ಇದ್ದಂತೆ. ಕೆಲವರು ಪಕ್ಷ ಬಿಡುವುದರಿಂದ ಯಾವುದೇ ಪರಿಣಾಮ ಆಗುವುದಿಲ್ಲ. ಇದು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ, ಪ್ರಜಾಪ್ರಭುತ್ವ ಮತ್ತು ಸಂವಿಧಾನ ಕೊಟ್ಟ ಪಕ್ಷ. ಭಾರತದಲ್ಲಿ ಸಂವಿಧಾನ ಉಳಿದಿರುವುದೇ ಕಾಂಗ್ರೆಸ್‌ನಿಂದ ಎಂದು ನಾವು ತೋರಿಸಿಕೊಟ್ಟಿದ್ದೇವೆ.
- ಬಿಜೆಪಿಯ ಯಾರೊಬ್ಬರೂ ಸ್ವಾತಂತ್ರ್ಯಕ್ಕಾಗಿ ಮತ್ತು ಅಭಿವೃದ್ಧಿಗಾಗಿ ಹೋರಾಡಲಿಲ್ಲ. ಅವರು ದೇಶಭಕ್ತಿ ಬಗ್ಗೆ ಮಾತನಾಡುತ್ತಾರೆ ಮತ್ತು ನೆಹರೂ, ಇಂದಿರಾ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ್‍ಯಾರೂ ತಮ್ಮ ಮುಂದೆ ಏನೂ ಅಲ್ಲ ಎಂಬಂತೆ ತೋರಿಸಿಕೊಳ್ಳಲು ಪ್ರಯತ್ನಿಸುತ್ತಾರೆ.
- ಬಿಜೆಪಿಯವರಿಗೆ ಮೋದಿಯೇ ಸರ್ವಸ್ವ. ಅವರ ಪ್ರಕಾರ, ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು 2014 ರಲ್ಲಿ.
- ಸರ್ಕಾರದಲ್ಲಿರುವವರು, ಮುಖ್ಯವಾಗಿ ಮೋದಿ, 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎನ್ನುತ್ತಾರೆ. ಆದರೆ, ಆಗಿದ್ದು 'ಸಬ್ ಕಾ ಸತ್ಯಾನಾಶ್'.
- ನಷ್ಟದಲ್ಲಿರುವ ಕಂಪನಿಗಳು ಬಿಜೆಪಿಗೆ ₹500 ಕೋಟಿಯಿಂದ ₹1000 ಕೋಟಿ ದೇಣಿಗೆ ನೀಡಿವೆ. ಅದು 'ಚಂದಾ ಕೊಡಿ, ಗುತ್ತಿಗೆ ಪಡೆಯಿರಿ' ನೀತಿಯಾಗಿತ್ತು.

ಬಿಜೆಪಿ ಬಂದರೆ ಸಂವಿಧಾನ ಬದಲಿಸುತ್ತದೆ: ಪ್ರಿಯಾಂಕಾ

ಧರ್ಮಪುರ (ಗುಜರಾತ್) (ಪಿಟಿಐ): ಬಿಜೆಪಿಯ ಹಿರಿಯ ನಾಯಕರು ಈಗ ತೋರಿಕೆಗೆ ನಿರಾಕರಿಸುತ್ತಿದ್ದರೂ, ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಾಯಿಸುತ್ತಾರೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಶನಿವಾರ ಆರೋಪಿಸಿದರು.

ಗುಜರಾತ್‌ನ ವಲ್ಸಾಡ್ ಜಿಲ್ಲೆಯ ಆದಿವಾಸಿ ಪ್ರಾಬಲ್ಯದ ಧರ್ಮಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅನಂತ್ ಪಟೇಲ್ ಪರ ಸಾರ್ವಜನಿಕ ಸಭೆ ನಡೆಸಿದ ಅವರು, ಪ್ರಧಾನಿ ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು.

ಹಣದುಬ್ಬರ ಏರಿಕೆಯನ್ನು ಪ್ರಸ್ತಾಪಿಸಿದ ಅವರು, 'ಪ್ರಧಾನಿ ಮೋದಿ ಅವರು ವೇದಿಕೆಗಳನ್ನು 'ಸೂಪರ್ ಮ್ಯಾನ್' ರೀತಿ ಪ್ರವೇಶಿಸುತ್ತಾರೆ. ಅವರನ್ನು (ಮೋದಿ) 'ದುಬಾರಿ ಮನುಷ್ಯ' ಎಂದೇ ನೆನಪಿಟ್ಟುಕೊಳ್ಳಿ' ಎಂದು ಜನರಿಗೆ ಹೇಳಿದರು.

'ಪ್ರಧಾನಿ ಮೋದಿ ಎಂದೂ ಶಿಕ್ಷಣ, ಆರೋಗ್ಯ, ಹಣದುಬ್ಬರದ ಬಗ್ಗೆ ಮಾತನಾಡುವುದಿಲ್ಲ. ಇದನ್ನು ಜನ ಮತ್ತೆ ಐದು ವರ್ಷ ಸಹಿಸಿಕೊಳ್ಳುತ್ತಾರೆ ಎಂದು ನನಗೆ ಅನ್ನಿಸುವುದಿಲ್ಲ. ಅವರು ಕೇವಲ ದೊಡ್ಡ ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆ, ಜಗತ್ತು ಸುತ್ತುತ್ತಾರೆ. ಈಗ, ಜನ ಸಾಧನೆಯ ಪಟ್ಟಿ ಕೇಳುತ್ತಿರುವುದರಿಂದ ಆತಂಕಗೊಂಡಿದ್ದಾರೆ. ಹಾಗಾಗಿಯೇ ಅವರು ಹಿಂದೂ ಮುಸ್ಲಿಂ ವಿಚಾರ ಪ್ರಸ್ತಾಪಿಸುತ್ತಿದ್ದಾರೆ' ಎಂದು ಹೇಳಿದರು.

ಚುಟುಕು

ಕರ್ನಾಟಕದಲ್ಲಿ ಪಿಎಫ್‌ಐ ಜತೆ ಬಿಜೆಪಿ ಒಪ್ಪಂದ: ದಿಗ್ವಿಜಯ್ ಸಿಂಗ್

ಭೋಪಾಲ್ (ಪಿಟಿಐ): 'ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ' (ಪಿಎಫ್‌ಐ) ನಿಷೇಧಕ್ಕೆ ವಿರೋಧ ವ್ಯಕ್ತಪಡಿಸಿದ್ದರು ಎನ್ನುವ ಗೃಹ ಸಚಿವ ಅಮಿತ್ ಶಾ ಅವರ ಆರೋಪವನ್ನು ನಿರಾಕರಿಸಿರುವ ಕಾಂಗ್ರೆಸ್ ಹಿರಿಯ ಮುಖಂಡ ದಿಗ್ವಿಜಯ್ ಸಿಂಗ್, 'ಬಿಜೆಪಿಯು ಕರ್ನಾಟಕದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಿಎಫ್‌ಐನ ರಾಜಕೀಯ ಘಟಕದೊಂದಿಗೆ ಒಪ್ಪಂದ ಮಾಡಿಕೊಂಡು ಚುನಾವಣೆ ಎದುರಿಸಿತ್ತು' ಎಂದು ಶನಿವಾರ ಆರೋಪಿಸಿದ್ದಾರೆ.

ಸಿಂಗ್ ಮಧ್ಯಪ್ರದೇಶದ ರಾಜಗಢ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆಗಿದ್ದಾರೆ. 'ಸ್ಟೂಡೆಂಟ್ಸ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ'ಗೆ (ಸಿಮಿ) ಸಂಬಂಧಿಸಿದ ಅಮಿತ್ ಶಾ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ತಾನು ರಾಜ್ಯದ ಮಧ್ಯಪ್ರದೇಶದ ಮುಖ್ಯಮಂತ್ರಿ ಆಗಿದ್ದಾಗ ಸಿಮಿಯನ್ನು ನಿಷೇಧಿಸಿದ್ದಾಗಿ ತಿಳಿಸಿದರು.

ಕ್ಷೇತ್ರದ ವ್ಯಾಪ್ತಿಯ ಖಿಲ್ಚಿಪುರದಲ್ಲಿ ಶುಕ್ರವಾರ ಚುನಾವಣಾ ಪ್ರಚಾರ ಮಾಡುವ ವೇಳೆ ಅಮಿತ್ ಶಾ ದಿಗ್ವಿಜಯ ಸಿಂಗ್ ವಿರುದ್ಧ ಹಲವು ಆರೋಪ ಮಾಡಿದ್ದರು. ಅದಕ್ಕೆ 'ಎಕ್ಸ್' ವೇದಿಕೆಯಲ್ಲಿ ಉತ್ತರಿಸಿರುವ ಸಿಂಗ್, ಶಾ ಅವರು 17 ಬಾರಿ ತನ್ನ ಹೆಸರು ಪ್ರಸ್ತಾಪಿಸಿದ್ದಾರೆ ಮತ್ತು ಎಂಟು ಬಾರಿ ತನ್ನ ಬಗ್ಗೆ ಸುಳ್ಳು ಹೇಳಿದ್ದಾರೆ ಎಂದರು.

ಪೂನಂ ಬದಲು ಉಜ್ವಲ್ ನಿಕಂ ಕಣಕ್ಕೆ

ನವದೆಹಲಿ (ಪಿಟಿಐ): ಬಿಜೆಪಿಯು ಮುಂಬೈ ನಾರ್ತ್ ಸೆಂಟ್ರಲ್ ಲೋಕಸಭಾ ಕ್ಷೇತ್ರದಿಂದ ಹಿರಿಯ ವಕೀಲ ಉಜ್ವಲ್ ನಿಕಂ ಅವರನ್ನು ಕಣಕ್ಕಿಳಿಸಿದ್ದು, ಹಾಲಿ ಸಂಸದೆ ಪೂನಂ ಮಹಾಜನ್ ಅವರಿಗೆ ಟಿಕೆಟ್ ಕೈತಪ್ಪಿದೆ.

ಬಿಜೆಪಿ ಮುಖಂಡ ದಿವಂಗತ ಪ್ರಮೋದ್ ಮಹಾಜನ್ ಅವರ ಪುತ್ರಿ ಪೂನಂ, 2014 ಮತ್ತು 2019 ರಲ್ಲಿ ಈ ಕ್ಷೇತ್ರದಿಂದ ಆಯ್ಕೆಯಾಗಿದ್ದರು.

ಪಕ್ಷದ ಆಂತರಿಕ ವರದಿಯನ್ನಾಧರಿಸಿ ಪೂನಂ ಅವರಿಗೆ ಟಿಕೆಟ್ ನೀಡದಿರಲು ನಿರ್ಧರಿಸಲಾಗಿದೆ ಎಂದು ಮೂಲಗಳು ಹೇಳಿವೆ.

'ಪೂನಂ ಅವರನ್ನು ಕೈಬಿಡುವ ಸೂಚನೆಗಳು ಕೆಲ ಸಮಯಗಳ ಹಿಂದೆಯೇ ಲಭಿಸಿತ್ತಾದರೂ, ಅವರಿಗೆ ಬದಲಿ ಅಭ್ಯರ್ಥಿಯ ಹುಡುಕಾಟಕ್ಕಾಗಿ ಪಕ್ಷವು ಹೆಚ್ಚಿನ ಸಮಯ ತೆಗೆದುಕೊಂಡಿತು' ಎಂದು ಮೂಲಗಳು ತಿಳಿಸಿವೆ. ಕಾಂಗ್ರೆಸ್ ಪಕ್ಷವು ಮುಂಬೈ ನಾರ್ತ್ ಸೆಂಟ್ರಲ್ ಕ್ಷೇತ್ರದಿಂದ ಮುಂಬೈ ನಗರ ಘಟಕದ ಅಧ್ಯಕ್ಷೆ, ಧಾರಾವಿ ಶಾಸಕಿ ವರ್ಷಾ ಗಾಯಕ್ವಾಡ್ ಅವರನ್ನು ಕಣಕ್ಕಿಳಿಸಿದೆ. ಇಲ್ಲಿ ಮೇ 20 ರಂದು ಮತದಾನ ನಡೆಯಲಿದೆ.

ಎಂಥಾ ಮಾತು!

ಲೋಕಸಭಾ ಚುನಾವಣೆಯ ಉಳಿದ ಹಂತಗಳಲ್ಲಿ ಬಿಜೆಪಿಯ ಪರಿಸ್ಥಿತಿ ಇನ್ನಷ್ಟು ಹದಗೆಡಲಿದೆ. ಸಮಾಜವಾದಿ ಪಕ್ಷ ಒಳಗೊಂಡಿರುವ 'ಇಂಡಿಯಾ' ಒಕ್ಕೂಟವು ಮತ್ತಷ್ಟು ಬಲಿಷ್ಠವಾಗಲಿದೆ. ಜನರು ಬಿಜೆಪಿಯ ನಿರ್ಗಮನವನ್ನು ಖಾತರಿಪಡಿಸುತ್ತಿದ್ದಾರೆ. ಹಣದುಬ್ಬರ ಮತ್ತು ನಿರುದ್ಯೋಗ ಸಮಸ್ಯೆಗಳನ್ನು ಮನಗಂಡು ಅವರು ಬಿಜೆಪಿಗೆ ಮತ ಹಾಕುತ್ತಿಲ್ಲ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ



ವಿರೋಧ ಪಕ್ಷಗಳು ಆಡಳಿತದಲ್ಲಿದ್ದಾಗ ಬಡವರು ಹಸಿವಿನಿಂದ ಬಳಲಿದರೆ, ಭಯೋತ್ಪಾದಕರಿಗೆ ಬಿರಿಯಾನಿ ತಿನ್ನಿಸಲಾಗುತ್ತಿತ್ತು. ಸಮಾಜವಾದಿ ಪಕ್ಷ, ಕಾಂಗ್ರೆಸ್ ಮತ್ತು ಬಿಎಸ್‌ಪಿಯ ಕಾರ್ಯಸೂಚಿಯಲ್ಲಿ ಬಡವರು, ಮಹಿಳೆಯರು ಮತ್ತು ಯುವಕರಿಗೆ ಸ್ಥಾನವಿಲ್ಲ. ಅವರು ಕೇವಲ ಮತಬ್ಯಾಂಕ್ ರಾಜಕಾರಣ ಮತ್ತು ಸಮಾಜವನ್ನು ವಿಭಜಿಸುವ ಪಾಪದ ಕೆಲಸ ಮಾಡುತ್ತಿದ್ದಾರೆ

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

'ಇಂಡಿ' ಒಕ್ಕೂಟ ಬಂದರೆ ಐದು ವರ್ಷಗಳಲ್ಲಿ ಐವರು ಪ್ರಧಾನಿ: ಮೋದಿ

'ಕರ್ನಾಟಕ: ಸಿ.ಎಂ ಸ್ಥಾನ ಹಂಚಿಕೆ ಸೂತ್ರ'

ಕೊಲ್ಹಾಪುರ (ಮಹಾರಾಷ್ಟ್ರ) (ಪಿಟಿಐ): ಕಾಂಗ್ರೆಸ್ ನೇತೃತ್ವದ 'ಇಂಡಿ' ಒಕ್ಕೂಟ ಅಧಿಕಾರಕ್ಕೆ ಬಂದರೆ ಐದು ವರ್ಷಗಳಲ್ಲಿ ಐವರನ್ನು ಪ್ರಧಾನಿ ಹುದ್ದೆಗೇರಿಸುವ ಚಿಂತನೆ ಮಾಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಕೊಲ್ಹಾಪುರದಲ್ಲಿ ಶನಿವಾರ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ವಿರೋಧ ಪಕ್ಷಗಳು ಮೂರಂಕಿಯ ಸ್ಥಾನಗಳನ್ನು ಪಡೆಯುವ ಅಥವಾ ಅಧಿಕಾರದ ಸನಿಹ ತಲುಪುವ ಸಾಧ್ಯತೆಯೇ ಇಲ್ಲ. ಆದರೂ, ಅವಕಾಶ ಲಭಿಸಿದರೆ ಐದು ವರ್ಷಗಳಲ್ಲಿ ಐವರನ್ನು ಪ್ರಧಾನಿ ಹುದ್ದೆಯಲ್ಲಿ ಕೂರಿಸಲು ಯೋಜನೆ ಹಾಕಿಕೊಂಡಿವೆ' ಎಂದರು.

'ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವು ಮುಖ್ಯಮಂತ್ರಿ ಸ್ಥಾನವನ್ನು ಎರಡೂವರೆ ವರ್ಷಗಳ ಬಳಿಕ ಉಪಮುಖ್ಯಮಂತ್ರಿಗೆ ಹಸ್ತಾಂತರಿಸಲು ಯೋಜನೆ ಹಾಕಿಕೊಂಡಿದೆ. ಅವರು ಛತ್ತೀಸಗಢ ಮತ್ತು ರಾಜಸ್ಥಾನದಲ್ಲಿ ಇದೇ ಸೂತ್ರ ಅನುಸರಿಸಿದ್ದರು' ಎಂದು ತಿಳಿಸಿದರು.

ಮೊದಲ ಎರಡು ಹಂತಗಳ ಮತದಾನದ ಬಳಿಕ ಎನ್‌ಡಿಎ ಒಕ್ಕೂಟ ವಿರೋಧ ಪಕ್ಷಗಳ ವಿರುದ್ಧ 2–0ರಿಂದ ಮುನ್ನಡೆ ಸಾಧಿಸಿದೆ ಎಂದರು.

ಕಾಂಗ್ರೆಸ್ ಪಕ್ಷವು ರಾಮಮಂದಿರ ನಿರ್ಮಾಣವನ್ನು ವಿರೋಧಿಸಿದ್ದು ಮಾತ್ರವಲ್ಲದೆ, ಮಂದಿರ ಉದ್ಘಾಟನೆಯ ಆಹ್ವಾನವನ್ನೂ ತಿರಸ್ಕರಿಸಿದೆ. ಓಲೈಕೆ ಮತ್ತು ಓಟ್‌ಬ್ಯಾಂಕ್ ರಾಜಕಾರಣ ಮಾಡುವ ವಿರೋಧ ಪಕ್ಷಗಳ ಮೈತ್ರಿಕೂಟವು ಸಾಮಾಜಿಕ ನ್ಯಾಯದ ಕೊಲೆಗೆ ಪ್ರತಿಜ್ಞೆ ಮಾಡಿದೆ' ಎಂದು ಕಿಡಿಕಾರಿದರು.

ಒಲಿಂಪಿಕ್ಸ್ ಕನಸು ನನಸಾಗಿಸುವೆವು: ಶನಿವಾರ ರಾತ್ರಿ ವಾಸ್ಕೊದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಪ್ರಧಾನಿ, 'ಭಾರತದಲ್ಲಿ ಒಲಿಂಪಿಕ್ಸ್ ಆಯೋಜಿಸುವ ಕನಸನ್ನು ಈಡೇರಿಸುವುದಾಗಿ ಗೋವಾದ ಕ್ರೀಡಾ ಪ್ರೇಮಿಗಳಿಗೆ ಭರವಸೆ ನೀಡುತ್ತಿದ್ದೇನೆ' ಎಂದರು.

'ಕಾಂಗ್ರೆಸ್ ಪ್ರಣಾಳಿಕೆ ಹಿಂದೆ ವಿದೇಶಿ ಶಕ್ತಿಗಳು'

ನವದೆಹಲಿ (ಪಿಟಿಐ): ಕಾಂಗ್ರೆಸ್ ಪ್ರಣಾಳಿಕೆಯು ನಿಮ್ಮ ಮಕ್ಕಳ ಸಂಪತ್ತನ್ನು ಮುಸ್ಲಿಮರಿಗೆ ನೀಡಲು ಹೊರಟಿದ್ದು, ಅದರ ಹಿಂದೆ ವಿದೇಶಿ ಶಕ್ತಿಗಳ ಕೈವಾಡವಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ಶನಿವಾರ ಆರೋಪಿಸಿದ್ದಾರೆ.

ಹಮೀರ್‌ಪುರದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ನಿಮ್ಮ ಸಂಪತ್ತು ನಿಮ್ಮ ಮಕ್ಕಳಿಗೆ ಸೇರಬೇಕೋ ಅಥವಾ ಮುಸ್ಲಿಮರಿಗೆ ಸೇರಬೇಕೋ ಎನ್ನುವುದನ್ನು ನೀವೇ ತೀರ್ಮಾನಿಸಬೇಕು. ನಾವು ಮುಸ್ಲಿಮರಿಗೆ ಶೌಚಾಲಯ, ಮನೆ, ಅಡುಗೆ ಅನಿಲ ಸಿಲಿಂಡರ್‌ಗಳು, ಪಡಿತರ ಎಲ್ಲದರಲ್ಲೂ ಸಮಾನ ಹಕ್ಕುಗಳನ್ನು ಕಲ್ಪಿಸಿದ್ದೇವೆ. ಆದರೆ, ಧರ್ಮದ ಆಧಾರದಲ್ಲಿ ಅಲ್ಲ' ಎಂದು ಹೇಳಿದರು. ಅನುರಾಗ್ ಠಾಕೂರ್ ಅವರು ಹೀಗೆ ಹೇಳುವ ಮೂಲಕ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಕಾಂಗ್ರೆಸ್ ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

ಸುನೀತಾ ಕೇಜ್ರಿವಾಲ್ ಅವರು ಪೂರ್ವ ದೆಹಲಿಯಲ್ಲಿ ಎಎಪಿ ಅಭ್ಯರ್ಥಿ ಪರ ಶನಿವಾರ ರೋಡ್ ಶೋ ನಡೆಸಿ ಮತ ಕೋರಿದರು –ಪಿಟಿಐ ಚಿತ್ರ

ಕೇಜ್ರಿವಾಲ್ 'ಸಿಂಹ': ಸುನೀತಾ

ನವದೆಹಲಿ (ಪಿಟಿಐ): 'ದೆಹಲಿ ಸಿ.ಎಂ ಅರವಿಂದ ಕೇಜ್ರಿವಾಲ್ ಅವರು ಸಿಂಹ ಇದ್ದಂತೆ, ಅವರನ್ನು ಮಣಿಸಲು ಯಾರಿಂದಲೂ ಸಾಧ್ಯವಿಲ್ಲ' ಎಂದು ಅವರ ಪತ್ನಿ ಸುನೀತಾ ಕೇಜ್ರಿವಾಲ್ ಶನಿವಾರ ಹೇಳಿದರು.

ಪೂರ್ವ ದೆಹಲಿ ಲೋಕಸಭಾ ಕ್ಷೇತ್ರದ ಎಎಪಿ ಅಭ್ಯರ್ಥಿ ಪರ ತಮ್ಮ ಮೊದಲ ರೋಡ್ ಶೋ ನಡೆಸಿದ ಅವರು, ಕೇಜ್ರಿವಾಲ್ ಅವರು ಶಾಲೆಗಳನ್ನು ನಿರ್ಮಿಸಿದ್ದಕ್ಕೆ, ಉಚಿತ ವಿದ್ಯುತ್ ನೀಡಿದ್ದಕ್ಕೆ ಮತ್ತು ಮೊಹಲ್ಲಾ ಕ್ಲಿನಿಕ್‌ಗಳನ್ನು ತೆರೆದಿದ್ದಕ್ಕಾಗಿ ಜೈಲು ಸೇರಿದ್ದಾರೆ ಎಂದು ಹೇಳಿದರು.

'ಸರ್ವಾಧಿಕಾರವನ್ನು ತೊಲಗಿಸಿ ಪ್ರಜಾಪ್ರಭುತ್ವವನ್ನು ಉಳಿಸಲು ನಾವು ಮತಚಲಾಯಿಸಬೇಕಿದೆ' ಎಂದು ಅವರು ಪ್ರತಿಪಾದಿಸಿದರು.

ಚುನಾವಣಾ ಕಣದಲ್ಲಿ...

ಸಾವಿರಕ್ಕೂ ಅಧಿಕ ಸಿಖ್ಖರು ಬಿಜೆಪಿಗೆ

ನವದೆಹಲಿ (ಪಿಟಿಐ): ದೆಹಲಿ ಸಿಖ್ ಗುರುದ್ವಾರ ನಿರ್ವಹಣಾ ಸಮಿತಿ (ಡಿಎಸ್‌ಜಿಎಂಸಿ) ಸದಸ್ಯರು ಸೇರಿದಂತೆ ಸಿಖ್ ಸಮುದಾಯದ ಸಾವಿರಕ್ಕೂ ಹೆಚ್ಚು ಮಂದಿ ಶನಿವಾರ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಪಕ್ಷವು ಈ ಬಗ್ಗೆ ಪ್ರಕಟಣೆ ನೀಡಿದೆ.

ಅಲ್ಪಸಂಖ್ಯಾತರಿಗಾಗಿ ಮೋದಿ ಸರ್ಕಾರ ಹಲವು ಯೋಜನೆಗಳನ್ನು ಕೈಗೊಂಡಿದೆ ಎಂದಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕರ್ತಾರ್‌ಪುರ ಸಾಹಿಬ್ ಕಾರಿಡಾರ್, ಸ್ವರ್ಣಮಂದಿರಕ್ಕೆ ನೀಡುವ ದೇಣಿಗೆಗಳಿಗಾಗಿ ಎಫ್‌ಸಿಆರ್‌ಎ ನೋಂದಣಿ, 1984ರ ಸಿಖ್ ವಿರೋಧಿ ಗಲಭೆ ಪ್ರಕರಣದ ಆರೋಪಿಗಳ ವಿರುದ್ಧ ಕ್ರಮ ಕೈಗೊಂಡಿದ್ದನ್ನು ಉಲ್ಲೇಖಿಸಿದ್ದಾರೆ.

ಸಿಖ್ಖರ ಬಗ್ಗೆ ವಿಶೇಷ ಗಮನ ಹರಿಸಿರುವ ಬಿಜೆಪಿಯು, ಸಮುದಾಯ ಪ್ರಬಲವಾಗಿರುವ ಪಂಜಾಬ್‌ನಲ್ಲಿ ಲೋಕಸಭಾ ಚುನಾವಣೆಯಲ್ಲಿ ತೀವ್ರ ಸ್ಪರ್ಧೆಯೊಡ್ಡಲು ಮುಂದಾಗಿದೆ. ರಾಜ್ಯದ ಖ್ಯಾತನಾಮ ಸಿಖ್ ಮುಖಂಡರು ಈಚೆಗೆ ಬಿಜೆಪಿ ಸೇರಿದ್ದರು.

ವೈಎಸ್‌ಆರ್‌ಸಿಪಿ ಪ್ರಣಾಳಿಕೆ ಬಿಡುಗಡೆ

ಅಮರಾವತಿ (ಪಿಟಿಐ): ಆಂಧ್ರಪ್ರದೇಶದ ಆಡಳಿತಾರೂಢ ವೈಎಸ್‌ಆರ್‌ಸಿಪಿ ಮುಖ್ಯಸ್ಥ ವೈ.ಎಸ್.ಜಗನ್‌ಮೋಹನ್ ರೆಡ್ಡಿ ಶನಿವಾರ ಪಕ್ಷದ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಸಾಮಾಜಿಕ ಭದ್ರತಾ ಪಿಂಚಣಿಯನ್ನು ₹3500ಕ್ಕೆ ಏರಿಸುವುದು, ವಿಶಾಖಪಟ್ಟಣವನ್ನು ಕಾರ್ಯಾಂಗ ರಾಜಧಾನಿಯನ್ನಾಗಿ ಮಾಡುವುದು ಸೇರಿದಂತೆ ಮತದಾರರಿಗೆ ಹಲವು ಭರವಸೆಗಳನ್ನು ನೀಡಿದ್ದಾರೆ.

ಅಮರಾವತಿಯನ್ನು ಶಾಸಕಾಂಗ ರಾಜಧಾನಿಯನ್ನಾಗಿ, ಕರ್ನೂಲ್ ಅನ್ನು ನ್ಯಾಯಾಂಗ ರಾಜಧಾನಿಯನ್ನಾಗಿ ಅಭಿವೃದ್ಧಿಪಡಿಸುವುದಾಗಿ ಜಗನ್ ಹೇಳಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಜಾರಿಗೆ ತಂದಿರುವ ಬಹುತೇಕ ಎಲ್ಲ ಯೋಜನೆಗಳನ್ನು ಮುಂದುವರಿಸುವುದಾಗಿ ಘೋಷಿಸಿರುವ ಜಗನ್, ಅಮ್ಮ ವೊಡಿಯಂಥ ಕೆಲವು ಯೋಜನೆಗಳಿಗೆ ಹೆಚ್ಚಿನ ಹಣ ಮೀಸಲಿಡುವುದಾಗಿ ತಿಳಿಸಿದ್ದಾರೆ.

ರಾಜಕೀಯ ಪಕ್ಷವೊಂದರ ಪ್ರಣಾಳಿಕೆಗೆ ತಮ್ಮ ಸರ್ಕಾರದ ಆಡಳಿತದಲ್ಲಿ ಮಾತ್ರವೇ ನಿಜವಾದ ಅರ್ಥ ಪ್ರಾಪ್ತವಾಗಿದ್ದು, ತಾವು ಪ್ರಣಾಳಿಕೆಯನ್ನು ಪವಿತ್ರ ಬೈಬಲ್, ಕುರಾನ್ ಮತ್ತು ಭಗವದ್ಗೀತೆಯಂತೆ ಪರಿಗಣಿಸುವುದಾಗಿ ಹೇಳಿದ್ದಾರೆ.

ಆಂಧ್ರಪ್ರದೇಶದಲ್ಲಿ ಮೇ 13ರಂದು ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಗಳು ಏಕಕಾಲದಲ್ಲಿ ನಡೆಯಲಿವೆ.

ಬಿಜೆಪಿ ಅಭ್ಯರ್ಥಿ ವಿರುದ್ಧ ಪ್ರತಿಭಟನೆ

ಚಂಡೀಗಢ (ಪಿಟಿಐ): ಪಂಜಾಬ್‌ನ ಗುರುದಾಸಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ದಿನೇಶ್ ಬಬ್ಬೂ ಅವರ ವಿರುದ್ಧ ರೈತರ ಒಂದು ಗುಂಪು ಶನಿವಾರ ಪ್ರತಿಭಟನೆ ನಡೆಸಿತು.

ಗುರುದಾಸಪುರದ ಸಥಿಯಾಲಿ ಗ್ರಾಮದಲ್ಲಿ ದಿನೇಶ್ ಪ್ರಚಾರ ಮಾಡುತ್ತಿದ್ದ ವೇಳೆ ಕಪ್ಪು ಬಾವುಟ ಹಿಡಿದಿದ್ದ ರೈತರು ಪ್ರತಿಭಟನೆ ನಡೆಸಿದ್ದಲ್ಲದೇ ಅವರಿಗೆ ಹಲವು ಪ್ರಶ್ನೆಗಳನ್ನು ಕೇಳಿದರು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಪ್ರತಿಭಟನೆ ನಡೆಸುತ್ತಿದ್ದ ರೈತರನ್ನು ದೆಹಲಿ ಪ್ರವೇಶಿಸದಂತೆ ಪೊಲೀಸರನ್ನು ಬಳಸಿ ತಡೆದದ್ದರ ಬಗ್ಗೆ ವಾಗ್ದಾಳಿ ನಡೆಸಿದರು. ಕೇಂದ್ರವು ರೈತರ ಬೆಳೆಗಳಿಗೆ ಎಂಎಸ್‌ಪಿ ನೀಡುವ ಬಗ್ಗೆ ಕಾನೂನು ಖಾತರಿ ನೀಡದೇ ಇರುವ ಬಗ್ಗೆಯೂ ಆಕ್ರೋಶ ವ್ಯಕ್ತಪಡಿಸಿದರು.

ದಿನೇಶ್ ವಿರುದ್ಧ ರೈತರು ಪ್ರತಿಭಟಿಸುತ್ತಿರುವುದು ಇದು ಎರಡನೇ ಬಾರಿ. ಏಪ್ರಿಲ್ 21ರಂದು ಬಟಾಲಾದಲ್ಲಿ ಅವರ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದ್ದರು.

ಲೋಕಸಭಾ ಚುನಾವಣೆ ವೇಳೆ ಬಿಜೆಪಿಯ ಹಲವು ಅಭ್ಯರ್ಥಿಗಳ ವಿರುದ್ಧ ರೈತರು ಪ್ರತಿಭಟನೆ ನಡೆಸಿದ್ದಾರೆ. ಫರೀದ್‌ಕೋಟ್ ಅಭ್ಯರ್ಥಿ ಹನ್ಸ್ ರಾಜ್ ಹನ್ಸ್, ಅಮೃತಸರದ ತರಣ್‌ಜಿತ್ ಸಿಂಗ್ ಸಂಧು, ಪಟಿಯಾಲ ಅಭ್ಯರ್ಥಿ ಪ್ರಣೀತ್ ಕೌರ್ ಅವರು ರೈತರ ಕೋಪಕ್ಕೆ ಗುರಿಯಾಗಿದ್ದರು.

ಬಿಜೆಪಿ ಅಭ್ಯರ್ಥಿಗಳನ್ನು ವಿರೋಧಿಸುವುದಾಗಿ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಈಗಾಗಲೇ ಘೋಷಿಸಿದ್ದು, ಲೋಕಸಭಾ ಚುನಾವಣೆಯಲ್ಲಿ ಕೇಸರಿ ಪಕ್ಷವನ್ನು ಶಿಕ್ಷಿಸುವಂತೆ ಕರೆ ನೀಡಿದೆ.

ರೋಡ್ ಶೋ ಉತ್ತರಪ್ರದೇಶದ ಕನೌಜ್ ಲೋಕಸಭಾ ಕ್ಷೇತ್ರದಿಂದ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಶನಿವಾರ ರೋಡ್ ಶೋ ನಡೆಸಿದರು –ಪಿಟಿಐ ಚಿತ್ರ

'ಸಿಪಿಎಂನಿಂದ ಮತದಾರರಿಗೆ ಕಿರುಕುಳ'

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಮತದಾರರಿಗೆ ಕಿರುಕುಳ ನೀಡುವ ಮೂಲಕ ಆಡಳಿತಾರೂಢ ಸಿಪಿಎಂ, ಚುನಾವಣಾ ಪಕ್ರಿಯೆಯನ್ನೇ ನಿಯಂತ್ರಣಕ್ಕೆ ತೆಗೆದುಕೊಂಡಿತ್ತು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಶನಿವಾರ ಆರೋಪಿಸಿದರು

ಮತದಾನದ ಶೇಕಡಾವಾರು ಪ್ರಮಾಣವನ್ನು ತಗ್ಗಿಸುವ ಉದ್ದೇಶದಿಂದ ಈ ರೀತಿ ಮಾಡಲಾಗಿದೆ ಎಂದು ಅವರು ಹೇಳಿದರು.

ದೇಶದಾದ್ಯಂತ 88 ಲೋಕಸಭಾ ಕ್ಷೇತ್ರಗಳಿಗೆ ನಡೆದ ಎರಡನೇ ಹಂತದ ಮತದಾನದಲ್ಲಿ ಪಕ್ಷವು ಉತ್ತಮ ಸಾಧನೆ ಮಾಡಿರುವ ವಿಶ್ವಾಸವಿದೆ ಎಂದು ತಿಳಿಸಿದರು.

ಎಸ್‌ಪಿ ಅಭ್ಯರ್ಥಿ ಬದಲು

ಶಹಜಹಾನ್‌ಪುರ(ಪಿಟಿಐ): ಉತ್ತರ ಪ್ರದೇಶದ ಶಹಜಹಾನ್‌ಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯನ್ನು ಸಮಾಜವಾದಿ ಪಕ್ಷವು (ಎಸ್‌ಪಿ) ಬದಲಿಸಿದೆ.

ರಾಜೇಶ್ ಕಶ್ಯಪ್ ಅವರ ಬದಲಿಗೆ ಜ್ಯೋತ್ಸ್ನಾ ಗೊಂಡ ಅವರಿಗೆ ಈ ಕ್ಷೇತ್ರದಿಂದ ಸ್ಪರ್ಧಿಸಲು ಟಿಕೆಟ್ ನೀಡಲಾಗಿದೆ.

ಕ್ಷೇತ್ರ ಮಹಾತ್ಮೆ

ಮನಸೆಳೆಯುವ ಸಮುದ್ರ ದಂಡೆ, ಪುರಾತನ ಚರ್ಚ್ ಮತ್ತು ದೇಗುಲಗಳ ನೆಲೆವೀಡಾಗಿರುವ ದಕ್ಷಿಣ ಗೋವಾ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳ ನೇರ ಹಣಾಹಣಿಗೆ ವೇದಿಕೆ ಸಿದ್ಧಗೊಂಡಿದೆ. ಕಾಂಗ್ರೆಸ್ ಪಕ್ಷವು ವಿರಿಯಾಟೊ ಫರ್ನಾಂಡಿಸ್ ಅವರನ್ನು ಅಖಾಡಕ್ಕಿಳಿಸಿದರೆ, ಬಿಜೆಪಿಯು ಪಲ್ಲವಿ ಡೆಂಪೋ ಅವರನ್ನು ಕಣಕ್ಕಿಳಿಸಿದೆ. ಇವರಿಬ್ಬರಿಗೆ ಪೈಪೋಟಿ ನೀಡಲು ಬಹುಜನ ಸಮಾಜ ಪಕ್ಷವು (ಬಿಎಸ್‌ಪಿ) ಶ್ವೇತಾ ಗಾಂವ್ಕರ್ ಅವರನ್ನು ಹಾಗೂ ರೆವಲ್ಯುಷನರಿ ಗೋವನ್ಸ್ ಪಕ್ಷವು (ಆರ್‌ಜಿಪಿ) ರಾಬರ್ಟ್ ಪೆರೇರಾ ಅವರನ್ನು ಅಭ್ಯರ್ಥಿಯಾಗಿಸಿವೆ. 2019ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಫ್ರಾನ್ಸಿಸ್ಕೊ ಸಾರ್ಡಿನ್ಹಾ ಅವರು 9,755 ಮತಗಳ ಅಂತರದಿಂದ ಬಿಜೆಪಿಯ ನರೇಂದ್ರ ಕೇಶವ ಸವೈಕರ್ ಅವರನ್ನು ಪರಾಭವಗೊಳಿಸಿದ್ದರು. ಪಲ್ಲವಿ ಡೆಂಪೋ ಅವರ ಪತಿ ಶ್ರೀನಿವಾಸ ಡೆಂಪೋ ಅವರು ಗೋವಾದ ಪ್ರಸಿದ್ಧ ಉದ್ಯಮಿಯಾಗಿದ್ದಾರೆ. ಪಲ್ಲವಿ ಅವರ ಕುಟುಂಬವು ಸರ್ಕಾರಿ ಪ್ರೌಢಶಾಲೆಗಳನ್ನು ದತ್ತು ಪಡೆದು ಅಲ್ಲಿನ ವಿದ್ಯಾರ್ಥಿನಿಯರಿಗೆ ವೃತ್ತಿಪರ ತರಬೇತಿ ನೀಡುತ್ತಿದೆ. ಪಲ್ಲವಿ ಅವರು ಇಂಡೊ–ಜರ್ಮನ್ ಎಜುಕೇಶನಲ್ ಆ್ಯಂಡ್ ಕಲ್ಚರಲ್ ಸೊಸೈಟಿಯ ಅಧ್ಯಕ್ಷೆಯೂ ಹೌದು. ವಿರಿಯಾಟೊ ಅವರು ಈಚೆಗೆ ಸಂವಿಧಾನದ ಕುರಿತು ನೀಡಿದ್ದ ಹೇಳಿಕೆಯು ವಿವಾದಕ್ಕೆ ಕಾರಣವಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿಯ ಹಲವು ಮುಖಂಡರು ಅವರನ್ನು ಟೀಕಿಸಿದ್ದರು. ನೌಕಾಪಡೆಯ ಮಾಜಿ ಅಧಿಕಾರಿಯಾಗಿರುವ ಇವರು 2022ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿದ್ದರು.

ಮುಖಾಮುಖಿ

ಕರೀಂನಗರ

ಬಂಡಿ ಸಂಜಯ್ ಕುಮಾರ್ (ಬಿಜೆಪಿ)

ತೆಲಂಗಾಣದ ಕರೀಂನಗರ ಲೋಕಸಭಾ ಕ್ಷೇತ್ರದಿಂದ ಬಿಜೆಪಿಯು ಬಂಡಿ ಸಂಜಯ್ ಕುಮಾರ್ ಅವರನ್ನು ಕಣಕ್ಕಿಳಿಸಿದೆ. ಬಿಜೆಪಿಯ ರಾಜ್ಯ ಘಟಕ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದ ಸಂಜಯ್ ಕುಮಾರ್ ಅವರು ಸ್ಥಳೀಯವಾಗಿಯೂ ಪ್ರಭಾವಿ ಮುಖಂಡರಾಗಿದ್ದಾರೆ. 2019ರ ಚುನಾವಣೆಯಲ್ಲಿ ಇವರು 89,508 ಮತಗಳ ಅಂತರದಿಂದ ತೆಲಂಗಾಣ ರಾಷ್ಟ್ರ ಸಮಿತಿಯ (ಟಿಆರ್‌ಎಸ್) ಅಭ್ಯರ್ಥಿಯನ್ನು ಪರಾಭವಗೊಳಿಸಿದ್ದರು. ಸಂಜಯ್ ಕುಮಾರ್ ಅವರು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯೂ ಹೌದು. ಎಬಿವಿಪಿ ಮೂಲಕ ರಾಜಕೀಯ ಪ್ರವೇಶಿಸಿರುವ ಇವರು ಪಕ್ಷ ಸಂಘಟನೆಯ ಮೂಲಕ ರಾಜ್ಯದಲ್ಲಿ ಚಿರಪರಿಚಿತರಾದವರು. 2023ರಲ್ಲಿ ತೆಲಂಗಾಣದ 10ನೇ ತರಗತಿ ಬೋರ್ಡ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆಂಬ ಆರೋಪದಲ್ಲಿ ಇವರನ್ನು ಪೊಲೀಸರು ಬಂಧಿಸಿದ್ದರು. ಅನಂತರ ಜಾಮೀನಿನ ಮೇಲೆ ಬಿಡುಗಡೆಗೊಳಿಸಲಾಗಿತ್ತು.

V/S

ವೆಲಿಚಾಲ ರಾಜೇಂದರ್ ರಾವ್ (ಕಾಂಗ್ರೆಸ್)

ಕರೀಂನಗರ ಕ್ಷೇತ್ರದಲ್ಲಿ ಬಂಡಿ ಸಂಜಯ್ ಕುಮಾರ್ ಅವರ ವಿರುದ್ಧ ಕಾಂಗ್ರೆಸ್ ಪಕ್ಷವು ವೆಲಿಚಾಲ ರಾಜೇಂದರ್ ರಾವ್ ಅವರನ್ನು ಕಣಕ್ಕಿಳಿಸಿದೆ. ಕರೀಂನಗರ ಕ್ಷೇತ್ರದ ಮಾಜಿ ಶಾಸಕ ವೆಲಿಚಾಲ ಜಗಪತಿ ರಾವ್ ಅವರ ಪುತ್ರರಾಗಿರುವ ರಾಜೇಂದರ್ ಅವರು ಕ್ಷೇತ್ರದಲ್ಲಿ ಚಿರಪರಿಚಿತರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ನ್ಯೂನತೆಗಳನ್ನು ಪ್ರಮುಖ ಪ್ರಚಾರ ವಿಚಾರವಾಗಿಸಿ ರಾಜೇಂದರ್ ಮತಯಾಚಿಸುತ್ತಿದ್ದಾರೆ. ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಆಡಳಿತದಲ್ಲಿರುವುದು ಇವರ ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ. ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಕೂಡ ಬಿ. ವಿನೋದ್ ಕುಮಾರ್ ಅವರನ್ನು ಇಲ್ಲಿಂದ ಕಣಕ್ಕಿಳಿಸಿದೆ. ಕಳೆದ ಚುನಾವಣೆಯಲ್ಲಿ ಈ ಪಕ್ಷವು ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟಿತ್ತು.

ಆಯತಪ್ಪಿ ಬಿದ್ದ ಮಮತಾ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬರ್ಧಮಾನ್ ಜಿಲ್ಲೆಯ ದುರ್ಗಾಪುರದಲ್ಲಿ ಶನಿವಾರ ಹೆಲಿಕಾಪ್ಟರ್‌ಗೆ ಹತ್ತುವಾಗ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಆಯತಪ್ಪಿ ಬಿದ್ದಿದ್ದಾರೆ.

'ಮಮತಾ ಅವರು ಹೆಲಿಕಾಪ್ಟರ್‌ಗೆ ಹತ್ತಿ ಕುಳಿತುಕೊಳ್ಳಲು ಮುಂದಾದಾಗ ಆಯತಪ್ಪಿ ಬಿದ್ದಿದ್ದಾರೆ. ಯಾವುದೇ ಅಪಾಯ ಉಂಟಾಗಿಲ್ಲ' ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅವರು ಚುನಾವಣಾ ಪ್ರಚಾರಕ್ಕಾಗಿ ಕುಲ್ಟಿಗೆ ತೆರಳುತ್ತಿದ್ದರು ಎಂದೂ ಹೇಳಿದ್ದಾರೆ.

ಭೋಜಶಾಲಾ: ಮತದಾರರ ಭಿನ್ನ ಅಭಿಪ್ರಾಯ

ಧಾರ್ ಲೋಕಸಭಾ ಕ್ಷೇತ್ರವು 2014 ರಿಂದಲೂ ಬಿಜೆಪಿ ಹಿಡಿತದಲ್ಲಿದೆ. ಕಾಂಗ್ರೆಸ್ ಇಲ್ಲಿ 2009 ರಲ್ಲಿ ಕೊನೆಯದಾಗಿ ಗೆಲುವು ಸಾಧಿಸಿತ್ತು. ಈ ಬಾರಿ ಕಾಂಗ್ರೆಸ್‌ನ ರಾಧೇಶ್ಯಾಮ್ ಮುವೆಲ್ ಮತ್ತು ಬಿಜೆಪಿಯ ಸಾವಿತ್ರಿ ಠಾಕೂರ್ ಮಧ್ಯೆ ನೇರ ಹಣಾಹಣಿ ನಡೆಯಲಿದೆ

ಧಾರ್ (ಮಧ್ಯಪ್ರದೇಶ) (ಪಿಟಿಐ): ಭೋಜಶಾಲಾ-ಕಮಲ್ ಮೌಲಾ ಮಸೀದಿ ವಿವಾದವು ಲೋಕಸಭಾ ಚುನಾವಣೆಯ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎಂಬುದರ ಬಗ್ಗೆ ಮಧ್ಯಪ್ರದೇಶದ ಧಾರ್ ಲೋಕಸಭಾ ಕ್ಷೇತ್ರದ ಜನರು ಭಿನ್ನ ಅಭಿಪ್ರಾಯ ಹೊಂದಿದ್ದಾರೆ.

ಈ ವಿವಾದವು ಒಂದು ಪಕ್ಷಕ್ಕೆ ಲಾಭ ಉಂಟುಮಾಡಲಿದೆ ಎಂದು ಕೆಲವರು ಹೇಳಿದರೆ, ನಿರುದ್ಯೋಗದಂತಹ ವಿಷಯಗಳು ಈ ಮಾತ್ರ ಈ ಚುನಾವಣೆಯಲ್ಲಿ ಚರ್ಚೆಯಲ್ಲಿವೆ ಎಂಬುದು ಕೆಲವರ ಅಭಿಪ್ರಾಯವಾಗಿದೆ.

ಭೋಜಶಾಲಾ ಸಂಕೀರ್ಣವು ಮಧ್ಯಯುಗದ ಒಂದು ಸ್ಮಾರಕ. ಇಲ್ಲಿರುವುದು ವಾಗ್ದೇವಿ (ಸರಸ್ವತಿ) ದೇವಸ್ಥಾನ ಎಂದು ಹಿಂದೂಗಳು ಭಾವಿಸಿದ್ದರೆ, ಮುಸ್ಲಿಂ ಸಮುದಾಯವು ಇದು ಕಮಲ್ ಮೌಲಾ ಮಸೀದಿ ಎಂದು ನಂಬಿದೆ.

ಭೋಜಶಾಲಾ ಸಂಕೀರ್ಣದಲ್ಲಿ ಸಮೀಕ್ಷಾ ಕಾರ್ಯ ನಡೆಸುವಂತೆ ಮಧ್ಯಪ್ರದೇಶ ಹೈಕೋರ್ಟ್ ಕಳೆದ ತಿಂಗಳ 11 ರಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ನಿರ್ದೇಶಿಸಿತ್ತು. ಮಾರ್ಚ್ 22 ರಿಂದ ಇಲ್ಲಿ ಸಮೀಕ್ಷಾ ಕಾರ್ಯ ನಡೆಯುತ್ತಿದೆ.

2003ರ ಏಪ್ರಿಲ್ 7ರಂದು ಎಎಸ್‌ಐ ಹೊರಡಿಸಿದ್ದ ಆದೇಶದ ಅನ್ವಯ ಹಿಂದೂಗಳಿಗೆ ಈ ಸಂಕೀರ್ಣದಲ್ಲಿ ಪ್ರತಿ ಮಂಗಳವಾರ ಪೂಜೆ ಸಲ್ಲಿಸಲು ಅವಕಾಶವಿದ್ದು, ಮುಸ್ಲಿಮರಿಗೆ ಪ್ರತಿ ಶುಕ್ರವಾರ ನಮಾಜ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ಭೋಜಶಾಲಾ ಸಂಕೀರ್ಣವು ಧಾರ್ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿದೆ. ಎಸ್‌ಟಿಗೆ ಮೀಸಲಾಗಿರುವ ಈ ಕ್ಷೇತ್ರದಲ್ಲಿ ಮತದಾನ ಮೇ 13 ರಂದು ನಡೆಯಲಿದೆ.

'ಭೋಜಶಾಲಾ ವಿವಾದವು ನಮಗೆ ಚುನಾವಣಾ ವಿಷಯವಲ್ಲ. ಆದರೆ ಅದು ನಮ್ಮ ಸಂಸ್ಕೃತಿಗೆ ಸಂಬಂಧಿಸಿದ ವಿಚಾರ. ಅಯೋಧ್ಯೆ ರಾಮ ಜನ್ಮಭೂಮಿ-ಬಾಬರಿ ಮಸೀದಿ ವಿವಾದ ಬಗೆಹರಿದಂತೆ ಭೋಜಶಾಲಾ ವಿವಾದಕ್ಕೆ ಶಾಂತಿಯುತ ಪರಿಹಾರವನ್ನು ನಾವು ಬಯಸುತ್ತೇವೆ' ಎಂಬುದು ಸ್ಥಳೀಯ ನಿವಾಸಿ ಅಂಜು ಮಿತ್ತಲ್ ಅವರ ಅಭಿಪ್ರಾಯ.

ಧಾರ್‌ನ ಮತ್ತೊಬ್ಬ ನಿವಾಸಿ ಅಜರ್ ಖಾನ್ ಕೂಡ ಈ ವಿವಾದವು ಚುನಾವಣೆಯ ಮೇಲೆ ಯಾವುದೇ ಪರಿಣಾಮ ಬೀರದು ಎಂದು ಹೇಳಿದ್ದು, ಈ ಪ್ರದೇಶದ ಅಭಿವೃದ್ಧಿಯತ್ತ ಎಲ್ಲರೂ ಗಮನ ಹರಿಸಬೇಕೆಂದು ಬಯಸಿದ್ದಾರೆ. 'ನಮ್ಮ ನಗರದಲ್ಲಿ ಭ್ರಾತೃತ್ವ ಉಳಿಯಬೇಕೆಂದು ಬಯಸುತ್ತೇವೆ' ಎಂದು ಅವರು ಹೇಳಿದರು.

ಆದರೆ ವ್ಯಾಪಾರಿ ನೂರ್ ಖುರೇಷಿ ಅವರು ಭಿನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದು, ಚುನಾವಣೆಯಲ್ಲಿ ಈ ವಿವಾದವೇ ನಿರ್ಣಾಯಕ ಪಾತ್ರ ವಹಿಸಲಿದೆ ಎಂದಿದ್ದಾರೆ. 'ಭೋಜಶಾಲಾ ವಿವಾದವು ಪ್ರಮುಖ ವಿಷಯವಾಗಿದ್ದು, ಚುನಾವಣಾ ಸಮೀಕರಣದ ಮೇಲೆ ಪರಿಣಾಮ ಬೀರುತ್ತದೆ' ಎಂದು ಅರ್ಚನಾ ಬನ್ಸಲ್ ಅಭಿಪ್ರಾಯಪಟ್ಟಿದ್ದಾರೆ.

ಪ್ರಜಾವಾಣಿ

ಭಾನುವಾರದ ಪುರವಣಿ

10

ಭಾನುವಾರ, 28 ಏಪ್ರಿಲ್ 2024

ಅಂಕೋಲಾ ತಾಲ್ಲೂಕಿನ ಬಡಗೇರಿಯಲ್ಲಿ ನಡೆದ ಹಗರಣದಲ್ಲಿ ರಸ್ತೆಯಲ್ಲಿ ಪ್ರತ್ಯಕ್ಷವಾದ ಡೈನೋಸಾರ್ ಬೇಟೆಗಾರರು!

ಚಿತ್ರಗಳು:ಪ್ರಮೋದ್ ಗೌಡ ಬೆಳಸೆ

ಇಲ್ಲೆಲ್ಲಾ 'ಹಗರಣ'!

ಡಿಸೆಂಬರ್, ಜನವರಿ ವೇಳೆಯಲ್ಲಿ ಕಾರವಾರ ತಾಲ್ಲೂಕಿನ ನಗೆ ಗ್ರಾಮದ ಮಹಾದೇವ ದೇವಸ್ಥಾನ, ತೊಡೂರಿನ ಗೋವಿಂದದೇವ ದೇವಸ್ಥಾನ, ಅಮದಳ್ಳಿಯ ನಾರಾಯಣ ದೇವಸ್ಥಾನದಲ್ಲಿ ಆಚರಿಸಲ್ಪಡುವ ಜಾತ್ರೆಗಳಲ್ಲಿ 'ಹಗರಣ' ಪ್ರದರ್ಶನಗೊಳ್ಳುತ್ತದೆ.

ಅಂಕೋಲಾ ಪಟ್ಟಣದಲ್ಲಿ ಹೋಳಿ ಹುಣ್ಣಿಮೆಯ ಮುನ್ನಾದಿನ ನಡೆಯುವ ಸುಗ್ಗಿ ಕುಣಿತದ ಸಮಾರೋಪದ ವೇಳೆ, ಅಂಕೋಲಾ ತಾಲ್ಲೂಕಿನ ಬಡಗೇರಿ ಗ್ರಾಮದಲ್ಲಿ ಯುಗಾದಿ ದಿನ, ಅವರ್ಸಾದಲ್ಲಿ ದುರ್ಗಾದೇವಿ ವಿಸರ್ಜನೆ ಮೆರವಣಿಗೆ ವೇಳೆ, ಹನುಮ ಜಯಂತಿ ವೇಳೆ ಗೋಕರ್ಣದ ಬಿಜ್ಜೂರಿನಲ್ಲಿ ಹಗರಣ ಪ್ರದರ್ಶನಗೊಳ್ಳುತ್ತದೆ.

'ಹಗರಣ'...ಇದು ಸರ್ಕಾರದಲ್ಲಿ ಹೆಚ್ಚಾಗಿ ಕೇಳಿಬರುತ್ತದೆ. ಪರಸ್ಪರ ಕಾಲೆಳೆದಾಟಕ್ಕೆ 'ಹಗರಣ' ರಾಜಕಾರಣಿಗಳ ಪಾಲಿಗೆ ಅಸ್ತ್ರ. ಆದರೆ, ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದ ತಾಲ್ಲೂಕುಗಳಲ್ಲಿ 'ಹಗರಣ'ವೇ ದೊಡ್ಡ ಮನರಂಜನೆ.

ರಾಜ್ಯದ ಅತಿ ದೊಡ್ಡ ಹಗರಣ!

ದೈತ್ಯಾಕಾರದ, ವಿಚಿತ್ರ ಜೀವಿಯು ಪ್ರತ್ಯಕ್ಷವಾದಾಗ!

ಗಣಪತಿ ಹೆಗಡೆ

ಅಮದಳ್ಳಿ ಎಂಬುದು ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ಪುಟ್ಟ ಊರು. ಅಲ್ಲಿ ನಡೆಯುವ ನಾರಾಯಣ ದೇವರ ಜಾತ್ರೆಯ ವೇಳೆ ರಾತ್ರಿಯ ಕಗ್ಗತ್ತಲಿನಲ್ಲಿ ಗದ್ದೆಬಯಲಿಗೆ ಹೆಲಿಕಾಪ್ಟರ್ ಬಂದಿಳಿಯಿತು. ಅದನ್ನು ಕಂಡು ಜನ ಗಾಬರಿ ಆಗಬೇಕಿತ್ತು. ಆದರೆ, ಹಾಗಾಗಲಿಲ್ಲ. ಅವರ ಕಣ್ಣುಗಳು ಅರಳಿದ್ದವು, ಕೈಗಳು ನಿರಂತರವಾಗಿ ಚಪ್ಪಾಳೆ ತಟ್ಟುತ್ತಿದ್ದವು!

ಅಂಕೋಲಾ ತಾಲ್ಲೂಕಿನ ಬಡಗೇರಿಯಲ್ಲಿ ಮತ್ತೊಂದು ಕುತೂಹಲಕಾರಿ ಪ್ರಸಂಗ ನಡೆಯಿತು. ಅಲ್ಲಿ ಇಳಿಸಂಜೆಯಲ್ಲಿ ಏಲಿಯನ್‌ಗಳು (ಅನ್ಯಗ್ರಹ ಜೀವಿಗಳು) ಸಾವಿರಾರು ಜನರ ಮಧ್ಯೆಯೇ ಬಂದಿಳಿದವು! ಅಲ್ಲದೇ ಗ್ರಾಮದ ರಸ್ತೆಯಲ್ಲಿ ತಾಸುಗಟ್ಟಲೆ ಓಡಾಡಿದವು. ಅವುಗಳನ್ನು ಅಚ್ಚರಿ ಬೆರೆತು ನೋಡುತ್ತಿದ್ದ ಜನರು ತಮಗೆ ತಾವೇ ಮೈಮರೆತಿದ್ದರು.

ಇವೆರಡೂ ಪ್ರಸಂಗಗಳೂ ನಿಜವಲ್ಲ. ಆದರೆ 'ನೈಜತೆ ಸೃಷ್ಟಿಸುವ' ಇಂತಹ ಕಲಾವಿದರ ಚಾಕಚಕ್ಯತೆಯನ್ನು ಜನರು ಕೊಂಡಾಡುವಂತಿತ್ತು. ಮೈಸೂರು ದಸರಾದಲ್ಲಿ ನಡೆಯುವ ಸ್ತಬ್ಧಚಿತ್ರಗಳು ಹೇಗೆ ದೇಶದ ಗಮನ ಸೆಳೆಯುತ್ತವೆಯೋ, ಹಾಗೆಯೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಗಮನಸೆಳೆಯುವ 'ಹಾಲಕ್ಕಿ ಹಗರಣ' ಇಂತಹ ನೈಜತೆಯ ಸೃಷ್ಟಿಗೆ ವೇದಿಕೆ ಆಗುತ್ತದೆ.

ಬೆಂಗಳೂರಿನಲ್ಲೇ ಹುಟ್ಟಿ ಬೆಳೆದ ಅನಿಕೇತ್ ಬೇಸಿಗೆ ರಜೆಯಲ್ಲಿ ಅಂಕೋಲಾದ ಬೇಲೆಕೇರಿಯಲ್ಲಿರುವ ಅಜ್ಜಿ ಮನೆಗೆ ಬಂದಿದ್ದ. ಸಮೀಪದ ಬಡಗೇರಿಯಲ್ಲಿ ನಡೆಯುವ ಹಗರಣ ನೋಡಲು ಅಜ್ಜ, ಅಜ್ಜಿ ಜೊತೆ ಹೋಗಿದ್ದ ಆತನಿಗೆ ಅಲ್ಲಿನ ದೃಶ್ಯಗಳು ನೆನಪಿನಲ್ಲಿ ಉಳಿಯುವಂತೆ ಮಾಡಿದ್ದವು. ವಿಡಿಯೊ ಗೇಮ್ ಆಡುವ, ಹಾಲಿವುಡ್ ಸಿನಿಮಾಗಳನ್ನು ನೋಡುವ ಗೀಳು ಅಂಟಿಸಿಕೊಂಡಿದ್ದ ಆತ ಅಲ್ಲೆಲ್ಲೂ ಕಾಣದಷ್ಟು ವಿಚಿತ್ರಗಳನ್ನು ಬಡಗೇರಿ ಎಂಬ ಪುಟ್ಟ ಹಳ್ಳಿಯ ಬೀದಿಯಲ್ಲಿ ನೋಡಿದ್ದ. ಈಗ ಸತತ ಐದು ವರ್ಷದಿಂದಲೂ ಆತ 'ಹಗರಣ'ದ ಕಾಯಂ ಪ್ರೇಕ್ಷಕ!

ಯುಗಾದಿ ಹಬ್ಬದ ದಿನದಂದು ಅಂಕೋಲಾದ ಬಡಗೇರಿಯಲ್ಲಿ 'ಹಗರಣ' ನಡೆಯುತ್ತದೆ. ಇದು ಈ ಭಾಗದ ಖ್ಯಾತ 'ಹಗರಣ'. ಗ್ರಾಮದ ಬೀದಿಯುದ್ದಕ್ಕೂ ಸಾವಿರಾರು ಜನರು ಇದನ್ನು ನೋಡಲು ಮಧ್ಯಾಹ್ನದಿಂದಲೇ ಕಾದು ನಿಲ್ಲುತ್ತಾರೆ. ಗ್ರಾಮದ ಯುವಕ ಮಂಡಳಿಗಳು, ಸಂಘ–ಸಂಸ್ಥೆಗಳು ಪ್ರದರ್ಶಿಸುವ ಕಲಾಕೃತಿಗಳ ಸೊಬಗು ಕಣ್ತುಂಬಿಕೊಳ್ಳಲು ಜನರು ರಸ್ತೆಯ ಬದಿಗಳಲ್ಲಿ ಹಾಗೂ ಕಟ್ಟಡ ಏರಿ ನಿಲ್ಲುತ್ತಾರೆ.

ಸಾಮಾಜಿಕ ಸಂದೇಶಗಳನ್ನು ಸಾರುವ ಜತೆಗೆ ಜನರನ್ನು ರಂಜಿಸಲು ಗ್ರಾಮದ ಯುವಕರೇ ಗುಂಪುಗೂಡಿ ರಚಿಸುವ ಕಲಾಕೃತಿಗಳು ಮೈನವಿರೇಳಿಸುತ್ತವೆ. ಸರಿಯಾಗಿ ಬಸ್ ಸಂಚಾರವನ್ನೇ ಕಾಣದ ಗ್ರಾಮಗಳಲ್ಲಿ ಹೆಲಿಕಾಪ್ಟರ್, ವಿಮಾನ, ಹಡಗುಗಳನ್ನು ತಂದಿಳಿಸುವ ಸಾಮರ್ಥ್ಯ ಇಲ್ಲಿನ ಯುವಕರಲ್ಲಿದೆ.

ರಾಕ್ಷಸ ಅಬ್ಬರಿಸುತ್ತ ಒಮ್ಮೆಲೇ ನುಗ್ಗುತ್ತಿದ್ದರೆ ಜನರು ಬೆಚ್ಚಿ ಬೀಳುತ್ತಿರುತ್ತಾರೆ. ರಕ್ಕಸನ ಬೆನ್ನಿಗೇ ಜನರು ಊಹೆ ಮಾಡದಂತಹ ದೈತ್ಯ ಕಾಡುಪ್ರಾಣಿಯೊಂದು ಊರಿನೊಳಕ್ಕೆ ನುಗ್ಗಿ ಓಡಾಡುತ್ತದೆ. ಅದನ್ನು ಕುತೂಹಲದಿಂದ ನೋಡುತ್ತಿರುವಾಗಲೇ ವಿಚಿತ್ರರೂಪದ ಕಾಡು ಮನುಷ್ಯರು, ಕ್ರೂರಮೃಗಗಳು ಒಂದರ ಹಿಂದೆ ಒಂದರಂತೆ ಓಡೋಡಿ ಬರಲಾರಂಭಿಸುತ್ತವೆ. ಈ ದೃಶ್ಯಗಳನ್ನು ರಸ್ತೆಯ ಬದಿಯಲ್ಲಿ ನಿಂತ ಜನರು ಹುಸಿ ದಿಗಿಲಿನೊಂದಿಗೆ ಆನಂದಿಸುತ್ತಾರೆ. ಜನರನ್ನು ಹೆದರಿಸಿದ ರಕ್ಕಸರು, ವನ್ಯಜೀವಿಗಳ ಹಿಂದೆಯೇ ಪ್ರತ್ಯಕ್ಷವಾಗುವ ದೇವಾನುದೇವತೆಗಳು ಜನರ ಮೊಗದಲ್ಲಿ ಮಂದಹಾಸ ಮೂಡಿಸುತ್ತಾರೆ. ಜನರಿಗೆ ವರ ನೀಡದಿದ್ದರೂ ಅವರಲ್ಲಿ ಕೊಂಚ ಧೈರ್ಯ ಉಂಟುಮಾಡುತ್ತಾರೆ. ದೇವರುಗಳ ಹಿಂದೆಯೇ ವೇಗವಾಗಿ ಬರುವ ಹೆಲಿಕಾಪ್ಟರ್, ಅದರಿಂದ ಇಳಿದು ಬರುವ ಸೈನಿಕರು ಆತ್ಮವಿಶ್ವಾಸ ತುಂಬುತ್ತಾರೆ. ಅವರ ಬೆನ್ನ ಹಿಂದೆಯೇ ಯಕ್ಷಗಾನ ಕಲಾವಿದರು ವೇಷಕಟ್ಟಿ ಕುಣಿಯುತ್ತ ಬರುತ್ತಿದ್ದರೆ ಜನರ ಕೇಕೆ, ಚಪ್ಪಾಳೆ ಸದ್ದು ಮುಗಿಲು ಸ್ಪರ್ಶಿಸಿ ಬರುತ್ತದೆ.

ಹಾಲಕ್ಕಿ ಹಗರಣದಲ್ಲಿ ಗಮನಸೆಳೆದ ಅಘೋರಿ ವೇಷಧಾರಿಗಳು...

ಹೀಗೆ, ಅಂಕೋಲಾದ ಬಡಗೇರಿಯಲ್ಲಿ 'ಹಗರಣ' ಎಂಬ ಮಾಯಾಲೋಕ ತೆರೆದುಕೊಳ್ಳುತ್ತದೆ.

ಪ್ರಸ್ತುತವಾಗಿರುವ ಸಾಮಾಜಿಕ ಸಮಸ್ಯೆಗಳು, ಜನರ ಗಮನ ಸೆಳೆಯಬಹುದಾದ ಸಂಗತಿಗಳು, ವನ್ಯಲೋಕದ ವೈಶಿಷ್ಟ್ಯಗಳನ್ನು ಕಲಾಕೃತಿಗಳು ಮತ್ತು ರೂಪಕದಲ್ಲಿ ಪ್ರದರ್ಶಿಸುವ ಕಲೆಯೇ 'ಹಗರಣ'. ('ಹಗರಣ' ಹೆಸರು ಏಕೆ ಬಂದಿತು ಎನ್ನುವ ಕುರಿತು ಮಾಹಿತಿ ಇಲ್ಲ.) ಕಾರವಾರ, ಅಂಕೋಲಾ ತಾಲ್ಲೂಕಿನ ಕೆಲವು ಗ್ರಾಮೀಣ ಭಾಗದಲ್ಲಿ ಈ ವಿಶಿಷ್ಟ ಕಲೆ ಪ್ರದರ್ಶನಗೊಳ್ಳುತ್ತದೆ. ನೂರಾರು ವರ್ಷಗಳಿಂದ ಆಚರಣೆಯಲ್ಲಿರುವ 'ಹಗರಣ'ಕ್ಕೆ ಈಚಿನ ವರ್ಷದಲ್ಲಿ ಹೊಸಸ್ಪರ್ಶ ಸಿಕ್ಕಿದೆ.

'ಹಗರಣ' ಕೇವಲ ವಿಚಿತ್ರ, ರೋಮಾಂಚನಕಾರಿ ಕಲಾಕೃತಿಗಳಿಂದ ಜನರನ್ನು ರಂಜಿಸುವುದಷ್ಟೇ ಅಲ್ಲದೇ, ಪ್ರಸ್ತುತ ಸಮಾಜದಲ್ಲಿ ಚರ್ಚೆಯಲ್ಲಿರುವ, ಟ್ರೆಂಡ್ ಆಗಿರುವ ವಿಷಯಗಳನ್ನು ಆಧಾರವಾಗಿಟ್ಟುಕೊಂಡು ರೂಪಕಗಳು ಸೃಷ್ಟಿಯಾಗುತ್ತವೆ.

12ನೇ ಪುಟಕ್ಕೆ...

ಇಸ್ರೋಗಾಗಿ ಸಿದ್ಧಪಡಿಸಿದ ರಾಕೆಟ್ ಮಾದರಿಗಳೊಂದಿಗೆ ರಾಮ್‌ಜಿ
ಚಿತ್ರಗಳು: ಹಂಪಾ ನಾಗರಾಜ್

ಅಂತರಿಕ್ಷಯಾನಕ್ಕೆ ಮೈಸೂರು ಮಾದರಿ

ಚಂದ್ರಯಾನ್ ವಿಕ್ರಮ್ ಲ್ಯಾಂಡರ್

ಕೆ.ನರಸಿಂಹಮೂರ್ತಿ

ಮೈಸೂರು ಹೊರವಲಯದ ಬೆಳವಾಡಿ ಕೈಗಾರಿಕಾ ಪ್ರದೇಶದ 'ಕ್ರಾಫ್ಟಿಜಾನ್ (CRAFTIZAN) ಎಂಜಿನಿಯರಿಂಗ್ ಮಾಡೆಲ್ಸ್' ಘಟಕದ ಹೊರಗೆ ನಿಂತರೆ, ಬೋರ್ಡ್ ಬಿಟ್ಟರೆ ಬೇರೇನೂ ಕಾಣಿಸುವುದಿಲ್ಲ. ಒಮ್ಮೆ ಗೇಟು ತೆರೆದರೆ ಕಾಣುವ ದೊಡ್ಡ ಹಜಾರದಲ್ಲಿ ವೆಲ್ಡಿಂಗ್ ಮಾಡುವವರು, ಪೈಪ್‌ಗಳನ್ನು ಕತ್ತರಿಸುವವರು, ಬಣ್ಣ ಬಳಿಯುವವರು ಕಾಣಿಸುತ್ತಾರೆ. ಕೆಲವು ಬೃಹತ್ ಮಾದರಿಗಳು ಕಣ್ಣಿಗೆ ಬಿದ್ದರೂ ತಕ್ಷಣಕ್ಕೆ ಅವು ಏನು ಎಂಬುದು ಅರಿವಾಗುವುದಿಲ್ಲ.

ಮತ್ತೇನಿದೆ ಅಲ್ಲಿ? ಎಂಬ ಕುತೂಹಲ ಈಗ ನಿಮಗೆ ಮೂಡಿರಬಹುದು. ಹಜಾರದ ಬಲಬದಿಯಲ್ಲಿರುವ ಪುಟ್ಟ ಕಚೇರಿಯೊಳಗೆ ಹೆಜ್ಜೆ ಹಾಕಿ, ಅಲ್ಲಿ ತಮ್ಮ ಕೆಲಸದಲ್ಲಿ ತಲ್ಲೀನರಾದ ತರುಣ–ತರುಣಿಯರನ್ನು ಗಮನಿಸುತ್ತಾ ಎಡಭಾಗಕ್ಕೆ ತಿರುಗಿ ನೋಡಿದರೆ, 'ನಮ್ಮೂರಲ್ಲೂ ಹೀಗೂ ಉಂಟೇ' ಎಂಬ ಉದ್ಗಾರ ಗ್ಯಾರಂಟಿ. ಏಕೆಂದರೆ ಅಲ್ಲಿ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಜೊತೆಗೆ ಪಾರಂಪರಿಕ ನಗರವು ಏರ್ಪಡಿಸಿಕೊಂಡ ಅಪರೂಪದ ನಂಟೊಂದು ಕಾಣಿಸುತ್ತದೆ. ಹೇಗೆಂದಿರಾ? ಬೆಳವಾಡಿ ಎಂಬ ಈ ಪ್ರದೇಶವು ಬಾಹ್ಯಾಕಾಶ ಶಿಕ್ಷಣ ಕ್ಷೇತ್ರದಲ್ಲಿ ಇಡೀ ದೇಶಕ್ಕೆ 'ಮಾದರಿ'ಗಳನ್ನು ಪೂರೈಸುತ್ತಿದೆ!

'ಆರ್ಯಭಟ', 'ರೋಹಿಣಿ'ಯಿಂದ 'ಚಂದ್ರಯಾನ'ದವರೆಗೆ, 'ಮಂಗಳಯಾನ'ದಿಂದ 'ಗಗನಯಾನ'ದವರೆಗೆ ಇಸ್ರೋ ಜಾರಿಗೊಳಿಸಿದ ವಿವಿಧ ಯೋಜನೆಗಳ ಉಡ್ಡಯನ ವಾಹಕಗಳಾದ (ರಾಕೆಟ್) ಪಿಎಸ್‌ಎಲ್‌ವಿ, ಎಎಸ್‌ಎಲ್‌ವಿ ಕಿರು–ಬೃಹತ್ ಮಾದರಿಗಳ ವಿಶ್ವವೇ ನಮ್ಮ ಮುಂದೆ ತೆರೆದುಕೊಳ್ಳುತ್ತದೆ. ರಾಕೆಟ್‌ಗಳನ್ನು ಬೈಸಿಕಲ್, ಎತ್ತಿನಗಾಡಿಗಳಲ್ಲಿಟ್ಟುಕೊಂಡು ಸಾಗಿಸಿದ ಐತಿಹಾಸಿಕ ಮಾದರಿಗಳೂ ಅಲ್ಲಿವೆ. ಉಪಗ್ರಹ ತಂತ್ರಜ್ಞಾನವನ್ನು ರೂಪಿಸಿ ಅದನ್ನು ಉನ್ನತ ನೆಲೆಗೆ ಒಯ್ಯುವಲ್ಲಿ ಇಸ್ರೋ ನಡೆಸಿದ ಸಾಹಸ ಪ್ರಯತ್ನಗಳ ಮಾದರಿಗಳು ರೋಮಾಂಚನ ಮೂಡಿಸುತ್ತವೆ.

12ನೇ ಪುಟಕ್ಕೆ...

ತಂದೆಯ ಪ್ರೇರಣೆ

ಎಂಜಿನಿಯರಿಂಗ್ ಮಾದರಿಗಳ ತಯಾರಿಕೆಯನ್ನೇ ಬದುಕಾಗಿಸಿಕೊಳ್ಳುವಲ್ಲಿ ರಾಮನಾಥನ್ ಅವರಿಗೆ ತಂದೆ ಶ್ರೀನಿವಾಸನ್ ಅವರೇ ಪ್ರೇರಣೆ.

'ಪುಣೆಯ ಹಿಂದೂಸ್ತಾನ್ ಆಂಟಿಬಯಾಟಿಕ್ಸ್ ಸಂಸ್ಥೆಯಲ್ಲಿ ಜನರಲ್ ಮ್ಯಾನೇಜರ್ ಆಗಿದ್ದ ತಂದೆ, ನನ್ನ 8ನೇ ವಯಸ್ಸಿನಲ್ಲಿದ್ದಾಗ ಕೊಡಿಸಿದ್ದ ಮೆಕಾನೋ ಸೆಟ್ (ವಿವಿಧ ಮಾದರಿಗಳನ್ನು ರೂಪಿಸಲು ಬೇಕಾದ ಆಟಿಕೆಗಳ ಸೆಟ್) ನನ್ನ ಉದ್ಯಮಶೀಲತೆಗೆ ಮೊದಲು ನೀರೆರೆದ ಘಟನೆ' ಎಂದು ಸ್ಮರಿಸುವ 80ರ ವಯಸ್ಸಿನ ಉತ್ಸಾಹಿ ರಾಮನಾಥನ್, ಆಪ್ತರ ನಡುವೆ 'ರಾಮ್‌ಜಿ' ಎಂದೇ ಪ್ರಸಿದ್ಧಿ.

1967ರಲ್ಲಿ ಎಂಜಿನಿಯರಿಂಗ್ ಪದವಿ ಪಡೆದ ಬಳಿಕ ಅವರು ಕಾರ್ಪೆಂಟರಿ ಕಲಿತರು. 1975ರಲ್ಲಿ ಬೆಂಗಳೂರಿಗೆ ಬಂದು 'ಟಚ್ ವುಡ್' ಸಂಸ್ಥೆಯನ್ನು ಆರಂಭಿಸಿದ್ದರು. ಅದು ಲಾಭದಲ್ಲಿ ನಡೆದಿತ್ತು. ಆದರೆ ಎರಡೂವರೆ ದಶಕದ ಬಳಿಕ ಮುಚ್ಚಬೇಕಾಯಿತು. ನಂತರ 2003ರಲ್ಲಿ ಮೈಸೂರಿಗೆ ಬಂದರೂ ಮತ್ತೆ ಬೆಂಗಳೂರಿನತ್ತ ಮುಖ ಮಾಡಿದ್ದರು. ಹುಣಸೂರಿನ ಪ್ಲೈವುಡ್ ಉದ್ಯಮಿ ಮೋಯಿಸ್ ವಾಘ್ ಅವರ ಸಲಹೆ, ಸಹಕಾರದಿಂದ 2018ರಲ್ಲಿ 'ಕ್ರಾಫ್ಟಿಜಾನ್' ಶುರು ಮಾಡಿದ ಬಳಿಕ ಹಿಂದಿರುಗಿ ನೋಡಲಿಲ್ಲ. ಆದರೆ ಕಲ್ಲು–ಮುಳ್ಳಿನ ಹಾದಿಯನ್ನು ಮರೆತಿಲ್ಲ. ಕಲಿತ ಕನ್ನಡ, ಇಂಗ್ಲಿಷ್, ಹಿಂದಿ, ಗುಜರಾತಿ, ಮರಾಠಿ ಭಾಷೆಗಳು ಅವರನ್ನು ಮುನ್ನಡೆಸುತ್ತಿವೆ.

ಉಳವಿಯಲ್ಲೊಂದು ಅರಣ್ಯ ಉಳಿವಿನ ಕಥನ



ಮನೆ ಸಮೀಪದಲ್ಲಿ ಖಾಲಿ ಇರುವ ಜಾಗಗಳಲ್ಲಿ ಮುನ್ನೂರಕ್ಕೂ ಹೆಚ್ಚಿನ ವಿಧದ ಔಷಧೀಯ ಗಿಡಗಳನ್ನು ಬೆಳೆಸಿ, ಪ್ರಾಣಿ–ಪಕ್ಷಿಗಳಿಗೆ ನೀರುಣಿಸಿ ವಿಶಿಷ್ಟ ರೀತಿಯಲ್ಲಿ ಪರಿಸರ ಸೇವೆಗೈಯ್ಯುತ್ತಿದ್ದಾರೆ ಸೊರಬ ತಾಲೂಕು ಉಳವಿ ಗ್ರಾಮದ ಶ್ರೀಧರ ಸೀತಾರಾಮ ಹೆಗಡೆ ಕೊಳಗಿ...

“ಮಾನವನ ದುರಾಸೆಯು ಅವನ ಅಸ್ತಿತ್ವಕ್ಕಷ್ಟೇ ತೊಂದರೆ ಉಂಟು ಮಾಡುತ್ತಿಲ್ಲ, ಬದಲಾಗಿ ಸಮಸ್ತ ಜೀವರಾಶಿಗಳ ಅಸ್ತಿತ್ವಕ್ಕೇ ಅಪಾಯವನ್ನು ತಂದೊಡ್ಡಿದೆ. ಮುಂದಿನ ಪೀಳಿಗೆಗೆ ಪರಿಸರ ಉಳಿಸ ಬೇಕು, ಅಪರೂಪದ ಗಿಡ-ಮರಗಳನ್ನು ಬೆಳೆಸಬೇಕು. ಪರಿಸರವಿದ್ದರೆ ನಾವು”

ಶ್ರೀಧರ ಸೀತಾರಾಮ ಹೆಗಡೆ, ಕೊಳಗಿ

ಸಂದೀಪ ಯು.ಎಲ್

ಶ್ರೀಧರ ಸೀತಾರಾಮ ಹೆಗಡೆ ಕೊಳಗಿ– ಇದು ಸಾಗರ, ಸೊರಬ ತಾಲ್ಲೂಕಿನ ಪರಿಸರ ಪ್ರೇಮಿಗಳಿಗೆ, ನಾಟಿ ವೈದ್ಯರಿಗೆ ಚಿರಪರಿಚಿತ ಹೆಸರು. ಕುಟುಂಬ ನಿರ್ವಹಣೆಗಾಗಿ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ಹುಟ್ಟೂರು ಸಿದ್ದಾಪುರದಿಂದ ಸೊರಬ ತಾಲ್ಲೂಕಿನ ಉಳವಿಯ ಕೊಪ್ಪಲು ಗ್ರಾಮಕ್ಕೆ ಬಂದರು. ಅಲ್ಲಿ ಮನೆ ಸಮೀಪದಲ್ಲಿ ಖಾಲಿ ಜಾಗದಲ್ಲಿ ಮುನ್ನೂರಕ್ಕೂ ಹೆಚ್ಚಿನ ಔಷಧೀಯ, ಅಪರೂಪದ ಹಾಗೂ ವಿನಾಶದ ಅಂಚಿನಲ್ಲಿರುವ ಕಾಡುಜಾತಿಯ ಗಿಡಗಳನ್ನು ಮತ್ತು ಜೀವವೈವಿಧ್ಯತೆಯ ರಕ್ಷಣೆಗಾಗಿ ಕಾಡುಜಾತಿಯ ಹಣ್ಣಿನಗಿಡಗಳನ್ನು ನೆಟ್ಟು, ಪೋಷಿಸಿಕೊಂಡು ಬರುತ್ತಿದ್ದಾರೆ.

ಯಾರು ಏನೇ ಹೇಳಿದರೂ ಮಲೆನಾಡಿನ ಮಡಿಲಿನಲ್ಲಿ ಬೋರ್‌ವೆಲ್ ತೆಗೆಸದೇ, ಕೂಲಿಕಾರ್ಮಿಕರ ಸಹಾಯದಿಂದ ಮನೆಬಳಿಯಿರುವ ಬಾವಿಯಿಂದ ನೀರನ್ನು ಹೊತ್ತುಕೊಂಡು ಸುಮಾರು ಅರ್ಧ ಕಿಲೋಮೀಟರ್ ದೂರದವರೆಗೂ ಸಾಗಿ ನೀರುಣಿಸಿ ಗಿಡಗಳನ್ನು ಪೋಷಿಸುತ್ತಿದ್ದಾರೆ. ಹೆಚ್ಚಿನ ಗಿಡಗಳ ಬುಡದಲ್ಲಿ 20 ಲೀಟರ್ ನೀರಿನ ಕ್ಯಾನ್‌ಗಳನ್ನು ಇರಿಸಿ ಅದರ ಬುಡದಲ್ಲಿ ಸಣ್ಣದಾಗಿ ರಂಧ್ರವನ್ನು ಮಾಡಿ, ಹನಿ ನೀರಾವರಿ ಪದ್ಧತಿ ಅಭಿವೃದ್ಧಿಪಡಿಸಿದ್ದಾರೆ. 'ಕಾಂತಾರಯಜ್ಞ' ಹೆಸರಿನ ಸಂಘಟನೆಯನ್ನ ಮಾಡಿಕೊಂಡು ಪರಿಸರ ಸಂರಕ್ಷಣೆ ಹಾಗೂ ಜೀವವೈವಿಧ್ಯತೆಯ ಉಳಿವಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ.

ಕಾಡಿನಹಣ್ಣುಗಳು

ಮನೆ ಬಳಿಯ ಸೊಪ್ಪಿನ ಬೆಟ್ಟವನ್ನೇ ವನವಾಗಿಸಿ ಹಣ್ಣು ಸಂಪಿಗೆ, ಊಡಲ, ಹಾಲೆ, ಹಲಗೆ, ಗುಡ್ಡೆಗೇರು, ಅಂಕೋಲೆ, ಹಣಗೇರಿ, ಪರಿಗೆ, ಮುಳ್ಳಣ್ಣು, ನುರುಕಲು, ಮುರುಗಲು, ತುಮ್ರಿ, ಚಳ್ಳೆ, ನೇರಳೆ, ಗೊಣ್ಣೆಹಣ್ಣು, ಹೆಬ್ಬಲಸು, ಏಕನಾಯಕ, ಬರ್ಕಬಾಳೆ, ಅತ್ತಿ, ದೊಡ್ಡ ಏಕನಾಯಕ, ಕೌಳಿ– ಹೀಗೆ ಸುಮಾರು 20ಕ್ಕೂ ಹೆಚ್ಚಿನ ಅಪರೂಪದ ಕಾಡುಜಾತಿಯ ಹಣ್ಣಿನ ಗಿಡಗಳನ್ನು ಬೆಳೆಸುತ್ತಿದ್ದಾರೆ. ಅಲ್ಲದೇ, 'ನವಗ್ರಹವನ'ವನ್ನೂ ನಿರ್ಮಿಸಿದ್ದಾರೆ. ಕೇವಲ ಮನುಷ್ಯರಿಗಷ್ಟೇ ಅಲ್ಲದೇ, ಪ್ರಾಣಿ ಪಕ್ಷಿಗಳ ಅಸ್ತಿತ್ವಕ್ಕೂ ಸಹಕಾರಿಯಾಗುವ ಗಿಡಗಳನ್ನು ಬೆಳೆಸಿರುವುದು ವಿಶೇಷ. ತಾವು ಗಿಡಗಳನ್ನು ನೆಟ್ಟು ಬೆಳೆಸುತ್ತಿರುವ ಜಾಗದಲ್ಲಿ ಹಾಗೂ ಸುತ್ತಲೂ ಮಳೆಯ ನೀರು ಬಿದ್ದು ಹರಿದುಹೋಗಿ ವ್ಯರ್ಥವಾಗದಂತೆ ಬಾಕ್ಸ್ ಮಾದರಿಯಲ್ಲಿ ನೀರು ಇಂಗಲು ಅವಕಾಶವನ್ನು ಕಲ್ಪಿಸಿ, ಅಂತರ್ಜಲ ಹೆಚ್ಚಳಕ್ಕೆ ಕ್ರಮ ಕೈಗೊಂಡಿದ್ದಾರೆ. ಅಲ್ಲದೇ ಅಲ್ಲಲ್ಲಿ ಚಿಕ್ಕ ಚಿಕ್ಕ ಕಾಲುವೆಗಳನ್ನು ನಿರ್ಮಿಸಿ, ಮಳೆಯ ನೀರು ಇಂಗುವಂತೆ ಮಾಡಿದ್ದಾರೆ.

13ನೇ ಪುಟಕ್ಕೆ...

ಸಿರಿಕಂಠದ ಸೊರ ಅಡಗಿದ ಪಾಡ್ದನ ಕವಿ ರಾಮಕ್ಕ

ಪ್ರೊ ಎ. ವಿ. ನಾವಡ

ಈಚೆಗೆ ನಿಧನರಾದ ಪಾಡ್ದನಕವಿ ಗಿಡಿಕೆರೆ ರಾಮಕ್ಕ ಮುಗ್ಗೇರ್ತಿ ಶತಮಾನ ಕಂಡ ಕರ್ನಾಟಕದ ಒಂದು ಅದ್ಭುತ ಕಾವ್ಯಪ್ರತಿಭೆ. ತುಳುನಾಡಿನ ಹೆಸರಾಂತ ಪಾಡ್ದನಕವಿ; ಪಾಡ್ದನಗಳ ದೊಡ್ಡ ಕಣಜ. ಅವರ ಕಣಜದಲ್ಲಿ ಪಾಡ್ದನ ಕಟ್ಟುವ ಸೃಜನ ಪ್ರತಿಭೆ ಅಷ್ಟೇ ಅಲ್ಲ, ಪಾಡ್ದನ ಹುಟ್ಟುವ, ಕಟ್ಟುವ ಬಗೆ, ಸಂದರ್ಭ ಮನೋಪಠ್ಯಲೋಕ, ಸೂತ್ರಾತ್ಮಕತೆಗಳಿಂದ ರೂಪುಗೊಳ್ಳುವ ಪಠ್ಯದ ಸೃಷ್ಟಿ-ಮರುಸೃಷ್ಟಿಯ ಸ್ವರೂಪಗಳ ಕುರಿತು ಮೌಖಿಕ ಕಾವ್ಯ ಮೀಮಾಂಸೆ ಕಟ್ಟಬಲ್ಲ ವಿಶಿಷ್ಟ ಪಾಂಡಿತ್ಯವಿತ್ತು.

ರಾಮಕ್ಕ ಮುಗ್ಗೇರ್ತಿ ಹುಟ್ಟಿದ್ದು, ಬೆಳೆದಿದ್ದು ಮಂಗಳೂರು ಬಳಿಯ ವಾಮಂಜೂರಿನಲ್ಲಿ. ಹದಿನೈದು ವರ್ಷಕ್ಕೆ ಮದುವೆಯಾಗಿ ಬದುಕು ಮಾಡಿದ್ದು ಕಟೀಲು ಗ್ರಾಮದ ಗಿಡಿಕೆರೆಯಲ್ಲಿ. ಬದುಕಿನ ಬಹುಕಾಲ ಕೃಷಿಕಾರ್ಮಿಕರಾಗಿ, ನಾಟಿಗದ್ದೆಯ ನಿರಂತರ ದುಡಿತದಲ್ಲಿ ಪಾಡ್ದನಗಳೊಂದಿಗಿನ ಅವರ ಸಂಬಂಧ ದಿನಬೆಳಗಿನದು. ಅಲ್ಲಿಯೇ ಅವರ ಪಾಡ್ದನಕಾವ್ಯ ಹುಟ್ಟು ಮರುಹುಟ್ಟಿನಲ್ಲಿ ಮೈತಳೆದದ್ದು. ಅಂದರೆ ನಾಟಿಗದ್ದೆಯೇ ರಾಮಕ್ಕ ಮುಗ್ಗೇರ್ತಿಯವರ ಕಾವ್ಯಾವತರಣದ ಮುಖ್ಯ ಪ್ರದರ್ಶನ ಕಳ. ಸಹವಂದಿಗ ಮಹಿಳಾ ಸಮೂಹವೇ ಪ್ರೇಕ್ಷಕಕೂಟ. ನಾಟಿಗದ್ದೆಯ ಈ 'ಸಹಜಸಂದರ್ಭ'ದ ಅವರ ಪಾಡ್ದನಪಠ್ಯಕ್ಕೆ ಅಧ್ಯಯನದ ನೆಲೆಯಲ್ಲಿ ಬಹಳ ಮಹತ್ವವಿದೆ. ಹಾಗೆ ನೋಡಿದರೆ ಒಂದು ಪ್ರದರ್ಶನ ಪಠ್ಯ ರೂಪುಗೊಳ್ಳುವುದು, ಗರಿಮೆಯನ್ನು ಪಡೆಯುವುದು ಕವಿ-ಪ್ರೇಕ್ಷಕರ ಸಂಬಂಧ, ಪ್ರೇಕ್ಷಕರ ಪಾಲ್ಗೊಳ್ಳುವಿಕೆ, ಬಂಧುತ್ವ ವ್ಯವಸ್ಥೆ, ಪ್ರದರ್ಶನದ ಆವರಣ ಅತ್ಯಂತ ಪರಿಣಾಮಕಾರಿಯಾದುದು. ಇತ್ಯಾತ್ಮಕವಾದ ಇಂತಹ ಸಂದರ್ಭ, ಪರಿಸರವೇ ರಾಮಕ್ಕ ಮುಗ್ಗೇರ್ತಿಯವರ ಕಾವ್ಯಸೃಷ್ಟಿಯ ಪ್ರಧಾನಶಕ್ತಿ. ರಾಮಕ್ಕನ ಕಾವ್ಯಪ್ರತಿಭೆ 30ಕ್ಕೂ ಮಿಕ್ಕು ಸುದೀರ್ಘ ಪಾಡ್ದನಗಳನ್ನೂ, 15ಕ್ಕೂ ಹೆಚ್ಚು ಕಬಿತಗಳನ್ನೂ, ಮಾನಸಿಕಪಠ್ಯದ ರೂಪದಲ್ಲಿ ತನ್ನೊಳಗೆ ಹುದುಗಿಸಿಕೊಂಡಿದೆ.

ಅದು 1997. ದೇಸೀ ಕನಸಿನ ಚಂದ್ರಶೇಖರ ಕಂಬಾರರು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಹೊತ್ತು. ಕರ್ನಾಟಕದ ಮೌಖಿಕ ಮಹಾಕಾವ್ಯ ಯೋಜನೆಯನ್ನು ಜಾನಪದ ವಿದ್ವಾಂಸ ಪ್ರೊ. ಹಿ. ಚಿ. ಬೋರಲಿಂಗಯ್ಯ ಅವರ ನೇತೃತ್ವದಲ್ಲಿ ಕನ್ನಡದ ನಾಲ್ಕು ಮಹಾಕಾವ್ಯಗಳು ಒಂದು ತುಳು ಮಹಾಕಾವ್ಯವನ್ನು ಈ ಯೋಜನೆಯಡಿ ಪ್ರಕಟಿಸಲು ಉದ್ದೇಶಿಸಿದೆವು. ಆಗ ನಾನು ತುಳು ಸಿರಿಪಾಡ್ದನ ಕಾವ್ಯವನ್ನು ಆಯ್ದುಕೊಂಡೆ. ಈ ಹಿನ್ನೆಲೆಯಲ್ಲಿ ನಾನು ರಾಮಕ್ಕ ಮುಗ್ಗೇರ್ತಿಯವರ ಮುಳಿಹುಲ್ಲಿನ ಮನೆಯ ಜಗಲಿಯಲ್ಲಿ ಅವರ ಬಂಧುಗಳ, ನೆರೆಕರೆಯವರ ಎದುರು ಹಾಡಿಸಿ ಸಂಗ್ರಹಿಸಿದೆ. ಆರುಕೂರುಗಳಲ್ಲಿ-ಒಂದೊಂದು ಬಾರಿ ನಾಲ್ಕು ದಿನಗಳು. ಈ ಕಾಲಾವಧಿಯಲ್ಲಿ ದಾಖಲೀಕರಣ ನಡೆಸಿದೆ. ನನ್ನ ಒಂಟಿ ಪ್ರಯತ್ನವಾಗಿ ಗಿಡಿಕೆರೆ ರಾಮಕ್ಕ ಮುಗ್ಗೇರ್ತಿಯವರ ಸುದೀರ್ಘ ಸಿರಿಪಾಡ್ದನವನ್ನು ಸಂಗ್ರಹಿಸಿ, ಸಂಕಲಿಸಿ, ಪ್ರಕಟಿಸಿದ್ದು (1999).

ಒಮ್ಮೆ ರಾಮಕ್ಕ ಮುಗ್ಗೇರ್ತಿ ಅವರಲ್ಲಿ 'ನೀವು ಇಷ್ಟು ಸುದೀರ್ಘವಾದ ಪಾಡ್ದನವನ್ನು ಹೇಗೆ ನಿರರ್ಗಳವಾಗಿ ಹಾಡುತ್ತೀರಿ?' ಎಂಬ ಪ್ರಶ್ನೆ ಇಟ್ಟಾಗ ಅವರು ಹೇಳಿದ್ದು ಹೀಗೆ - 'ನಮ್ಮದು ಮಾತೃಮೂಲೀಯ ಕುಟುಂಬ. ನನ್ನ ಅಜ್ಜಿ ಪಾಡ್ದನಗಳ ಮರ. ನಾನು ಆಗ ಐದು ವರ್ಷದ ಬಾಲೆ. ನನಗೆ ಆಗಲೇ ಪಾಡ್ದನ ಕೇಳುವುದೆಂದರೆ ಅಷ್ಟು ಇಷ್ಟ. ರಾತ್ರಿ ಊಟವಾದ ಬಳಿಕ ಅಜ್ಜಿ ಹೇಳುತ್ತಿದ್ದ ಪಾಡ್ದನಗಳನ್ನು ಕುತೂಹಲದಿಂದ ಕಿವಿಗೊಟ್ಟು ಕೇಳುತ್ತಿದ್ದೆ. ಆಗ ನನಗೆ ಪಾಡ್ದನಗಳ ಕತೆ ತಿಳಿಯಿತು. ಕತೆಯ ವಸ್ತು ಆಪ್ತವಾಯಿತು. ಅಜ್ಜಿ ನಾಟಿಗದ್ದೆಯಲ್ಲಿ ಪಾಡ್ದನ ಹಾಡುವಾಗ ನಾನು ಗದ್ದೆಯಂಚಿನಲ್ಲಿ ಕುಳಿತು ಅದನ್ನು ಕೇಳಿಸಿಕೊಳ್ಳುತ್ತಿದ್ದೆ. ಮುಖ್ಯ ಪಾಡ್ದನಕಾರ್ತಿಯಾಗಿದ್ದ ನನ್ನ ಅಜ್ಜಿ ಮೊದಲಸಾಲು ಹಾಡಿದಾಗ ಅವರ ಜೊತೆಗಿನ ಹೆಂಗಸರು ಅದನ್ನು ಪುನರಾವರ್ತಿಸುತ್ತಿದ್ದರು. ಆಗ ನಾನು ಅದಕ್ಕೆ ದನಿಗೂಡಿಸುತ್ತಿದ್ದೆ. ನಾನು ಒಬ್ಬಳೇ ಇದ್ದಾಗ ಆ ಪಾಡ್ದನವನ್ನು ಗುನುಗುನಿಸುತ್ತಿದ್ದೆ. ಒಬ್ಬಳೇ ಇದ್ದಾಗ ಆ ಪಾಡ್ದನಗಳ ಒಂದೊಂದು ಸಾಲನ್ನು ಕಟ್ಟಿ ಹೊಸೆಯತೊಡಗಿದೆ. ಮುಂದೆ ಅಜ್ಜಿಯೊಂದಿಗೆ ನಾನು ನಾಟಿಗದ್ದೆಯ ಕೆಲಸಕ್ಕೆ ಹೋಗತೊಡಗಿದೆ. ಅಲ್ಲಿ ಕೆಲವೊಮ್ಮೆ ಅಜ್ಜಿ 'ಮಗಾ ರಾಮಕ್ಕ, ನನಗೆ ದಣಿವಾಗುತ್ತಿದೆ. ನಾನು ತೊಡಗಿದ ಪಾಡ್ದನವನ್ನು ಮುಂದುವರಿಸು' ಎನ್ನುತ್ತಿದ್ದರು. ಆಗ ನಾನು ಅನಿವಾರ್ಯವಾಗಿ ಮುಖ್ಯ ಪಾಡ್ದನಕಾರ್ತಿಯಾಗಿ ಹಾಡತೊಡಗಿದೆ. ಇಂದಿಗೂ ಇಡಿಯ ಪಾಡ್ದನ ನನಗೆ ಬಾಯಿಪಾಠ ಬಂದಂತಿಲ್ಲ. ಆಯಾ ಹೊತ್ತಿನ ತುರ್ತಿಗೆ ಅನುಸರಿಸಿ ನನ್ನ ಅನುಭವದ ಬೆಳಕಿನಲ್ಲಿ ಪಾಡ್ದನ ಕಟ್ಟುತ್ತಾ ಬಂದೆ. ಸಮಯ ಸಂದರ್ಭಕ್ಕೆ ಅನುಗುಣವಾಗಿ ಒಂದು ಪಾಡ್ದನ ಹಿಗ್ಗುತ್ತದೆ, ಕುಗ್ಗುತ್ತದೆ, ಅಲಂಕರಣಗೊಳ್ಳುತ್ತದೆ. ಯಾವುದೂ ಬಾಯಿಪಾಠವಲ್ಲ.' - ಎನ್ನುವಲ್ಲಿ ರಾಮಕ್ಕ ಒಬ್ಬ ಸಮರ್ಥ ಮೌಖಿಕ ಕಾವ್ಯಮೀಮಾಂಸಕಾರರಾಗಿ ನಿಲ್ಲುತ್ತಾರೆ. ಇದಕ್ಕೆ ಸಾಕ್ಷ್ಯವಾಗಿ ಸಿರಿಪಾಡ್ದನ ದಾಖಲೀಕರಣದ ಒಂದು ಅನುಭವವನ್ನು ಹೇಳಬಯಸುತ್ತೇನೆ. ಒಂದು ಕೂರಿನಲ್ಲಿ ಧ್ವನಿಮುದ್ರಣ ಮಾಡಿಕೊಂಡ ಅರ್ಧ ಕ್ಯಾಸೆಟ್ ಭಾಗ ಇನ್ನೊಂದು ಕೂರಿನಲ್ಲಿ ಹಾಡಿಸಿದಾಗ ಅದು ಒಂದೂವರೆ ಕ್ಯಾಸೆಟ್‌ನಷ್ಟು ವಿಸ್ತಾರಕ್ಕೆ ಬೆಳೆಯಿತು. ಅಕ್ಷರ ಜಗತ್ತಿನಲ್ಲಿ ಒಂದು ಅಪಕಲ್ಪನೆಯಿದೆ. ಅದು ಮೌಖಿಕಕಾವ್ಯ-ಪಾಡ್ದನಗಳು ಪರಂಪರೆಯಿಂದ ಬಂದಿದ್ದು ಬಾಯಿಪಾಠದ ಮೂಲಕ ಅದೇ ಪಠ್ಯ ಮತ್ತೆ ಮತ್ತೆ ಬಿತ್ತರಗೊಳ್ಳುತ್ತದೆ ಎಂಬ ನಿಲುಮೆ. ಹಾಗಾಗಿಯೇ ನಾವು ಅಕ್ಷರದ ಮಂದಿ ಅವರನ್ನು ಗಾಯಕರೆಂದೋ, ನಿರೂಪಕರೆಂದೋ, ವಕ್ತೃಗಳೆಂದೋ ಕಾಣುವುದು. ಈ ತೀರ್ಮಾನ ಎಷ್ಟು ಅವೈಜ್ಞಾನಿಕವೆಂದರೆ ಕಾವ್ಯ, ಕಥೆ, ಕವಿತೆಯೊಂದು ಲಿಖಿತದಲ್ಲಿ ಮೂಡಿದರೆ ಅವರು ಕವಿ/ಕಥೆಗಾರರಾಗುತ್ತಾರೆ. ಮೌಖಿಕದಲ್ಲಿ ಹಾಡಿದರೆ, ಹೇಳಿದರೆ ಅವರು ಗಾಯಕ, ನಿರೂಪಕರಾಗುತ್ತಾರೆ. ಇಲ್ಲಿ ನನ್ನನ್ನು ಕಾಡುವ ಪ್ರಶ್ನೆ ಮೌಖಿಕ ಸೃಜನಶೀಲ ಪ್ರತಿಭೆಯೊಂದು ಏಕೆ ಕವಿ, ಕತೆಗಾರರಲ್ಲ? ಈ ಪ್ರಶ್ನೆಯ ಹಾದಿಯ ನಡೆಯಲ್ಲಿ ನಾನು ರಾಮಕ್ಕರಿಂದ ಸಂಗ್ರಹಿಸಿ ಸಂಪಾದಿಸಿ ಪ್ರಕಟಿಸಿದ ಸಿರಿಪಾಡ್ದನ ಸಂಪುಟಕ್ಕೆ 'ರಾಮಕ್ಕ ಮುಗ್ಗೇರ್ತಿ ಕಟ್ಟಿದ ಸಿರಿಪಾಡ್ದನ' ಎಂಬ ಹೆಸರಿಟ್ಟು ಅವರನ್ನು ಕವಿಯಾಗಿ ಕಂಡು ಗೌರವಿಸಿದೆ.

ರಾಮಕ್ಕ

ಹಲವು ಪುರಸ್ಕಾರಗಳು

ರಾಮಕ್ಕ ಮುಗ್ಗೇರ್ತಿಯವರನ್ನು ನಾಡು ಬಹುಬಗೆಯಲ್ಲಿ ಗೌರವಿಸಿದೆ. ಕರ್ನಾಟಕ ತುಳುಸಾಹಿತ್ಯ ಅಕಾಡೆಮಿಯ ಸದಸ್ಯತ್ವ (2001-2004), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (2014), ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ (2000), ವೀರರಾಣಿ ಅಬ್ಬಕ್ಕ ಪ್ರಶಸ್ತಿ (2009), ಕಟೀಲು ದೇಗುಲದಿಂದ 'ಪಾಡ್ದನ ಕೋಗಿಲೆ' ಬಿರುದು ಅವರ ಪ್ರತಿಭೆಗೆ ಸಂದಿದೆ.

ಮುನ್ನೋಟ 28-04-2024 ರಿಂದ -04-05-2024

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಅತಿಯಾದ ಆತ್ಮಾಭಿಮಾನ ನಿಮ್ಮನ್ನು ಆವರಿಸಿಕೊಳ್ಳುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಡವಳಿಕೆಯಲ್ಲಿ ಸ್ಥಿರತೆ ಇರುವುದಿಲ್ಲ. ನಿಮ್ಮದೇ ಆದ ಕಾರಣಗಳಿಂದ ಬಂಧುಗಳು ದೂರವಾಗುವರು. ಆಸ್ತಿ ವ್ಯವಹಾರಗಳಲ್ಲಿ ನಿಧಾನ ಗತಿಯ ಪ್ರಗತಿಯನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ದೊರೆಯುವ ಕಾಲ. ಹೊಟ್ಟೆಗೆ ಸಂಬಂಧಪಟ್ಟ ಕೆಲವು ರೋಗಗಳು ಕಾಡಬಹುದು.

ವೃಷಭ — ಕೃತಿಕಾ2 3 4 ರೋಹಿಣಿ, ಮೃಗಶಿರಾ1 2

ಆದಾಯವು ನಿಮ್ಮ ಅಗತ್ಯದ ಹತ್ತಿರ ಬರುತ್ತದೆ. ನಿಮ್ಮ ನಡವಳಿಕೆಗಳಿಂದ ಬಂಧುಗಳೊಡನೆ, ಸ್ನೇಹಿತರಲ್ಲಿ ನಿಷ್ಠುರ ಕಟ್ಟಿಕೊಳ್ಳುವಿರಿ. ಸಂಸಾರದಲ್ಲಿ ಸಂತೋಷ ಇರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಇರುತ್ತದೆ. ಮಕ್ಕಳ ಬಗ್ಗೆ ಉತ್ತಮ ವಾರ್ತೆಗಳನ್ನು ಕೇಳುವಿರಿ. ಅಜೀರ್ಣ ನಿಮ್ಮನ್ನು ಬಾಧಿಸಬಹುದು. ಸಂಗಾತಿಯಿಂದ ಧನಸಹಾಯವಾದರೂ ನೀವು ಸಂಗಾತಿಗೆ ಹೆಚ್ಚು ಖರ್ಚು ಮಾಡಬೇಕಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಒಂದು ರೀತಿ ಋಣಾತ್ಮಕವಾಗಿ ಆಲೋಚನೆ ಮಾಡುವಿರಿ.ಆದಾಯವು ನಿಮ್ಮ ಅಗತ್ಯ ಪೂರೈಸುವಷ್ಟಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಲ್ಲಿ ನಿಧಾನ ಗತಿಯನ್ನು ಕಾಣಬಹುದು. ನಿಮ್ಮ ಕೆಲವೊಂದು ಕೆಲಸಗಳಿಗೆ ಧರ್ಮ ಅಥವಾ ನಿಯಮ ಅಡ್ಡಿಯಾಗಬಹುದು. ಸ್ಥಿರಾಸ್ತಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಮಕ್ಕಳ ವಿಷಯವಾಗಿ ಹೆಚ್ಚು ತಲೆ ಕೆಡಿಸಿಕೊಳ್ಳಬೇಕಾದ ಪರಿಸ್ಥಿತಿ ಇರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ನಿಮ್ಮ ನಡವಳಿಕೆ ತೀರಾ ವ್ಯಾವಹಾರಿಕವಾಗಿರುತ್ತದೆ. ಸರಳವಾದ ನಿಮ್ಮ ಮಾತು ಬಹಳ ಜನರನ್ನು ಮುಟ್ಟುತ್ತದೆ. ಆದಾಯವು ನಿರೀಕ್ಷಿತ ಮಟ್ಟಕ್ಕೆ ಇರುತ್ತದೆ. ನಿಮ್ಮ ನಡವಳಿಕೆಗಳಿಂದ ಗುರು ಹಿರಿಯರು ನಿಮಗೆ ಸಹಕರಿಸುತ್ತಾರೆ. ಸ್ಥಿರಾಸ್ತಿಯ ವಿಚಾರದಲ್ಲಿ ಹೆಚ್ಚು ಎಚ್ಚರದಿಂದಿರುವುದು ಒಳ್ಳೆಯದು. ವಿದ್ಯಾರ್ಥಿಗಳಿಗೆ ಅವರ ಅಧ್ಯಯನದಲ್ಲಿ ನಿರೀಕ್ಷಿತ ಯಶಸ್ಸು ಇರುತ್ತದೆ. ಮಕ್ಕಳಿಂದ ನಿಮಗೆ ಧನ ಸಹಾಯವಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಎಲ್ಲರಿಂದ ಬಹಳ ಗೌರವವನ್ನು ನಿರೀಕ್ಷೆ ಮಾಡುವಿರಿ. ಹಣದ ಒಳಹರಿವು ಮಧ್ಯಮಗತಿಯಲ್ಲಿರುತ್ತದೆ. ಧಾರ್ಮಿಕ ವಿಚಾರವಾಗಿ ಮಾತನಾಡುವವರಿಗೆ ಉತ್ತಮ ಗೌರವ ದೊರೆಯುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ತಂದೆಯಿಂದ ಹೆಚ್ಚು ಸಹಕಾರ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮಗತಿಯ ಫಲಿತಾಂಶವಿರುತ್ತದೆ. ಮಕ್ಕಳ ಕ್ಷೇಮಕ್ಕಾಗಿ ಹೆಚ್ಚು ಹಣ ಖರ್ಚಾಗಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಒಂದು ರೀತಿಯ ಉಡಾಫೆ ವ್ಯಕ್ತಿತ್ವ ನಿಮ್ಮಲ್ಲಿ ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲವೊಂದು ಕೆಲಸಗಳಿಗೆ ಸಂಗಾತಿ ಮತ್ತು ಅವರ ಹಿರಿಯರಿಂದ ಅಡ್ಡಿಯಾಗಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷಿಸಿದ ಯಶಸ್ಸು ಸಿಗುವುದು ಕಡಿಮೆ. ಲೇವಾದೇವಿ ವ್ಯವಹಾರ ಮಾಡುವವರಿಗೆ ಈಗ ಯಶಸ್ಸು ಸಿಗುವುದಿಲ್ಲ. ಕೃಷಿ ಮಾಡುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ತಾವೇ ದೊಡ್ಡವರೆಂಬ ಹಮ್ಮು ಕೆಲವರಲ್ಲಿ ಇರುತ್ತದೆ. ಅದನ್ನು ಬಿಡುವುದು ನಿಮಗೆ ಒಳ್ಳೆಯದು. ಹಣದ ಒಳಹರಿವು ಸಾಮಾನ್ಯಗತಿಯಲ್ಲಿರುತ್ತದೆ. ಚುರುಕಾಗಿ ಓಡಾಡಿ ಎಲ್ಲರ ಮುಂದೆ ಕೆಲಸ ಮಾಡುವಂತೆ ತೋರ್ಪಡಿಸಿಕೊಳ್ಳುವಿರಿ. ಕೃಷಿ ಜಮೀನು ಖರೀದಿ ಮಾಡುವ ಯೋಗವಿದೆ. ಮಕ್ಕಳಿಂದ ಸೂಕ್ತ ಗೌರವ ದೊರೆಯದಿರಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಎದುರಾಳಿಗಳನ್ನು ಎದುರಿಸುವ ದಿಟ್ಟತನ ನಿಮ್ಮಲ್ಲಿ ಇರುತ್ತದೆ. ಆದಾಯವು ಅಗತ್ಯದ ಹತ್ತಿರ ದೊರೆಯುತ್ತದೆ. ಶತ್ರುಗಳನ್ನು ಮಟ್ಟ ಹಾಕಲು ನಿಮ್ಮದೇ ಆದ ತಂತ್ರಗಳನ್ನು ಬಳಸುವಿರಿ. ಕೌಟುಂಬಿಕ ಶಾಂತಿ ಕಾಪಾಡಿಕೊಳ್ಳಲು ಮೌನವಾಗಿರುವುದು ಒಳ್ಳೆಯದು. ಕೃಷಿಭೂಮಿಯನ್ನು ಹೊಂದುವ ಯೋಗವಿದೆ. ವಿದ್ಯಾರ್ಥಿಗಳಿಗೆ ಮಧ್ಯಮ ಯಶಸ್ಸು ಇರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ವಾರದ ಆರಂಭದಲ್ಲಿ ಬಹಳ ಸಂತೋಷವಿರುತ್ತದೆ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಕೆಲವರು ಅಡ್ಡಿ ಬರುವ ಸಾಧ್ಯತೆ ಇದೆ. ಶತ್ರುಗಳನ್ನು ಮಟ್ಟ ಹಾಕಲು ನಿಮ್ಮದೇ ತಂತ್ರಗಳನ್ನು ಬಳಸುವಿರಿ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ಅಧ್ಯಯನದಲ್ಲಿ ದೊರಕುತ್ತದೆ. ಮಕ್ಕಳಿಂದ ನಿಮಗೆ ಸಹಾಯ ದೊರೆಯುವ ಸಾಧ್ಯತೆಯಿದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ನಿಮ್ಮ ಕೆಲಸ ಕಾರ್ಯಗಳನ್ನು ಪ್ರಾಮಾಣಿಕವಾಗಿ ಮಾಡಿ ಮುಗಿಸುವಿರಿ. ಮಾತನಾಡುವಾಗ ಬಹಳ ಎಚ್ಚರ ಇರಲಿ, ಅನಪೇಕ್ಷಿತ ಮಾತುಗಳು ಖಂಡಿತ ಬೇಡ. ಕೆಲಸ ಕಾರ್ಯಗಳಿಗೆ ನಿಮ್ಮ ದೂರದ ಬಂಧುಗಳು ಅಡ್ಡಿಪಡಿಸುವರು. ಸಂಸಾರದಲ್ಲಿ ಸಂತೋಷವಿರುತ್ತದೆ. ಸ್ಥಿರಾಸ್ತಿಯನ್ನು ಖರೀದಿಮಾಡುವ ಯೋಗವಿದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚು ಯಶಸ್ಸು ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಮಾತನಾಡುವಾಗ ಎಚ್ಚರಿಕೆ ಇರಲಿ. ಹಣದ ಒಳ ಹರಿವು ಮಧ್ಯಮ ಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಗಳಿಂದ ಗೌರವವನ್ನು ಸಂಪಾದಿಸಬಹುದು. ಉಪನ್ಯಾಸಕರಿಗೆ ಉತ್ತಮ ವೇದಿಕೆ ಮತ್ತು ಗೌರವ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ರೀತಿಯ ಫಲಿತಾಂಶ ಇರುತ್ತದೆ. ವಿದೇಶಕ್ಕೆ ಓದಲು ಹೋಗಬೇಕೆನ್ನುವವರಿಗೆ ದಾಖಲೆಗಳ ತೊಂದರೆ ಎದುರಾಗುವ ಸಾಧ್ಯತೆ ಇದೆ, ಈಗಲೇ ಎಚ್ಚರಿಕೆ ವಹಿಸಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನಿಮ್ಮ ನಿರ್ಧಾರಗಳಲ್ಲೇ ಬಹಳ ದ್ವಂದ್ವವಿರುತ್ತದೆ. ಆದಾಯವು ಉತ್ತಮವಾಗಿರುತ್ತದೆ. ಮಾತನಾಡುವಾಗ ಎಚ್ಚರಿಕೆ ಇರಲಿ. ಅತಿಯಾದ ಖರ್ಚು ಇರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಸ್ತ್ರೀಯರಿಂದ ಅಡ್ಡಿ ಬರುವ ಸಾಧ್ಯತೆ ಇದೆ. ರಿಯಲ್ ಎಸ್ಟೇಟ್ ವ್ಯವಹಾರ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮಗತಿಯ ಫಲಿತಾಂಶವಿರುತ್ತದೆ.

ಪದಬಂಧ 2839

ಮೇಲಿನಿಂದ ಕೆಳಕ್ಕೆ

1. ಆಕಾಶದಲ್ಲಿ ಮಿನುಗುವ ತಾರೆ ಭರದಿಂದ ಧಾರೆಯಾಗಿ ಧುಮ್ಮಿಕ್ಕಿದೆ 5
2. ಚೈತ್ರದ ಕೋಗಿಲೆ ಹಾಡು 2
3. ಸದಾ ನಿರತರಾಗಲೊಂದು ಉದ್ಯೋಗ 2
4. ಭೀತಿಯನ್ನುಂಟುಮಾಡುವ 5
5. ವಿಶ್ವಕ್ಕೇ ತಾಯಿ ಈ ಶಕ್ತಿದೇವತೆ 4
7. ಕನ್ನಡದ ಕಷ್ಟ ಕಾರ್ಪಣ್ಯ 3
9. ಚುನಾವಣೆ ಸ್ಪರ್ಧಿಸಲು ಸಲ್ಲಿಸಬೇಕಾದ ಹೆಸರಿನ ನಿವೇದನೆ 4
11. ಹೊಳೆಯುವ ಹರಳಿನಿಂದ ಅಲಂಕೃತ ಕಿರೀಟ 5
12. ನಾಮಪ್ರಸಿದ್ಧಿಗಾಗಿ ಹವಣಿಸುವವ 5
14. ಎಲ್ಲಡೆಯಿಂದ ಮಂದಿಯನ್ನು ಆಕರ್ಷಿಸುವ ನಾಗರಿಕರ ಪಟ್ಟಣ 3
16. ಅಪರೂಪಕ್ಕೆ ಆಗೊಮ್ಮೆ ಇಗೊಮ್ಮೆ ಕಾಣುವಾಗ ತಲೆ ಕೆಳಗಾಗುವ ಸೂರ್ಯ 3
18. ಒಂದು ರೀತಿಯ ನಗೆ 4
19. ಜಾತಕದಲ್ಲಿ ಮೊಸಳೆಗಳ ಸಮೂಹದ ಮನೆ 5
20. ಬಹಳ ದಯೆಯುಳ್ಳ ತಾಯಿಯಂತಹವಳು 5
21. ಮರ ಮತ್ತು ಬಳ್ಳಿ 4
23. ಸಿಖ್ ಧರ್ಮದ ಗುರು 3
25. ಬಿಸಿಲು ಹೆಚ್ಚಾಗಿ ಮಳೆಯಿಲ್ಲದಂತೆ ಆಗುವ ಕ್ಷಾಮಕಾಲ 2
26. ಮಾತಿಗೆ ಮುಂಚೆ ಬರುವ ಕೌಸಲ್ಯಾಸುತ 2

ಎಡದಿಂದ ಬಲಕ್ಕೆ

1. ಆತುರದಲ್ಲಿ ತುರುಕಿಕೊಂಡು ತಿನ್ನು 3
3. ಕೊಂಬಿನ ಬಸವ ರಾಶಿಗಳಲ್ಲಿ ಎರಡನೆಯದು 3
5. ಮಂದಿಯ ಗುಂಪು ಸಮಾಜದ ಅವಯವ 3
6. ಹಣತೆಗೆ ಹಾಕುವ ಹೂವಿನಂತೆ ಹೊಸೆದ ಹತ್ತಿ 3
8. ಶ್ರೀಕೃಷ್ಣ ಈ ನದಿ ತೀರದಲ್ಲಿ ವಿಹರಿಸಿದ 3
10. ಆಡಳಿತಸೂತ್ರ ಹಿಡಿಯಲು ಪಕ್ಷಗಳು ಮತ್ತು ಅಭ್ಯರ್ಥಿಗಳು ಓಟು ಕೇಳುತ್ತಾ ಹೋಗುವ ಪ್ರಕ್ರಿಯೆ ಮತದಾನದ ಸಮಯದಲ್ಲಿ ನಿಷಿದ್ಧ 7
13. ಚುಕ್ಕಿಯಂತೆ ಕಾಣುವ ಮುಗಿಲಲ್ಲಿ ಹಾರುವ ಪಕ್ಷಿ 3
15. ಸಂಸ್ಕೃತದ ಪತ್ನಿ 3
17. ಸಂಸ್ಕೃತಕ್ಕೆ ಹಿಡಿದಿರುವ ಕನ್ನಡಿ 3
18. ಶ್ರೇಷ್ಠ ಉತ್ಕೃಷ್ಟ 3
20. ಕವಿ ಸೃಷ್ಟಿಸಿದ ಹೆಣ್ಣು 3
22. ಇವರು ಮೋಸದ ಮುಂದಾಳುಗಳು 7
24. ಹಿಂದಿಯ ಮಂದಿಯ ಜೊತೆ ಊರುಗೋಲಾಗಿ ನಿಲ್ಲುವವ ಆಫ್ರಿಕಾದ ಮರಳುಗಾಡಲ್ಲಿ ಸಿಗಬಹುದು 3
25. ಬಲಿಗೆ ಸಿದ್ಧವಾಗಿರುವ ಕುರಿ 3
27. ತಾಯಿ ತೋರುವ ಅಕ್ಕರೆಯ ಪ್ರೀತಿ 3
28. ಬೆಟ್ಟದ ತುತ್ತತುದಿ 3
29. ಉತ್ತರಭಾರತದಲ್ಲಿ ಹಾಲು ಕೆನೆಕಟ್ಟಿದೆ 3



ಪದಬಂಧ ಉತ್ತರ -2838

ಮೇಲಿಂದ ಕೆಳಕ್ಕೆ

1. ರಾಮನವಮಿ 2.ಮಧುರ 3.ವಿದೂಷಕ 4.ನಗೆದೋಣಿ 5.ಪರೋಕ್ಷ 6.ಪುರಂದರವಿಠಲ 8.ಮರಿಮಗ 10. ತಾತ್ಕಾಲಿಕ 11.ರಸ 13.ಹರಿ 15.ಪುಲಿನ 16.ಜನ್ಮನಕ್ಷತ್ರ 17.ಏರುಪೇರು 18.ಪಕಪಕ 20.ಯವಾರ

ಎಡದಿಂದ ಬಲಕ್ಕೆ

1. ರಾಮನಾಮ 3.ವಿನೂತನ 5.ಪರಮಪುರುಷ 7.ಕರಿಮಣಿ 9.ಮಿತಾಕ್ಷರ 12.ಸಮರಸಿಂಹ 14.ರಿಪುಗಜ 17.ಏಕರೂಪ 19.ಕಮಲನಯನ 21.ರುಚಿಪಾಕ 22.ರವಿಪುತ್ರ



ಯಾಂಬುಯಾನದ ನಡುವೆ ನಿಜದ್ದೇ ಧ್ಯಾನ

ಡಾ. ಕೆ.ಎಸ್. ಪವಿತ್ರ

ರೈಲು ಟಿಕೆಟ್ ಮೊಬೈಲ್‌ನಲ್ಲೇ ಬರುತ್ತೆ. ಏರ್ ಟಿಕೆಟ್‌ನ ಬೋರ್ಡಿಂಗ್ ಪಾಸ್ ಅನ್ನೂ ಮೊಬೈಲಲ್ಲೇ ಡೌನ್‌ಲೋಡ್ ಮಾಡಿ, 'ಡಿಜಿಯಾತ್ರಾ' ಆ್ಯಪ್‌ಗೆ ಹಾಕಿದರೆ ಸುಮ್ಮನೇ ಹೋಗಿ ಯಂತ್ರವೊಂದರ ಮುಂದೆ ನಿಂತರಾಯಿತು; ಅದು ನಮ್ಮ ಜಾತಕವನ್ನೆಲ್ಲಾ ಜಾಲಾಡಿ, ಕೆಲಕ್ಷಣಗಳಲ್ಲಿ ಭದ್ರತಾ ಗೇಟು ತೆರೆಯುತ್ತದೆ. ಪ್ರವಾಸಕ್ಕೆ ಹೋದಾಗ ಎಲ್ಲಿ ಉಳಿಯಬೇಕು, ಯಾವ ಹೋಟೆಲ್ಲಿನಲ್ಲಿ ಏನಿದೆ-ಏನಿಲ್ಲ, ಆ ಹೋಟೆಲಿನಿಂದ ನೀವು ನೋಡಬೇಕಾದ ಜಾಗಗಳು ಎಷ್ಟು ದೂರದಲ್ಲಿವೆ ಎನ್ನುವ ಮಾಹಿತಿ ಬೇಕೋ? ಅವುಗಳಿಗಾಗಿಯೇ ಮೊಬೈಲ್ ಆ್ಯಪ್‌ಗಳಿವೆ.

'ಗೂಗಲ್ ಮ್ಯಾಪ್' ಕೇವಲ ದಾರಿ ತೋರಿಸುವುದಷ್ಟೇ ಅಲ್ಲ; ಎಷ್ಟು ಟ್ರಾಫಿಕ್ ದಟ್ಟಣೆ ಇದೆ, ನೀವು ನೋಡಬೇಕಾದ ಮ್ಯೂಸಿಯಂ ಮುಚ್ಚಿದೆಯೇ, ತೆರೆದಿದೆಯೇ, ಟಿಕೆಟ್ ದರ ಎಷ್ಟು, ಅದರ ಸುತ್ತಮುತ್ತ ಇನ್ನೇನು ನೋಡಬಹುದು ಎನ್ನುವುದೆಲ್ಲವನ್ನೂ ತೆರೆದಿಟ್ಟು ಬಿಡುತ್ತದೆ. ಆದರೆ, ಈ ಯಾಂತ್ರಿಕ ಬುದ್ಧಿಮತ್ತೆ (ಯಾಂಬು) ಆಧಾರಿತವಾದ ತಂತ್ರಜ್ಞಾನದ ಉಪ ಉತ್ಪನ್ನಗಳೆಲ್ಲ ನಮ್ಮ ಪ್ರವಾಸದ ಅನುಭವವನ್ನು, ಅದರ ಗುಣಮಟ್ಟವನ್ನು ಹೆಚ್ಚಿಸಿವೆಯೇ?

ಪ್ರವಾಸ ಅಂದಾಕ್ಷಣ ದೈನಂದಿನ ಜಂಜಡಗಳಿಂದ, ಮೊಬೈಲ್ ಕರೆಗಳಿಂದ, ಸಂದೇಶಗಳ 'ಠಣ್' ಸದ್ದಿನಿಂದ ದೂರವಾಗಿ 'ಆರಾಮವಾಗಿರುವುದು'. ಮತ್ತು ನದಿ-ಸಮುದ್ರಗಳ ಪ್ರಕೃತಿ ಸೌಂದರ್ಯವನ್ನು ಮನಸಾರೆ ಸವಿಯುವುದು; ವಿವಿಧ ತಿನಿಸುಗಳು ಮತ್ತು ಶಾಪಿಂಗ್ ಅನ್ನು ನೇರವಾಗಿ ಅನುಭವಿಸುವುದು. ಈಗೇನಾಗಿದೆ? 'ಪ್ರವಾಸಿಗರ ಸ್ವರ್ಗ' ಎಂಬ ಕಲ್ಪನೆಯು ವಾಸ್ತವವಾಗಬೇಕೆಂದೇನೂ ಇಲ್ಲ. ಇಂದಿನ 'ಯಾಂತ್ರಿಕ ಬುದ್ಧಿಮತ್ತೆಯ ಯುಗ'ದಲ್ಲಿ ನಾವು ಕ್ಷಣಗಳಲ್ಲಿ ಪ್ರವಾಸ ಯೋಜಿಸಿ, ಎಲ್ಲವನ್ನೂ ಆ್ಯಪ್‌ಗಳ ಮೂಲಕವೇ ಒಂದು ಬಾರಿ ನೋಡಿ, ಬೇಕಿದ್ದರೆ ಮಾತ್ರ ಭೇಟಿ ಕೊಡಬಹುದು.

ಮಾರ್ಕೋ ಪೋಲೊನಂತಹ ಪ್ರವಾಸಿ 24 ವರ್ಷಗಳ ಕಾಲ ಸತತ ಪ್ರಯಾಣ ಮಾಡಿ ತನ್ನ ಪ್ರವಾಸದ ಅನುಭವಗಳನ್ನು ದಾಖಲಿಸಿದ್ದಾರೆ. ಆದರೆ ಈಗಿನ ತಂತ್ರಜ್ಞಾನದ ಯುಗದಲ್ಲಿ ಅಷ್ಟೆಲ್ಲ ಕಷ್ಟ ಪಡಬೇಕಿಲ್ಲ, ಎಲ್ಲವೂ 'ಅಂಗೈ'ಯ ಸಾಧನದಲ್ಲೇ ಲಭ್ಯ ಎಂದುಕೊಳ್ಳುತ್ತೀರಾ? 'ದೇಶ ಸುತ್ತು ಕೋಶ ಓದು' ಎಂಬ, ಜ್ಞಾನಾರ್ಜನೆ-ಜೀವನಾನುಭವಗಳ ಗಳಿಕೆಯ ಅಂಗವಾಗಿರುವ ಪ್ರವಾಸವನ್ನು ಈ ರೀತಿ 'ಯಾಂಬು' ಆಧಾರದಲ್ಲಿ ಸವಿಯಲಾದೀತೇ?

ಎಲೈನ್ ಡಿ ಬೋಟನ್ 'ಎ ವೀಕ್ ಅಟ್ ದಿ ಏರ್‌ಪೋರ್ಟ್' ಎಂಬ ಪುಸ್ತಕ ಬರೆದಿದ್ದಾರೆ. ಲಂಡನ್ನಿನ ವಿಮಾನ ನಿಲ್ದಾಣದಲ್ಲಿನ ಏಳು ದಿನಗಳ ಅನುಭವವನ್ನು ಸೊಗಸಾಗಿ ಬರೆದಿದ್ದಾರೆ. ವಿಮಾನ ನಿಲ್ದಾಣವೇ ಏಕೆ? ವಿಮಾನ ನಿಲ್ದಾಣ ಆಧುನಿಕ ಪ್ರವಾಸಗಳು ರೂಪುಗೊಂಡು, ಅವುಗಳ ಬಣ್ಣಗಳನ್ನು ಗರಿಗೆದರಿಸುವ ಸ್ಥಳ ಎಂಬ ಕಾರಣಕ್ಕೆ. ಯಾಂಬುವಿನೊಡನೆ ಏನನ್ನಾದರೂ ನೋಡಿಬಿಡುವ ನಾವು ವಿಮಾನದ ಕಿಟಕಿಯಿಂದ ಮೋಡಗಳನ್ನು ಏಕಾಗಿ ನೋಡಿಯೇವು? ಎಂಬುದನ್ನು ಯೋಚಿಸಬೇಕಾಗಿದೆ. ಹಿಂದಿನ ಪ್ರವಾಸಗಳು ಸವಾಲುಗಳ ಜೊತೆಗೇ ದೀರ್ಘಕಾಲ ಉಳಿಯುವ ಅನುಭವಗಳನ್ನೂ ನೀಡುತ್ತಿದ್ದವಷ್ಟೆ. ಈಗ ಅಂಥ ಬಹುಕಾಲ ನೆನಪುಳಿಯುವ ಘಟನೆಗಳನ್ನು ಈ ಪ್ರವಾಸಗಳು ಕಟ್ಟಿಕೊಡುವುದು ಕಷ್ಟವೇ.

ಡಿ ಬೋಟನ್ ವಿಮಾನ ನಿಲ್ದಾಣದ ನಿರ್ಗಮನದ ಹಾಲ್‌ನಲ್ಲಿ ಭೇಟಿಯಾಗುವ ವ್ಯಕ್ತಿ 'ಡೇವಿಡ್' ನಾವ್ಯಾರೂ ಆಗಿರಬಹುದು. ಡೇವಿಡ್ ಸುಂದರ ತಾಣಕ್ಕೆ ತನ್ನ ರಜೆಯ ಬುಕಿಂಗ್ ಮಾಡಿದ್ದಾನೆ. ಪ್ರತಿ ದಿನದ ಹವಾಮಾನ ವರದಿಗಳನ್ನು ನೋಡಿದ್ದಾನೆ. ರೆಸಾರ್ಟ್‌ನ ವರ್ಚುವಲ್ ಪ್ರವಾಸ ಮಾಡಿ ತಾಳೆ ಮರಗಳ ತೋಟದಲ್ಲಿ ಪತ್ನಿಯೊಂದಿಗೆ ವಿಹರಿಸುವ, ಮಕ್ಕಳೊಂದಿಗೆ ಆಟವಾಡುವ ದೃಶ್ಯವನ್ನು ಮನಸ್ಸಿನಲ್ಲಿಯೇ ಕಲ್ಪಿಸಿ, ಕಾತುರದಿಂದ ಕಾಯುತ್ತಿದ್ದಾನೆ. ಈ ದೃಶ್ಯದೊಂದಿಗೆ ಚೆಕ್ ಇನ್ ಕೌಂಟರ್‌ನಲ್ಲಿ ಕಾಯುತ್ತಿರುವಾಗ ತನ್ನ ಕುಟುಂಬದ ಸಮಸ್ಯೆಗಳೂ, ಭಯ-ಆತಂಕಗಳೂ ಅವನೊಂದಿಗೆ ಬಂದಿವೆ!

ಹೀಗಾದಲ್ಲಿ, ನಾವು ಮನದಲ್ಲಿ ಕಲ್ಪಿಸಿಕೊಳ್ಳುವ, ಈಗ ಯಾಂಬು ಉತ್ಪ್ರೇಕ್ಷಿಸಿ ನಮ್ಮ ಮುಂದಿಟ್ಟಿರುವ ಪ್ರವಾಸದ ಆನಂದದ ಪರಿಕಲ್ಪನೆಯ ಜೊತೆಗೇ ನಮ್ಮ ಆತಂಕ-ಭಯ-ಜೀವನದ ಸಮಸ್ಯೆಗಳೂ ನಮ್ಮೊಂದಿಗೇ ಪ್ರವಾಸಕ್ಕೆ ಬರುತ್ತವೆ.

ಪ್ರವಾಸದ ಅನುಭವವನ್ನು ನಾವು ಅವಲೋಕಿಸಲು ಕಲಿತರೆ, ಜೀವನದ ಸಮಸ್ಯೆಗಳಿಗೂ ಉತ್ತರ ದೊರಕಲು ಸಾಧ್ಯವಿದೆ. ಯಾವುದೇ ಸಂಪರ್ಕತಾಣವನ್ನು ನಾವು ಆದಷ್ಟು ಬೇಗ ದಾಟಿ ನಮ್ಮ ಗುರಿಯೆಡೆಗೆ ಧಾವಿಸುತ್ತೇವೆ. ನಿಲ್ದಾಣಗಳಲ್ಲಿ ಕಾಯುವುದೆಂದರೆ, ಪಯಣಿಸುವುದೆಂದರೆ ಗೂಗಲ್ ಮ್ಯಾಪ್‌ನಲ್ಲಿ ಇನ್ನೆಷ್ಟು ಹೊತ್ತು ಎಂದು ಲೆಕ್ಕ ಹಾಕುವುದೇ ನಮ್ಮ ಪರಿ! ಆದರೆ ರೋಚಕ-ತೀವ್ರ-ಭಾವನಾತ್ಮಕ ಅನುಭವ ನಿಲ್ದಾಣಗಳಲ್ಲೇ ಸಿಗುತ್ತವೆ ಎನ್ನುತ್ತಾನೆ ಡಿ ಬೋಟನ್. ವಿಮಾನದ ಸಹಪ್ರಯಾಣಿಕ, ಆಗಮನದ ಹಾಲ್‌ನಲ್ಲಿ ಕಾಣುವ ಪುನರ್ಮಿಲನದ ದೃಶ್ಯ, ರೈಲು ತಪ್ಪಿಸಿಕೊಳ್ಳುವ ಅನುಭವ, ಯಾವುದೋ ಒಂದು ಬೀದಿಯಲ್ಲಿ ಇದ್ದಕ್ಕಿದ್ದಂತೆ ಕಂಡ ಒಂದು ಸ್ವಾರಸ್ಯಕರ ಫಲಕ ಎಲ್ಲವೂ ಪ್ರವಾಸದ ನಿಜ ಅನುಭವವಾಗಲು ಸಾಧ್ಯವಿದೆ.

ಮನುಷ್ಯರಾಗಿ ಪ್ರತಿ ಪ್ರವಾಸದ ನಂತರ ನಾವು ಕೇಳಿಕೊಳ್ಳಬಹುದಾದ ಪ್ರಶ್ನೆಗಳಿವೆ- ಯಾವುದು ನಮಗೆ ಉದ್ವೇಗವನ್ನು ತಂದಿತು; ದೈನಂದಿನ ಜೀವನದಲ್ಲಿ ನಾವು ನೋಡಲಾಗದ ಯಾವುದನ್ನು ನೋಡಿದೆವು; 'ಮನುಷ್ಯತ್ವ' ಯಾವ ಮಾದರಿಯನ್ನು ನಾವು ಪ್ರವಾಸದಲ್ಲಿ ಕಂಡೆವು. ನಾವೆಷ್ಟು ಆ ಕ್ಷಣದಲ್ಲಿ ಮಗ್ನರಾಗಿ, ಎಲ್ಲ ಜಂಜಡಗಳನ್ನೂ ಮರೆತು ಆ ಪ್ರವಾಸವನ್ನು ಸವಿಯುತ್ತೇವೆ ಎನ್ನುವುದೇ ಮುಖ್ಯ. ಇಂಥ ಧ್ಯಾನ ಮಾತ್ರ ವಾಸ್ತವಿಕ ಅನುಭವವನ್ನು ಸಾಧ್ಯವಾಗಿಸುತ್ತದೆ; ಯಾಂಬುವನ್ನು ಮೀರಿಸುತ್ತದೆ. ಪ್ರವಾಸದ ಕೊನೆಗೆ ಕೇಳಿಕೊಳ್ಳಬೇಕಾದ ಪ್ರಶ್ನೆ ಎಂದರೆ, ಪ್ರವಾಸ ಹೇಗೆ ನಮ್ಮನ್ನು ಕೊಂಚವಾದರೂ ಭಿನ್ನವಾಗಿ ಬದುಕುವಂತೆ ಸಾಧ್ಯ ಮಾಡಬಲ್ಲದು? ನಮ್ಮ ಅರಿವಿಗೇ ಬಾರದಂತೆ ಪ್ರವಾಸದ ಉದ್ಯಾನ ಭೇಟಿಯ ನಂತರ, ನಮ್ಮ ಮನೆಯ ಸುತ್ತಮುತ್ತಲಲ್ಲೇ ನಾವು ಗಮನಿಸುವ ಮರಗಳ ಆಕೃತಿಯ ಬಗೆಗಿನ ಕುತೂಹಲದಂತಹ ಸಣ್ಣ ಬದಲಾವಣೆಯೂ ಇರಬಹುದು.

ಯಾಂಬುವಿನೊಂದಿಗೆ ಓಡುವ ಯುಗದಲ್ಲಿ, ನಿಧಾನವಾಗಿ ನೋಡುವುದೇ ಹೊಸ ಅನುಭವ! ಮತ್ತೊಬ್ಬರೊಡನೆ ಮಾತನಾಡುವುದು. ರಜೆಯಲ್ಲಿ ಪ್ರವಾಸ ಎಲ್ಲಿಗೇ ಆಗಲಿ, ಯಾಂಬುವಿನೊಂದಿಗೆ ಆನಂದಿಸಬಹುದು, ಆದರೆ ಅದರ ಬಳಕೆಗೆ ಮಿತಿ ಬೇಕಾಗುತ್ತದೆ. ಇಲ್ಲವಾದರೆ, ಬದುಕಿನ, ಪ್ರವಾಸದ ಅಮೂಲ್ಯ ಕ್ಷಣಗಳನ್ನು ನಾವು ಮಿಸ್ ಮಾಡಿಕೊಂಡೇವು. ಪ್ರವಾಸವು ಕೂಡ 'ಯಾಂತ್ರಿಕ'ವಾಗದಿರಲು, ಜೀವನಕ್ಕೆ ಬಣ್ಣ ತುಂಬಲು ಆ ಕ್ಷಣದಲ್ಲಿ ಬದುಕಬೇಕು.

ರಿಯಾಲಿಟಿಗಿಂತ ನಿಜ!

ಒಮ್ಮೆ ಉಜ್ಜಯಿನಿಯ ಪ್ರಸಿದ್ಧ ಭಸ್ಮ ಆರತಿಯನ್ನು ಅರ್ಧರಾತ್ರಿಯಲ್ಲಿ ಹೋಗಿ, ಬೆಳಗಿನ ಜಾವದವರೆಗೆ ನೂಕು ನುಗ್ಗಲಿನಲ್ಲಿ ನಿಂತು, ಇಣುಕಿ ನೋಡಿ ಹೊರ ಬಂದಿದ್ದೆ. ಮಧ್ಯಾಹ್ನ ಕಾರಿಡಾರ್‌ನಲ್ಲಿ ಓಡಾಡುತ್ತಿರುವಾಗ ₹ 200 ಕ್ಕೆ 'ವರ್ಚುವಲ್ ರಿಯಾಲಿಟಿಯಲ್ಲಿ ಭಸ್ಮ ಆರತಿ' ಎಂಬ ಬೋರ್ಡ್ ಕಾಣಿಸಿತು. ಸಾದಾ ಕೊಠಡಿಯಲ್ಲಿ ಹತ್ತಾರು ಕುರ್ಚಿಗಳು. ಕುರ್ಚಿಯಲ್ಲಿ ಕೂರಿಸಿ, 'ವಿ.ಆರ್.' ಸಾಧನ ಕಣ್ಣಿಗೆ. ಮುಂದಿನ 20 ನಿಮಿಷ ಮಹಾಕಾಲನ ಗರ್ಭಗುಡಿಯೊಳಗೆ! ಡೈರೆಕ್ಟ್ ಎಂಟ್ರಿ! ನೂಕು ನುಗ್ಗಲೇ ಇಲ್ಲ. ನನಗಾಗೇ ಮಹಾಕಾಲ ಭಸ್ಮ ಆರತಿ ಮಾಡಿಸಿಕೊಳ್ಳುತ್ತಿದ್ದಾನೆ ಎಂಬಂತೆ! ನಿಜ ದರ್ಶನದಲ್ಲಿ 'ಭಾವ' ವೊಂದು ಬಿಟ್ಟರೆ, ಮಿಕ್ಕೆಲ್ಲವೂ 'ವರ್ಚುವಲ್' ನಲ್ಲಿ 'ರಿಯಾಲಿಟಿ' ಗಿಂತ ನಿಜ!

ರಾಜ್ಯದ ಅತಿ ದೊಡ್ಡ ಹಗರಣ!

12ನೇ ಪುಟದಿಂದ...

ಕೆಲವು ದಿನದ ಹಿಂದೆ ಅಂಕೋಲಾ ಪಟ್ಟಣದಲ್ಲಿ ಸುಗ್ಗಿ ಕುಣಿತದ ಸಮಾರೋಪದ ವೇಳೆ ನಡೆದ ಹಗರಣದಲ್ಲಿ ರಾಜ್ಯ ಸರ್ಕಾರ ಜಾರಿಗೆ ತಂದಿರುವ 'ಗ್ಯಾರಂಟಿ' ಯೋಜನೆಗಳ ಸಾಧಕ-ಬಾಧಕಗಳನ್ನು ಕಲಾಕೃತಿಗಳ ಮೂಲಕ ಜನರಿಗೆ ಮನದಟ್ಟು ಮಾಡಿಸುವ ಪ್ರಯತ್ನ ನಡೆಯಿತು. ಮಹಿಳೆಯೊಬ್ಬಳು ಉಚಿತ ಪ್ರಯಾಣಕ್ಕೆ ಬಸ್ ಏರಲು ಹರಸಾಹಸಪಡುವ ರೂಪಕವನ್ನು ಗಂಡಸರೇ ಪ್ರದರ್ಶಿಸಿದ್ದರು. ಅಂದಹಾಗೆ ಹಗರಣದ ಯಾವ ರೂಪಕದಲ್ಲಿಯೂ ಮಹಿಳೆಯರು ಪಾತ್ರ ಧರಿಸುವುದಿಲ್ಲ. ಇಲ್ಲಿ ಪುರುಷರೇ ಮಹಿಳಾ ವೇಷಧಾರಿಗಳಾಗಿ ಗಮನಸೆಳೆಯುವ ಪದ್ಧತಿ ಇದೆ. ಬ್ರಿಟಿಷರ ಕಾಲದಲ್ಲಿನ ದಬ್ಬಾಳಿಕೆಯಿಂದ ಹಿಡಿದು ಈಗಿನ ಗ್ಯಾರಂಟಿ ಯೋಜನೆಗಳವರೆಗೆ 'ಹಗರಣ' ಹತ್ತಾರು ವಿಷಯಗಳನ್ನು ಜನರೆದುರು ಪ್ರಸ್ತುತಪಡಿಸಿದೆ. ವರ್ಷದಿಂದ ವರ್ಷಕ್ಕೆ ಭಿನ್ನ ವಿಷಯಗಳ ಆಧಾರದಲ್ಲಿ ಪ್ರದರ್ಶನ ನಡೆಯುವ ಕಾರಣದಿಂದಲೇ ಹಗರಣದ ಪ್ರಸಿದ್ಧಿ ಹೆಚ್ಚುತ್ತಿದೆ.

'ಹಗರಣ' ಹುಟ್ಟುಹಾಕಿದರು...

ಹಗರಣ ಆಚರಣೆ ಹುಟ್ಟಲು 'ಭಾಷೆಯ ಅರಿವಿಲ್ಲದಿರುವುದು' ಮುಖ್ಯ ಕಾರಣ ಎಂಬ ನಂಬಿಕೆ ಹಾಲಕ್ಕಿ ಸಮುದಾಯದಲ್ಲಿದೆ. ಬ್ರಿಟಿಷ್ ಆಡಳಿತದಲ್ಲಿ ಅವರಿಂದ ಉಂಟಾಗುತ್ತಿದ್ದ ದಬ್ಬಾಳಿಕೆ, ಊರಿನಲ್ಲಿದ್ದ ಜಾತಿ ಪದ್ಧತಿ, ಸಾಮಾಜಿಕ ಅಸಮಾನತೆ, ಕಂದಾಚಾರ–ಹೀಗೆ ಹಲವು ಸಮಸ್ಯೆಗಳನ್ನು ಬಿಂಬಿಸುವ ಜತೆಗೆ ಬ್ರಿಟಿಷರನ್ನು ವಿರೋಧಿಸುವ ಸಲುವಾಗಿಯೇ ಹಗರಣದ ಪರಿಕಲ್ಪನೆ ಹುಟ್ಟಿಕೊಂಡಿತು.

'ಬ್ರಿಟಿಷ್ ಅಧಿಕಾರಿಗಳಿಗೆ ಕನ್ನಡ ಅರ್ಥವಾಗುತ್ತಿರಲಿಲ್ಲ. ನಮ್ಮ ಜನರಿಗೆ ಇಂಗ್ಲಿಷ್ ತಿಳಿದಿರಲಿಲ್ಲ. ಸಂವಹನ ಸಮಸ್ಯೆ ಉಂಟಾದಾಗ ಹಗರಣ ಆಚರಿಸಲು ನಿರ್ಧರಿಸಲಾಯಿತು. ಈ ಮೂಲಕ ಜಾತ್ರೆ, ಸುಗ್ಗಿ ಕುಣಿತದ ಸಂದರ್ಭದಲ್ಲಿ ಹಗರಣ ಏರ್ಪಡಿಸಿ ರೂಪಕಗಳ ಮೂಲಕ ಬ್ರಿಟಿಷರಿಗೆ ಸಮಸ್ಯೆಗಳನ್ನು ಅರ್ಥಮಾಡಿಸಲು ಕಲಾವಿದರು ಪ್ರಯತ್ನಿಸುತ್ತಿದ್ದರು' ಎಂದು ಶಿರವಾಡದ ಹಾಲಕ್ಕಿ ಸಮುದಾಯದ ರವಿಗೌಡ ಅಭಿಪ್ರಾಯಪಡುತ್ತಾರೆ.

'ಬ್ರಿಟಿಷರ ಕಾಲದ ಹಗರಣ ಕಲೆಯ ಆರಂಭಿಕ ಹಂತವಾಗಿತ್ತು. ಕಾಲ ಕಳೆದಂತೆ ಈ ಕಲೆಗೂ ಹೊಸಸ್ಪರ್ಶ ಸಿಕ್ಕಿದೆ. ಈಗಿನ ತಲೆಮಾರಿನ ಯುವಕರ ಕ್ರಿಯಾಶೀಲತೆ, ವಿಚಾರಧಾರೆಗಳು ಕಲಾಕೃತಿಗಳಾಗಿ ರೂಪುಗೊಳ್ಳುತ್ತಿವೆ. ಅದಕ್ಕಾಗಿಯೇ ಹಗರಣ ಹೊಸ ಮೆರಗು ಪಡೆದುಕೊಂಡಿದೆ' ಎಂದು ಅವರು ವಿವರಿಸಿದರು.

ತೀರಾ ಈಚಿನ ವರ್ಷದವರೆಗೂ ಹಾಲಕ್ಕಿ ಸಮುದಾಯದವರಷ್ಟೇ 'ಹಗರಣ' ಪ್ರದರ್ಶಿಸುತ್ತಿದ್ದರು. ಈಗ ಅದು ಇತರ ಸಮುದಾಯಗಳಿಗೂ ವಿಸ್ತರಿಸಿದೆ. ಜಾತಿಭೇದವಿಲ್ಲದೆ ಗ್ರಾಮದವರೆಲ್ಲ ಒಗ್ಗೂಡಿ ಹಗರಣ ಆಯೋಜಿಸುತ್ತಿದ್ದಾರೆ. ದುಡಿಯುವ ಜನರ ಅನಿವಾರ್ಯತೆ ಹೊಸದೊಂದು ಪರಿಕಲ್ಪನೆ ಹುಟ್ಟಿಗೆ ಕಾರಣವಾಗಿದ್ದು, ಶತಮಾನಗಳು ಕಳೆದರೂ ಸಮಾಜದ ಅಂಕುಡೊಂಕುಗಳನ್ನು ಎತ್ತಿತೋರಿಸುತ್ತಾ, ಮನರಂಜಿಸುತ್ತಿದೆ!

ಕೂಲಿ ದುಡಿಮೆಯಲ್ಲಿ ಕಲಾಕೃತಿ

ಹಗರಣ ಎಂಬ ಅದ್ದೂರಿ ಆಚರಣೆಗೆ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ. ಇಲ್ಲಿ ಪ್ರದರ್ಶನಗೊಳ್ಳುವ ದೊಡ್ಡಗಾತ್ರದ ಕಲಾಕೃತಿಗಳ ತಯಾರಿಕೆಗೆ ಕನಿಷ್ಠ ₹20 ರಿಂದ ₹50 ಸಾವಿರ ಬೇಕು. ಅದನ್ನು ಊರಿನ ಯುವಕರೇ ಭರಿಸುತ್ತಾರೆ. ಬಹುತೇಕ ಯುವಕರು ನೌಕಾನೆಲೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ, ಕೃಷಿ ಕಾರ್ಮಿಕರಾಗಿ, ವಿವಿಧ ವಲಯಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಾರೆ.

'ಹಗರಣದ ವೇಳೆ ಅದ್ಭುತ ಕಲಾಕೃತಿ ಸಿದ್ಧಪಡಿಸಬೇಕು ಎಂಬ ಹಠಕ್ಕೆ ಬೀಳುವ ಯುವಕರು ತಾವೇ ಸಮಾನ ಮನಸ್ಕರ ತಂಡ ಕಟ್ಟಿಕೊಳ್ಳುತ್ತಾರೆ. ಯಾರ ಬಳಿಯೂ ಅವರು ಕೈಚಾಚುವುದಿಲ್ಲ. ವರ್ಷದುದ್ದಕ್ಕೂ ತಾವು ದುಡಿದು ಕೂಡಿಟ್ಟ ಹಣದಲ್ಲಿ ಒಂದು ಪಾಲನ್ನು ಹಗರಣ ಆಯೋಜನೆಗೆ ಮೀಸಲಿಡುತ್ತಾರೆ. ತಮ್ಮ ತಂಡ ಸಿದ್ಧಪಡಿಸಿದ ಕಲಾಕೃತಿ ಜನರಿಂದ 'ಭೇಷ್' ಎನಿಸಿಕೊಳ್ಳಬೇಕು ಎಂಬುದಷ್ಟೇ ಅವರ ಆಸೆ. ಇದೇ ಕಾರಣಕ್ಕೆ ಕಲಾಕೃತಿಗಳಿಗೆ ಬಹುಮಾನ ನೀಡಲು ಬಹುತೇಕರು ವಿರೋಧಿಸುತ್ತಾರೆ' ಎನ್ನುತ್ತಾರೆ ಅಮದಳ್ಳಿಯ ಪುರುಷೋತ್ತಮ ಗೌಡ.

ಗೋಕರ್ಣದ ಬಿಜ್ಜೂರಿನಲ್ಲಿ ನಡೆದ ಹಗರಣದಲ್ಲಿ ಗಮನಸೆಳೆದ ಆಮೆಯ ಪ್ರತಿಕೃತಿ.

ತಲೆಮಾರಿನಿಂದ ತಲೆಮಾರಿಗೆ ಎದುರಾದ ನೀರಿನ ಕೊರತೆಯ ಸಮಸ್ಯೆಯ ಗಂಭೀರತೆಯನ್ನು ಹಗರಣದಲ್ಲಿ ಎತ್ತಿ ತೋರಿಸಿದ ರೂಪಕ. ಚಿತ್ರಗಳು: ರವಿ ಸೂರಿ

ಇಸ್ರೋಗಾಗಿ ಸಿದ್ಧಪಡಿಸಿದ 'ಇಂಡಿಯಾ ಇನ್ ಸ್ಪೇಸ್' ವಾಲ್ ಮ್ಯೂಸಿಯಂ ಹೀಗಿದೆ..

ಅಂತರಿಕ್ಷಯಾನಕ್ಕೆ...

12ನೇ ಪುಟದಿಂದ...

ಕಚೇರಿಯ ಒಳಭಾಗದಿಂದ ಹೊರಕ್ಕೆ ನಡೆಯುತ್ತಾ ಹೋದಂತೆ, 6 ಇಂಚಿನಿಂದ 100 ಅಡಿ ಎತ್ತರದವರೆಗಿನ ವೈವಿಧ್ಯಮಯ ರಾಕೆಟ್‌ಗಳನ್ನು ತಯಾರಿಸುವ ವಿವಿಧ ಹಂತಗಳು ಹೇಗಿರುತ್ತವೆ ಎಂಬುದನ್ನು ಕಣ್ಣಾರೆ ಕಾಣಬಹುದು. ಅಂದಹಾಗೆ, ಅವನ್ನೆಲ್ಲಾ ತಯಾರಿಸುವವರು ವಿಜ್ಞಾನಿಗಳೇನಲ್ಲ. ಐಟಿಐನಿಂದ ಎಂಜಿನಿಯರಿಂಗ್‌ವರೆಗೂ ಓದಿರುವ ಮೈಸೂರಿನ ತರುಣ–ತರುಣಿಯರು. ಅವರ ಸೂಕ್ಷ್ಮ ಕಸುಬುದಾರಿಕೆ, ಏಕಾಗ್ರತೆ, ತಲ್ಲೀನತೆಯೂ ಗಮನ ಸೆಳೆಯದೇ ಇರದು.

ದೇಶ–ವಿದೇಶಗಳ ಅತಿ ಪುರಾತನ ಗುಡಿ, ಚರ್ಚ್, ಮೃಗಾಲಯಗಳು, ಸೇತುವೆಯ ಮಾದರಿಗಳು, ಮ್ಯೂಸಿಯಂಗಳಿಗೆ ಅಗತ್ಯವಿರುವ ಮಾದರಿಗಳು ಸೇರಿದಂತೆ ವೈವಿಧ್ಯಮಯ ಮಾದರಿಗಳ ತಯಾರಿಕೆಯಿಂದ ಶುರುವಾದ ಉದ್ಯಮವು ಮೈಸೂರು ದಾಟಿ ದೇಶದಾದ್ಯಂತ ಹಬ್ಬಿದೆ ಎಂಬುದೇ ವಿಶೇಷ. ಇದುವರೆಗೆ 2 ಸಾವಿರ ವಿವಿಧ ಮಾದರಿಗಳು ಇಲ್ಲಿ ತಯಾರಾಗಿವೆ.

ಈಗ ಇಡೀ ದೇಶದಲ್ಲಿ ರಾಕೆಟ್, ಪಿಎಸ್‌ಎಲ್‌ವಿ ಕಿರು ಮಾದರಿಗಳ ತಯಾರಿಕೆಗೆ ಹೆಸರಾಗಿರುವ 'ಕ್ರಾಫ್ಟಿಜಾನ್'ಗೆ ಇಸ್ರೋ ಸಂಸ್ಥೆಯೇ ಟಾಪ್ ಕಸ್ಟಮರ್. ಘಟಕದ ನಿರ್ಮಾತೃ ಶ್ರೀನಿವಾಸನ್ ರಾಮನಾಥನ್ ಅವರು ಸಹಜ ಕುತೂಹಲದಿಂದ ತಯಾರಿಸಿದ್ದ ರಾಕೆಟ್ ಮಾದರಿಗಳು ಇಸ್ರೋದ ಅಧಿಕಾರಿ ಎನ್. ಸುಧೀರ್‌ಕುಮಾರ್ ಅವರ ಗಮನಕ್ಕೆ ಬಂದ ಬಳಿಕ, ಉದ್ಯಮಕ್ಕೊಂದು ಹೊಸ ತಿರುವು ಸಿಕ್ಕಿತು. ಇಸ್ರೋದ ಶಾಖೆಗಳಿಗೆ ರಾಕೆಟ್ ಮಾದರಿಗಳನ್ನು ಪೂರೈಸುವ ಅವಕಾಶ ಸಿಕ್ಕಿತು. 'ಇಸ್ರೋ ತನ್ನ ಶೈಕ್ಷಣಿಕ ಉದ್ದೇಶಕ್ಕೆ ಅಗತ್ಯವಿರುವ ಮಾದರಿಗಳ ನಿರ್ಮಾಣದ ಕೆಲಸ ನೀಡುವ ಮೂಲಕ ನಮ್ಮ ಸಂಸ್ಥೆಯ ಬೆಳವಣಿಗೆಗೆ ಕಾರಣವಾಯಿತು' ಎಂಬುದು ಅವರ ಹೆಮ್ಮೆಯ ನುಡಿ.

ವಾಲ್ ಮ್ಯೂಸಿಯಂ ಯೋಜನೆ

ಸದ್ಯ ಇಸ್ರೋ ತಾನು ಜಾರಿಗೊಳಿಸಿದ ವಿವಿಧ ಯೋಜನೆಗಳ ಮಾಹಿತಿ ನೀಡುವ, ಹಿತ್ತಾಳೆ ಮತ್ತು ಅಲ್ಯುಮಿನಿಯಂನಿಂದ ರೂಪಿಸಿದ 25ಕ್ಕೂ ಹೆಚ್ಚು ಕಿರು ಮಾದರಿಗಳಿರುವ 7X7 ಅಡಿ ಅಳತೆಯ ವಾಲ್ ಮ್ಯೂಸಿಯಂಗಳನ್ನು ಘಟಕದಲ್ಲಿ ಸಿದ್ಧಪಡಿಸಲಾಗುತ್ತಿದೆ. 'ರಾಕೆಟ್ ವಿಜ್ಞಾನ'ದ ಕುರಿತು ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸುವಂಥ ಮಾಹಿತಿಗಳೂ ಇದರಲ್ಲಿ ಅಡಕವಾಗಿರುವುದು ವಿಶೇಷ.

ಇದು 'ಇಂಡಿಯಾ ಇನ್ ಸ್ಪೇಸ್' (ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ) ಪರಿಕಲ್ಪನೆಯ ಅಡಿ ಇಸ್ರೋ ರೂಪಿಸಿರುವ ವಿಶೇಷ ಯೋಜನೆ. ಈ ಮ್ಯೂಸಿಯಂಗಳನ್ನು ಶಾಲೆಗಳಿಗೆ ವಿತರಿಸಿ ಎಳೆಯರಲ್ಲಿ ಬಾಹ್ಯಾಕಾಶದ ಬಗ್ಗೆ ಅರಿವು ಮೂಡಿಸುವುದೇ ಪ್ರಮುಖ ಉದ್ದೇಶ.

ರಾಕೆಟ್ ಮಾದರಿಗಳನ್ನು (scaled models) ತಯಾರಿಸಿಯೇ ಯಶಸ್ವಿ ಉದ್ಯಮ ನಡೆಸಬಹುದೆಂಬುಕ್ಕೆ ಈ ಘಟಕ ಹೀಗೆ ಸಾಕ್ಷಿಯಾಗಿ ನಿಲ್ಲುತ್ತದೆ. ಶಾಲೆಗಳು, ಮ್ಯೂಸಿಯಂಗಳಿಗೆ ನೀಡಲು ನೂರಾರು ಮಾದರಿಗಳು ತಯಾರಾಗುತ್ತಿವೆ. ವಾರ್ಷಿಕ ₹6 ಕೋಟಿಯಷ್ಟು ವಹಿವಾಟು ನಡೆಯುತ್ತಿದೆ.

ಯೂನಿವರ್ಸಿಟಿ ಆಫ್ ಚೆನ್ನೈ, ಕೊಯಮತ್ತೂರಿನ ಪಿಎಸ್‌ಜಿ ಕಾಲೇಜ್ ಆಫ್ ಎಂಜಿನಿಯರಿಂಗ್, ಅಹಮದಾಬಾದ್‌ನ ಸೈನ್ಸ್ ಸಿಟಿ, ಚೆನ್ನೈನ ಸವಿತಾ ವಿಶ್ವವಿದ್ಯಾಲಯ ಹಾಗೂ ಎಚ್‌ಎಎಲ್‌ಗೂ ಅಗತ್ಯವಿರುವ ಮಾದರಿಗಳನ್ನು ಮಾಡಿಕೊಡಲಾಗಿದೆ. ಸತತ ಅಧ್ಯಯನ ಮತ್ತು ಪ್ರಯೋಗಶೀಲತೆಯೇ ಈ ವೃತ್ತಿಯ ತಳಪಾಯ.

ಸ್ಥಳೀಯರಿಗೇ ಕೆಲಸ..

ಘಟಕದಲ್ಲಿ ಕೈಗಾರಿಕೆ ಪ್ರದೇಶದ ಸುತ್ತಮುತ್ತಲಿನ ಗ್ರಾಮಗಳ 50 ತರುಣ–ತರುಣಿಯರಿಗೇ ಉದ್ಯೋಗ ನೀಡಿರುವುದು ವಿಶೇಷ. ಈಗ ಅಂಗವಿಕಲರಿಗೆ, ಅದರಲ್ಲೂ ವಾಕ್ ಶ್ರವಣ ದೋಷವುಳ್ಳ 15 ಮಂದಿಗೆ ಉದ್ಯೋಗ ನೀಡುವ ಚಿಂತನೆ ನಡೆದಿದೆ. 'ಸ್ಥಳೀಯರಿಗೇ ಉದ್ಯೋಗ ನಮ್ಮ ಆದ್ಯತೆ' –ಇದು ಘಟಕದ ಧ್ಯೇಯವಾಕ್ಯ. ದೇಶವ್ಯಾಪಿ ಉದ್ಯಮವೊಂದು ಸ್ಥಳೀಯರಿಗೆ ನೆರವಾಗುವ ಅನನ್ಯ ಮಾದರಿಯೂ ಇಲ್ಲಿದೆ.

'ಬೃಹತ್ತಾದ ನಮ್ಮ ದೇಶದಲ್ಲಿ ಇಂಥ ಎಂಜಿನಿಯರಿಂಗ್ ಮಾದರಿಗಳನ್ನು ನಿರ್ಮಿಸುವ ಘಟಕಗಳು ಕನಿಷ್ಠ ನೂರಾದರೂ ಇರಬೇಕು. ಇರೋದು ನಮ್ಮದೊಂದೇ ಘಟಕ. ಇಂಥ ಮಾದರಿಗಳನ್ನು ಮಾಡುವವರನ್ನು ಹುಡುಕಿ ಎಂದು ಇಸ್ರೋದವರಿಗೂ ಕೇಳಿಕೊಂಡಿದ್ದೇನೆ. ಆರು ವರ್ಷದಿಂದ ಅವರೂ ಹುಡುಕುತ್ತಿದ್ದಾರೆ. ಇಷ್ಟೊಂದು ಅವಕಾಶಗಳಿರುವ ಈ ಕ್ಷೇತ್ರಕ್ಕೆ ಎಂಜಿನಿಯರಿಂಗ್ ಪದವೀಧರರು ಹೆಚ್ಚಿನ ಸಂಖ್ಯೆಯಲ್ಲಿ ಬರುವಂತಾಗಬೇಕು. ನಮ್ಮದೇ ದಾರಿ ಸೃಷ್ಟಿಸಿಕೊಂಡು ನಡೆಯಲು ಆಸಕ್ತಿ ಇರಬೇಕು. ಇತರರಿಗೂ ಅವಕಾಶ ನೀಡಬೇಕು. ಆಗ ನಮಗೂ ದೇಶಕ್ಕೂ ಒಳ್ಳೆಯದಾಗುತ್ತದೆ' ಎಂದು ರಾಮನಾಥನ್ ಹೇಳುತ್ತಿದ್ದರೆ, ತರುಣ–ತರುಣಿಯರು ಉತ್ಸಾಹದಿಂದ ಮಾದರಿಗಳ ನಿರ್ಮಾಣದಲ್ಲಿ ತಲ್ಲೀನರಾಗಿದ್ದರು.

ಮೊದಲ ಓದು

ನೆಲಮೂಲ ಅರಿಯುವ ಒಳಗಣ್ಣಿನ ಶೋಧ



ಪು: 251 ₹250

ಪರಿಮಳದ ಹಾದಿಯ ಪಯಣಿಗರು
ಲೇ: ಮಲ್ಲಿಕಾರ್ಜುನ ಕಡಕೋಳ
ಪ್ರ: ಅಭಿವ್ಯಕ್ತಿ, ವಿಜಯನಗರ
ಸಂ: 9341010712

ಸಮಾಜಮುಖಿಯಾಗಿ, ಜೀವಕಾರುಣ್ಯದಿಂದ ಬಾಳಿದ ಮತ್ತು ಬಾಳುತ್ತಿರುವವರ ಕುರಿತಾಗಿ 'ಕಾಲಕ್ಕೆ ಕನ್ನಡಿ ಹಿಡಿಯುವಂತೆ' ಲೇಖಕ ಮಲ್ಲಿಕಾರ್ಜುನ ಕಡಕೋಳ ಅವರು ಬರೆದ ಲೇಖನಗಳ ಗುಚ್ಛವೇ 'ಪರಿಮಳದ ಹಾದಿಯ ಪಯಣಿಗರು' ಕೃತಿಯಾಗಿ ಹೊರಬಂದಿದೆ. ಲೇಖಕ ವಿವಿಧ ಸಂದರ್ಭಗಳಲ್ಲಿ, ವಿವಿಧ ಪತ್ರಿಕೆಗಳಿಗೆ ಬರೆದ 50 ಬಿಡಿ ಲೇಖನಗಳ ಸಂಗ್ರಹವಿದು.

ತತ್ವಪದಕಾರರ ಪರಂಪರೆಯವರು, ವೃತ್ತಿರಂಗಭೂಮಿಯ ಮೇರು ಚೇತನಗಳು, ಎಡಚಿಂತನೆಯ ಹೋರಾಟಗಾರರು, ಸಮಾಜಮುಖಿ ಚಿಂತಕರ ವ್ಯಕ್ತಿತ್ವವನ್ನು ಇಲ್ಲಿ ಲೇಖಕರು ಸ್ಥೂಲವಾಗಿ ಕಟ್ಟಿಕೊಟ್ಟಿದ್ದಾರೆ. ಸಾಹಿತಿ ಲಕ್ಷ್ಮಿಪತಿ ಕೋಲಾರ ಅವರು ಮುನ್ನುಡಿಯಲ್ಲಿ 'ಈ ಕೃತಿಗೆ ಜೀವಮೌಲ್ಯವೊಂದು ಪ್ರಾಪ್ತಿಯಾಗಿಬಿಟ್ಟಿದೆ' ಎಂದು ಹೇಳಿರುವುದೂ ಅತಿಶಯವೆನಿಸುವುದಿಲ್ಲ.

ಇವು ಬಿಡಿ ಬಿಡಿಯಾದ ಲೇಖನಗಳಾದರೂ ತತ್ವಪದಕಾರ ಮಡಿವಾಳಪ್ಪನ ಕುರಿತಾದ ಮೊದಲ ಲೇಖನ ಇಲ್ಲಿರುವ ಬಹಳಷ್ಟು ಲೇಖನಗಳಿಗೆ ಒಂದು ಬಂಧಬೆಸುಗೆಯನ್ನು ಬೆಸೆದಿದ್ದು, ಲೇಖಕರು ಇಲ್ಲಿ ಪರಿಚಯಿಸಿರುವ ಬಹಳಷ್ಟು ವ್ಯಕ್ತಿಗಳು, ವಿಚಾರಗಳು ತತ್ವಪದಕಾರ 'ಕಡಕೋಳ ಮಡಿವಾಳಪ್ಪ'ನ ಪರಂಪರೆಯ ಪರೀದಿಯಲ್ಲಿ ಪರಿಭ್ರಮಿಸುವಂತೆ ಚಿತ್ರಿತವಾಗಿರುವುದು ಒಂಚೂರು ಕ್ಲೀಷೆಯಾಗಿ ಕಾಣಿಸುತ್ತದಷ್ಟೇ.

ಆದರೆ, ಇಲ್ಲಿರುವ ಬಹುತೇಕ ಲೇಖನಗಳು ಅವರಿವರಿಂದ ಕೇಳಿ ತಿಳಿದಿದ್ದನ್ನು, ಎಲ್ಲಿಯೋ ಓದಿದ್ದನ್ನು ಗ್ರಹಿಸಿ ಬರೆದ ಪದಪುಂಜಗಳಾಗಿಲ್ಲ. ಪ್ರತಿ ಲೇಖನ ಸಿದ್ಧಪಡಿಸಲು ಲೇಖಕರು, ಪರಿಮಳ ಸೂಸುವ ದುಂಡುಮಲ್ಲಿಗೆ ದಂಡೆಯನ್ನು ಕಟ್ಟುವವರು ಹಾಕುವಷ್ಟೇ ಪರಿಶ್ರಮ, ಶ್ರದ್ಧೆಯನ್ನು ಹಾಕಿರುವುದು ಓದುಗರ ಅನುಭವಕ್ಕೆ ದಕ್ಕುತ್ತದೆ. ಅಧ್ಯಯನದ ಜತೆಗೆ, ಊರೂರು ಸುತ್ತಾಟ, ಅನುಭಾವಿಗಳ ಸಂಗಡ ಲೇಖಕ ಒಡನಾಡಿರುವುದೂ ನೆಲಮೂಲ ಅರಿಯುವ ತುಮುಲದಿಂದ ಒಳಗಣ್ಣಿನ ಶೋಧ ನಡೆಸಿರುವುದು ಲೇಖನಗಳಿಗೆ ಪೂರ್ಣತೆ ತಂದುಕೊಟ್ಟಿವೆ.

ನಮ್ಮ ಸಮಕಾಲದಲ್ಲೇ ಆಗಿಹೋದ ಚೇತನಗಳನ್ನು, ಕಣ್ಣೆದುರಿಗೆ ಇರುವ ಸಾಧಕರನ್ನು ಅವರು ಬಾಳಿ ಬದುಕಿದಂತೆಯೇ ಅರ್ಥಾತ್ ಅವರು ಇದ್ದಂಗೆಯೇ ಚಿತ್ರಿಸಿರುವುದರಿಂದ ಓದಿನ ಆಪ್ತತೆಯನ್ನು ಈ ಕೃತಿ ನೀಡುತ್ತದೆ. ಅಲ್ಲಲ್ಲಿ ಉಳಿದಿರುವ ಕಾಗುಣಿತ ದೋಷಗಳು ಓದಿನ ಸುಖಕ್ಕೆ ಅಷ್ಟೇನು ತೊಡಕಾಗುವುದಿಲ್ಲ. ತತ್ವಪದಕಾರ ಕಡಕೋಳ ಮಡಿವಾಳಪ್ಪನಾದಿಯಾಗಿ... ಪವಾಡದ ರೀತಿ ಅಸಾಮಾನ್ಯ ಕೆಲಸ ಮಾಡಿದ ಸಾಮಾನ್ಯ ವನಪಾಲಕ ನಾಗಪ್ಪ ಜುಮ್ಮಣ್ಣ ಮೇಟಿಯವರೆಗೂ ಹಲವು ಜೀವಪರ ವ್ಯಕ್ತಿಗಳ ದರ್ಶನವನ್ನು ಲೇಖಕ ಈ ಕೃತಿಯಲ್ಲಿ ಮಾಡಿಸಿದ್ದಾರೆ.

ಪ್ರೀತಿಗೆ ಹಂಬಲಿಸಿದವರ ಕಥೆ

ಪು: 256 ₹200

ಪ್ರೀತಿಯ ಹಂಬಲಿಸಿ
ಲೇ: ಉಜ್ಜನಿ ರುದ್ರಪ್ಪ
ಪ್ರ: ಉರು ಪ್ರಕಾಶನ
ಸಂ: 9901503180

ಪ್ರೀತಿಸಿ ಮದುವೆಯಾದ ಜೋಡಿಗಳ ನೈಜ ಘಟನೆಗಳ ಒಳಗೊಂಡ ಕೃತಿ ಎಂಬ ಅಡಿಟಿಪ್ಪಣಿಯ ಈ ಪುಸ್ತಕದಲ್ಲಿ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಪತ್ರಕರ್ತ ನಾಗೇಶ ಹೆಗಡೆ ಅವರನ್ನೂ ಒಳಗೊಂಡಂತೆ ಹಲವರ ಪ್ರೇಮಕತೆಗಳಿವೆ. ಆದರೆ ಕತೆ ಕಟ್ಟುವಿಕೆಯಲ್ಲಿ ನಿರೂಪಕರು ತಮ್ಮ ಪಾತ್ರದಿಂದ ಕಥಾನಕದ ನಾಯಕನ ಪಾತ್ರಕ್ಕೂ, ನಾಯಕಿಯ ಪಾತ್ರಕ್ಕೂ ಹೇಗೆ ಪ್ರವೇಶಿಸುತ್ತಾರೆ ಎಂಬ ಸ್ಪಷ್ಟತೆ ಇಲ್ಲದಿರುವುದು ಗೊಂದಲಕ್ಕೆ ಈಡು ಮಾಡುತ್ತದೆ. ಓದುವಾಗ.. ಯಾರು ಈ ಕತೆ ಹೇಳಿದರು ಎಂದು ತಿಳಿಯಲು ಮತ್ತೆ ಓದಿ, ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಮಾತು ಬಾರದವರ ಮೌನ ನಲುಮೆ, ದೂರದೂರಿನಲ್ಲಿ ಅಕ್ಷರ ಕಲಿಸುತ್ತಲೇ ಅಕ್ಕರೆಗೆ ಕರಗಿದವರು, ವ್ಯವಸ್ಥೆಯ ವಿರುದ್ಧ ರೋಸಿ ಹೋದವರಲ್ಲಿ ಹುಟ್ಟಿದ ಪ್ರೀತಿ ಇಂಥ ಹಲವಾರು ಕಥನಗಳು ಗಮನಸೆಳೆಯುತ್ತವೆ. ಇಂದಿವರ್ ಅವರ ಗೀತೆ, ಹೋಂಟೋಸೆ ಛೂಲೊ ತುಮ್ ಹಾಡಿನಲ್ಲಿ ಒಂದು ಸಾಲಿದೆ.. ನಾ ಉಮ್ರ್ ಕಿ ಸೀಮಾ ಹೋ.. ನ ಜನ್ಮ್ ಕಾ ಹೋ ಬಂಧನ್, ಜಬ್ ಪ್ಯಾರ್ ಕರೆ ಕೋಯಿ ತೋ ದೇಖೆ ಕೇವಲ್ ಮನ್ (ವಯಸ್ಸಿನ ಸೀಮೆ ಇಲ್ಲದ, ಜಾತಿಯ ಬಂಧನವಿಲ್ಲದೆ, ಪ್ರೀತಿಸುವುದಾದರೆ ಬರೀ ಮನ ನೋಡಲಿ...) ಎಂಬರ್ಥದ ಸಾಲು ಆಗಾಗ ಗುನುಗುವಂತಾಗುತ್ತದೆ. ಸೀಮೆಯಿರದ ಪ್ರೀತಿಯ ಕಥನಗಳಲ್ಲಿ ಜಗದ ಜಾತಿ ಬಲಕ್ಕಿಂತಲೂ ಒಲವೇ ಹೆಚ್ಚು ಸಲ ಗೆದ್ದಿದೆ.

ಆದರೆ, ಕಥಾ ನಿರೂಪಣೆಯಲ್ಲಿ ಭಾವತೀವ್ರತೆಯ ಕೊರತೆ ಕಂಡುಬರುತ್ತದೆ. ಪುಸ್ತಕ ಪ್ರಕಟಣೆಗೆ ಹೋಗುವ ಮುನ್ನ, ಇನ್ನೊಮ್ಮೆ ಓದಿದ್ದರೆ ಮುದ್ರಣ ದೋಷಗಳ ಸಂಖ್ಯೆಯೂ ಕಡಿಮೆ ಆಗಿರುತ್ತಿತ್ತು. ಅಲ್ಲಲ್ಲಿ ಅಲ್ಪಪ್ರಾಣ, ಮಹಾಪ್ರಾಣಗಳು, ಹ್ರಸ್ವ, ದೀರ್ಘಗಳು ಅಕ್ಷರಪಲ್ಲಟಗಳು ಗೊಂದಲ ಮೂಡಿಸುತ್ತವೆ. ನಿರೂಪಣಾ ತಂತ್ರದಲ್ಲಿ ಕತೆ ಹೇಳುತ್ತಿದ್ದರೂ, ಅಲ್ಲಲ್ಲಿ ನಿರೂಪಕರೂ ಇಣುಕುತ್ತಾರೆ. ಇಂಥ ಗೊಂದಲವನ್ನು ಬಗೆಹರಿಸಿದರೆ ಸರಾಗವಾಗಿ ಓದಿಸಿಕೊಂಡು ಹೋಗುವ ಕೃತಿ ಇದಾಗಬಹುದಿತ್ತು. ಪ್ರೀತಿಯಿಂದಲೇ ಬದುಕು ಕಟ್ಟಿಕೊಂಡವರು ಈಗ ಕತೆಯಂತೆ ಹೇಳುತ್ತಿದ್ದಾರೆ. ಆ ಕ್ಷಣದ ಆತಂಕ, ಆಘಾತಗಳು ಅವರು ಜೀರ್ಣಿಸಿಕೊಂಡ ಬಗೆ ಇನ್ನೂ ಮನತಟ್ಟುತ್ತಿತ್ತು. ಅಕ್ಷರಗಳ ಗಾತ್ರ ಆರಾಮದಾಯಕ ಓದನ್ನು ನೀಡುತ್ತವೆ. ಮುದ್ರಣ ದೋಷ ನಿವಾರಿಸಿದರೆ ಒಂದು ವಿರಾಮದ ಓದನ್ನು ಕೊಡುತ್ತಿತ್ತು.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ತರುಕಾಶಿ

ಕುವೆಂಪು ಅವರು 'ಪಕ್ಷಿಕಾಶಿ' ಕವನ ಸಂಕಲನದ 'ಕೆಂದಳಿರು' ಕವನದಲ್ಲಿ 'ತರುಕಾಶಿ' ಪದ ಪ್ರಯೋಗಿಸಿದ್ದಾರೆ. ಅವರಿಗೆ ಒಂದು ಕೆಂದಳಿರಿನಿಂದ ಕೂಡಿದ ಮರ ಮನಮೋಹಿಸಿದೆ. ಅವರಿಗೆ ಆ ಮರದ ಸಂಪತ್ತಿನಲ್ಲಿ ಸ್ವರ್ಗ ಅರಳಿದಂತಿದೆ. ಆ ಕೆಂದಳಿರಿನ ಇಂದ್ರನಾಸ್ಥಾನದಲ್ಲಿ ಊರ್ವಶಿ ತಿಲೋತ್ತಮೆಯರೆಲ್ಲ ನರ್ತಿಸುತ್ತಿದ್ದಾರೆ. ಇದು ಅವರು ಪ್ರಕೃತಿಯಲ್ಲಿ ಕಾಣುತ್ತಿರುವ ಐಂದ್ರಯಿಕ ಕೆಂದಳಿರಿನ ಸೌಂದರ್ಯ. ಅದು ಅವರ ಕಲ್ಪನಾ ಸೌಂದರ್ಯದಲ್ಲಿ ಸ್ವರ್ಗವಾಗಿ ಶೋಭಿಸುತ್ತಿದೆ.

ಆ ಕೆಂದಳಿರಿಗೆ ಅವರ ವ್ಯಕ್ತಿತ್ವವೇ ಜ್ವಾಲೆಯಾಗಿ ಉರಿದು, ಬುದ್ಧಿ ಅರಿಯದ ಸಿದ್ಧಿಯನ್ನು ತಮ್ಮ ಭಾವದಲ್ಲಿ ಕಾಣುತ್ತಿದ್ದಾರೆ. ಹಾಗಾಗಿ ಅವರು ಆ ಮರವನ್ನು 'ತರುಕಾಶಿ' ಎಂದು ಕರೆದು ಹೀಗೆ ತಮ್ಮ ಕಾಶಿ ದರ್ಶನಾನಂದವನ್ನು ವ್ಯಕ್ತಪಡಿಸಿದ್ದಾರೆ.

ಕೋಟಿ ಮೈಲಿಗಳಾಚೆ ಕಾಶಿಯಾತ್ರೆಗಳೇಕೆ?
ಇಲ್ಲಿ ಗೈತರು, ಯಾತ್ರಿಕನೆ, ಇದುವೆ ತರುಕಾಶಿ!
(ಕೆಂದಳಿರು - ಪಕ್ಷಿಕಾಶಿ)

ಶ್ರೀದಿನ

ಕುವೆಂಪು ಅವರು ದೇಶಕ್ಕೆ ಸ್ವಾತಂತ್ರ್ಯ ಬಂದ 1947 ಆಗಸ್ಟ್ 15 ರ ದಿನವನ್ನು 'ಶ್ರೀದಿನಂ' ಎಂಬ ಪದ ಸೃಷ್ಟಿಸಿ ಬಣ್ಣಿಸಿದ್ದಾರೆ. ಅವರಿಗೆ ಆಗಸ್ಟ್ 15 ಗುರುದೇವ ರಾಮಕೃಷ್ಣ ಪರಮಹಂಸರು ಮಹಾಸಮಾಧಿ ಹೊಂದಿದ ದಿನ, ಯೋಗಿ ಅರವಿಂದರು ಹುಟ್ಟಿದ ದಿನ, ಬ್ರಿಟೀಷರು ಮೈತ್ರಿಯಿಂದ ಸಾಮ್ರಾಜ್ಯ ತ್ಯಜಿಸಿ ಭಾರತಕ್ಕೆ ಸ್ವಾತಂತ್ರ್ಯ ನೀಡಿದ ದಿನ. ಅದು 'ಭಾರತ ಸ್ವಾತಂತ್ರ್ಯ ಪುಣ್ಯೋದಯದ ದಿನ.'

'ಶ್ರೀ'ಯು ಮಂಗಳ. ಕಾಂತಿ, ಶೋಭೆ, ಸಿರಿ ಸಂಪತ್ತನ್ನು ಸೂಚಿಸುವ ಪದ. ಸ್ವಾತಂತ್ರ್ಯ ಪಡೆದ ಕಾರಣದಿಂದ ದೇಶವು ಮೇಲಿನ ಲಕ್ಷಣಗಳೊಂದಿಗೆ ಇತರ ದೇಶಗಳೊಂದಿಗೆ ಸಮಾನ ಘನತೆಗೆ ಪಾತ್ರವಾಗಿದೆ ಎಂಬುದನ್ನು ಸೂಚಿಸುತ್ತದೆ. ಆದ ಕಾರಣದಿಂದ ಕವಿಯು ಆ 'ಶ್ರೀದಿನ'ವನ್ನು ಹೀಗೆ ಅನನ್ಯವಾಗಿ ನೆನೆದಿದ್ದಾರೆ:

'ಶ್ರೀದಿನಂ, ದಿಟವಿದು ಮಹಾದಿನಂ, ವಿರಾಡ್‌ದಿನಂ;
ಗುರುದೇವ ಪರಮಹಂಸ ಮಹಾಸಮಾಧಿಯ ದಿನಂ!
ಅರವಿಂದ ಯೋಗೀಂದ್ರ ಜನ್ಮೋತ್ಸವದ ದಿನಂ!
ಸಾಮ್ರಾಜ್ಯಮಂ ತ್ಯಜಿಪ ಮೈತ್ರಿಯ ಮಹದ್ ದಿನಂ!'
(ಶ್ರೀ ಸ್ವಾತಂತ್ರ್ಯೋದಯ ಮಹಾಪ್ರಗಾಥಾ)

ದೃಷ್ಟಿ ಜಿಹ್ವೆ

ಕುವೆಂಪು ಅವರು ಮಾಗಿಯ ಪ್ರಾತಃಕಾಲದಲ್ಲಿ ಜಿನಿಯಾ ಹೂವಿನ ತುದಿಯಲ್ಲಿ 'ಕರಿಮೈ ಬಿಳಿರೆಕ್ಕೆಯ ಕೆಂಬೊಟ್ಟಿನ ಚೆಲ್ವಿನ ಚಿಟ್ಟೆ'ಯನ್ನು ಕಾಣುತ್ತಾರೆ. ನೋಡುತ್ತ ತಲ್ಲೀನರಾಗಿ ಚಲಿಸದೆ ನಿಂತುಬಿಡುತ್ತಾರೆ. ಆ ಅವಲೋಕನ ನಾಲಗೆಯಂತೆ ಸವಿದ ಮಧುರ ರುಚಿಯನ್ನು 'ದೃಷ್ಟಿ ಜಿಹ್ವೆ' ಪದ ರಚಿಸಿ ಅಭಿವ್ಯಕ್ತಿಸಿದ್ದಾರೆ. ಆ ದೃಶ್ಯದ ಮಧುರ ರಸವನ್ನು ಕಣ್ಣೇರಿನಿಂದ ಹೀರಿ ಹರ್ಷಿತರಾಗಿದ್ದಾರೆ.

'ಅಹಹಾ ನಿಂತಿರೆ ದೃಷ್ಟಿ ಜಿಹ್ವೆಯೊಳೆ
ದೃಶ್ಯದ ಮಧುರಸವನು ಹೀರಿ.'
(ಹೂವು-ಚಿಟ್ಟೆ-ಪಕ್ಷಿಕಾಶಿ)

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕವನ

ವೀರಣ್ಣ ಮಂತಾಳಕರ್ ಅವರ ಗಜಲ್

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ–ಮೇಲ್‌ಗೆ ಕಳುಹಿಸಿ bhanuvara@prajavani.co.in



ವ್ಹಾ...! ಭಾರತ ಕ್ರಿಕೆಟ್ ಚಿತ್ರಶಾಲೆ

ಆಸ್ಟ್ರೇಲಿಯಾದ ಕ್ರಿಕೆಟ್ ದಿಗ್ಗಜ ಸ್ಟೀವ್ ವಾ ಭಾರತದ ಕ್ರಿಕೆಟ್ ಆಟವು ಧರ್ಮವಾಗಿ ಜನಮಾನಸದಲ್ಲಿ ಬೆರೆತುಹೋಗಿರುವುದನ್ನು ತಮ್ಮ ಕ್ಯಾಮೆರಾ ಕಣ್ಣುಗಳಲ್ಲಿ ಸೆರೆಹಿಡಿದಿದ್ದಾರೆ.

ಗಿರೀಶ ದೊಡ್ಡಮನಿ

'90ರ ದಶಕದಲ್ಲಿ ಮೊದಲ ಬಾರಿ ಭಾರತಕ್ಕೆ ಬಂದಿದ್ದೆ. ಅದರ ನಂತರವೂ ಹಲವು ಬಾರಿ ಬಂದಿದ್ದೇನೆ. ಆದರೆ ಆಗೆಲ್ಲ ಆಸ್ಟ್ರೇಲಿಯಾ ತಂಡದ ಆಟಗಾರನಾಗಿ, ನಾಯಕನಾಗಿ ಆಡಲು ಬರುತ್ತಿದ್ದೆ. ತಂಡದ ಬಸ್‌ನಲ್ಲಿ ಕುಳಿತು ಕಿಟಕಿಯಿಂದ ಹೊರಗೆ ನೋಡುತ್ತ ಹೋಟೆಲ್‌ನಿಂದ ಕ್ರೀಡಾಂಗಣಕ್ಕೆ ಹೋಗಿ ಬಂದ ನೆನಪುಗಳು ಹಲವು. ಆದರೆ ಆಗ ಕಿಟಕಿಯಿಂದ ಕಂಡಿದ್ದಷ್ಟೇ ಭಾರತವಲ್ಲ ಎಂಬುದು ಈಗ ನನ್ನ ನೆಚ್ಚಿನ ಸಂಗಾತಿ ಕ್ಯಾಮೆರಾ ಹಿಡಿದು ಈ ದೇಶಕ್ಕೆ ಬಂದಾಗ ಅನಿಸಿತು. ಕ್ರೀಡಾಂಗಣಗಳಾಚೆ ಗಲ್ಲಿ ಗಲ್ಲಿಗಳಲ್ಲಿಯೂ ಅಪ್ಪಟ ಕ್ರಿಕೆಟ್ ಪ್ರೀತಿ ತುಂಬಿದೆ. ಕ್ರಿಕೆಟ್ ಇಲ್ಲಿಯ ಧರ್ಮವೇ ಆಗಿಹೋಗಿದೆ'–ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮಾಜಿ ನಾಯಕ ಮತ್ತು ಯಶಸ್ವಿ ಆಲ್‌ರೌಂಡರ್ ಸ್ಟೀವ್ ವಾ ಅವರ ಮಾತುಗಳಿವು.

ಹೋದ ವರ್ಷ ಸುಮಾರು ಮೂರು ತಿಂಗಳಿಗೂ ಹೆಚ್ಚು ಸಮಯ ಭಾರತದ ಮೂಲೆಮೂಲೆಗಳನ್ನು ಓಡಾಡಿದ್ದ ಸ್ಟೀವ್ ಗಲ್ಲಿ ಗಲ್ಲಿಗಳಲ್ಲಿ ನಡೆಯುವ ಕ್ರಿಕೆಟ್ ಚಟುವಟಿಕೆಗಳನ್ನು ಸೆರೆ ಹಿಡಿದಿದ್ದಾರೆ.

ಮಾರ್ಕಸ್ ಕುಟೊ, ಸಚಿನ್ ತೆಂಡೂಲ್ಕರ್, ವಸಂತ್ ರಾಯಜಿ ಹಾಗೂ ಸ್ಟೀವ್ ವಾ –ಸಂಗ್ರಹ ಚಿತ್ರ

ಸಾವಿರಾರು ಚಿತ್ರಗಳನ್ನು ಕ್ಲಿಕ್ಕಿಸಿದರೂ ತಮ್ಮ 'ಸ್ಪಿರಿಟ್ ಆಫ್ ಕ್ರಿಕೆಟ್, ಇಂಡಿಯಾ' ಪುಸ್ತಕದಲ್ಲಿ ಆಯ್ದ 220 ಚಿತ್ರಗಳನ್ನು ಮಾತ್ರ ಪ್ರಕಟಿಸಿದ್ದಾರೆ. 320 ಪುಟಗಳ ಈ ಪುಸ್ತಕದಲ್ಲಿರುವ ಚಿತ್ರಗಳು ದೇಶದ ಕ್ರಿಕೆಟ್ ಕ್ರೇಜ್ ಅನ್ನು ಇಂಚಿಂಚಾಗಿ ಅನಾವರಣಗೊಳಿಸುತ್ತದೆ.

ರಾಜಸ್ಥಾನದ ಮರಳುಗಾಡಿನಲ್ಲಿ ಚೆಂಡೇ ಪುಟಿಯದ ನೆಲದಲ್ಲಿಯೂ ಕ್ರಿಕೆಟ್ ಆಡುವ ಮಕ್ಕಳ ಉತ್ಸಾಹ ಮಾತ್ರ ಆಗಸದೆತ್ತರಕ್ಕೆ ಚಿಮ್ಮುತ್ತದೆ. ಉರಿಬಿಸಿಲಿಗೂ ಜಗ್ಗದ ಹುಡುಗರ ಆಟವನ್ನು ವರ್ಣಿಸಲು ಸ್ಟೀವ್ ಪದಗಳಿಗೆ ತಡಕಾಡಿದ್ದಾರೆ. ಅದಕ್ಕೇ ಚಿತ್ರಗಳ ಮೂಲಕವೇ ಆ ಕಥೆಯನ್ನು ಮನಮುಟ್ಟುವಂತೆ ತೋರಿಸಿದ್ದಾರೆ. ಹಿಮಾಲಯದ ಚಳಿಯಲ್ಲಿ ಬೌದ್ಧಭಿಕ್ಕುಗಳೂ ಚೆಂಡು–ದಾಂಡು ಹಿಡಿದು ಸಂಭ್ರಮಿಸುವ ನೋಟವೂ ಅವರಿಗೆ ಅಪ್ಯಾಯಮಾನವಾಗಿ ಕಂಡಿದೆ. ಧರ್ಮಶಾಲಾದ ಸುಂದರವಾದ ಕ್ರೀಡಾಂಗಣದಲ್ಲಿ ಮಹಿಳಾ ಕ್ರಿಕೆಟ್ ಆಟಗಾರ್ತಿಯರ ಪ್ರತಿಭೆ ನೋಡಿ ಮೂಕವಿಸ್ಮಿತರಾಗಿದ್ದಾರೆ ಸ್ಟೀವ್. ಕೋಲ್ಕತ್ತ, ದೆಹಲಿ, ಮುಂಬೈಗಳಲ್ಲಿ ಒಂದು ಕಾಲಿಲ್ಲದ ಅಂಗವಿಕಲ ಹುಡುಗರು ಊರುಗೋಲು ಹಿಡಿದುಕೊಂಡೇ ಕ್ರಿಕೆಟ್ ಆಡುವ ಪರಿಗೆ ಕ್ಯಾಮೆರಾ ಲೆನ್ಸ್ ಹಿಂದಿನ ಕಣ್ಣು ಮಂಜಾಗಿದ್ದೂ ಇದೆ.

'ಗಿಲಿ ಗಿಲಿ..' ಸದ್ದು ಮಾಡುತ್ತ ಬರುವ ಚೆಂಡನ್ನು ಹೊಡೆಯುವ ಅಂಧ ಬ್ಯಾಟರ್ ನೋಡಿದ ವಿಶ್ವಕಪ್ ವಿಜೇತ ಸ್ಟೀವ್ ಮೂಗಿನ ಮೇಲೆ ಬೆರಳಿಟ್ಟುಕೊಂಡರು. ಅಷ್ಟೇ ಅಲ್ಲ; ತಮ್ಮ ಕಣ್ಣುಗಳಿಗೆ ಕಪ್ಪುಬಟ್ಟೆ ಕಟ್ಟಿಕೊಂಡು ಬ್ಯಾಟ್ ಹಿಡಿದು ಆ ಚೆಂಡಿನ ಸದ್ದು ಗುರುತಿಸುವಲ್ಲಿ ಯಶಸ್ವಿಯಾಗಿ ಸ್ವೀಪ್ ಮಾಡಿ, ಸಾರ್ಥಕತೆಯ ನಗೆಯನ್ನು ಬೀರಿದ್ದರು. ಭಾರತದ ಜನಜೀವನದ ಉಸಿರಿನಲ್ಲಿ ಕ್ರಿಕೆಟ್ ತುಂಬಿರುವುದನ್ನು ಕಂಡು ದಾಖಲಿಸಿದ್ದಾರೆ. 1997ರಲ್ಲಿ ಈಡನ್ ಗಾರ್ಡನ್ ಟೆಸ್ಟ್‌ನಲ್ಲಿ ಶತಕ ಹೊಡೆದಿದ್ದ ಸಂದರ್ಭದಲ್ಲಿಯೂ ಸ್ಟೀವ್ ಇಷ್ಟೊಂದು ಸಂಭ್ರಮಿಸಿರಲಿಲ್ಲವಂತೆ. ಅಷ್ಟೊಂದು ಖುಷಿ ಮತ್ತು ಧನ್ಯತಾಭಾವ ಈ ಪಯಣದಲ್ಲಿ ಕಂಡಿದ್ದಾರೆ. 168 ಟೆಸ್ಟ್, 325 ಏಕದಿನ ಪಂದ್ಯಗಳಲ್ಲಿ ಆಡಿರುವಷ್ಟೇ ತಾಳ್ಮೆ ಮತ್ತು ಕೌಶಲವನ್ನು ತಮ್ಮ ಚಿತ್ರಗಳಲ್ಲಿಯೂ ತೋರಿದ್ದಾರೆ. ಈ ಪಯಣದಲ್ಲಿ ಕೊಳೆಗೇರಿ, ಹಳ್ಳಿಗಳು, ಅಕಾಡೆಮಿಗಳಲ್ಲಿ ತರಬೇತಿ ಪಡೆಯುತ್ತಿರುವ ಮಕ್ಕಳು, ಟೈಂ ಪಾಸ್‌ಗಾಗಿ ಕ್ರಿಕೆಟ್ ಆಡುತ್ತ ಸಂಭ್ರಮಿಸುವ '40 ಪ್ಲಸ್ ಯುವಕರು' ಸೇರಿದಂತೆ ಎಲ್ಲರೊಂದಿಗೆ ಹರಟೆ ಹೊಡೆದಿದ್ದಾರೆ. ಎಲ್ಲ ನೆನಪುಗಳೊಂದಿಗೆ ತಾಯ್ನಾಡಿಗೆ ಮರಳಿದ್ದಾರೆ.

ಕ್ರಿಕೆಟ್ ಅನ್ನು ಉಸಿರಿನಷ್ಟೇ ಪ್ರೀತಿಸುವ ಸ್ಟೀವ್ ವಾ ಅವರ ಇಂಥ ಅನನ್ಯ ದಾಖಲೆಗೆ ಭಾರತೀಯರು ಹೇಳಬೇಕು; ವಾರೆವ್ಹಾ!

ಆ ಹೊತ್ತಿನಲ್ಲಿ ನಮ್ಮವರೇ ಆಗಿದ್ದರು..

ವಿಶ್ವದ ಕ್ರಿಕೆಟ್‌ನಲ್ಲಿ ಯಶಸ್ವಿ ಆಲ್‌ರೌಂಡರ್ ಮತ್ತು ನಾಯಕರಲ್ಲಿ ಸ್ಟೀವ್ ವಾ ಅವರ ಹೆಸರೂ ಪ್ರಮುಖವಾಗಿದೆ. ಆಸ್ಟ್ರೇಲಿಯಾ ತಂಡಕ್ಕೆ ವಿಶ್ವಕಪ್ ಕಿರೀಟ ಮತ್ತು ಟೆಸ್ಟ್ ಕ್ರಿಕೆಟ್‌ನಲ್ಲಿ ಉತ್ತುಂಗ ಗೌರವ ಕೊಡಿಸಿದ ನಾಯಕ ಅವರು. ಆದರೆ ಭಾರತದ ಕ್ರಿಕೆಟ್ ಕಣ್ತುಂಬಿಕೊಳ್ಳುವ ಅವರ ಅದಮ್ಯವಾದ ಛಲ ನನಗಂತೂ ಬೆರಗು ಮೂಡಿಸಿತ್ತು. ಆ ಸಂದರ್ಭದಲ್ಲಿ ಅವರು ಮುಂಬೈಗೆ ಬಂದಾಗ ಒಂದಷ್ಟು ಸಮಯ ಅವರೊಂದಿಗೆ ಕಳೆದಿದ್ದೆ.

ಭಾರತದ ಅತ್ಯಂತ ಹಿರಿಯ ವಯಸ್ಸಿನ ಕ್ರಿಕೆಟಿಗರಾಗಿದ್ದ ವಸಂತ ರಾಯಜಿ ಅವರ ಮನೆಗೆ ಕರೆದುಕೊಂಡು ಹೋಗಿದ್ದೆ. ಸ್ಟೀವ್ ಅವರು ರಾಯಜಿಯವರನ್ನು ಸಂದರ್ಶಿಸಿದ್ದರು. ರಾಯಜಿ ಅವರ ಬಳಿ ಇದ್ದ ಡಾನ್ ಬ್ರಾಡ್ಮನ್ ಸೇರಿದಂತೆ ಹಲವು ದಿಗ್ಗಜ ಆಟಗಾರರ ಪತ್ರಗಳನ್ನು ನೋಡಿದ್ದ ಸ್ಟೀವ್ ಅಚ್ಚರಿಗೊಂಡಿದ್ದರು. ಅಷ್ಟೊಂದು ಜತನದಿಂದ ಅವುಗಳನ್ನು ಕಾಪಾಡಿದ್ದ ರಾಯಜಿ ಅವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು.

'ಭಾರತದ ಸಾರ್ವಕಾಲೀಕ ಶ್ರೇಷ್ಠ ನಾಯಕ ಮತ್ತು ಕ್ರಿಕೆಟಿಗನೆಂದರೆ ಕರ್ನಲ್ ಸಿ.ಕೆ. ನಾಯ್ಡು. ಅವರು ಮುಂಬೈನಲ್ಲಿ ಅವತ್ತು ಎಂಸಿಸಿ ವಿರುದ್ಧ ಆಡಿದ ಇನಿಂಗ್ಸ್ ಬಿಳಿಯರ ಕಣ್ಣು ತೆರೆಸಿತ್ತು. ಭಾರತಕ್ಕೂ ಟೆಸ್ಟ್ ಕ್ರಿಕೆಟ್ ಮಾನ್ಯತೆ ನೀಡುವ ಬಗ್ಗೆ ಯೋಚಿಸಿತ್ತು. ಅವರ ಆ ಆಟವು ಭಾರತ ಕ್ರಿಕೆಟ್‌ನ ಭವಿಷ್ಯವನ್ನೇ ಬದಲಿಸಿಬಿಟ್ಟಿತು' ಎಂದು ರಾಯಜಿ ವಿವರಿಸಿದ್ದರು. ಅದನ್ನು ಸ್ಟೀವ್ ಬಹಳ ಶ್ರದ್ಧೆಯಿಂದ ದಾಖಲಿಸಿದ್ದಾರೆ.

ಅವರ ಮನೆಗೆ ಹೋದಾಗ ನಾವೆಲ್ಲರೂ ಬೂಟುಗಳನ್ನು ಹೊರಗೆ ಬಿಟ್ಟು ಬಂದಿದ್ದನ್ನು ಗಮನಿಸಿದ ಸ್ಟೀವ್ ತಾವೂ ಹಾಗೇ ಮಾಡಿದರು. ಅವರ ಮನೆಯೊಳಗೆ ಹೋದಾಗಲೂ ಕುರ್ಚಿ ಮೇಲೆ ಕೂರದೇ ನೆಲದಲ್ಲಿಯೇ ಕುಳಿತು (ತಮಗೆ ರೂಢಿಯಿಲ್ಲದಿದ್ದರೂ) ರಾಯಜಿಯೊಂದಿಗೆ ಸಂಭಾಷಣೆಯಲ್ಲಿ ತೊಡಗಿದರು.

ಅವರ ಮನೆಯಲ್ಲಿ ನೀಡಿದ ಡೋಕ್ಲಾ, ಸಿಹಿ ತಿಂಡಿ, ಪಾಪಡಿ ಮತ್ತಿತರ ಗುಜರಾತಿ ತಿನಿಸುಗಳನ್ನು ಖುಷಿಯಿಂದಲೇ ಸವಿದರು. ಒಂದು ಪದಾರ್ಥದ ಹೆಸರು, ಬಳಸಿದ ಸಾಮಗ್ರಿಗಳ ಕುರಿತು ಕೇಳುತ್ತ ತಿಂದಿದ್ದು ವಿಶೇಷವಾಗಿತ್ತು. ಅದೇ ಸಮಯಕ್ಕೆ ಅಲ್ಲಿಗೆ ಸಚಿನ್ ತೆಂಡೂಲ್ಕರ್ ಕೂಡ ಬಂದರು. ರಾಯಜಿ ಮತ್ತು ಸಚಿನ್ ಅವರೊಂದಿಗೆ ಸ್ಟೀವ್ ದೀರ್ಘ ಸಮಯ ಮಾತುಕತೆ ನಡೆಸಿದರು. ಈ ಹೊತ್ತಿನಲ್ಲಿ ಅವರೊಂದಿಗೆ ಬಂದಿದ್ದ ನೆರವು ಸಿಬ್ಬಂದಿ ಮತ್ತು ಸ್ಟೀವ್ ಸೇರಿ ನೂರಾರು ಚಿತ್ರಗಳನ್ನು ಕ್ಲಿಕ್ಕಿಸಿದರು. ಆದರೆ ಪುಸ್ತಕದಲ್ಲಿ ಪ್ರಕಟವಾಗಿದ್ದು ಒಂದು ಚಿತ್ರ ಮಾತ್ರ. ಅಂದರೆ ಅವರ ಆಯ್ಕೆ ಎಷ್ಟೊಂದು ಸೂಕ್ಷ್ಮ ಮತ್ತು ವೃತ್ತಿಪರ ಎಂಬುದನ್ನು ಮನಗಾಣಬಹುದು.

ಮಾರ್ಕಸ್ ಕುಟೊ ಬಿಸಿಸಿಐ ನಿವೃತ್ತ ಅಂಪೈರ್, ಮುಂಬೈ

...ಅರಣ್ಯ ಉಳಿವಿನ ಕಥನ

10ನೇ ಪುಟದಿಂದ...

ತಾವು ನೆಟ್ಟಿರುವ ಗಿಡಗಳಿಗೆ ಹಾಗೂ ನೈಸರ್ಗಿಕವಾದ ಗಿಡ, ಮರಗಳಿಗೆ ಬೇಸಿಗೆಯಲ್ಲಿ ಬೆಂಕಿ ತಗುಲದಂತೆ ಅವುಗಳ ಸುತ್ತಲೂ ಎರಡು ಅಡಿ ಅಗಲದಷ್ಟು ಜಾಗದಲ್ಲಿನ ದರಕುಗಳನ್ನು ಮತ್ತು ಹುಲ್ಲುಗಳನ್ನು ಆಗಾಗ ಚೊಕ್ಕಮಾಡುತ್ತಾ, ವೃಕ್ಷರಾಶಿಯನ್ನು ಮಕ್ಕಳಂತೆ ಸಂರಕ್ಷಿಸಿಕೊಂಡು ಬರುತ್ತಿದ್ದಾರೆ. ತಾವು ಬೆಳೆಸುತ್ತಿರುವ ಯಾವುದೇ ಮರ, ಗಿಡ, ಬಳ್ಳಿಗಳ ಉತ್ಪನ್ನಗಳನ್ನು ಅವಶ್ಯಕತೆ ಇರುವವರಿಗೆ ಉಚಿತವಾಗಿಯೇ ಕೊಡುತ್ತಾರೆ. ಸುಮಾರು 30-40 ವರ್ಷಗಳ ಹಿಂದಿನಿಂದಲೇ ಸುತ್ತಲಿನ ಆಯುರ್ವೇದ ವೈದ್ಯರು ಔಷಧಿಗಳನ್ನು ತಯಾರಿಸಲು ಇವರ ಬಳಿ ಬಂದು, ಮರಗಳಲ್ಲಿ ಬಿಡುತ್ತಿದ್ದ ನೆಲ್ಲಿಕಾಯಿ-ತಾರೀಕಾರಿ-ಅಣಲೇಕಾಯಿ ಮುಂತಾದವುಗಳನ್ನು ಉಚಿತವಾಗಿ ತೆಗೆದುಕೊಂಡು ಹೋಗುತ್ತಿದ್ದಾರೆ. ಇಂದಿಗೂ ಹೆಗಡೆಯವರು ತಾವು ಬೆಳೆಯುತ್ತಿರುವ ಉಪಯುಕ್ತ ಉತ್ಪನ್ನಗಳನ್ನು ಉಚಿತವಾಗಿಯೇ ನೀಡುತ್ತಾರೆ.

ಅರಣ್ಯ ಕೃಷಿಯಲ್ಲಿ ಸೀತಾರಾಮ ಹೆಗಡೆ

ಇಲ್ಲಿಗೆ ಬಂದ ಅತಿಥಿಗಳಿಗೆಲ್ಲರಿಗೂ ಒಂದೊಂದು ಗಿಡವನ್ನು ನೀಡುವ ಸಂಪ್ರದಾಯವನ್ನು ಇವರು ರೂಢಿಸಿಕೊಂಡು ಬಂದಿದ್ದಾರೆ. ಪ್ರತಿವರ್ಷವೂ ಆಸಕ್ತರನ್ನು ಗುರುತಿಸಿ ಬೇರೆ ಬೇರೆ ಜಾತಿಯ ಕನಿಷ್ಠ 101 ಗಿಡಗಳನ್ನು ಉಚಿತವಾಗಿ ನೀಡಿ, ಅರಣ್ಯ ಸಂರಕ್ಷಿಸುವ ಕಾರ್ಯವನ್ನು ಮಾಡುತ್ತಿದ್ದಾರೆ.

ತಮ್ಮ ತೋಟದಲ್ಲಿ ಬೆಳೆಯುವ ಬಾಳೆಹಣ್ಣಿನ ಗೊನೆಗಳನ್ನು ಮಾರಾಟ ಮಾಡದೇ ಹೆಚ್ಚಾದ ಗೊನೆಗಳನ್ನು ಸೊಪ್ಪಿನಬೆಟ್ಟದಲ್ಲಿ, ವನದಲ್ಲಿ ಬರುವ ಪಕ್ಷಿಗಳಿಗೆ ಆಹಾರವಾಗಲೆಂದು ತಂದು ತೂಗುಹಾಕುತ್ತಾರೆ. ಅಲ್ಲದೇ, ಬೇಸಿಗೆಯ ಅವಧಿಯಲ್ಲಿ ಪ್ರಾಣಿಪಕ್ಷಿಗಳ ಬಾಯಾರಿಕೆ ತಣಿಸಲು ಅಲ್ಲಲ್ಲಿ ಸಣ್ಣ ಸಣ್ಣ ರಿಂಗ್‌ಗಳನ್ನಿಟ್ಟು, ಅದರಲ್ಲಿ ನೀರಿನ ವ್ಯವಸ್ಥೆ ಮಾಡಿರುತ್ತಾರೆ.

ವನದಲ್ಲೊಂದು ದಿನ

ಮತ್ತಿ, ಹೊನ್ನೆ, ಹುಣಾಲು, ಕೌಲು, ಚಳ್ಳೆ, ಬಿಲ್ಕಂಬಿ, ಅಣಲೆ, ನೆಲ್ಲಿ, ತಾರಿ, ರಂಜಲು, ಗುಡ್ಡೆಗೇರು, ಮಸೆ, ಕಕ್ಕೆ, ಮುರುಗಲು, ನಿಶನೆ, ಬಸವನಪಾದ, ಹಿಪ್ಪೆ, ಅಂಡಿ, ಮದ್ದಾಲೆ, ಕಾರೆ, ಕಡಗಲು, ಅಕ್ಕ್ಯಕ್ರು, ಜುಮ್ಮಿನಮರ, ಕೊಡಸ, ಮರಗೌರಿ, ನೇರಳೆ, ಕಣಗಲು, ಕಾಮತ್ತಿ, ಹೊಂಗೆ, ಕರಿಬಸುರಿ, ತುಮ್ರಿ, ನುರುಕಲು, ವಾಟೆ ಇತ್ಯಾದಿ ನೈಸರ್ಗಿಕವಾಗಿ ಹುಟ್ಟಿಬೆಳೆದ ಮರಗಳನ್ನು ಸಂರಕ್ಷಿಸುತ್ತಿರುವುದಲ್ಲದೇ, ಕಾಡು ಜಾತಿಯ ಗಿಡಗಳ ಗುರುತಿಸುವಿಕೆ, ಉಪಯೋಗ ಇತ್ಯಾದಿ ವಿಷಯಗಳನ್ನು ಇಂದಿನ ವಿದ್ಯಾರ್ಥಿಗಳಿಗೆ, ಯುವಜನತೆಗೆ ತಿಳಿಸಿಕೊಡಲಾಗುತ್ತಿದೆ. ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಉಪನ್ಯಾಸ ನೀಡುವ ಬದಲು, ತಮ್ಮ ಮನೆಯ ಹಿಂದಿರುವ ವನಕ್ಕೆ ಕರೆದುಕೊಂಡುಹೋಗಿ, 'ವನದಲ್ಲೊಂದು ದಿನ' ಎನ್ನುವ ಹೆಸರಿನಡಿ ಕಾರ್ಯಕ್ರಮಗಳನ್ನು ಆಯೋಜಿಸಿ ವೃಕ್ಷರಾಶಿಯ ಪರಿಚಯ ಮಾಡಿಕೊಡುತ್ತಿದ್ದಾರೆ ಹೆಗಡೆಯವರು.

ಕ್ಯೂಆರ್ ಕೋಡ್ ವ್ಯವಸ್ಥೆಗೆ ಪ್ರಯತ್ನ

ಶ್ರೀಧರ ಸೀತಾರಾಮ ಹೆಗಡೆ ಅವರಿಗೆ ಪುಸ್ತಕಗಳನ್ನು ಓದುವ ಹವ್ಯಾಸವಿದೆ. ಸುಮಾರು 35-40 ವರ್ಷಗಳಿಂದ ಮಂಗಳ, ಅಡಿಕೆ ಪತ್ರಿಕೆ, ಸ್ಪೈಸ್ ಇಂಡಿಯಾ, ಸುಜಾತ ಮುಂತಾದ ಪರಿಸರ, ಕೃಷಿ ಸಂಬಂಧಿ ಪತ್ರಿಕೆಗಳನ್ನು ಸಂಗ್ರಹಿಸಿದ್ದಾರೆ. ಅವುಗಳಲ್ಲಿ ಪ್ರಕಟಿತ ಔಷಧದ ಗಿಡಗಳನ್ನು ಮತ್ತು ತೀರಾ ಅಪರೂಪದ ಹಾಗೂ ವಿನಾಶದ ಅಂಚಿನಲ್ಲಿರುವ ಗಿಡಗಳನ್ನು ಸಂಗ್ರಹಿಸಿ ತಮ್ಮ ವನದಲ್ಲಿ ಬೆಳೆಸುವ ಯತ್ನ ಮಾಡುತ್ತಿದ್ದಾರೆ. ತಾವು ಬೆಳೆದ ಔಷಧೀಯ ಗಿಡ ಹಾಗೂ ಕಾಡುಜಾತಿಯ ಗಿಡಮರ ಬಳ್ಳಿಗಳ ಮೇಲ್ನೋಟದ ಪರಿಚಯಕ್ಕಾಗಿ ಪ್ರತಿಯೊಂದು ಗಿಡಮರಗಳಿಗೂ ನಾಮಫಲಕವನ್ನು ಅಳವಡಿಸಿದ್ದಾರೆ.

ಇವತ್ತಿನ ತಂತ್ರಜ್ಞಾನಕ್ಕೆ ಅಪ್‌ಡೇಟ್ ಆಗಿರುವ ಹೆಗಡೆಯವರು ಪ್ರತಿಯೊಂದು ಗಿಡ–ಮರಗಳ ಸಂಪೂರ್ಣ ಮಾಹಿತಿಯನ್ನು ಯುವಜನತೆಗೆ ನೀಡಲು ಕ್ಯೂಆರ್ ಕೋಡ್ ವ್ಯವಸ್ಥೆಯನ್ನೂ ಮಾಡುತ್ತಿದ್ದಾರೆ. ಮರದ ಬಳಿಯಿರುವ ಕೋಡ್ ಸ್ಕ್ಯಾನ್ ಮಾಡಿದರೆ ಮರದ ಕುರಿತಾದ ಸಂಪೂರ್ಣ ಮಾಹಿತಿ, ಉಪಯೋಗಗಳು ತೆರೆದುಕೊಳ್ಳುವಂತಹ ವ್ಯವಸ್ಥೆ ಅಳವಡಿಕೆಗಾಗಿ ಶ್ರಮಿಸುತ್ತಿದ್ದಾರೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಿಶ್ಯೂ ಚಿಕ್ಕು ಕೇಶ್ರಿಸ್ತು ಕಥೆಯ — ಅವಾಕ್ಕಾದ ಹಾವಾಡಿಗ!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಹಾವಾಡಿಗನೊಬ್ಬ ಜೋರಾಗಿ ಪುಂಗಿ ಊದುತ್ತಾ ಬುಟ್ಟಿಯೊಳಗಿದ್ದ ಹಾವನ್ನು ಆಡಿಸುತ್ತಿದ್ದ. ಕೆಲ ಹೊತ್ತಿನಲ್ಲೇ ಅಲ್ಲೇ ಪಕ್ಕದ ಕಾಡಿನಲ್ಲಿದ್ದ ಹಾವೊಂದು ಮೆಲ್ಲನೆ ಹಾವಾಡಿಗನ ಬಳಿ ಬಂದಿತು. ಹಾವಾಡಿಸುತ್ತಿರುವುದನ್ನು ಕಂಡ ಆ ಹಾವು, ಉಳಿದ ಹಾವುಗಳಿಗೂ ಸುದ್ದಿ ಮುಟ್ಟಿಸಿತು. ಅವುಗಳೆಲ್ಲ ಗುಂಪಾಗಿ ಬಂದಾಗ ಹಾವಾಡಿಗ ಗಾಬರಿಗೊಂಡ...

ಜಾಣಪದ ಆಟ

ಇಲ್ಲಿ ಕೊಟ್ಟಿರುವ 'ವತಿ' ಅಕ್ಷರಗಳ ಹಿಂದೆ ಅಕ್ಷರ ಪಟ್ಟಿಯಿಂದ ಆಯ್ದು ಎರಡು ಸೂಕ್ತವಾದ ಅಕ್ಷರ ತುಂಬಿ ಎಂಟು ಪದಗಳನ್ನು ರಚಿಸಿ.

ಅಕ್ಷರ ಪಟ್ಟಿ

ನೇ	ಭ	ದ್ರಾ	ಗ
ಭ	ಪ್ರ	ಗು	ಗಾ
ಶ	ಲಾ	ತ್ರಾ	ಗಂ
ಕ	ಣ	ಭಾ	ರಾ

1			ವ	ತಿ
2			ವ	ತಿ
3			ವ	ತಿ
4			ವ	ತಿ
5			ವ	ತಿ
6			ವ	ತಿ
7			ವ	ತಿ
8			ವ	ತಿ
9			ವ	ತಿ
10			ವ	ತಿ

ಗಣಿತದಲ್ಲಿ ಗರ್ದಿ ಗಮ್ಮತ್ತು

ಗುಣಾಕಾರದಲ್ಲಿ ಪುನರಾವರ್ತಿತ ಮೂಲ ಸಂಖ್ಯೆಗಳು.

1. 12345679 X 9 =111111111
2. 24691358 X 9 =222222222
3. 37037037 X 9 =333333333
4. 49382716 X 9 =444444444
5. 61728395 X 9 =555555555
6. 74074074 X 9 =666666666
7. 86419753 X 9 =777777777
8. 98765432 X 9 =888888888

ಸರಸ ಪ್ರಶ್ನೆ

ಯಾರೂ ತೂಗದ ತಕ್ಕಡಿ ಯಾವುದು?

ಉ: ಬೆಪ್ಪುತಕ್ಕಡಿ

ಇಲ್ಲಿ ಕೊಟ್ಟಿರುವ ಬರೀ 'E' ಬರುವ ಶಬ್ದಗಳಲ್ಲಿ ವ್ಯಂಜನಾಕ್ಷರಗಳು ಮಾಯವಾಗಿವೆ. ಮುಂದೆ ಕೊಟ್ಟ ಆ ವ್ಯಂಜನಾಕ್ಷರಗಳನ್ನು ಸರಿ ಹೊಂದಿಸಿ ಪದ ರಚಿಸಿ.

ಮೋ E N G L I S H ನ

1		E		E			NVS			
2	E		E		E		VLN			
3			E		E	T LV W				
4		E			E			E		SPTRBM
5		E		E		E		DC MB R		
6		E		E		E		MR MB R		
7		E		E		RVN				
8		E		E		RFR				

ಆಲೋಚನೆಗೆ ಆಹಾರ

ಕೆಳಗೆ ಕೊಟ್ಟಿರುವ 'I' ಅಕ್ಷರದ ಹಿಂದೆ ಮುಂದೆ ಎರಡು ಇಂಗ್ಲಿಷ್ ಪದಗಳನ್ನು ತುಂಬಿ ಎಲ್ಲದನ್ನೂ ಓದಿದರೆ ಒಂದು ಪ್ರಸಿದ್ಧ ಯಾತ್ರಾ ಸ್ಥಳದ ಹೆಸರು ಸಿಗುತ್ತದೆ. ಆ ಪದಗಳನ್ನು ತುಂಬಿರಿ.

________I________

ಪ್ರಾಸಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ

ಹ	ಕೊ	ಬಾ	ಹೊ
ಕ	ಸು	ತೊ	ಅ
ನೇ	ಹ	ಪು	ಮ

1

	ರ	ಡು
	ರ	ಡು

2

	ಗ	ಲು
	ಗ	ಲು

3

	ಗಿ	ಲು
	ಗಿ	ಲು

4

	ತ್ತ	ಲು
	ತ್ತ	ಲು

5

	ರಿ	ವು
	ರಿ	ವು

6

	ಸ್ತ	ಕ
	ಸ್ತ	ಕ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ತೆಲಗು–ಮಲಗು 2.ಅವಳಿ–ಜವಳಿ 3.ಕೇರಳ–ಹೇರಳ 4.ಸಕಲ–ವಿಕಲ 5.ಶಿಖರ–ಪ್ರಖರ 6.ಕಾರಣ–ತೋರಣ

ಜಾಣಪದ ಆಟ: 1.ಮಕರ 2.ಗರತಿ 3.ನಗರ 4.ಶಹರ 5.ಹುಬ್ಬಳ್ಳಿ 6.ಮದನ 7.ದಸರ 8.ಮಡಗು 9.ಸಾಗರ 10.ಹರಣ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ನಿಶ್ಚಿತ ಎಸ್. ರಾಯಚೂರು

ಶ್ರೇಯ ಮಠಪತಿ ವಿಜಯಪುರ

ಎಚ್. ಎನ್. ನಲ್ಮೆ ಹೊಸದುರ್ಗ

ರೋಹನ್ ಕುಮಾರ್ ಎಂ.ಪಿ., ದಾವಣಗೆರೆ

ಲಿತಿನ್ ಎಚ್.ಆರ್. ಕುಶಾಲನಗರ

ಮನ್ವಿತ ಕೆ.ಎಂ, ಹರಪನಹಳ್ಳಿ

ಜೇಕ್, ಸ್ಟಬ್ಸ್ ಅಬ್ಬರದ ಬ್ಯಾಟಿಂಗ್‌ಗೆ ಒಲಿದ ಜಯ • ಮುಂಬೈ ತಂಡಕ್ಕೆ ನಿರಾಶೆ

ಡೆಲ್ಲಿ ಪ್ಲೇಆಫ್ ಆಸೆಗೆ ಜೀವ

ನವದೆಹಲಿ (ಪಿಟಿಐ): ಜೇಕ್ ಫ್ರೇಸರ್ ಮೆಕ್‌ಗರ್ಕ್ ಬೀಸಾಟ ಮತ್ತು ಬೌಲರ್‌ಗಳ ಪರಿಣಾಮಕಾರಿ ದಾಳಿಯಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಪ್ಲೇ ಆಫ್ ಪ್ರವೇಶದ ಆಸೆ ಜೀವಂತವಾಗಿ ಉಳಿಯಿತು.

ಅರುಣ ಜೇಟ್ಲಿ ಕ್ರೀಡಾಂಗಣದಲ್ಲಿ ಶನಿವಾರ ಮಧ್ಯಾಹ್ನ ಆರಂಭವಾದ ಪಂದ್ಯದಲ್ಲಿ ಡೆಲ್ಲಿ ತಂಡವು 10 ರನ್‌ಗಳಿಂದ ಮುಂಬೈ ಇಂಡಿಯನ್ಸ್ ತಂಡವನ್ನು ಮಣಿಸಿತು.

ಟಾಸ್ ಗೆದ್ದ ಮುಂಬೈ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆಸ್ಟ್ರೇಲಿಯಾದ ಯುವ ಬ್ಯಾಟರ್ ಮೆಕ್‌ಗರ್ಕ್ (84; 27ಎಸೆತ) ಅವರ ಆಟದ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 257 ರನ್ ಮೊತ್ತ ಗಳಿಸಿತು. ಟ್ರಿಸ್ಟನ್ ಸ್ಟಬ್ಸ್ (ಅಜೇಯ 48; 25ಎ) ಹಾಗೂ ಶಾಯ್ ಹೋಪ್ (41; 17ಎ), ರಿಷಭ್ ಪಂತ್ (29; 19ಎ) ಅವರೂ ಮಹತ್ವದ ಕಾಣಿಕೆ ನೀಡಿದರು.

22 ವರ್ಷದ ಮೆಕ್‌ಗರ್ಕ್ 11 ಬೌಂಡರಿ, 6 ಸಿಕ್ಸರ್ ಸಿಡಿಸಿದರು. 311ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ರನ್ ಗಳಿಸಿದರು. ಅಭಿಷೇಕ್ ಪೊರೆಲ್ ಜೊತೆಗೆ ಮೊದಲ ವಿಕೆಟ್ ಪಾಲುದಾರಿಕೆಯಲ್ಲಿ 114 ರನ್ ಸೇರಿಸಿದರು. ಅವರು ಪಿಯೂಷ್ ಚಾವ್ಲಾ ಬೌಲಿಂಗ್‌ನಲ್ಲಿ ಔಟಾದರು.

ನಂತರ ರಿಷಭ್ ಮತ್ತು ಹೋಪ್ ಮೊತ್ತ ಬೆಳೆಸಿದರು. ರಿಷಭ್ ಹೆಲಿಕಾಪ್ಟರ್ ಶಾಟ್ ಆಡಿ ಚೆಂಡನ್ನು ಬೌಂಡರಿಗೆರೆಯಾಚೆ ಕಳಿಸಿದರು.

ಆದರೆ ತಂಡದ ಮೊತ್ತವು ದ್ವಿಶತಕ ದಾಟಲು ಸ್ಟಬ್ಸ್ ಆಟ ಪ್ರಮುಖವಾಯಿತು. ಅವರು ಲೂಕ್ ವುಡ್ ಹಾಕಿದ 18ನೇ ಓವರ್‌ನಲ್ಲಿ ಐದು ಬೌಂಡರಿ ಹಾಗೂ ಒಂದು ಸಿಕ್ಸರ್ ಹೊಡೆದು ಒಟ್ಟು 26 ರನ್‌ಗಳನ್ನು ಸೂರೆ ಮಾಡಿದರು.

ತಿಲಕ್–ಹಾರ್ದಿಕ್ ಆಟ: ಗುರಿ ಬೆನ್ನಟ್ಟಿದ ಮುಂಬೈ ತಂಡಕ್ಕೆ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 247 ರನ್ ಗಳಿಸಲು ಮಾತ್ರ ಸಾಧ್ಯವಾಯಿತು.

ಸೂರ್ಯಕುಮಾರ್ ಯಾದವ್ (26; 13ಎ), ತಿಲಕ್ ವರ್ಮಾ (63; 32ಎ, 4X4, 6X4), ಹಾರ್ದಿಕ್ ಪಾಂಡ್ಯ (46; 24ಎ, 4X4, 6X3) ಹಾಗೂ ಟಿಮ್ ಡೇವಿಡ್ (37; 17ಎ, 4X2, 6X3) ಅವರ ಹೋರಾಟಕ್ಕೆ ಜಯ ಒಲಿಯಲಿಲ್ಲ.

ಡೆಲ್ಲಿ ತಂಡದ ವೇಗಿ ಖಲೀಲ್ ಅಹಮದ್ (45ಕ್ಕೆ2), ಮುಕೇಶ್ ಕುಮಾರ್ (59ಕ್ಕೆ3) ಹಾಗೂ ರಸಿಕ್ ದಾರ್ ಸಲಾಮ್ (34ಕ್ಕೆ3) ಅವರು ಎದುರಾಳಿ ತಂಡದ ಬ್ಯಾಟರ್‌ಗಳನ್ನು ನಿಯಂತ್ರಿಸಿದರು.

ಮುಂಬೈ ತಂಡವು ಪವರ್‌ಪ್ಲೇ ಅವಧಿಯಲ್ಲಿಯೇ 65 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು. ರೋಹಿತ್ ಶರ್ಮಾ, ಇಶಾನ್ ಕಿಶನ್ ಮತ್ತು ಸೂರ್ಯಕುಮಾರ್ ಯಾದವ್ ಅವರನ್ನು ಕಟ್ಟಿಹಾಕುವಲ್ಲಿ ಬೌಲರ್‌ಗಳು ಯಶಸ್ವಿಯಾದರು.

ವೇಗಿ ಖಲೀಲ್ ಅಹಮದ್ ರೋಹಿತ್ ಶರ್ಮಾ ವಿಕೆಟ್ ಪಡೆಯುವ ಮೂಲಕ ಡೆಲ್ಲಿಗೆ ಮೊದಲ ಯಶಸ್ಸು ಕೊಡಿಸಿದರು. ತದನಂತರ ಮುಕೇಶ್ ಅವರು ಇಶಾನ್ ವಿಕೆಟ್ ಗಳಿಸಿದರು. ಸೂರ್ಯ ಕುಮಾರ್ ವಿಕೆಟ್ ಕೂಡ ಖಲೀಲ್ ಪಾಲಾಯಿತು.



ಡೆಲ್ಲಿ ಕ್ಯಾಪಿಟಲ್ಸ್ ತಂಡದ ಜೇಕ್ ಫ್ರೆಸರ್ ಮೆಕ್‌ಗರ್ಕ್ –ಎಎಫ್‌ಪಿ ಚಿತ್ರ

ಇದರಿಂದಾಗಿ ಅವಶ್ಯಕ ರನ್ ರೇಟ್ ಏರುತ್ತಲೇ ಹೋಯಿತು. ಆದರೂ ಮಧ್ಯದಲ್ಲಿ ಹಾರ್ದಿಕ್ ಹೋರಾಟ ಮಾಡಿ ತಂಡದಲ್ಲಿ ಭರವಸೆ ಮೂಡಿಸಿದರು. ಕುಲದೀಪ್ ಯಾದವ್ ಬೌಲಿಂಗ್ ಮಾಡಿದ 9ನೇ ಓವರ್‌ನಲ್ಲಿ ಹಾರ್ದಿಕ್ 19 ರನ್ ಗಳಿಸಿದರು.

ಅವರೊಂದಿಗೆ ಸೇರಿದ ತಿಲಕ್ ವರ್ಮಾ ಕೂಡ ಅಬ್ಬರಿಸಿದರು. ಇಬ್ಬರ ಜೊತೆಯಾಟದಲ್ಲಿ 71 ರನ್ ಗಳು ಸೇರಿದವು. ವರ್ಮಾ ಅವರು ಅಕ್ಷರ್ ಪಟೇಲ್ ಬೌಲಿಂಗ್‌ನಲ್ಲಿ ಒಂದು ಬೌಂಡರಿ ಮತ್ತು ಸಿಕ್ಸರ್ ಹೊಡೆದರು.

ಈ ಗೆಲುವಿನೊಂದಿಗೆ ಡೆಲ್ಲಿ ತಂಡವು ಅಂಕಪಟ್ಟಿಯಲ್ಲಿ ಒಟ್ಟು 10 ಪಾಯಿಂಟ್ಸ್ ಗಳೊಂದಿಗೆ ಐದನೇ ಸ್ಥಾನಕ್ಕೇರಿತು.

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 4 ವಿಕೆಟ್‌ಗೆ 257 (20 ಓವರ್‌ಗಳಲ್ಲಿ)

ಮೆಕ್‌ಗರ್ಕ್ ಸಿ ನಬಿ ಬಿ ಚಾವ್ಲಾ 84 (27ಎ, 4X11, 6X6)
ಅಭಿಷೇಕ್ ಸಿ ಇಶಾನ್ ಬಿ ನಬಿ 36 (27ಎ, 4X3, 6X1)
ಹೋಪ್ ಸಿ ತಿಲಕ್ ಬಿ ವುಡ್ 41 (17ಎ, 6X5)
ಪಂತ್ ಸಿ ಶರ್ಮಾ ಬಿ ಬೂಮ್ರಾ 29 (19ಎ, 4X2, 6X2)
ಸ್ಟಬ್ಸ್ ಔಟಾಗದೇ 48 (25ಎ, 4X6, 6X2)
ಪಟೇಲ್ ಔಟಾಗದೇ 11 (6ಎ, 6X1)
ಇತರೆ: 8 (ಲೆಗ್ ಬೈ1, ನೋಬಾಲ್1, ವೈಡ್ 6)
ವಿಕೆಟ್ ಪತನ: 1–114 (ಜೇಕ್ ಫ್ರೆಸರ್-ಮೆಕ್‌ಗರ್ಕ್, 7.3), 2-127 (ಅಭಿಷೇಕ್ ಪೊರೆಲ್, 9.4), 3-180 (ಶಾಯ್ ಹೋಪ್, 13.4), 4-235 (ರಿಷಭ್ ಪಂತ್, 18.1)
ಬೌಲಿಂಗ್: ಲೂ ಕ್ ವುಡ್ 4-0-68-1, ಜಸ್‌ಪ್ರೀತ್ ಬೂಮ್ರಾ 4-0-35-1, ನುವಾನ್ ತುಷಾರ 4-0-56-0, ಪಿಯೂಷ್ ಚಾವ್ಲಾ 4-0-36-1, ಹಾರ್ದಿಕ್ ಪಾಂಡ್ಯ 2-0-41-0, ಮೊಹಮದ್ ನಬಿ 2-0-20-1

ಮುಂಬೈ ಇಂಡಿಯನ್ಸ್ 9 ವಿಕೆಟ್‌ಗೆ 247 (20 ಓವರ್‌ಗಳಲ್ಲಿ)

ಇಶಾನ್ ಸಿ ಪಟೇಲ್ ಬಿ ಮುಕೇಶ್ 20 (14ಎ, 4X4)
ರೋಹಿತ್ ಸಿ ಹೋಪ್ ಬಿ ಅಹಮದ್ 8 (8ಎ, 4X1)
ಸೂರ್ಯಕುಮಾರ್ ಸಿ ವಿಲಿಯಮ್ಸ್ ಬಿ ಅಹಮದ್ 26 (13ಎ, 4X3, 6X2)
ತಿಲಕ್ ರನ್‌ಔಟ್ (ಸುಮಿತ್ ಕುಮಾರ್/ಪಂತ್) 63 (32ಎ, 4X4, 6X4)
ಪಾಂಡ್ಯ ಸಿ ಮುಕೇಶ್ ಬಿ ರಾಸಿಕ್ 46 (24ಎ, 4X4, 6X3)
ನೇಹಾಲ್ ಸಿ ಪಂತ್ ಬಿ ರಾಸಿಕ್ 4 (2ಎ, 4X1)
ಡೇವಿಡ್ ಎಲ್‌ಬಿಡಬ್ಲ್ಯು ಬಿ ಮುಕೇಶ್ 37 (17ಎ, 4X2, 6X3)
ನಬಿ ಸಿ ಹೋಪ್ ಬಿ ರಾಸಿಕ್ 7 (4ಎ, 6X1)
ಪಿಯೂಷ್ ಸಿ ಹೋಪ್ ಬಿ ಮುಕೇಶ್ 10 (4ಎ, 4X1, 6X1)
ವುಡ್ ಔಟಾಗದೇ 9 (3ಎ, 6X1
ಇತರೆ: 17 (ಬೈ2, ಲೆಗ್‌ಬೈ2, ನೋಬಾಲ್ 1, ವೈಡ್ 12)
ವಿಕೆಟ್ ಪತನ: 1-35 (ರೋಹಿತ್ ಶರ್ಮಾ, 3.1), 2-45 (ಇಸಾನ್ ಕಿಶನ್, 4.1), 3-65 (ಸೂರ್ಯಕುಮಾರ್ ಯಾದವ್, 5.6), 4-136 (ಹಾರ್ದಿಕ್ ಪಾಂಡ್ಯ, 12.3), 5-140 (ನೇಹಾಲ್ ವಧೇರಾ, 12.5), 6-210 (ಟಿಮ್ ಡೇವಿಡ್, 17.4), 6-210 (ಟಿಮ್ ಡೇವಿಡ್, 17.4), 7-223 (ಮೊಹಮ್ಮದ್ ನಬಿ, 18.3), 8-234 (ತಿಲಕ್ ವರ್ಮಾ, 19.1), 9-247 (ಪಿಯೂಷ್ ಚಾವ್ಲಾ, 19.6)
ಬೌಲಿಂಗ್: ಲಿಜಾದ್ ವಿಲಿಯಮ್ಸ್ 3-0-34-0, ಖಲೀಲ್ ಅಹಮದ್ 4-0-42-2, ಮುಕೇಶ್ ಕುಮಾರ್ 4-59-03, ಕುಲದೀಪ್ ಯಾದವ್ 3-0-47-0, ಅಕ್ಷರ್ ಪಟೇಲ್ 2-0-24-0, ರಾಸಿಕ್ ಸಲಾಂ 4-0-34-3
ಪಂದ್ಯದ ಆಟಗಾರ: ಜೇಕ್ ಫ್ರೆಸರ್-ಮೆಕ್‌ಗರ್ಕ್

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 10 ರನ್‌ಗಳ ಗೆಲುವು

ಆರ್‌ಸಿಬಿಗೆ ಮತ್ತೊಂದು ಜಯದ ಕನಸು

ಡುಪ್ಲೆಸಿ ಬಳಗಕ್ಕೆ ಗುಜರಾತ್ ಟೈಟನ್ಸ್ ಸವಾಲು;ವಿರಾಟ್, ರಜತ್ ಮೇಲೆ ಕಣ್ಣು

ವಿರಾಟ್ ಕೊಹ್ಲಿ

ಶುಭಮನ್ ಗಿಲ್

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್

ಬಲಾಬಲ

3	ಪಂದ್ಯ
1	ಆರ್‌ಸಿಬಿ ಜಯ
2	ಗುಜರಾತ್ ಜಯ

ಗರಿಷ್ಠ ಸ್ಕೋರು		ಕನಿಷ್ಠ ಸ್ಕೋರು
197	ಆರ್‌ಸಿಬಿ	170
198	ಗುಜರಾತ್	168

ಅಹಮದಾಬಾದ್ (ಪಿಟಿಐ): ಈ ಸಲದ ಐಪಿಎಲ್‌ನಲ್ಲಿ ಪ್ಲೇ ಆಫ್ ಹಾದಿಯಿಂದ ಬಹುದೂರದಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನ ತಪ್ಪಿಸಿಕೊಳ್ಳುವ 'ಸಾಹಸ' ಮಾಡುತ್ತಿದೆ. ಸತತ ಆರು ಸೋಲುಗಳ ನಂತರ ಗೆಲುವಿನ ರುಚಿ ಕಂಡಿರುವ ಫಫ್ ಡುಪ್ಲೆಸಿ ಬಳಗದ ಆತ್ಮವಿಶ್ವಾಸ ಮರಳಿ ಜಾಗೃತ ವಾಗಿದೆ.

ಅದೇ ಹುಮ್ಮಸ್ಸಿನಲ್ಲಿ ಭಾನುವಾರ ಇಲ್ಲಿ ನಡೆಯಲಿರುವ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಲಿದೆ.

ಆಡಿರುವ ಒಂಬತ್ತು ಪಂದ್ಯಗಳಲ್ಲಿ ಬೆಂಗಳೂರು ತಂಡವು ಜಯಿಸಿರುವುದು ಎರಡು ಮಾತ್ರ. ಇನ್ನುಳಿದಿರುವ ಐದು ಪಂದ್ಯಗಳಲ್ಲಿ ಜಯಿಸಿದರೂ ಪ್ಲೇ ಆಫ್ ಅವಕಾಶ ಪಡೆಯುವುದು ಖಚಿತವಿಲ್ಲ.

ಟೂರ್ನಿಯ ಮೊದಲ ಹಂತದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ನಡೆದಿದ್ದ ಪಂದ್ಯದಲ್ಲಿ ಗೆದ್ದ ಒಂದು ತಿಂಗಳ ನಂತರ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಅದರ ನೆಲದಲ್ಲಿ ಮಣಿಸಿದೆ. ಟೂರ್ನಿಯಲ್ಲಿ ಮೊದಲ ಬಾರಿಗೆ ಆರ್‌ಸಿಬಿ ಬೌಲರ್‌ಗಳು ಚೆನ್ನಾಗಿ ಆಡಿದ್ದು ಇದೇ ಪಂದ್ಯದಲ್ಲಿ

ದೊಡ್ಡ ಮೊತ್ತಗಳನ್ನು ಕಲೆಹಾಕಿ ದಾಖಲೆ ಬರೆದಿರುವ ಸನ್‌ರೈಸರ್ಸ್ ಎದುರು ವಿಲ್ ಜ್ಯಾಕ್ಸ್, ಕ್ಯಾಮರಾನ್ ಗ್ರೀನ್, ಸಿರಾಜ್, ಸ್ವಪ್ನಿಲ್ ಸಿಂಗ್ ಹಾಗೂ ಕರ್ಣ ಶರ್ಮಾ ಅವರು ಉತ್ತಮವಾಗಿ ಆಡಿದ್ದರು. ಸನ್ ತಂಡವನ್ನು 171 ರನ್‌ಗಳನ್ನು ನಿಯಂತ್ರಿಸಿದ್ದರು. ಬ್ಯಾಟಿಂಗ್‌ನಲ್ಲಿಯೂ ಆರೆಂಜ್ ಕ್ಯಾಪ್ ಧರಿಸಿರುವ ವಿರಾಟ್ ಕೊಹ್ಲಿಗೆ ತಕ್ಕ ಜೊತೆ ನೀಡಿದ್ದ ರಜತ್ ಪಾಟೀದಾರ್ ಹಾಗೂ ಗ್ರೀನ್ ಅವರು ಮಧ್ಯಮ ಕ್ರಮಾಂಕವನ್ನು ಬಲಿಷ್ಠಗೊಳಿಸಿದ್ದಾರೆ.

ದಿನೇಶ್ ಕಾರ್ತಿಕ್ ಉತ್ತಮ ಲಯದಲ್ಲಿರುವುದು 'ಫಿನಿಷರ್' ಕಾರ್ಯವನ್ನು ನಿರ್ವಹಿಸಬಲ್ಲರು.

ತಂಡದಲ್ಲಿರುವ ಎಲ್ಲರೂ ಕಳೆದ ಪಂದ್ಯದ ಲಯವನ್ನೇ ಮುಂದು ವರಿಸಿದರೆ ಮತ್ತೊಂದು ಜಯದ ಸಂಭ್ರಮ ಆಚರಿಸಬಹುದು.

ಆದರೆ, ಈಗಾಗಲೇ ಎಂಟು ಅಂಕ ಗಳಿಸಿರುವ ಗುಜರಾತ್ ತಂಡವನ್ನು ಸೋಲಿಸುವುದು ಸುಲಭವಲ್ಲ. ಶುಭಮನ್ ಗಿಲ್ ನಾಯಕತ್ವದ ತಂಡಕ್ಕೂ ಇನ್ನು ಐದು ಪಂದ್ಯಗಳು ಉಳಿದಿವೆ. ಕಳೆದ ಬಾರಿಯ ರನ್ನರ್ ಅಪ್ ತಂಡವಾಗಿರುವ ಗುಜರಾತ್ ತನ್ನ ತವರಿನಲ್ಲಿ ಜಯಿಸುವ ಛಲದಲ್ಲಿದೆ.

ತಂಡದ ಸಾಯಿ ಸುದರ್ಶನ್, ನಾಯಕ ಗಿಲ್ ಅವರಿಬ್ಬರು ಉತ್ತಮ ಬ್ಯಾಟಿಂಗ್ ಲಯದಲ್ಲಿದ್ದಾರೆ. ರಶೀದ್ ಖಾನ್ ಆಲ್‌ರೌಂಡ್ ಆಟವಾಡುತ್ತಿದ್ದಾರೆ. ಸಾಯಿಕಿಶೋರ್, ಮೋಹಿತ್ ಶರ್ಮಾ, ಉಮೇಶ್ ಯಾದವ್ ಇದುವರೆಗೆ ಚೆನ್ನಾಗಿ ಬೌಲಿಂಗ್ ಮಾಡಿದ್ದಾರೆ. ಆದರೆ ಅಭಿನವ್ ಮನೋಹರ್, ಡೇವಿಡ್ ಮಿಲ್ಲರ್, ರಾಹುಲ್ ತೆವಾಟಿಯಾ ಹಾಗೂ ವಿಜಯಶಂಕರ್ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಬೇಕಿದೆ.

ಕಳೆದ ಪಂದ್ಯದಲ್ಲಿ ಡೆಲ್ಲಿ ವಿರುದ್ಧ 4 ರನ್‌ಗಳಿಂದ ತಂಡವು ಸೋತಿತ್ತು. ಅಂಕಪಟ್ಟಿಯಲ್ಲಿ ಮತ್ತಷ್ಟು ಮೇಲೇರಲು ಟೈಟನ್ಸ್ ತಂಡಕ್ಕೆ ಈ ಪಂದ್ಯದ ಜಯ ಮಹತ್ವದ್ದಾಗಿದೆ.

ಚೆನ್ನೈಗೆ ಸನ್ ಸವಾಲು ಇಂದು

ಚೆನ್ನೈ (ಪಿಟಿಐ): ಸತತ ಎರಡು ಪಂದ್ಯಗಳಲ್ಲಿ ಸೋತಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಭಾನುವಾರ ತವರಿನಲ್ಲಿ ನಡೆಯುವ ಹಣಾಹಣಿಯಲ್ಲಿ ಜಯದ ಹಳಿಗೆ ಮರಳುವ ಪ್ರಯತ್ನದಲ್ಲಿದೆ. ಆ ಆವೃತ್ತಿಯಲ್ಲಿ ರನ್‌ಗಳ ಹೊಳೆ ಹರಿಸಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡವು ಮತ್ತೊಂದು ಗೆಲುವಿನ ತುಡಿತದಲ್ಲಿದೆ.

ಹೊಸ ನಾಯಕ ಋತುರಾಜ್ ಗಾಯಕವಾಡ್ ನಾಯಕತ್ವದ ಹಾಲಿ ಚಾಂಪಿಯನ್ ಚೆನ್ನೈ ತಂಡವು ಈ ಋತುವಿನಲ್ಲಿ ಉತ್ತಮ ಆರಂಭವನ್ನು ಪಡೆದಿತ್ತು. ಆದರೆ, ಕಳೆದ ಎರಡು ಪಂದ್ಯಗಳಲ್ಲಿ ಸತತವಾಗಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಸೋತಿತ್ತು.

ತವರಿನಲ್ಲೇ ನಡೆದ ಕೊನೆಯ ಪಂದ್ಯದಲ್ಲಿ ಚೆನ್ನೈ ತಂಡವು ಋತುರಾಜ್ ಅವರ ಶತಕದ ಬಲದಿಂದ 210 ರನ್‌ಗಳ ಕಠಿಣ ಗುರಿಯನ್ನು ಲಖನೌ ತಂಡಕ್ಕೆ ನೀಡಿತ್ತು.

ಆದರೆ, ಮಾರ್ಕಸ್ ಸ್ಟೊಯಿನಿಸ್ ಅವರ ಮಿಂಚಿನ ಶತಕ ಚೆನ್ನೈನ ಜಯದ ಕನಸಿಗೆ ತಣ್ಣೀರೆರಚಿತ್ತು.

ಎಂಟು ಪಂದ್ಯಗಳಲ್ಲಿ ನಾಲ್ಕು ಪಂದ್ಯಗಳನ್ನು ಗೆದ್ದಿರುವ ಋತುರಾಜ್ ಬಳಗವು 8 ಅಂಕಗಳನ್ನು ಕಲೆಹಾಕಿದೆ. ಪ್ಲೇ ಆಫ್ ಹಾದಿಯತ್ತ ಸಾಗಲು ತಂಡವು ಗೆಲುವಿನ ಲಯಕ್ಕೆ ಮರಳುವುದು ಅನಿವಾರ್ಯವಾಗಿದೆ.

ಪಂದ್ಯ ಆರಂಭ: ರಾತ್ರಿ 7.30

ಆರ್ಚರಿ: ಕಾಂಪೌಂಡ್ ವಿಭಾಗದಲ್ಲಿ ಭಾರತದ ಪಾರಮ್ಯ

ಜ್ಯೋತಿಗೆ ಹ್ಯಾಟ್ರಿಕ್ ಚಿನ್ನದ ಪದಕ

ಶಾಂಘೈ (ಪಿಟಿಐ): ಏಷ್ಯನ್ ಕ್ರೀಡಾಕೂಟದ ಚಾಂಪಿಯನ್ ಜ್ಯೋತಿ ಸುರೇಖಾ ವೆಣ್ಣಮ್ ಅವರ ಪ್ರಾಬಲ್ಯದಿಂದ ಭಾರತವು ಶನಿವಾರ ಆರ್ಚರಿ ವಿಶ್ವಕಪ್‌ನ (ಸ್ಟೇಜ್ 1) ಕಂಪೌಂಡ್ ವಿಭಾಗದಲ್ಲಿ ಐದು ಪದಕಗಳನ್ನು ಗೆದ್ದುಕೊಂಡಿತು. ಇದೇ ವೇಳೆ ಜ್ಯೋತಿ ಹ್ಯಾಟ್ರಿಕ್ ಚಿನ್ನದ ಸಾಧನೆ ಮೆರೆದರು.

ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ವಿಶ್ವದ ಮೂರನೇ ರ‍್ಯಾಂಕ್‌ನ ಜ್ಯೋತಿ 146–146 ರಿಂದ ಅಗ್ರ ಕ್ರಮಾಂಕದ ಆ್ಯಂಡ್ರಿಯ ಬೆಸೆರಾ (ಮೆಕ್ಸಿಕೊ) ಅವರೊಂದಿಗೆ ಸಮಬಲ ಸಾಧಿಸಿ, ನಂತರ ಟೈಬ್ರೇಕರ್‌ನಲ್ಲಿ ಚಿನ್ನಕ್ಕೆ ಮುತ್ತಿಟ್ಟರು.

ದೀಪಿಕಾ ಕುಮಾರಿ ನಂತರ ವಿಶ್ವಕಪ್‌ನಲ್ಲಿ ತ್ರಿವಳಿ ಚಿನ್ನದ ಪದಕ ಗೆದ್ದ ಎರಡನೇ ಭಾರತದ ಆಟಗಾರ್ತಿ ಎಂಬ ಹಿರಿಮೆಗೆ ಪಾತ್ರವಾಗಿದ್ದಾರೆ. ಮೂರು ಬಾರಿಯ ಒಲಿಂಪಿಯನ್ ಮತ್ತು ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ್ತಿ ದೀಪಿಕಾ 2021ರಲ್ಲಿ ಪ್ಯಾರಿಸ್ ವಿಶ್ವಕಪ್ ಸ್ಟೇಜ್ 3ರಲ್ಲಿ ಈ ಸಾಧನೆ ಮಾಡಿದ್ದರು.

ವಿಜಯವಾಡದ 27 ವರ್ಷದ ಜ್ಯೋತಿ ಅವರು ಕಳೆದ ವರ್ಷ ನಡೆದ ಹಾಂಗ್‌ಝೌ ಏಷ್ಯನ್ ಕ್ರೀಡಾಕೂಟದಲ್ಲಿ ವೈಯಕ್ತಿಕ, ಮಹಿಳೆಯರ ತಂಡ ಮತ್ತು ಮಿಶ್ರ ತಂಡ ವಿಭಾಗದಲ್ಲಿ ಹ್ಯಾಟ್ರಿಕ್ ಚಿನ್ನ ಗೆದ್ದಿದ್ದರು. ಇಲ್ಲೂ ಅದೇ ಸಾಧನೆ ಮೆರೆದಿದ್ದಾರೆ.

ಮಹಿಳೆಯರ ಕಾಂಪೌಂಡ್ ವಿಭಾಗದಲ್ಲಿ (ಎಡದಿಂದ) ಚಿನ್ನ ಗೆದ್ದ ಪರಿಣಿತಿ ಕೌರ್, ಜ್ಯೋತಿ ಸುರೇಖಾ ವೆಣ್ಣಮ್ ಮತ್ತು ಅದಿತಿ ಸ್ವಾಮಿ –ಪಿಟಿಐ ಚಿತ್ರ

ಕಾಂಪೌಂಡ್ ವಿಭಾಗದ ತಂಡಗಳ ಸ್ಪರ್ಧೆಯಲ್ಲಿ ಭಾರತವು ಕ್ಲೀನ್‌ಸ್ವೀಪ್ ಸಾಧಿಸಿದೆ. ಪುರುಷರ, ಮಹಿಳೆಯರ ಹಾಗೂ ಮಿಶ್ರ ತಂಡಗಳು ಚಿನ್ನ ಗೆದ್ದಿವೆ. ಪ್ರಶಸ್ತಿ ಗೆದ್ದ ಮಹಿಳೆಯರ ಮತ್ತು ಮಿಶ್ರ ತಂಡದಲ್ಲಿ ಜ್ಯೋತಿ ಇದ್ದರು.

ಅಭಿಷೇಕ್ ವರ್ಮಾ, ಪ್ರಿಯಾಂಶ್ ಹಾಗೂ ಪ್ರಥಮೇಶ್ ಅವರನ್ನು ಒಳಗೊಂಡ ಪುರುಷರ ತಂಡವು 238-231 ಅಂತರದಿಂದ ನೆದರ್ಲೆಂಡ್ಸ್ ತಂಡವನ್ನು ಮಣಿಸಿತು. ಜ್ಯೋತಿ, ಅದಿತಿ ಸ್ವಾಮಿ ಹಾಗೂ ಪರಿಣಿತಿ ಕೌರ್ ಅವರನ್ನು ಒಳಗೊಂಡ ಮಹಿಳೆಯರ ತಂಡವು 236-225 ಅಂತರದಿಂದ ಇಟಲಿ ತಂಡವನ್ನು ಸೋಲಿಸಿತು. ಜ್ಯೋತಿ ಹಾಗೂ ಅಭಿಷೇಕ್ ಒಳಗೊಂಡ ಮಿಕ್ಸೆಡ್ ತಂಡವು 158-157ರಿಂದ ಎಸ್ಟೋನಿಯಾದ ತಂಡವನ್ನು 1 ಪಾಯಿಂಟ್ಸ್ ಅಂತರದಲ್ಲಿ ರೋಚಕವಾಗಿ ಮಣಿಸಿತು.

ಪುರುಷರ ವೈಯಕ್ತಿಕ ಕಾಂಪೌಂಡ್ ವಿಭಾಗದಲ್ಲಿ ಯುವ ಆಟಗಾರ ಪ್ರಿಯಾಂಶ್ ಅವರು ಬೆಳ್ಳಿ ಪದಕ ಗೆದ್ದರು.

ರಿಕರ್ವ್ ವಿಭಾಗದಲ್ಲಿ ಪ್ರಶಸ್ತಿ ಸುತ್ತು ಭಾನುವಾರ ನಡೆಯಲಿದ್ದು, ಭಾರತವು ಎರಡು ಚಿನ್ನದ ಪದಕದ ಮೇಲೆ ಕಣ್ಣಿಟ್ಟಿದೆ. ಪುರುಷರ ತಂಡವು ಚಿನ್ನದ ಪದಕ ಸುತ್ತಿನಲ್ಲಿ ಒಲಿಂಪಿಕ್ಸ್ ಚಾಂಪಿಯನ್ ದಕ್ಷಿಣ ಕೊರಿಯಾವನ್ನು ಎದುರಿಸಲಿದೆ. ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ದೀಪಿಕಾ ಕುಮಾರಿ ಸೆಮಿಫೈನಲ್‌ನಲ್ಲಿ ಕೊರಿಯಾದ ಆಟಗಾರ್ತಿ ವಿರುದ್ಧ ಸೆಣಸಾಡುವರು.

ಸಂಜು, ಧ್ರುವ್ ಜೊತೆಯಾಟದ ಮಿಂಚು

ರಾಯಲ್ಸ್‌ಗೆ ಗೆಲುವು, ಸಂದೀಪ್‌ಗೆ 2 ವಿಕೆಟ್ | ಲಖನೌ ತಂಡಕ್ಕೆ ಸೋಲು

ಲಖನೌ (ಪಿಟಿಐ): ನಾಯಕ ಸಂಜು ಸ್ಯಾಮ್ಸನ್ ಮತ್ತು ಧ್ರುವ್ ಜುರೇಲ್ ಅವರ ಅಜೇಯ ಜೊತೆಯಾಟದ ಬಲದಿಂದ ರಾಜಸ್ಥಾನ ರಾಯಲ್ಸ್ ತಂಡ ಐಪಿಎಲ್ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡದ ವಿರುದ್ಧ ಜಯಸಾಧಿಸಿತು.

ಏಕನಾ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ನಾಯಕ ರಾಹುಲ್ ಹಾಗೂ ದೀಪಕ್ ಹೂಡಾ ಅವರಿಬ್ಬರ ಅರ್ಧಶತಕಗಳ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ತಂಡ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 196 ರನ್ ಗಳಿಸಿತು. ಈ ಗುರಿ ಬೆನ್ನಟ್ಟಿದ ರಾಯಲ್ಸ್ ತಂಡ ಆರು ಎಸೆತಗಳು ಬಾಕಿ ಇರುವಂತೆಯೇ 7 ವಿಕೆಟ್‌ಗಳಿಂದ ಜಯಿಸಿತು. ತಂಡವು 19 ಓವರ್‌ಗಳಲ್ಲಿ 3 ವಿಕೆಟ್‌ಗೆ 199 ರನ್ ಗಳಿಸಿತು. ಪ್ಲೇ ಆಫ್ ಪ್ರವೇಶ ಖಚಿತಪಡಿಸಿಕೊಂಡಿತು.

ಆರಂಭಿಕ ಆಟಗಾರರಾದ ಯಶಸ್ವಿ ಜೈಸ್ವಾಲ್ ಮತ್ತು ಜೋಸ್ ಬಟ್ಲರ್ ಅವರು ಉತ್ತಮ ಆರಂಭ ಒದಗಿಸಿದರು. 18 ಎಸೆತಗಳಲ್ಲಿ 34 ರನ್ ಗಳಿಸಿದ ಬಟ್ಲರ್, ಲಖನೌ ಬೌಲರ್‌ಗಳನ್ನು ಕಾಡಿದರು. ಪವರ್ ಪ್ಲೇ ಅವಧಿಯಲ್ಲಿಯೇ ಈ ಇಬ್ಬರ ವಿಕೆಟ್ ಪತನವಾದವು.

ನಂತರ ಬಂದ ನಾಯಕ ಸಂಜು (ಅಜೇಯ 71, 33ಎ) ಹಾಗೂ ಧ್ರುವ್ (ಅಜೇಯ 52, 34ಎ) ಅವರಿಬ್ಬರೂ ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 121 ರನ್ ಸೇರಿಸಿದ್ದರಿಂದ ತಂಡ ಜಯಗಳಿಸಿತು.

ರಾಜಸ್ಥಾನ ರಾಯಲ್ಸ್ ತಂಡದ ಸಂಜು ಸ್ಯಾಮ್ಸನ್–ಧ್ರುವ್ ಜುರೇಲ್. ಪಿಟಿಐ ಚಿತ್ರ

ಇದಕ್ಕೂ ಮುನ್ನ ಬ್ಯಾಟಿಂಗ್ ಮಾಡಿದ ಲಖನೌ ತಂಡ, ಕನ್ನಡಿಗ ಕೆ.ಎಲ್. ರಾಹುಲ್ ಮತ್ತು ದೀಪಕ್ ಹೂಡಾ ಅವರ ಶತಕದ ಜೊತೆಯಾಟದ ಬಲದಿಂದ ಹೋರಾಟದ ಮೊತ್ತ ಗಳಿಸಿತು. ರಾಹುಲ್ (76; 48ಎ, 4X8, 6X2) ಹಾಗೂ ಹೂಡಾ (50; 31ಎ, 4X7) ಅವರಿಬ್ಬರೂ ಮೂರನೇ ವಿಕೆಟ್ ಜತೆಯಾಟದಲ್ಲಿ 115 ರನ್ ಸೇರಿಸಿದರು.

ಟಾಸ್ ಗೆದ್ದ ರಾಜಸ್ಥಾನ ರಾಯಲ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಟ್ರೆಂಟ್ ಬೌಲ್ಟ್ ಹಾಕಿದ ಮೊದಲ ಓವರ್‌ನ ಮೊದಲೆರಡೂ ಎಸೆತಗಳನ್ನು ಕ್ವಿಂಟನ್ ಡಿ ಕಾಕ್ ಬೌಂಡರಿಗಟ್ಟಿದರು. ಆದರೆ ಮೂರನೇ ಎಸೆತದಲ್ಲಿಯೇ ಕ್ವಿಂಟನ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದ ಟ್ರೆಂಟ್ 'ಮುಯ್ಯಿ' ತೀರಿಸಿಕೊಂಡರು.

ಕಳೆದ ಪಂದ್ಯದಲ್ಲಿ ಶತಕ ಬಾರಿಸಿದ್ದ ಮಾರ್ಕಸ್ ಸ್ಟೊಯಿನಿಸ್ ಅವರಿಗೆ ಇಲ್ಲಿ ಖಾತೆ ತೆರೆಯಲೂ ಸಾಧ್ಯವಾಗಲಿಲ್ಲ. ಇನ್ನೊಂದೆಡೆ ಶಾಂತಚಿತ್ತದಿಂದ ನಿಂತಿದ್ದ ರಾಹುಲ್ ಅವರನ್ನು ಸೇರಿಕೊಂಡ ದೀಪಕ್ ಆತಂಕ ದೂರ ಮಾಡಿದರು.

ಸಂಕ್ಷಿಪ್ತ ಸ್ಕೋರು: ಲಖನೌ ಸೂಪರ್ ಜೈಂಟ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 196 (ಕೆ.ಎಲ್. ರಾಹುಲ್ 76, ದೀಪಕ್ ಹೂಡಾ 50, ಆಯುಷ್ ಬದೋನಿ ಔಟಾಗದೆ 18, ಕೃಣಾಲ್ ಪಾಂಡ್ಯ ಔಟಾಗದೆ 15, ಸಂದೀಪ್ ಶರ್ಮಾ 31ಕ್ಕೆ2, ಆವೇಶ್ ಖಾನ್ 42ಕ್ಕೆ1, ಅಶ್ವಿನ್ 39ಕ್ಕೆ1) ರಾಜಸ್ಥಾನ ರಾಯಲ್ಸ್: 19 ಓವರ್‌ಗಳಲ್ಲಿ 3 ವಿಕೆಟ್‌ಗೆ 199 (ಸಂಜು ಸ್ಯಾಮ್ಸನ್ ಅಜೇಯ 71, ರಿಯಾನ್ ಪರಾಗ್ ಅಜೇಯ 52, ಮಾರ್ಕಸ್ ಸ್ಟೊಯಿನಿಸ್ 3ಕ್ಕೆ1, ಅಮಿತ್ ಮಿಶ್ರ 20ಕ್ಕೆ1) **ಫಲಿತಾಂಶ:** ರಾಜಸ್ಥಾನ ರಾಯಲ್ಸ್‌ಗೆ 7 ವಿಕೆಟ್‌ಗಳ ಜಯ. **ಪಂದ್ಯದ ಆಟಗಾರ:** ಸಂಜು ಸ್ಯಾಮ್ಸನ್

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	9	8	1	16	0.694
ಕೋಲ್ಕತ್ತ ನೈಟ್ ರೈಡರ್ಸ್	8	5	3	10	0.972
ಸನ್‌ರೈಸರ್ಸ್ ಹೈದರಾಬಾದ್	8	5	3	10	0.577
ಲಖನೌ ಸೂಪರ್ ಜೈಂಟ್ಸ್	9	5	4	10	0.059
ಡೆಲ್ಲಿ ಕ್ಯಾಪಿಟಲ್ಸ್	10	5	5	10	-0.276
ಚೆನ್ನೈ ಸೂಪರ್ ಕಿಂಗ್ಸ್	8	4	4	8	+0.415
ಗುಜರಾತ್ ಟೈಟನ್ಸ್	9	4	5	8	-0.974
ಪಂಜಾಬ್ ಕಿಂಗ್ಸ್	9	3	6	6	-0.187
ಮುಂಬೈ ಇಂಡಿಯನ್ಸ್	8	3	5	6	-0.227
ಆರ್‌ಸಿಬಿ (ಬೆಂಗಳೂರು)	9	2	7	4	-0.721

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (430 ರನ್)

ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಹರ್ಷಲ್ ಪಟೇಲ್ (14 ವಿಕೆಟ್)

ವಿಶ್ವ ಚೆಸ್ ಬಿಡ್ : ₹80 ಕೋಟಿ ಬಜೆಟ್

ನವದೆಹಲಿ (ಪಿಟಿಐ): ಭಾರತದ ಪ್ರತಿಭೆ ಡಿ. ಗುಕೇಶ್ ಮತ್ತು ಹಾಲಿ ಚಾಂಪಿಯನ್ ಚೀನಾದ ಡಿಂಗ್ ಲಿರೆನ್ ನಡುವಿನ ವಿಶ್ವ ಚಾಂಪಿಯನ್‌ಷಿಪ್ ಪಂದ್ಯ ಆಯೋಜಿಸಲು ಉದ್ದೇಶಿಸಿದರೆ ₹80 ಕೋಟಿಗಿಂತ ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ ಎಂದು ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್) ಅಂದಾಜು ಮಾಡಿದೆ.

ಈ ಪಂದ್ಯವನ್ನು ನವೆಂಬರ್ 20ರಿಂದ ಡಿಸೆಂಬರ್ 15ರವರೆಗೆ ನಿಗದಿಪಡಿಸಲು ಯೋಜಿಸಲಾಗಿದೆ. ಚೆಸ್‌ನ ಜಾಗತಿಕ ಆಡಳಿತ ಮಂಡಳಿ (ಫಿಡೆ) ಶನಿವಾರ ಸಂಭಾವ್ಯ ಬಿಡ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ. ಎಐಸಿಎಫ್‌ನ ನೂತನ ಕಾರ್ಯದರ್ಶಿ ದೇವ್ ಪಟೇಲ್ ಗುರುವಾರ ಗ್ರ್ಯಾಂಡ್ ಫಿನಾಲೆ ಆಯೋಜಿಸಲು ರಾಷ್ಟ್ರೀಯ ಸಂಸ್ಥೆಯ ಇಚ್ಛೆ ವ್ಯಕ್ತಪಡಿಸಿದರು. ಗುಕೇಶ್ ಆಡುವುದರಿಂದಾಗಿ ಈ ಪಂದ್ಯ ಮಹತ್ವ ಪಡೆದಿದೆ. ಬಿಡ್‌ದಾರರಿಗೆ ಫಿಡೆ ನಿಗದಿಪಡಿಸಿದ ಮಾನದಂಡವೆಂದರೆ 8.5 ಮಿಲಿಯನ್ (ಅಂದಾಜು ₹71 ಕೋಟಿ) ಬಜೆಟ್ ಮತ್ತು ಜಾಗತಿಕ ಸಂಸ್ಥೆಗೆ 1.1 ಮಿಲಿಯನ್ ಡಾಲರ್ (₹9 ಕೋಟಿ) ಸೌಲಭ್ಯ ಶುಲ್ಕ. ಟೂರ್ನಿಯ ಅವಧಿ 25 ದಿನ ಮತ್ತು ಜುಲೈ 1ರೊಳಗೆ ನಿಯಮಗಳ ಅನುಮೋದನೆ ಪೂರ್ಣಗೊಳ್ಳಲಿದೆ.

ಹಾಕಿ: ನೆಲ್ಲಮಕ್ಕಡ, ಚೇಂದಂಡ ಫೈನಲ್‌ಗೆ

ನಾಪೋಕ್ಲು (ಕೊಡಗು ಜಿಲ್ಲೆ): ನೆಲ್ಲಮಕ್ಕಡ ಮತ್ತು ಚೇಂದಂಡ ತಂಡಗಳು ಸಮೀಪದ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಕುಂಡ್ಯೋಳಂಡ ಕಪ್' ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಫೈನಲ್ ಪ್ರವೇಶಿಸಿದವು.

ಫೈನಲ್ ಪಂದ್ಯ ಭಾನುವಾರ ನಡೆಯಲಿದೆ. ಸೆಮಿಫೈನಲ್ ಪಂದ್ಯದಲ್ಲಿ ನೆಲ್ಲಮಕ್ಕಡ ತಂಡವು ಕುಪ್ಪಂಡ (ಕೈಕೇರಿ) ತಂಡವನ್ನು 4–2ರ ಅಂತರದಿಂದ ಮಣಿಸಿತು. ನೆಲ್ಲಮಕ್ಕಡ ತಂಡದ ಪ್ರಧಾನ ಚಂಗಪ್ಪ, ಪ್ರಧಾನ ಅಯ್ಯಪ್ಪ ಮೊದಲಿಗೆ ಒಂದೊಂದು ಗಳಿಸಿ ಮುನ್ನಡೆ ಕಾಯ್ದುಕೊಂಡರು. ಪ್ರಬಲ ಪೈಪೋಟಿ ನೀಡಿದ ಕುಪ್ಪಂಡ (ಕೈಕೇರಿ) ತಂಡವು ತನ್ನ ಆಟಗಾರ ಕುಪ್ಪಂಡ ಸೋಮಯ್ಯ ಅವರು ಗಳಿಸಿದ ಸತತ 2 ಗೋಲುಗಳ ನೆರವಿನಿಂದ ಸಮಬಲ ಸಾಧಿಸಿತು. ಬಳಿಕ, ನೆಲ್ಲಮಕ್ಕಡ ತಂಡದ ಸೋಮಯ್ಯ ಹಾಗೂ ನೆಲ್ಲಮಕ್ಕಡ ಅಯ್ಯಪ್ಪ ಗಳಿಸಿದ ಒಂದೊಂದು ಗೋಲುಗಳ ನೆರವಿನಿಂದ ತಂಡವು ಜಯದ ನಗೆ ಬೀರಿತು.

ಮತ್ತೊಂದು ಸೆಮಿಫೈನಲ್ ಪಂದ್ಯದಲ್ಲಿ ಚೇಂದಂಡ ತಂಡವು ಕುಲ್ಲೇಟಿರ ವಿರುದ್ಧ 3–1 ಅಂತರದಿಂದ ಜಯ ಸಾಧಿಸಿತು.

ಉಬರ್ ಕಪ್ ಬ್ಯಾಡ್ಮಿಂಟನ್: ಕೆನಡಾಗೆ ಆಘಾತ

ಭಾರತ ವನಿತೆಯರ ಶುಭಾರಂಭ

ಚೆಂಗ್ಡು, ಚೀನಾ (ಪಿಟಿಐ): ಭಾರತದ ಮಹಿಳಾ ತಂಡವು ಶನಿವಾರ ಉಬರ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ. ಮೊದಲ ಪಂದ್ಯದಲ್ಲಿ ಭಾರತದ ವನಿತೆಯರು 4–1 ಅಂತರದಿಂದ ಕೆನಡಾ ತಂಡವನ್ನು ಮಣಿಸಿದರು.

ಮೊದಲ ಸಿಂಗಲ್ಸ್ ಪಂದ್ಯದಲ್ಲಿ ವಿಶ್ವದ 53ನೇ ಕ್ರಮಾಂಕದ ಅಶ್ಮಿತಾ ಚಾಲಿಹಾ ಅವರು 26-24, 24-22 ರಿಂದ 25ನೇ ಕ್ರಮಾಂಕದ ಮಿಚೆಲ್ ಲೀ ಅವರಿಗೆ ಆಘಾತ ನೀಡಿ ಭಾರತಕ್ಕೆ ಆರಂಭಿಕ ಮುನ್ನಡೆ ಒದಗಿಸಿದರು.

ಸ್ಫೂರ್ತಿದಾಯಕ ಪ್ರದರ್ಶನ ನೀಡಿದ ಅಶ್ಮಿತಾ ಅವರು ಅನುಭವಿ ಆಟಗಾರ್ತಿಯನ್ನು 42 ನಿಮಿಷದಲ್ಲಿ ಮಣಿಸಿ, ತಂಡದ ಆತ್ಮವಿಶ್ವಾಸವನ್ನು ಹೆಚ್ಚಿಸಿದರು.

ಕಳೆದ ಆಗಸ್ಟ್‌ನಲ್ಲಿ ಬಲ ಮೊಣಕಾಲಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಅಶ್ಮಿತಾ ಮತ್ತೆ ಲಯಕ್ಕೆ ಮರಳಿದ್ದಾರೆ.

ಪ್ರಿಯಾ ಕೊಂಜೆಂಗ್‌ಬಾಮ್ ಮತ್ತು ಶ್ರುತಿ ಮಿಶ್ರಾ ಜೋಡಿಯು ನಂತರ ನಡೆದ ಡಬಲ್ಸ್ ಪಂದ್ಯದಲ್ಲಿ 21-12, 21-10ರಿಂದ ಕ್ಯಾಥರೀನ್ ಚೋಯ್ ಮತ್ತು ಜೆಸ್ಲಿನ್ ಚೌ ಅವರನ್ನು ಸೋಲಿಸಿ ಭಾರತದ ಮುನ್ನಡೆಯನ್ನು 2-0 ಗೆ ಹಿಗ್ಗಿಸಿತು.

ಅಶ್ಮಿತಾ ಚಾಲಿಹಾ

ಎರಡನೇ ಸಿಂಗಲ್ಸ್ ಪಂದ್ಯದಲ್ಲಿ ಇಶಾರಾಣಿ ಬರೂವಾ ಅವರು 21-13, 21-12ರಿಂದ ವೆನ್ ಯು ಝೂಂಗ್ ಅವರನ್ನು ಕೇವಲ 29 ನಿಮಿಷಗಳ ಹೋರಾಟದಲ್ಲಿ ಮಣಿಸಿ ಭಾರತದ ಮುನ್ನಡೆಯನ್ನು 3–0 ಗೆ ವಿಸ್ತರಿಸಿದರು.

ಆದರೆ, ಎರಡನೇ ಡಬಲ್ಸ್‌ನ ಪಂದ್ಯದಲ್ಲಿ ಭಾರತದ ಯುವ ಆಟಗಾರ್ತಿಯರು ಮುಗ್ಗರಿಸಿದರು. ಸಿಮ್ರಾನ್ ಸಿಂಘಿ ಮತ್ತು ರಿತಿಕಾ ಠಾಕರ್ ಜೋಡಿಯು 19-21, 15-21 ರಿಂದ ಜಾಕಿ ಡೆಂಟ್ ಮತ್ತು ಕ್ರಿಸ್ಟಲ್ ಜೋಡಿಗೆ ಶರಣಾಯಿತು.

ನಂತರದ ನಡೆದ ಮೂರನೇ ಸಿಂಗಲ್ಸ್‌ನಲ್ಲಿ ರಾಷ್ಟ್ರೀಯ ಚಾಂಪಿಯನ್ ಅನ್ಮೋಲ್ ಖರ್ಬ್ 21-15, 21-11ರಿಂದ ಎಲಿಯಾನಾ ಜಾಂಗ್ ಅವರನ್ನು ಸೋಲಿಸಿ ಭಾರತದ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಥಾಮಸ್ ಕಪ್: ಥಾಯ್ಲೆಂಡ್‌ಗೆ ಸೋಲು

ಚೆಂಗ್ಡು, ಚೀನಾ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ. ಮೊದಲ ಸುತ್ತಿನ ಪಂದ್ಯದಲ್ಲಿ ಭಾರತ 4–1ರಿಂದ ಥಾಯ್ಲೆಂಡ್ ತಂಡ ಮಣಿಸಿತು.

ಮೊದಲ ಸಿಂಗಲ್ಸ್‌ನಲ್ಲಿ ಎಚ್.ಎಸ್. ಪ್ರಣಯ್ ನಿರಾಸೆ ಮೂಡಿಸಿದರು. ಅವರು 20–22, 14–21ರಿಂದ ಹಾಲಿ ವಿಶ್ವ ಚಾಂಪಿಯನ್ ಕುನ್ಲಾವುಟ್ ವಿಟಿಡ್‌ಸರ್ನ್ ವಿರುದ್ಧ ಸೋತರು. ಆದರೆ, ನಂತರದ ಎಲ್ಲಾ ಪಂದ್ಯಗಳನ್ನೂ ಭಾರತ ಆಟಗಾರರು ಗೆದ್ದುಕೊಂಡರು.

ಮೂವತ್ತು ಸಾವಿರ ಮಂದಿ ಕಣಕ್ಕೆ: ಘಟಾನುಘಟಿ ಅಥ್ಲೀಟ್‌ಗಳ ಮೇಲೆ ನಿರೀಕ್ಷೆ

ಬೆಂಗಳೂರಿನಲ್ಲಿ 'ಓಟದ ಗಮ್ಮತ್ತು' ಇಂದು

• ಪ್ರದೀಶ್ ಎಚ್. ಮರೋಡಿ

ಬೆಂಗಳೂರು: ಹದಿನಾರನೇ ಆವೃತ್ತಿಯ ಟಿಸಿಎಸ್ ವಿಶ್ವ ಟೆನ್‌ಕೆ ಸ್ಪರ್ಧೆಗೆ ಕ್ಷಣಗಣನೆ ಶುರುವಾಗಿದೆ. ಭಾನುವಾರ ಮುಂಜಾನೆ ಉದ್ಯಾನನಗರಿಯ ರಸ್ತೆಯಲ್ಲಿ ನಡೆಯುವ ಓಟದ ಗಮ್ಮತ್ತಿನಲ್ಲಿ ಮೂವತ್ತು ಸಾವಿರ ಮಂದಿ ಕಣಕ್ಕಿಳಿಯುವ ಸಾಧ್ಯತೆ ಇದೆ.

ಟಾಟಾ ಕನ್ಸಲ್ಟನ್ಸಿ ಸರ್ವಿಸಸ್ (ಟಿಸಿಎಸ್) ಪ್ರಾಯೋಜಕತ್ವದಲ್ಲಿ ನಡೆ ಯುವ 10 ಕಿ.ಮೀ ವಿಭಾಗದ ಓಟಕ್ಕೆ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಖ್ಯಾತನಾಮ ಅಥ್ಲೀಟ್‌ಗಳು ಸಾಕ್ಷಿಯಾಗಲಿ ದ್ದಾರೆ. ಕಬ್ಬನ್ ರಸ್ತೆಯ ಮಾಣಿಕ್ ಷಾ ಪರೇಡ್ ಮೈದಾನದಿಂದ ಆರಂಭಗೊಳ್ಳುವ ಓಟವು ಪ್ರಮುಖ ರಸ್ತೆಗಳಲ್ಲಿ ಸಾಗಿ ಮತ್ತೆ ಅದೇ ಮೈದಾನದಲ್ಲೇ ಕೊನೆಗೊಳ್ಳಲಿದೆ. ಇದೇ ಮೊದಲ ಬಾರಿಗೆ ಓಟದ ಮಾರ್ಗವನ್ನು ಹಲಸೂರು ಕೆರೆಯವರೆಗೆ ವಿಸ್ತರಿಸಲಾಗಿದೆ.

ಬೆಂಗಳೂರಿನಲ್ಲಿ ಚೊಚ್ಚಲ ಟೆನ್‌ಕೆ ಓಟ 2008ರಲ್ಲಿ ನಡೆದಿತ್ತು. ಅಲ್ಲಿಂದ ಇಲ್ಲಿಯವರೆಗೆ ನಡೆದಿರುವ ಎಲ್ಲಾ ಆವೃತ್ತಿಗಳಲ್ಲೂ ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ಅಗ್ರ ಮೂರು ಸ್ಥಾನಗಳಿಗೆ ಕೆನ್ಯಾ, ಇಥಿಯೋಪಿಯಾ ಮತ್ತು ಉಗಾಂಡದ ಸ್ಪರ್ಧಿಗಳ ನಡುವೆಯೇ ಪೈಪೋಟಿ ನಡೆದಿದೆ. ದೀರ್ಘ ಅಂತರದ ಓಟದಲ್ಲಿ ತಮಗೆ ಯಾರೂ ಸರಿಸಾಟಿಯಿಲ್ಲ ಎಂಬುದನ್ನು ನಿರೂಪಿಸಲು ಆಫ್ರಿಕಾದ ಅಥ್ಲೀಟ್‌ಗಳು ಮತ್ತೆ ತುದಿಗಾಲಿನಲ್ಲಿ ನಿಂತಿದ್ದಾರೆ.

ವಿಶ್ವದ ಎರಡನೇ ಅತಿ ವೇಗದ ಟೆನ್‌ಕೆ ಓಟಗಾರ್ತಿ ಕೆನ್ಯಾದ ಇಮಾಕ್ಯುಲೇಟ್ ಅನ್ಯಾಂಗೊ ಅಕೋಲ್, ವೆಲೆನ್ಸಿಯಾ ಟೆನ್‌ಕೆ ಸ್ಪರ್ಧೆಯ ಕಂಚಿನ ಪದಕ ವಿಜೇತ ಕೇನ್ಯಾದ ಪೀಟರ್ ಮ್ವಾನಿಕಿ, ಬೆಂಗಳೂರು ಓಟದ ಪ್ರಚಾರ ರಾಯಭಾರಿ, ಶಾಟ್‌ಪಟ್ ಥ್ರೊ ಸ್ಪರ್ಧಿ ವಲೆರೀ ಆ್ಯಡಮ್ಸ್ ಮತ್ತು ಬೆಂಗಳೂರಿನ 96 ವರ್ಷದ ಅಥ್ಲೀಟ್ ಎನ್.ಎಸ್. ದತ್ತಾತ್ರೇಯ ಈ ಬಾರಿಯ ಕೂಟಕ್ಕೆ ವಿಶೇಷ ಮೆರುಗು ತುಂಬಲಿದ್ದಾರೆ.

ಭಾರತದ ಸ್ಪರ್ಧಿಗಳಲ್ಲಿ ಮಹಿಳಾ ವಿಭಾಗದ ಕೂಟ ದಾಖಲೆ ಹೊಂದಿರುವ ಮಹಾರಾಷ್ಟ್ರದ 27 ವರ್ಷದ ಸಂಜೀವಿನಿ ಜಾಧವ್ ಮತ್ತು ಹಾಲಿ ಚಾಂಪಿಯನ್ ತಂಶಿ ಸಿಂಗ್ ಪ್ರಮುಖ ಆಕರ್ಷಣೆಯಾಗಿದ್ದಾರೆ. 2018ರಲ್ಲಿ 33 ನಿಮಿಷ 38 ಸೆಕೆಂಡುಗಳಲ್ಲಿ ನಿಗದಿತ ದೂರ ಕ್ರಮಿಸಿದ್ದ ಸಂಜೀವಿನಿ ಅವರು 2009ರಲ್ಲಿ ಕವಿತಾ ರಾವತ್ (34 ನಿ. 32 ಸೆ) ನಿರ್ಮಿಸಿದ್ದ ದಾಖಲೆ ಮುರಿದಿದ್ದರು. 20 ವರ್ಷದ ತಂಶಿ ಅವರು ಕಳೆದ ಆವೃತ್ತಿಯಲ್ಲಿ 34 ನಿಮಿಷ 12 ಸೆಕೆಂಡ್‌ನಲ್ಲಿ ಗುರಿ ಮುಟ್ಟಿದ್ದರು. ಪುರುಷರ ವಿಭಾಗದ ಹಾಲಿ ರನ್ನರ್ ಅಪ್ ಹರ್ಮನ್‌ಜೋತ್ ಸಿಂಗ್ ಮತ್ತು 2023ರ ಕೋಲ್ಕತ್ತ 25ಕೆ ಓಟದ ಚಾಂಪಿಯನ್ ಸಾವನ್ ಬರ್ವಾಲ್ ನಡುವೆ ಪೈಪೋಟಿ ಏರ್ಪಡುವ ಸಾಧ್ಯತೆಯಿದೆ.

'ಬೆಂಗಳೂರು ಓಟ ನನ್ನ ಮೆಚ್ಚಿನ ಕೂಟವಾಗಿದೆ. ಆರು ವರ್ಷಗಳ ಹಿಂದೆ ನಾನೇ ನಿರ್ಮಿಸಿದ್ದ ದಾಖಲೆಯನ್ನು ಈ ಬಾರಿ ಮುರಿಯಲು ಪ್ರಯತ್ನಿಸುವೆ. ಕಠಿಣ ಅಭ್ಯಾಸ ನಡೆಸಿದ್ದು, ವೈಯಕ್ತಿಕ ಶ್ರೇಷ್ಠ ಸಾಧನೆಯನ್ನು ಮುಟ್ಟಲು ಗಮನ ಹರಿಸುತ್ತಿದ್ದೇನೆ. ಪ್ರಸ್ತುತ ವಿಶ್ವ ರ‍್ಯಾಂಕಿಂಗ್‌ನಲ್ಲಿ 48ನೇ ಸ್ಥಾನದಲ್ಲಿದ್ದೇನೆ' ಎಂದು ಶನಿವಾರ ಸಂಜೀವಿನಿ ಪ್ರತಿಕ್ರಿಯಿಸಿದರು.

30 ಸಾವಿರ ಮಂದಿ ನೋಂದಣಿ: ವಿವಿಧ ವಿಭಾಗಗಳಲ್ಲಿ ಒಟ್ಟು 30 ಸಾವಿರ ಮಂದಿ ನೋಂದಾಯಿಸಿಕೊಂಡಿದ್ದಾರೆ. ಈ ಪೈಕಿ 1500 ಓಟಗಾರರು ವರ್ಚುವಲ್ ಆಗಿ ಭಾಗವಹಿಸಲಿದ್ದಾರೆ.

ಓಟವು ಒಟ್ಟು ₹ 1,75 ಕೋಟಿ ಬಹುಮಾನವನ್ನು ಒಳಗೊಂಡಿದೆ. ಎಲೀಟ್ ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ಚಾಂಪಿಯನ್ ಆಗುವವರು ತಲಾ ₹21.68 ಲಕ್ಷ ಬಹುಮಾನ ಪಡೆಯುವರು. ಅಲ್ಲದೆ, ಕೂಟ ದಾಖಲೆಗೆ ಬೋನಸ್ ರೂಪದಲ್ಲಿ ₹6.67 ಲಕ್ಷ ದೊರೆಯಲಿದೆ. ಭಾರತದ ಎಲೀಟ್ ಪುರುಷರ ಮತ್ತು ಮಹಿಳಾ ವಿಭಾಗಗಳ ವಿಜೇತರಿಗೆ ತಲಾ ₹ 2.75 ಲಕ್ಷ ಬಹುಮಾನವಿದೆ. ಕೂಟ ದಾಖಲೆಗೆ ಹೆಚ್ಚುವರಿ ₹ 1 ಲಕ್ಷ ಪಡೆಯುವರು.

ನೇರಪ್ರಸಾರ: ಸೋನಿ ಸ್ಪೋರ್ಟ್ಸ್ 1, ಬೆಳಿಗ್ಗೆ 6ರಿಂದ

ಓಟದ ವಿಭಾಗ	ಆರಂಭ (ಬೆಳಿಗ್ಗೆ)
ಓಪನ್ ಟೆನ್‌ಕೆ	5.10
ವಿಶ್ವ ಟೆನ್‌ಕೆ ಮಹಿಳೆಯರು	6.40
ವಿಶ್ವ ಟೆನ್‌ಕೆ ಪುರುಷರು	7.30
ಮಜಾ ರನ್	8.15
ಚಾಂಪಿಯನ್ಸ್ ಅಂಗವಿಕಲರು	8.50
ಸಿಲ್ವರ್ ರನ್	8.50

ಟಿಸಿಎಸ್ ವಿಶ್ವ ಟೆನ್‌ಕೆ ಓಟದ ರಾಯಭಾರಿ, ಶಾಟ್‌ಪಟ್ ಥ್ರೊ ಸ್ಪರ್ಧೆಯ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತೆ ವಲೆರೀ ಆ್ಯಡಮ್ಸ್ ಅವರು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಮಕ್ಕಳ ಜೊತೆ ಕಾಣಿಸಿಕೊಂಡರು –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್